ಗುರುವಾರ, ಮಾರ್ಚ್ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 76 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಸಿವಿಲ್ ಸರ್ವೀಸಸ್ ಹುದ್ದೆಗಳಿಗಾಗಿ ನಡೆಯುವ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳ ಪ್ರಾಥಮಿಕ ವಿವರ, ಪ್ರಶ್ನೆಪತ್ರಿಕೆಗಳು, ಅಂಕಗಳು ಹಾಗೂ ಮೌಲ್ಯಮಾಪನ ಕುರಿತ ಪೂರ್ಣ ಮಾಹಿತಿ ಇಲ್ಲಿದೆ.

‘10–20 ಎಕರೆ ಇರುವವರು ರೈತರಲ್ಲವೇ?’ 7

ಪಂಜಾಬ್ ಮುಖ್ಯಮಂತ್ರಿಯಾಗಿ ಮಾನ್ ಪ್ರಮಾಣ 10

ತಣಿಯದ ಹಿಜಾಬ್ ಕಾವು

ಹೈಕೋರ್ಟ್ ತೀರ್ಪಿನ ಬೆನ್ನಲ್ಲೇ ತರಗತಿ ಬಹಿಷ್ಕರಿಸಿ ಪ್ರತಿಭಟನೆ; ಇಂದು ಬಂದ್‌ಗೆ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ-ಕಾಲೇಜುಗಳಲ್ಲಿ ಹಿಜಾಬ್‌ಗೆ ನಿರ್ಬಂಧ ವಿಧಿಸಿ ಹೈಕೋರ್ಟ್ ತೀರ್ಪು ನೀಡಿದ ಬೆನ್ನಲ್ಲೇ, ತೀರ್ಪು ಸ್ವೀಕಾರಾರ್ಹವಲ್ಲ ಎಂದು ಪ್ರತಿಪಾದಿಸಿದ ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರು ರಾಜ್ಯದ ವಿವಿಧ ಕಡೆ ಬುಧವಾರ ಪ್ರತಿಭಟನೆ ನಡೆಸಿದರು.

ಚಿಕ್ಕಮಗಳೂರು, ಶಿವಮೊಗ್ಗ, ಮಧುಗಿರಿ ಸೇರಿದಂತೆ ರಾಜ್ಯದ ಹಲವೆಡೆ ಕಾಲೇಜುಗಳಲ್ಲಿ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಲಾಯಿತು.

ಹಿಜಾಬ್ ತೆಗೆಯಲು ಒಪ್ಪದ ವಿದ್ಯಾರ್ಥಿನಿಯರು ಪರೀಕ್ಷೆಗೂ ಹಾಜರಾಗದೇ ಮನೆಗೆ ಮರಳಿದರು.

ಈ ಮಧ್ಯೆ, ಕೆಲವು ಮುಸ್ಲಿಂ ಸಮುದಾಯದ ವಿದ್ಯಾರ್ಥಿನಿಯರು ಹಿಜಾಬ್ ತೆಗೆದಿಟ್ಟು ತರಗತಿಗೆ ಹಾಜರಾದರು. ಹಿಜಾಬ್ ವಿವಾದದ ಮೂಲವಾಗಿದ್ದ ಉಡುಪಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಅನೇಕ ವಿದ್ಯಾರ್ಥಿನಿಯರು ಹಿಜಾಬ್ ಬಿಚ್ಚಿಟ್ಟು ತರಗತಿಗೆ ತೆರಳಿದರು. ಜಿಲ್ಲೆಯ ಕಾಪು ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ಹಿಜಾಬ್ ತೆಗೆದಿಟ್ಟು ಪರೀಕ್ಷೆಗೆ ಹಾಜರಾದರು. ಆದರೆ ಉಡುಪಿ, ಹೊಸನಗರ, ಕುಂದಾಪುರ, ಬೈಂದೂರು, ಸಾಗರದಲ್ಲಿ ಹಲವು ಮುಸ್ಲಿಂ ವಿದ್ಯಾರ್ಥಿನಿಯರು ತರಗತಿಗೆ ಗೈರಾಗಿದ್ದರು.

ಬಂದ್‌ಗೆ ಕರೆ: ‘ಹಿಜಾಬ್ ವಿಚಾರವಾಗಿ ಹೈಕೋರ್ಟ್ ನೀಡಿರುವ ತೀರ್ಪನ್ನು ಒಪ್ಪಲಾಗದು’ ಎಂದು ಪ್ರತಿಪಾದಿಸಿರುವ ಮುಸ್ಲಿಂ ಸಮುದಾಯದ ಕೆಲವು ಸಂಘಟನೆಗಳು ಗುರುವಾರ (ಮಾರ್ಚ್ 17) ರಾಜ್ಯ ಬಂದ್‌ಗೆ ಕರೆ ನೀಡಿವೆ.

ಹಿಜಾಬ್ ಕುರಿತು ಹೈಕೋರ್ಟ್ ನೀಡಿದ ತೀರ್ಪಿನ ಬಳಿಕ ಬುಧವಾರ ಕಲಬುರಗಿಯ ಸರ್ಕಾರಿ ಪದವಿಪೂರ್ವ ಬಾಲಕಿಯರ ಕಾಲೇಜಿನಿಂದ ಹೊರ ಬರುತ್ತಿರುವ ವಿದ್ಯಾರ್ಥಿನಿಯರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಗೋಡೆಬರಹಕ್ಕೆ ಎಫ್‌ಐಆರ್

ಹೊಸಪೇಟೆ (ವಿಜಯನಗರ): ಹಿಜಾಬ್ ಧರಿಸುವುದನ್ನು ಸಮರ್ಥಿಸಿಕೊಂಡು ನಗರದ ತಲಾ ಎರಡು ಪ್ರೌಢಶಾಲೆ, ಕಾಲೇಜುಗಳ ಗೋಡೆ ಮೇಲೆ ಬರೆದ ಬರಹಕ್ಕೆ ಸಂಬಂಧಿಸಿ ಮೂರು ಠಾಣೆಗಳಲ್ಲಿ ನಾಲ್ಕು ಪ್ರತ್ಯೇಕ ಪ್ರಕರಣಗಳು ಬುಧವಾರ ದಾಖಲಾಗಿವೆ.

ವಿಜಯನಗರ ಕಾಲೇಜು, ಶಂಕರ್ ಆನಂದ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಸರ್ದಾರ್ ವಲ್ಲಭಭಾಯಿ ಪಟೇಲ್ ಶಾಲೆಗಳ ಗೋಡೆಗಳ ಮೇಲೆ ‘ಹಿಜಾಬ್ ಇಸ್ ಅವರ್ ಡಿಗ್ನಿಟಿ’, ‘ಹಿಜಾಬ್ ಇಸ್ ಅವರ್ ರೈಟ್’ ಎಂದು ಇಂಗ್ಲಿಷ್‌ನಲ್ಲಿ ದೊಡ್ಡ ಅಕ್ಷರಗಳಲ್ಲಿ ಬರೆಯಲಾಗಿದೆ. ಈ ಸಂಬಂಧ ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಿಸಲಾಗಿದೆ.

ಇದಲ್ಲದೇ ನಗರದ ಜಿಲ್ಲಾ ಕ್ರೀಡಾಂಗಣದ ಗೋಡೆಗಳು, ಹರಿಹರ ರಸ್ತೆಯ ಗುರು ಪದವಿಪೂರ್ವ ಕಾಲೇಜು, ಮುನ್ಸಿಪಲ್ ಹೈಸ್ಕೂಲ್ ಗೋಡೆಗಳ ಮೇಲೆಯೂ ಹಿಜಾಬ್ ಬೆಂಬಲಿಸಿ ಬರಹ ಬರೆಯಲಾಗಿದೆ. ಈ ವಿಷಯ ಗೊತ್ತಾಗುತ್ತಿದ್ದಂತೆ ನಗರಸಭೆ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿ ಗೋಡೆ ಬರಹಗಳ ಮೇಲೆ ಸುಣ್ಣ, ಬಣ್ಣ ಬಳಿಸಿದ್ದಾರೆ.

ಬೆಂಗಳೂರಿನಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ‘ಅಮೀರ್ ಇ ಶರಿಯತ್ ಆಫ್ ಕರ್ನಾಟಕ’ದ (ಮೌಲ್ವಿಗಳ ಸಂಘಟನೆ) ಮೌಲಾನ ಸಘೀರ್ ಅಹ್ಮದ್ ಖಾನ್ ರಶದಿ ಅವರು, ‘ಹೈಕೋರ್ಟ್ ತೀರ್ಪು ನಿರಾಶಾದಾಯಕವಾಗಿದೆ. ಮುಸ್ಲಿಂ ಸಮುದಾಯದ ವಿದ್ವಾಂಸರು, ಮಹಿಳಾ ಸಂಘಟನೆಗಳು ಮತ್ತು ಮಸೀದಿಗಳ ಮುಖ್ಯಸ್ಥರೆಲ್ಲ ಗುರುವಾರ ಶಾಂತಿಯುತ ಬಂದ್‌ಗೆ ಕರೆ ನೀಡಿದ್ದೇವೆ’ ಎಂದರು.

6ನೇ ಪುಟ ನೋಡಿ

ಪರೀಕ್ಷೆ ಬಹಿಷ್ಕಾರ

ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನ 12 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ನಿರಾಕರಿಸಿ, ಬುಧವಾರ ಆಂತರಿಕ ಪರೀಕ್ಷೆಗೆ ಹಾಜರಾಗಲಿಲ್ಲ ಕೆಲವರು ಪರೀಕ್ಷೆಗೆ ಹಾಜರಾದರು. ಉಡುಪಿ ಜಿಲ್ಲೆಯ ಕಾಪು ಸರ್ಕಾರಿ ಪದವಿ ಕಾಲೇಜಿನ 9 ವಿದ್ಯಾರ್ಥಿನಿಯರು ಆಂತರಿಕ ಪರೀಕ್ಷೆ ಬಹಿಷ್ಕರಿಸಿದರು.

ತ್ವರಿತ ವಿಚಾರಣೆಗೆ ‘ಸುಪ್ರೀಂ’ ನಕಾರ

ನವದೆಹಲಿ: ಹಿಜಾಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಹೈಕೋರ್ಟ್ ನೀಡಿರುವ ತೀರ್ಪನ್ನು ಪ್ರಶ್ನಿಸಲಾದ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ.

ಅನೇಕ ವಿದ್ಯಾರ್ಥಿನಿಯರು ಪರೀಕ್ಷೆ ಎದುರಿಸಬೇಕಿದ್ದು, ಮೇಲ್ಮನವಿಯ ವಿಚಾರಣೆಯನ್ನು ತ್ವರಿತವಾಗಿ ನಡೆಸಬೇಕು ಎಂದು ಅರ್ಜಿದಾರರ ಪರ ವಕೀಲ ಸಂಜಯ್ ಹೆಗ್ಡೆ ಅವರು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠದೆದುರು ಮನವಿ ಮಾಡಿದರು.

ಹೋಳಿ ರಜೆಯ ನಂತರ ವಿಚಾರಣೆಯ ದಿನಾಂಕ ನಿಗದಿಪಡಿಸಲಾಗುವುದು ಪೀಠವು ತಿಳಿಸಿತು.

ಏಳನೇ ವೇತನ ಆಯೋಗ ರಚನೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರಿ ನೌಕರರು ಪಡೆಯುತ್ತಿರುವ ವೇತನಕ್ಕೆ ಸಮಾನವಾಗಿ ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಿಸಬೇಕೆಂಬ ಬಹುಕಾಲದ ಬೇಡಿಕೆಗೆ ಸ್ಪಂದಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಏಳನೇ ವೇತನ ಆಯೋಗ ರಚಿಸುವುದಾಗಿ ಪ್ರಕಟಿಸಿದರು.

ವಿಧಾನಸಭೆಯಲ್ಲಿ ಬುಧವಾರ ಮಾತನಾಡಿದ ಅವರು, ‘ಆಯೋಗ ರಚಿಸುವ ವಿಚಾರವನ್ನು ಬಜೆಟ್‌ನಲ್ಲಿ ಸೇರಿಸಿರಲಿಲ್ಲ. ಆದಷ್ಟು ಬೇಗ ಆಯೋಗ ರಚಿಸುತ್ತೇನೆ. ಅದು ನೀಡುವ ವರದಿ ಆಧರಿಸಿ ವೇತನ ಪರಿಷ್ಕರಣೆ ಮಾಡಲಾಗುವುದು’ ಎಂದರು.

ಕೇಂದ್ರ ಸರ್ಕಾರಿ ನೌಕರರಿಗೆ ಸರಿ ಸಮಾನವಾದ ವೇತನ ಶ್ರೇಣಿ, ಭತ್ಯೆಗಳನ್ನು ರಾಜ್ಯ ಸರ್ಕಾರಿ ನೌಕರರಿಗೆ ನೀಡಿದರೆ ವಾರ್ಷಿಕ ₹10,656 ಕೋಟಿ ಹೆಚ್ಚುವರಿಯಾಗಿ ಬೇಕಾಗುತ್ತದೆ. ಈಗ ಖಾಲಿ ಇರುವ 2.58 ಲಕ್ಷ ಹುದ್ದೆಗಳಿಂದಾಗಿ ಸರ್ಕಾರಕ್ಕೆ ವರ್ಷಕ್ಕೆ ಸುಮಾರು ₹8,531 ಕೋಟಿ ಉಳಿತಾಯವಾಗುತ್ತಿದೆ. ಆದ್ದರಿಂದ ಸರ್ಕಾರಕ್ಕೆ ಹೆಚ್ಚುವರಿಯಾಗಿ ₹2,125 ಕೋಟಿ ಬೇಕಾಗುತ್ತದೆ. ಇದನ್ನಾಧರಿಸಿ ಪರಿಷ್ಕರಣೆ ಮಾಡಬೇಕು ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು.

ಕೇಂದ್ರವು 2016ರಲ್ಲಿ 7ನೇ ವೇತನ ಆಯೋಗದ ಶಿಫಾರಸುಗಳನ್ನು ಆಧರಿಸಿ ತನ್ನ ನೌಕರರ ವೇತನ, ಭತ್ಯೆಗಳನ್ನು ಪರಿಷ್ಕರಿಸಿತ್ತು. ರಾಜ್ಯದಲ್ಲಿ 2016ರಲ್ಲಿ ವೇತನ ಆಯೋಗ ರಚಿಸದೇ ಒಂದು ವರ್ಷ ತಡವಾಗಿ ಅಂದರೆ 2017ರಲ್ಲಿ 6ನೇ ವೇತನ ಆಯೋಗ ರಚಿಸಿತ್ತು. ಆಯೋಗ ನೀಡಿದ ಶಿಫಾರಸು ಆಧರಿಸಿ 2017ರ ಜುಲೈನಿಂದ ಅನ್ವಯಿಸಿ, 2018ರ ಏ. 1 ರಿಂದ ಆರ್ಥಿಕ ಲಾಭ ದೊರೆಯುವಂತೆ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸಲಾಗಿತ್ತು.

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

CCA ESTD: 1999 ಚಾಣಕ್ಯ (IAS & KAS ತರಬೇತಿ ಕೇಂದ್ರ) ಕರಿಯರ್ ಅಕಾಡೆಮಿ ವಿಜಯಪುರ
KAS PSI
67ನೇ ಬ್ಯಾಚ್
ಜೊತೆಗೆ PDO ಹೇಳಿಕೊಡಲಾಗುವುದು
ಮೊದಲು ಬಂದವರಿಗೆ ಮೊದಲ ಆದ್ಯತೆ
ಪ್ರವೇಶ ಪ್ರಾರಂಭ: 16-03-2022
ತರಗತಿ ಪ್ರಾರಂಭ: 25-03-2022
ಮಲಘಾಣ ಬಿಲ್ಡಿಂಗ್, ಮೀನಾಕ್ಷಿ ಚೌಕ, ವಿಜಯಪುರ
☎: 08352-222197, 240197
Cell : 9448179762, 9900056218

ಎಂದೂ ಮಾಸದ ರಾಜರತ್ನ



ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಜನ್ಮದಿನದ ಪ್ರಯುಕ್ತ ವಿಶೇಷ ಪುಟಗಳು 9, 13

ಒಳ ಪುಟಗಳು

ಆದಿತ್ಯರಾವ್‌ಗೆ 20 ವರ್ಷ ಜೈಲುಶಿಕ್ಷೆ 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಾಲ್ಟ್ ಆಧಾರಿತ ಆಹಾರಗಳು
BOOST ಎನ್ನುವುದು ಪೌಷ್ಟಿಕವಾದ ಆರೋಗ್ಯಕರ ಪಾನೀಯವಾಗಿದೆ. ಇದನ್ನು ನಿಮ್ಮ ಪ್ರತಿ ದಿನದ ಸಂತುಲಿತ ಆಹಾರ ಸೇವನೆ ಮತ್ತು ವ್ಯಾಯಾಮ ಕ್ರಮದ ಅಂಗವಾಗಿ ಸೇವಿಸಬಹುದಾಗಿದೆ. +2009ರಲ್ಲಿ ನಡೆಸಿದ ಸ್ವತಂತ್ರ ಅಧ್ಯಯನವೊಂದನ್ನು ಆಧಾರಿಸಿದೆ. ಸಂಪೂರ್ಣ ಬಾಡಿ ಎಂಡ್ಯೂರೆನ್ಸ್ ಮಾಪನ ಮಾಡುತ್ತಾ ನಡೆಸಲಾದ 20 ನಿಮಿಷಗಳ ಶಟಲ್ ಟೆಸ್ಟ್ BOOST ಸೇವಿಸಿದ ಮಕ್ಕಳಲ್ಲಿ ನಾನ್-ಫೋರ್ಟಿಫೈಡ್ ಚಾಕೋಲೇಟ್ ಪಾನೀಯಗಳನ್ನು ಕುಡಿದಿರುವ ಮಕ್ಕಳಲ್ಲಿ (ವಯಸ್ಸು 7-10.5 ವರ್ಷಗಳು) 8% ಹೆಚ್ಚಿರುವುದಕ್ಕೆ ಹೋಲಿಸಿದಂತೆ BOOST ಸೇವಿಸಿದ ಮಕ್ಕಳಲ್ಲಿ ಪೂರ್ತಿಗೊಳಿಸಿದ ಶಟಲ್ 25% ಹೆಚ್ಚಿದ್ದವು J.Nutr. 141:2017-2023, 2011. #*BOOST 500 g ಜಾರ್‌ನ MRPಗೆ ಹೋಲಿಸಲಾಗಿದೆ. +^ವಿವರಗಳಿಗಾಗಿ ಪ್ಯಾಕ್ ನೋಡಿರಿ.

ನಿಮ್ಮ ಪ್ರೀತಿಪಾತ್ರರಿಗೆ, ಇನ್‌ಶೂರೆನ್ಸ್‌ನ ಅಗತ್ಯವಿದೆ.



ನಿಮ್ಮ ಆಪ್ತೇಷ್ಟರಿಗೆ ಲೈಫ್ ಇನ್‌ಶ್ಯೂರೆನ್ಸ್‌ನ ಸುರಕ್ಷೆ ಸಿಗುವಂತೆ ಮಾಡಿ.

ನಿಮ್ಮ ಸಕುಟುಂಬದ ಸುರಕ್ಷೆಯ ವಿಷಯ ಬಂದಾಗ, ಪ್ರತಿ ದಿನ ಸ್ವಲ್ಪ ಚಿಂತನಶೀಲ ಸಂಗತಿಗಳನ್ನು ಮನನ ಮಾಡಿಕೊಂಡು ಇನ್‌ಶ್ಯೂರೆನ್ಸ್ ಮಾಡಿಸುತ್ತೀರಿ. ಒಟ್ಟರ್ಥದಲ್ಲಿ ನಿಮ್ಮ ಕುಟುಂಬದ ಯೋಗಕ್ಷೇಮವೇ ನಿಮಗೆ ಪ್ರಥಮ ಪ್ರಾಧಾನ್ಯತೆಯಾಗಿರುತ್ತದೆ. ನಿಜವಾದ ಅರ್ಥದಲ್ಲಿ, ಅರ್ಥಪೂರ್ಣವಾಗಿ ನಿಮ್ಮ ಕುಟುಂಬವನ್ನು ಸುರಕ್ಷಿತಗೊಳಿಸಬೇಕಾದರೆ ಅವರಿಗೆ ನೀವು ಲೈಫ್ ಇನ್‌ಶ್ಯೂರೆನ್ಸ್‌ನ ಸುರಕ್ಷೆ ನೀಡಲೇಬೇಕಾಗಿದೆ. ಏಕೆಂದರೆ ಏನೇ ಇರಲಿ, ಜೀವವಿಮೆಯೊಂದಿಗೆ ಅವರ ಕನಸುಗಳು ನನಸಾಗಲ್ಲವು ಎಂಬ ಭರವಸೆ ಮೂಡುತ್ತದೆ. ಹಾಗಾಗಿ ನಿಮ್ಮ ಆದ್ಯತೆ ಮೊಟ್ಟಮೊದಲು ಲೈಫ್ ಇನ್‌ಶ್ಯೂರೆನ್ಸ್‌ಗಿರಲಿ.

ಲಾಗ್‌ಆನ್ ಮಾಡಿ

sabsepehlelifeinsurance.com

ಮೊತ್ತಮೊದಲು ಲೈಫ್ ಇನ್‌ಶ್ಯೂರೆನ್ಸ್

Life Insurance Council
Together in service

18 ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ಭ್ರಷ್ಟಾಚಾರ ನಿಗ್ರಹ ದಳ ದಾಳಿ

9.4 ಕೆ.ಜಿ ಚಿನ್ನ, 60 ಕೆ.ಜಿ ಬೆಳ್ಳಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ರಾಜ್ಯ ಸರ್ಕಾರದ 18 ಅಧಿಕಾರಿಗಳಿಗೆ ಸಂಬಂಧಿಸಿದಂತೆ 20 ಜಿಲ್ಲೆಗಳಲ್ಲಿ ಬುಧವಾರ ಏಕಕಾಲಕ್ಕೆ ಶೋಧ ನಡೆಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), 9.4 ಕೆ.ಜಿ. ಚಿನ್ನ, 60.3 ಕೆ.ಜಿ. ಬೆಳ್ಳಿ, ₹ 82.74 ಲಕ್ಷ ನಗದು ಸೇರಿದಂತೆ ₹ 50 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಪತ್ತೆಮಾಡಿದೆ.

ಆಪಾದಿತ ಅಧಿಕಾರಿಗಳು, ಅವರ ಸಂಬಂಧಿಗಳು, ಬೇನಾಮಿ ವಹಿವಾಟು ನಡೆಸುವವರ ಮನೆಗಳು, ಖಾಸಗಿ ವಾಣಿಜ್ಯ ಸಂಸ್ಥೆಗಳ ಕಚೇರಿಗಳು ಮತ್ತು ವಿವಿಧ ಸರ್ಕಾರಿ ಕಚೇರಿಗಳಲ್ಲಿ ಶೋಧ ನಡೆದಿದೆ. ಎಸಿಬಿಯ 300 ಅಧಿಕಾರಿಗಳು ಮತ್ತು ಸಿಬ್ಬಂದಿ ರಾಜ್ಯದ 77 ಸ್ಥಳಗಳಲ್ಲಿ ಬೆಳಿಗ್ಗೆಯಿಂದ ರಾತ್ರಿಯವರೆಗೂ ಶೋಧ ನಡೆಸಿದರು. ಕೆಲವೆಡೆ ತಡರಾತ್ರಿಯೂ ಕಾರ್ಯಾಚರಣೆ ಮುಂದುವರಿದಿತ್ತು.

ವಿಜಯಪುರ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಗೋಪಿನಾಥ ಸಾ ಮಾಲಜಿ ಬ್ಯಾಂಕ್ ಖಾತೆಗಳಲ್ಲಿ ಠೇವಣಿ ಮತ್ತು ವಿವಿಧ ಹೂಡಿಕೆ ರೂಪದಲ್ಲಿ ₹ 9.46 ಕೋಟಿ ಹೊಂದಿರುವುದು ಪತ್ತೆಯಾಗಿದೆ. ಇದಲ್ಲದೆ ಮ್ಯೂಚ್ಯುವಲ್ ಫಂಡ್‌ನಲ್ಲಿ ₹ 1.31 ಕೋಟಿ ಹೂಡಿಕೆ ಮಾಡಿದ್ದಾರೆ. 41 ಎಕರೆ 4 ಗುಂಟೆ ಕೃಷಿ ಜಮೀನು, ಒಂದು ಮನೆ, ಎಂಟು ನಿವೇಶನಗಳನ್ನೂ ಎಸಿಬಿ ಪತ್ತೆಹಚ್ಚಿದೆ.

ಬಾದಾಮಿಯ ವಲಯ ಅರಣ್ಯಾಧಿಕಾರಿ ಶಿವಾನಂದ ಶರಣಪ್ಪ ಕೇದಗಿ ಅವರ ಮನೆಯಲ್ಲಿ ಚಿನ್ನಾಭರಣ ಪರಿಶೀಲನೆಯಲ್ಲಿ ತೊಡಗಿರುವ ಎಸಿಬಿ ಅಧಿಕಾರಿಗಳು

ಕೆಎಎಸ್ ಅಧಿಕಾರಿಯಾಗಿರುವ ರಾಮನಗರ ಉಪ ವಿಭಾಗಾಧಿಕಾರಿ ಸಿ. ಮಂಜುನಾಥ್ ಬಳಿ ಬೆಂಗಳೂರಿನಲ್ಲಿ ನಾಲ್ಕು ಅಂತಸ್ತಿನ ಒಂದು ಮನೆ, ಎರಡು ನಿವೇಶನ, ಬ್ಯಾಟರಾಯನಪುರದಲ್ಲಿ ವಾಣಿಜ್ಯ ಉದ್ದೇಶದ ಏಳು ಬ್ಯಾಡ್ಮಿಂಟನ್ ಕೋರ್ಟ್‌ಗಳಿರುವ ಬೃಹತ್ ಸ್ಥಿರಾಸ್ತಿ, ವಿವಿಧ ಕಂಪನಿಯ ಐದು ಕಾರುಗಳು ಪತ್ತೆಯಾಗಿವೆ. ಅವರ ಮನೆಯಲ್ಲಿ ₹ 19 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ ಎಂದು ಎಸಿಬಿ ತಿಳಿಸಿದೆ.

ಕೈಗಾರಿಕಾ ಇಲಾಖೆ ಹೆಚ್ಚುವರಿ ನಿರ್ದೇಶಕ ಬಿ.ಕೆ. ಶಿವಕುಮಾರ್ ಬಳಿ ಬೆಂಗಳೂರಿನಲ್ಲಿ ಎರಡು ಮನೆ, ಆರು ನಿವೇಶನ ಇರುವುದನ್ನು ಪತ್ತೆಮಾಡಲಾಗಿದೆ. ಸಾರಿಗೆ ಇಲಾಖೆ ಹೆಚ್ಚುವರಿ ಆಯುಕ್ತ ಜೆ. ಜ್ಞಾನೇಂದ್ರ ಕುಮಾರ್ ಬೆಂಗಳೂರಿನಲ್ಲಿ ನಾಲ್ಕು ಮನೆ, ಒಂದು ಫ್ಲ್ಯಾಟ್, ಮೈಸೂರಿನಲ್ಲಿ ಒಂದು ಮನೆ, ಬೆಂಗಳೂರಿನಲ್ಲಿ ಮೂರು ನಿವೇಶನ ಹೊಂದಿದ್ದಾರೆ.

ಬಿಡಿಎ ನಗರ ಯೋಜನಾ ವಿಭಾಗದ ಉಪ ನಿರ್ದೇಶಕ ವಿ. ರಾಕೇಶ್ ಕುಮಾರ್ ಒಂದು ಮನೆ, ಎಂಟು ನಿವೇಶನ, ಯಾದಗಿರಿ ಜಿಲ್ಲೆಯ ಸಾಮಾಜಿಕ ಅರಣ್ಯ ವಿಭಾಗದ ವಲಯ ಅರಣ್ಯಾಧಿಕಾರಿ ರಮೇಶ್ ಕನಕಟ್ಟಿ ಒಂದು ಮನೆ, ಐದು ನಿವೇಶನ ಮತ್ತು 61 ಎಕರೆ 10 ಗುಂಟೆ ಕೃಷಿ ಜಮೀನು ಹೊಂದಿರುವುದು ತನಿಖೆಯಲ್ಲಿ ಬಯಲಿಗೆ ಬಂದಿದೆ.

ಕರ್ನಾಟಕ ನೀರಾವರಿ ನಿಗಮದ ಕೌಜಲಗಿ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಬಸವರಾಜ ಶೇಖರ್ ರಡ್ಡಿ ಪಾಟೀಲ್ 89 ಎಕರೆ ಕೃಷಿ ಜಮೀನಿನ ಒಡೆಯ.

ಮೂರು ಮನೆ, ಎರಡು ನಿವೇಶನ, ಫ್ಲ್ಯಾಟ್ ಸೇರಿದಂತೆ ಬೃಹತ್ ಆಸ್ತಿಹೊಂದಿರುವುದನ್ನು ಎಸಿಬಿ ಪತ್ತೆಮಾಡಿದೆ.

ಕಸದ ಬುಟ್ಟಿಯಲ್ಲಿ ಚಿನ್ನ: ಖಾಲಿ ಸೈಟಲ್ಲಿ ನಗದು!

ಕೃಷ್ಣಾ ಭಾಗ್ಯ ಜಲ ನಿಗಮದ ದೇವದುರ್ಗ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ ರೆಡ್ಡಿ ಪಾಟೀಲ್ ಮನೆಯ ಕಸದ ಬುಟ್ಟಿಯಲ್ಲಿ ಚಿನ್ನಾಭರಣ ಅಡಗಿಸಿಟ್ಟಿದ್ದರು. ಮನೆಯ ಪಕ್ಕದ ಖಾಲಿ ನಿವೇಶನದಲ್ಲಿ ನಗದು ಬಚ್ಚಿಟ್ಟಿದ್ದರು. ಅದನ್ನು ಎಸಿಬಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಇವರ ಬಳಿ ಮೂರು ಮನೆ, ಎರಡು ನಿವೇಶನ, ಒಂದು ಫ್ಲ್ಯಾಟ್, 22 ಎಕರೆ ಕೃಷಿ ಜಮೀನು ಸೇರಿದಂತೆ ಹಲವು ಆಸ್ತಿಗಳು ಪತ್ತೆಯಾಗಿವೆ.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಚಂದಾಪುರ ವಿಭಾಗದಲ್ಲಿ ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಮಾರ್ಚ್ 18ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಬ್ಬಗೋಡಿ ಸುತ್ತಮುತ್ತ ಪ್ರದೇಶಗಳಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

12-14 ವರ್ಷದ ಮಕ್ಕಳಿಗೆ ಕೋವಿಡ್-19 ಲಸಿಕೆ ನೀಡುವಿಕೆ ಆರಂಭ!

ಏ.2ರಿಂದ ರಾಮನವಮಿ ಸಂಗೀತೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾ ಪ್ರೇಮಿಗಳಿಗೆ ತಿಂಗಳು ಪೂರ್ತಿ ಸಂಗೀತದ ರಸದೌತಣ ಬಡಿಸಲು ಶ್ರೀರಾಮಸೇವಾ ಮಂಡಳಿಯ ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಸಜ್ಜಾಗಿದೆ. ಏಪ್ರಿಲ್ 2ರಿಂದ ಮೇ 2ರವರೆಗೆ 84ನೇಯ 'ಶ್ರೀ ರಾಮನವಮಿ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ'ವನ್ನು ಟ್ರಸ್ಟ್ ಹಮ್ಮಿಕೊಂಡಿದೆ.

ಚಾಮರಾಜಪೇಟೆಯ ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಖ್ಯಾತ ಸಂಗೀತಗಾರರು ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಿದ್ದಾರೆ. ಭೌತಿಕ ಹಾಗೂ ಆನ್‌ಲೈನ್ ಎರಡನ್ನು ಒಳಗೊಂಡ ಹೈಬ್ರಿಡ್ ಮಾದರಿಯಲ್ಲಿ ಕಾರ್ಯಕ್ರಮಗಳ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಹಿಂದೂಸ್ತಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತಗಾರರು, ವಿದ್ವಾಂಸರು, ವೀಣೆ, ಪಿಟೀಲು, ಕೊಳಲು ವಾದಕರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ. ದೇಶದ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಏ.10ರಂದು 'ಭಾರತ ಸ್ವತಂತ್ರ ಸಂಗೀತ ವೈಭವಂ' ಎನ್ನುವ ವಿಶೇಷ ಕಾರ್ಯಕ್ರಮ ನಡೆಯಲಿದೆ. ಡಾ.ಮೈಸೂರು ಮಂಜುನಾಥ್ ನೇತೃತ್ವದಲ್ಲಿ 75 ಸಂಗೀತಗಾರರು ಕಾರ್ಯಕ್ರಮ ನೀಡಲಿದ್ದಾರೆ.

ಸಂಗೀತೋತ್ಸವಕ್ಕೆ ಅಧಿಕೃತ ಚಾಲನೆ ದೊರೆಯುವ ಮೊದಲು, ಮಾ.27ರಂದು ಸಂಜೆ 6.30ರಿಂದ ರಾತ್ರಿ 9.30ರವರೆಗೆ ವಿಶೇಷ ಸಂಗೀತ ಕಛೇರಿ ಹಮ್ಮಿಕೊಳ್ಳಲಾಗಿದೆ. ಸಿದ್ಧ್ ಶ್ರೀರಾಂ, ತ್ರಿವೇಂಡ್ರಂ ಸಂಪತ್, ನೈವೇಲಿ ನಾರಾಯಣ್ ಹಾಗೂ ಗುರುಪ್ರಸಾದ್ ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ.



ರಂಜನಿ ಗಾಯತ್ರಿ, ಬೆಂಗಳೂರು ಎಸ್. ಶಂಕರ್, ಸಿಕ್ಕಿಲ್ ಗುರು ಚರಣ್, ವಿಜಯ ಶಂಕರ್, ಪ್ರವೀಣ್ ಗೋಡ್ಖಿಂಡಿ, ಅಭಿಷೇಕ್ ರಘುರಾಮ್, ಗಾಯತ್ರಿ ವೆಂಕಟರಾಘವನ್, ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್, ತ್ರಿಶ್ಯೂರ್ ಸಹೋದರರು, ಕುಮರೇಶ್ ಮತ್ತು ಗಣೇಶ್, ವಿದ್ಯಾಭೂಷಣ, ಫಾಲ್ಘಾಟ್ ರಾಮಪ್ರಸಾದ್, ರಾಮಕೃಷ್ಣನ್ ಮೂರ್ತಿ, ಎಸ್. ಸಾಕೇತರಾಮನ್, ಮಲ್ಲಾಡಿ ಸಹೋದರರು, ಪಂಡಿತ್ ವೆಂಕಟೇಶ್ ಕುಮಾರ್ ಸೇರಿದಂತೆ ನಾಡಿನ-ದೇಶದ ಹಲವು ಸಂಗೀತ ವಿದ್ವಾಂಸರು ಕಛೇರಿ ನಡೆಸಿಕೊಡಲಿದ್ದಾರೆ.

www.ramanavamitickets.com ವೆಬ್‌ಸೈಟ್ ಮೂಲಕ ಟಿಕೆಟ್‌ಗಳನ್ನು ಕಾಯ್ದಿರಿಸಬಹುದು. ಮಾಹಿತಿಗೆ ಮಂಡಳಿಯ ಪ್ರಧಾನ ಕಾರ್ಯದರ್ಶಿ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಎಸ್.ಎನ್. ವರದರಾಜ್ (9448079079), ಕಾರ್ಯನಿರ್ವಾಹಕ ಅಧಿಕಾರಿ ಎಸ್ ಅಭಿಜೀತ್ ವರದರಾಜ್ (9483518012) ಅಥವಾ ಕಚೇರಿಯನ್ನು (080-26604031) ದೂರವಾಣಿ ಮೂಲಕ ಸಂಪರ್ಕಿಸಬಹುದು. ಈ ಕಾರ್ಯಕ್ರಮಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇನ್ಫೊಸಿಸ್ ಫೌಂಡೇಷನ್ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗವಿದೆ.

ವಿದ್ವಾಂಸರ ಪ್ರತಿಷ್ಠಿತ ವೇದಿಕೆ

ಶ್ರೀರಾಮದೇವರ ಸ್ಫೂರ್ತಿಯನ್ನು ಸಾಂಸ್ಕೃತಿಕ ರೂಪದಲ್ಲಿ ಜನರಿಗೆ ಮುಟ್ಟಿಸಬೇಕು ಎಂಬ ಉದ್ದೇಶದಲ್ಲಿ ಎಸ್.ವಿ. ನಾರಾಯಣಸ್ವಾಮಿ ರಾವ್ 'ಶ್ರೀರಾಮಸೇವಾ ಮಂಡಳಿ' ಸ್ಥಾಪಿಸಿ, 1939ರಿಂದ ಈ ಭಾರತೀಯ ಶಾಸ್ತ್ರೀಯ ಸಂಗೀತ ಮಹೋತ್ಸವವನ್ನು ಪ್ರತಿ ವರ್ಷ ಆಯೋಜಿಸುತ್ತಿದ್ದರು. 2000ರಲ್ಲಿ ಅವರ ನಿಧನದ ನಂತರವೂ, ಈ ಸಂಗೀತೋತ್ಸವವು ಮುಂದುವರಿದುಕೊಂಡು ಬಂದಿದ್ದು, ವಿದ್ವಾಂಸರ ಪ್ರತಿಷ್ಠಿತ ವೇದಿಕೆಯಾಗಿ ಮಾರ್ಪಟ್ಟಿದೆ. ಪ್ರಸ್ತುತ ಎಸ್.ಎನ್. ವರದರಾಜ್ ಮಂಡಳಿಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಗೋಮಾಳ ಪರಭಾರೆ: ರಂಗನಾಥ್ ಅಮಾನತು

ಅಕ್ರಮ ಕುರಿತು 2020ರ ಜುಲೈ 25 ರಂದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂದಾಜು ₹ 200 ಕೋಟಿ ಮೌಲ್ಯದ 37 ಎಕರೆ ಸರ್ಕಾರಿ ಗೋಮಾಳವನ್ನು ಪರಭಾರೆ ಮಾಡಿರುವ ಕೆಎಎಸ್ ಹಿರಿಯ ಅಧಿಕಾರಿ (ಹಿಂದಿನ ಉಪವಿಭಾಗಾಧಿಕಾರಿ) ಕೆ.ರಂಗನಾಥ್ ಅವರನ್ನು ಸೇವೆಯಿಂದ ಅಮಾನತು ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿದೆ.

ರಂಗನಾಥ್ ಎಸಗಿದ ಭೂ ಅಕ್ರಮದ ಬಗ್ಗೆ '37 ಎಕರೆ ಗೋಮಾಳ ಪರಭಾರೆ; ಅಧಿಕಾರಿಗೆ ರಕ್ಷಣೆ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಫೆ.18ರಂದು ವರದಿ ಪ್ರಕಟವಾಗಿತ್ತು. ಈ ವಿಚಾರವನ್ನು ಜೆಡಿಎಸ್‌ನ ಎ.ಟಿ.ರಾಮಸ್ವಾಮಿ ವಿಧಾನಸಭೆಯಲ್ಲಿ ಪ್ರಸ್ತಾಪಿಸಿ ದ್ದರು. ರಂಗನಾಥ್ ಅವರನ್ನು ಸೇವೆಯಿಂದ ಅಮಾನತು ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸದನದಲ್ಲಿ ಪ್ರಕಟಿಸಿದ್ದರು.

'ರಂಗನಾಥ್ ಅವರು ಗಂಭೀರ ಸ್ವರೂಪದ ದುರ್ನಡತೆ, ಕರ್ತವ್ಯಲೋಪ ಎಸಗಿದ್ದಾರೆ. ಇಲಾಖಾ ವಿಚಾರಣೆ ಬಾಕಿ ಇಟ್ಟು, ಸೇವೆಯಿಂದ ಅಮಾನತು ಮಾಡಲಾಗಿದೆ. ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಅಧಿಕಾರಿ ಕೇಂದ್ರ ಸ್ಥಾನ ಬಿಡುವಂತಿಲ್ಲ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೆ.ರಂಗನಾಥ್

ಯಲಹಂಕ, ಬೆಂಗಳೂರು ಪೂರ್ವ ಮತ್ತು ಬೆಂಗಳೂರು ಉತ್ತರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ರಂಗನಾಥ್ ಅವರು ಅಲ್ಪಾವಧಿಯಲ್ಲೇ 37 ಎಕರೆಯನ್ನು ಖಾಸಗಿ ವ್ಯಕ್ತಿಗಳಿಗೆ ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ 15 ಪ್ರಕರಣಗಳ ಬಗ್ಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಎನ್.ಮಂಜುನಾಥ ಪ್ರಸಾದ್ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ 2020ರ ಜುಲೈ 25ರಂದು ವರದಿ ಸಲ್ಲಿಸಿದ್ದರು. ರಂಗನಾಥ್ ಅವರನ್ನು ಅಮಾನತು ಮಾಡಿ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಅವರು ಶಿಫಾರಸು ಮಾಡಿದ್ದರು.

ವರದಿ ಪರಿಣಾಮ

'ರಂಗನಾಥ್ ಅವರು 2020ರ ಮಾರ್ಚ್ 26ರಿಂದ ಜೂನ್ 26ರವರೆಗೆ ಬೆಂಗಳೂರು ಉತ್ತರ ವಿಭಾಗಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಏಪ್ರಿಲ್ 3ರವರೆಗೆ ಲಾಕ್‌ಡೌನ್ ಇದ್ದ ಕಾರಣ ಆ ನಂತರ 116 ಆದೇಶಗಳನ್ನು ಅವರು ಹೊರಡಿಸಿದ್ದು, ಅವುಗಳಲ್ಲಿ ಸರ್ಕಾರಿ ಗೋಮಾಳಕ್ಕೆ ಸಂಬಂಧಿಸಿದ 15 ಪ್ರಕರಣಗಳು ಒಳಗೊಂಡಿವೆ. ಉತ್ತರ ತಾಲ್ಲೂಕಿನ ಕನ್ನಲ್ಲಿ, ಲಕ್ಷ್ಮೀಪುರ, ಕೊಡಿಗೇಹಳ್ಳಿ, ಗೌಡಹಳ್ಳಿ, ಪೂರ್ವ ತಾಲ್ಲೂಕಿನ ಬಿದರಹಳ್ಳಿ, ಕ್ಯಾಲಸನಹಳ್ಳಿ, ಭೋಗನಹಳ್ಳಿ, ಯಲಹಂಕ ತಾಲ್ಲೂಕಿನ ಬೆಟ್ಟಹಲಸೂರು ಮತ್ತು ಸಾತನೂರು ಗ್ರಾಮಗಳ ವ್ಯಾಪ್ತಿಯ 37 ಎಕರೆ 10 ಗುಂಟೆ ಜಾಗವನ್ನು ಮಂಜೂರು ಮಾಡಿದ್ದಾರೆ' ಎಂದು ಮಂಜುನಾಥ ಪ್ರಸಾದ್ ವರದಿಯಲ್ಲಿ ವಿವರಿಸಿದ್ದರು.

ಈ ನಡುವೆ, ರಂಗನಾಥ್ ಅವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳದಲ್ಲೂ ಪ್ರಕರಣ ದಾಖಲಾಗಿತ್ತು. ತನಿಖೆಗೆ ಅನುಮತಿ ನೀಡಲು ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ಕೃಷ್ಣರಾಮಯ್ಯ ಎಂಬುವರು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ 2021ರ ಜನವರಿ 15ರಂದು ವಿಚಾರಣೆ ನಡೆಸಿದ್ದ ಹೈಕೋರ್ಟ್, ಎಸಿಬಿ ಸಲ್ಲಿಸಿರುವ ಪ್ರಸ್ತಾವನೆ ಸಂಬಂಧ ಒಂದು ತಿಂಗಳೊಳಗೆ ನಿರ್ಧಾರ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಎಸಿಬಿ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ತಿರಸ್ಕರಿಸಿತ್ತು.

ಎಲ್ಲೆಲ್ಲಿ ಎಷ್ಟು ಭೂಮಿಗೆ ಅಕ್ರಮ ದಾಖಲೆ

ತಾಲ್ಲೂಕು	ಗ್ರಾಮ	ಸರ್ವೆ ನಂಬರ್	ವಿಸ್ತೀರ್ಣ (ಎಕರೆ–ಗುಂಟೆ)
ಬೆಂಗಳೂರು ಉತ್ತರ	ಕನ್ನಳ್ಳಿ	93	2-00
ಬೆಂಗಳೂರು ಉತ್ತರ	ಲಕ್ಷ್ಮೀಪುರ	11	0-10
ಬೆಂಗಳೂರು ಉತ್ತರ	ಕೊಡಿಗೇಹಳ್ಳಿ	148, 151	8-00
ಬೆಂಗಳೂರು ಉತ್ತರ	ಗೌಡಹಳ್ಳಿ	48, 48/ಪಿ1	3-00
ಬೆಂಗಳೂರು ಪೂರ್ವ	ಬಿದರಹಳ್ಳಿ	193/ಪಿ5(237)	-
ಬೆಂಗಳೂರು ಪೂರ್ವ	ಕ್ಯಾಲಸನಹಳ್ಳಿ	11	4-00
ಬೆಂಗಳೂರು ಪೂರ್ವ	ಭೋಗನಹಳ್ಳಿ	139/2	-
ಯಲಹಂಕ	ತಿಮ್ಮಸಂದ್ರ	19	4-00
ಯಲಹಂಕ	ಬೆಟ್ಟ ಹಲಸೂರು	318	6-00
ಯಲಹಂಕ	ಸಾತನೂರು	67/1ಎಪಿ1	10-00

ಮುದ್ರಣ ಸಾಮಗ್ರಿ ಬೆಂಕಿಗಾಹುತಿ

ಬೆಂಗಳೂರು: ಬ್ಯಾಟರಾಯನಪುರದ ಹೊಸಗುಡ್ಡಹಳ್ಳಿಯ ನೆಹರೂ ರಸ್ತೆಯಲ್ಲಿರುವ ಹೀರಾ ಹೊಲೊವಿಷನ್ ಕಾರ್ಖಾನೆಯಲ್ಲಿ ಮಂಗಳವಾರ ರಾತ್ರಿ 1 ಗಂಟೆ ಸುಮಾರಿಗೆ ಆಕಸ್ಮಿಕ ಬೆಂಕಿ ಕಾಣಿಸಿಕೊಂಡಿದೆ.

'ಬೆಂಕಿಯ ಜ್ವಾಲೆಗೆ ಕಾರ್ಖಾನೆಯಲ್ಲಿದ್ದ ಮುದ್ರಣ ಸಾಮಗ್ರಿಗಳು ಸುಟ್ಟುಹೋಗಿವೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಘಟನೆಯಲ್ಲಿ ಯಾರಿಗೂ ತೊಂದರೆಯಾಗಿಲ್ಲ' ಎಂದು ಪೊಲೀಸರು ಹೇಳಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಎಸಿಸಿಎ ಜತೆ ಪಿಇಎಸ್ ವಿ.ವಿ. ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ಕೌಶಲ ಹೆಚ್ಚಿಸಲು ಪಿಇಎಸ್ ವಿಶ್ವವಿದ್ಯಾಲಯದ ಮ್ಯಾನೇಜ್‌ಮೆಂಟ್ ಸ್ಟಡೀಸ್ ಮತ್ತು ವಾಣಿಜ್ಯ ವಿಭಾಗವು 'ಅಸೋಸಿಯೇಷನ್ ಆಫ್ ಚಾರ್ಟರ್ಡ್ ಸರ್ಟಿಫೈಡ್ ಅಕೌಂಟೆಂಟ್ಸ್' (ಎಸಿಸಿಎ) ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಎಸಿಸಿಎ ವೃತ್ತಿಪರ ಲೆಕ್ಕಪರಿಶೋಧಕ ಅರ್ಹತೆ ನೀಡುವ ಜಾಗತಿಕ ಸಂಸ್ಥೆ. ಇದು ವಿಶ್ವದಾದ್ಯಂತ 2.33 ಲಕ್ಷ ಸದಸ್ಯರನ್ನು ಹೊಂದಿದೆ. ತೀವ್ರ ಮಾನವ ಸಂಪನ್ಮೂಲ ಕೊರತೆಯಿರುವ ಈ ಕ್ಷೇತ್ರದಲ್ಲಿ ಎಸಿಸಿಎ ಅರ್ಹತೆಯು ಯುವ ಆಕಾಂಕ್ಷಿಗಳಿಗೆ ಅನುಕೂಲವಾಗಲಿದೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ, 'ಈ ಒಪ್ಪಂದವು ವಿದ್ಯಾರ್ಥಿಗಳಿಗೆ ಜಾಗತಿಕ ವೃತ್ತಿಪರ ಲೆಕ್ಕಪತ್ರ ಸಂಸ್ಥೆಗೆ ಸುಲಭವಾಗಿ ಪ್ರವೇಶ ನೀಡುತ್ತದೆ. ಎಸಿಸಿಎ ಪಠ್ಯಕ್ರಮವನ್ನು ಬಿ.ಕಾಂ (ಹಾನರ್ಸ್) ಜೊತೆಗೆ ಸಂಯೋಜಿಸಲಾಗುವುದು.

ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಯೋಜನ ಹಾಗೂ ವೃತ್ತಿಪರ ಶಿಕ್ಷಣ ಒದಗಿಸಲು ಈ ಶೈಕ್ಷಣಿಕ ಕಾರ್ಯಕ್ರಮ ಫಲಪ್ರದವಾಗಲಿದೆ' ಎಂದರು.

'ಎಸಿಸಿಎ ಅನೇಕರಿಗೆ ಭವಿಷ್ಯದ ಮೆಟ್ಟಿಲು. ಈ ಸಹಯೋಗವು ವಿಶ್ವವಿದ್ಯಾಲಯದ ಪ್ರಭಾವವನ್ನು ಬಲಪಡಿಸುತ್ತದೆ ಹಾಗೂ ಭವಿಷ್ಯದಲ್ಲಿ ಅಂತರರಾಷ್ಟ್ರೀಯ ಸಹಯೋಗ ವಿಸ್ತರಿಸುವ ಭರವಸೆ ತೋರುತ್ತಿದೆ' ಎಂದು ಹೇಳಿದರು.

SBI ಭಾರತೀಯ ಸ್ಟೇಟ್ ಬ್ಯಾಂಕ್
ಆವರಣ ಮತ್ತು ಸ್ವತ್ತು ವಿಭಾಗ ಸ್ಥಳೀಯ ಪ್ರಧಾನ ಕಛೇರಿ, ಬೆಂಗಳೂರು Ph.No.080-2594 3867 / 4120
ಆರ್ಕಿಟೆಕ್ಟ್‌ಗಳ ಎಂಪಾನೆಲ್ಮೆಂಟ್
ಭಾರತೀಯ ಸ್ಟೇಟ್ ಬ್ಯಾಂಕ್, ಸ್ಥಳೀಯ ಪ್ರಧಾನ ಕಚೇರಿ, ನಂ.65, ಸಂತ ಮಾರ್ಕರ ರಸ್ತೆ, ಬೆಂಗಳೂರು–560001, ಇವರಿಂದ ಆರ್ಕಿಟೆಕ್ಟ್ ಗಳ ಎಂಪ್ಯಾನೆಲ್ಮೆಂಟ್ ಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬ್ಯಾಂಕಿನ ವೆಬ್ ಸೈಟ್ ನಲ್ಲಿ ನೀಡಲಾದ ಅರ್ಹತಾ ಮಾನದಂಡಗಳನ್ನು ಹೊಂದಿರುವ ಆರ್ಕಿಟೆಕ್ಟ್/ಸಂಸ್ಥೆಗಳು ಸಮರ್ಥಕ ದಾಖಲೆಗಳೊಂದಿಗೆ ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ 07.04.2022 ರ ಮಧ್ಯಾಹ್ನ 3.00 ಗಂಟೆ ಅಥವಾ ಅದರೊಳಗಾಗಿ ಸಲ್ಲಿಸಬೇಕು. ಅರ್ಹತಾ ಮಾನದಂಡಗಳು ಮತ್ತು ಅರ್ಜಿ ನಮೂನೆಯು ಬ್ಯಾಂಕಿನ ವೆಬ್ ಸೈಟ್ Bank.sbi<link>SBI ನಲ್ಲಿನ news>show more> Empanelment of vendors ನಲ್ಲಿ ಲಭ್ಯವಿದೆ. ಈಗಾಗಲೇ ಪ್ಯಾನೆಲ್ ನಲ್ಲಿರುವ ಆರ್ಕಿಟೆಕ್ಟ್ ಗಳೂ ಸಹ ಹೊಸದಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.
ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು (ಪಿ&ಇ)

ಏಳನೇ ವೇತನ ಆಯೋಗ ರಚಿಸುವುದಾಗಿ ಪ್ರಕಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಮತ್ತು ಪದಾಧಿಕಾರಿಗಳು ಅಭಿನಂದಿಸಿದರು.

ನಗರದಲ್ಲಿ ಇಂದು

ವಿಶ್ವ ಮಹಿಳಾ ದಿನ: ಅತಿಥಿಗಳು–ಎಲ್. ಗೋಮತಿ ದೇವಿ, ಪ್ರೊ.ಎಂ.ಕೊಟ್ರೇಶ್, ತುಳಸಿ ಗೌಡ, ಪ್ರೊ.ಆರ್.ಇಂದಿರಾ, ಎನ್. ಗಾಯತ್ರಿ, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ಯುಜಿಸಿ ಕೇಂದ್ರ, ಸ್ಥಳ–ವೆಂಕಟಗಿರಿಗೌಡ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಓಬವ್ವ ಜಯಂತಿ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಾನ್ನಿಧ್ಯ–ಜ್ಞಾನಪ್ರಕಾಶ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ, ಅತಿಥಿಗಳು–ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎಂ.ರಾಜೀವ್ ಚಂದ್ರಶೇಖರ್, ಮಲ್ಲಿಕಾರ್ಜುನ ಖರ್ಗೆ, ವಿಶ್ವೇಶ್ವರ ಹೆಗಡೆ ಕಾಗೇರಿ, ಬಸವರಾಜ ಹೊರಟ್ಟಿ, ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್, ಮಾಲಾರ್ಪಣೆ–ಸಚಿವ ವಿ.ಸುನಿಲ್ ಕುಮಾರ್, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಸಂಜೆ 4

'ಲೆಟರ್ ಟು ಡೆಥ್' ನಾಟಕ ಪ್ರದರ್ಶನ(ಸಂಜೆ 5): ನಿರ್ದೇಶನ–ಬೇಲೂರು ರಘುನಂದನ್, ಉದ್ಘಾಟನೆ–ಬಿ.ಆರ್.ರವಿಕಾಂತೇಗೌಡ, ಅಧ್ಯಕ್ಷತೆ–ಎಸ್.ಜಿ.ಸಿದ್ದರಾಮಯ್ಯ, ಅತಿಥಿಗಳು–ದೇವು ಪತ್ತಾರ, ಎನ್.ಆರ್.ಹೆಗ್ಡೆ, ಚಲಂ ಹಾಡ್ಲಹಳ್ಳಿ, ಸಂಜೆ 6ಕ್ಕೆ ರಂಗಗೌರವ, ಅತಿಥಿಗಳು–ಎಂ.ಪ್ರಕಾಶಮೂರ್ತಿ, ಮಾಗಡಿ ಗಿರೀಶ, ರಾಜಶೇಖರ ಮಠಪತಿ, ಟೆಲಿಕಾಂ ದತ್ತಾತ್ರೇಯ, ಆಯೋಜನೆ–ರಂಗಚಂದಿರ, ಸ್ಥಳ–ನಯನ ಸಭಾಂಗಣ

ಸ್ನೇಹಾ ಕಪ್ಪಣ್ಣ ಮತ್ತು ಪದ್ಮಿನಿ ಅಚ್ಚಿ

ಡಿ.ವಿ.ಗುಂಡಪ್ಪ ಅವರ ಜನ್ಮದಿನದ ಅಂಗವಾಗಿ 'ಮಂಕುತಿಮ್ಮನ ಮಾರ್ಗ' ನೃತ್ಯ ಪ್ರದರ್ಶನ: ಸ್ನೇಹಾ ಕಪ್ಪಣ್ಣ ಮತ್ತು ಪದ್ಮಿನಿ ಅಚ್ಚಿ, ಅತಿಥಿಗಳು–ಭರತನಾಟ್ಯ ಪ್ರವೀಣೆ ಶೋಭಾ ಶಶಿಕುಮಾರ್, ವಿದ್ವಾಂಸ ಬಿ.ಆರ್.ಪ್ರಭಾಕರ್, ರಂಗತಜ್ಞ ಶ್ರೀನಿವಾಸ್ ಜಿ.ಕಪ್ಪಣ್ಣ, ಸಹಯೋಗ–ರೋಟರಿ ಡಿ.ವಿ.ಜಿ ಬಳಗ, ಸ್ಥಳ–ಜೆ.ಎಸ್.ಎಸ್.ಸಭಾಂಗಣ, ಜಯನಗರ, ಸಂಜೆ 6.30

ರಮ್ಯಾ ಸುಧೀರ್ ಅವರಿಂದ 'ದಾಸಮಂಜರಿ' ಗಾಯನ: ವಾದ್ಯ ಸಹಕಾರ–ಶ್ರೀನಿವಾಸ ಕಾಖಂಡಕಿ, ಅಮಿತ್ ಶರ್ಮಾ, ಸ್ಥಳ–ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, ಜಯನಗರ, ಸಂಜೆ 7.30

ರಮ್ಯಾ ಸುಧೀರ್

50 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಶಾಲೆ • ವಿವಿಧ ಕೌಶಲ ತರಬೇತಿ

ಬುದ್ಧಿಮಾಂದ್ಯರ ಪ್ರಗತಿ, ಸಂಸ್ಕೃತಿಗೊಂದು 'ಆಕೃತಿ'!

• ಸುಕೃತ ಎಸ್.

ಬೆಂಗಳೂರು: ಸ್ವಾವಲಂಬಿ ಜೀವನ ನಡೆಸಿರುವ ಜಗನ್ನಾಥ್ ಅವರು ಈಗ ಮನೆಯ ಎಲ್ಲ ಕೆಲಸಗಳನ್ನು ಮಾಡುತ್ತಾರೆ. ದಿನಸಿ ತರುತ್ತಾರೆ. ಬ್ಯಾಂಕ್ ಕೆಲಸ ಮಾಡಿಕೊಂಡು ಬರುತ್ತಾರೆ. ತಾವು ಕಲಿತ ಶಾಲೆಯಲ್ಲೇ ಈಗ ಸಹಾಯಕ ಹುದ್ದೆಯಲ್ಲಿದ್ದು (ಅಟೆಂಡರ್) ತಿಂಗಳಿಗೆ ₹ 7 ಸಾವಿರ ವೇತನ ಪಡೆಯುತ್ತಿದ್ದಾರೆ.

ದಿ ಅಸೋಸಿಯೇಷನ್ ಫಾರ್ ದಿ ಮೆಂಟಲಿ ಚಾಲೆಂಜ್ಡ್ ಸಂಸ್ಥೆಯು ಬುದ್ಧಿಮಾಂದ್ಯರಿಗಾಗಿ 50 ವರ್ಷಗಳಿಂದ ಶಾಲೆಯೊಂದನ್ನು ನಡೆಸುತ್ತಿದೆ. ಕಿದ್ವಾಯಿ ಆಸ್ಪತ್ರೆಯ ಪಕ್ಕದಲ್ಲಿರುವ ಈ ಶಾಲೆಯಲ್ಲಿ 120 ಮಂದಿ ಅಭ್ಯಾಸ ಮಾಡುತ್ತಿದ್ದಾರೆ. ಅವರು ಸ್ವತಂತ್ರವಾಗಿ ಅಥವಾ ಕನಿಷ್ಠ ಅವಲಂಬನೆಯಿಂದ ಜೀವನ ನಡೆಸುವಂತೆ ಮಾಡುವ ಗುರಿ ಶಾಲೆಯದ್ದು.

ಜಗನ್ನಾಥ್ ಅವರಂತೆ, ಇಲ್ಲಿ ಕಲಿತವರು ಇಂದು ಸ್ವಂತ ಉದ್ಯಮ ಆರಂಭಿಸಿದ್ದಾರೆ. ಔಷಧಾಲಯಗಳಲ್ಲಿ, ಲಿಫ್ಟ್ ಬಾಯ್ ಆಗಿ, ಕಚೇರಿಗಳಲ್ಲಿ ಸಹಾಯಕರಾಗಿ ಅನೇಕರು ಬದುಕು ಕಟ್ಟಿಕೊಂಡಿದ್ದಾರೆ.

'ಜಗನ್ನಾಥನಿಗೆ ಈಗ 56 ವರ್ಷ. ಆತ ಯಾರನ್ನೂ ಅವಲಂಬಿಸಿಲ್ಲ. ಜೆರಾಕ್ಸ್ ಮಾಡುತ್ತಾನೆ, ಪೇಂಟಿಂಗ್ ಮಾಡುತ್ತಾನೆ. ಮ್ಯಾಟ್ ತಯಾರಿಸುತ್ತಾನೆ. ಜನರೊಂದಿಗೆ ಬೆರೆಯುವುದೆಂದರೆ ಆತನಿಗೆ ಇಷ್ಟ. ನಗರದಲ್ಲಿ ಎಲ್ಲಿ ಏನು ಸಿಗುತ್ತದೆ, ಎಲ್ಲಿಗೆ, ಹೇಗೆ ಹೋಗಬೇಕು ಎಲ್ಲವೂ ಆತನಿಗೆ ಗೊತ್ತು. ಈ ರೀತಿ ಸ್ವಾವಲಂಬಿಯಾಗುತ್ತಾನೆ ಎಂದು ಎಣಿಸಿರಲಿಲ್ಲ' ಎನ್ನುತ್ತಾರೆ ಜಗನ್ನಾಥ್ ಅವರ ಹಿರಿಯ ಸಹೋದರ ಗುಂಡೂ ರಾವ್.

1960ರಲ್ಲಿ ಡಾ.ಡಿ.ಎಲ್.ಎನ್ ಮೂರ್ತಿ ರಾವ್ ಅವರು ಬುದ್ಧಿಮಾಂದ್ಯ ಮಕ್ಕಳಿಗಾಗಿ ಸಂಸ್ಥೆ ಆರಂಭಿಸಿದರು. ನಂತರ 1962ರಲ್ಲಿ ಶಾಲೆ ಆರಂಭವಾಯಿತು. ಈ ಕಾರ್ಯದಲ್ಲಿ ಮೂರ್ತಿ ರಾವ್ ಅವರ ಪತ್ನಿ ಸರೋಜಾ ಅವರೂ ಕೈಜೋಡಿಸಿದರು.

ಆಕೃತಿ: ವಿಶೇಷ ಮಕ್ಕಳಿಗಾಗಿ ಇರುವ ವಿಶೇಷ ಶಾಲೆಯೇ ಆಕೃತಿ. ಇಲ್ಲಿ 4ರಿಂದ 16 ವರ್ಷದ ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ. ಮಕ್ಕಳ ಮಾನಸಿಕ ಬೆಳವಣಿಗೆ ಮತ್ತು ಭಾಷೆ ಆಧಾರದಲ್ಲಿ ತರಗತಿಗಳನ್ನು ವಿಂಗಡಣೆ ಮಾಡಲಾಗಿದೆ. ಪಠ್ಯದ ಜೊತೆ, ಸಂಗೀತ, ಯೋಗ, ಚಿತ್ರಕಲೆ ಕಲಿಸಲಾಗುತ್ತದೆ. ಬುದ್ಧಿಮಾಂದ್ಯ ಮಕ್ಕಳಿಗೆ ಪಾಠ ಮಾಡಲು ವಿಶೇಷ ತರಬೇತಿ ಪಡೆದ ಶಿಕ್ಷಕ ವರ್ಗವಿದೆ.

ಮಕ್ಕಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯೂ ಇದೆ. ಬೆಳಿಗ್ಗೆ ಗಂಜಿಯನ್ನೂ ನೀಡಲಾಗುತ್ತಿದೆ. ಇದಕ್ಕಾಗಿ ಊಟದ ಕೊಠಡಿಯೂ ಇದೆ. ಸಂಸ್ಥೆಯ ಸ್ವಂತ ವಾಹನದಲ್ಲೇ ಮಕ್ಕಳನ್ನು ಮನೆಯಿಂದ ಶಾಲೆಗೆ, ಶಾಲೆಯಿಂದ ಮನೆಗೆ ಬಿಡಲಾಗುತ್ತದೆ.

'2018ರಲ್ಲಿ ಶಾಲೆಯಲ್ಲಿ ಸ್ಮಾರ್ಟ್ ತರಗತಿಗಳನ್ನೂ ಪ್ರಾರಂಭಿಸಲಾಗಿದೆ. ಕೋವಿಡ್ ಸಮಯದಲ್ಲಿ ಶಾಲೆಯ ಶಿಕ್ಷಕರೇ ಪಠ್ಯದ ವಿಡಿಯೊಗಳನ್ನು ಸಿದ್ಧಪಡಿಸಿದ್ದರು. ಅವುಗಳ ಲಿಂಕ್‌ಗಳನ್ನು ಪೋಷಕರಿಗೆ ಕಳುಹಿಸಲಾಗಿತ್ತು. ಪ್ರತಿಯೊಬ್ಬರಿಗೂ ಟ್ಯಾಬ್‌ಗಳನ್ನು ನೀಡಲಾಗಿದೆ. ತಂತ್ರಜ್ಞಾನದ ಮೂಲಕ ಪ್ರಾಯೋಗಿಕ ಅಭ್ಯಾಸವನ್ನೂ ಮಾಡಿಸಲಾಗುತ್ತಿದೆ' ಎನ್ನುತ್ತಾರೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ವಿ. ಗೋಪಾಲಕೃಷ್ಣನ್.

ಪ್ರಗತಿ, ಸಂಸ್ಕೃತಿ, ಸಮೃದ್ಧಿ ಕಾರ್ಯಕ್ರಮಗಳನ್ನೂ ಸಂಸ್ಥೆ ನಡೆಸುತ್ತಿದೆ. ಬುದ್ಧಿಮಾಂದ್ಯರಿಗಾಗಿ ವಿವಿಧ ಕೌಶಲಗಳನ್ನು ಹೇಳಿಕೊಡಲು ಶಿಬಿರಗಳನ್ನು ಹಮ್ಮಿಕೊಳ್ಳುತ್ತದೆ. 'ಪ್ರಗತಿ' ಕಾರ್ಯಕ್ರಮದಲ್ಲಿ ಹೊಲಿಗೆ, ಮೊಂಬತ್ತಿ ತಯಾರಿ, ಬಟ್ಟೆ ನೆಯ್ಗೆ, ಕುಂಬಾರಿಕೆ, ಬ್ಯಾಗ್ ತಯಾರಿ ಕೌಶಲಗಳನ್ನು ಕಲಿಸಲಾಗುತ್ತದೆ. 'ಪ್ರಗತಿ' ಕಾರ್ಯಕ್ರಮದಡಿ ಕಲಿತ ಬಳಿಕವೂ ಕೆಲಸ ಸಿಗದವರಿಗೆ 'ಸಂಸ್ಕೃತಿ' ಕಾರ್ಯಕ್ರಮದ ಅಡಿ ಇಲ್ಲೇ ಕೆಲಸ ನೀಡಲಾಗುತ್ತಿದೆ.

ಇಲ್ಲಿ ತಯಾರಾದ ವಸ್ತುಗಳಿಗೆ ಬಹುಬೇಡಿಕೆ ಇದೆ. ಮದುವೆ,ವಿಚಾರ ಸಂಕಿರಣ ಕಾರ್ಯಕ್ರಮಗಳ ಆಯೋಜಕರು ಸಾಮಗ್ರಿಗಳನ್ನು ಖರೀದಿಸುತ್ತಾರೆ. ಸಂಸ್ಥೆಯ ವೆಬ್‌ಸೈಟ್‌ನಲ್ಲೂ ಖರೀದಿಗೆ ಅವಕಾಶವಿದೆ.

ಅಂಕಿ ಅಂಶ

1,356	32	2,320
'ಆಕೃತಿ' ಶಾಲೆಯಲ್ಲಿ ಈವರೆಗೆ ಕಲಿತ ವಿದ್ಯಾರ್ಥಿಗಳು	ಉದ್ಯೋಗ ಪಡೆದವರು	ಸಂಸ್ಥೆಯಿಂದ ಸಹಾಯ ಪಡೆದ ಕುಟುಂಬಗಳು

ಹೊಸ ಬೆಳಕು

ಈ ಶಾಲೆಯಿಂದೇನು ಪ್ರಯೋಜನ ಎಂದು ಅನುಮಾನಿಸುವವರಿದ್ದಾರೆ. 30 ಮಕ್ಕಳು ಶೌಚಕ್ಕೆ ಹೋಗಬೇಕು ಎಂಬ ಸಾಮರ್ಥ್ಯ ಪಡೆದರೆ ಅದು ದೊಡ್ಡ ಪ್ರಯೋಜನ

ಕೆ.ವಿ. ಗೋಪಾಲಕೃಷ್ಣನ್
ಎಂಡಿ, ಮೆಂಟಲಿ ಚಾಲೆಂಜ್ಡ್ ಸಂಸ್ಥೆ

ಶಾಲೆ ಕಟ್ಟಡ

ಕುಟುಂಬ ನಿರ್ವಹಣೆಗೂ ನೆರವು

ಬುದ್ಧಿಮಾಂದ್ಯ ಮಕ್ಕಳಿಗಾಗಿ ಶಾಲೆ ತೆರೆದಿರುವ ಸಂಸ್ಥೆಯು ಆ ಮಕ್ಕಳ ಪೋಷಕರ ಬಾಳಿಗೂ ಆಸರೆ ಆಗಿದೆ. ಇಲ್ಲಿನ ಕೌಶಲ ಶಿಬಿರಗಳಲ್ಲಿ ಅವರೂ ಭಾಗವಹಿಸಬಹುದು. ಕೆಲವು ಪೋಷಕರಿಗೆ ಸಂಸ್ಥೆ ಕೆಲಸವನ್ನೂ ನೀಡಿದೆ.

'ಕೋವಿಡ್ ಸಮಯದಲ್ಲಿ ಮಾಸ್ಕ್‌ಗೆ ಬೇಡಿಕೆ ಹೆಚ್ಚಿದ ಸಂದರ್ಭದಲ್ಲಿ ಪೋಷಕರೂ ಕೈಜೋಡಿಸಿದ್ದಾರೆ. ಲಾಕ್‌ಡೌನ್‌ನಲ್ಲಿ ಮಕ್ಕಳ ಕುಟುಂಬಕ್ಕೆ ಆಹಾರದ ಕಿಟ್‌ಗಳನ್ನು ನೀಡಲಾಗಿತ್ತು. ಲಸಿಕೆಗೆ ಕೂಡ ವ್ಯವಸ್ಥೆ ಮಾಡಲಾಗಿತ್ತು' ಎಂದರು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ವಿ. ಗೋಪಾಲ ಕೃಷ್ಣನ್.

ವಿಶೇಷ ಮಕ್ಕಳ ಪೋಷಣೆ, ಲಾಲನೆ–ಪಾಲನೆಗಾಗಿ 'ಸಮೃದ್ಧಿ' ಕಾರ್ಯಕ್ರಮದಡಿ ಹಲವು ಕಾರ್ಯಾಗಾರಗಳನ್ನು ಪೋಷಕರಿಗಾಗಿ ನಡೆಸಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ನನ್ನ ಮಗ ಈ ಶಾಲೆಯಲ್ಲೇ ಕಲಿಯುತ್ತಾನೆ. ಗಂಡ ಇಲ್ಲಿ ಕಾವಲುಗಾರರಾಗಿದ್ದಾರೆ. ನಾನು ಇಲ್ಲೇ ಹೊಲಿಗೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ.

ಮಗನ ಚಿಕಿತ್ಸೆ, ಶಾಲೆ ಜೊತೆಗೆ ಕುಟುಂಬದ ನಿರ್ವಹಣೆಗೂ ಸಂಸ್ಥೆಯಿಂದ ಸಹಕಾರ ದೊರೆತಿದೆ' ಎನ್ನುತ್ತಾರೆ ಗೌರಮ್ಮ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಗ್ರಾಮೀಣ ಕ್ರೀಡೆಗಳಿಂದ ಆರೋಗ್ಯ ವೃದ್ಧಿಸಿಕೊಳ್ಳಲು ಸಾಧ್ಯ. ವಯಸ್ಸಿನ ಮಿತಿಯಿಲ್ಲದೆ ಎಲ್ಲರೂ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು' ಎಂದು ತೋಟಗಾರಿಕೆ ಸಚಿವ ಮುನಿರತ್ನ ತಿಳಿಸಿದರು.

ಅನ್ನಪೂರ್ಣೇಶ್ವರಿ ನಗರದಲ್ಲಿ ಅನ್ನಪೂರ್ಣೇಶ್ವರಿ ಕಬಡ್ಡಿ ತಂಡದ ವತಿಯಿಂದ ಹಮ್ಮಿಕೊಂಡಿದ್ದ ಕುವೆಂಪು ಕಪ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು, 'ನಾನು ಯುವಕನಾಗಿದ್ದಾಗ ಕೋದಂಡರಾಮಪುರದಲ್ಲಿ ಕಬಡ್ಡಿ ಆಟಗಾರನಾಗಿದ್ದೆ. ರಾಜ್ಯ ಮಟ್ಟದಲ್ಲಿಯೂ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡಿದ್ದೆ' ಎಂದು ನೆನಪಿಸಿಕೊಂಡರು.

ವಿಕಾಸ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ಯೋಗೇಶ್, ಅಂತರರಾಷ್ಟ್ರೀಯ ಕಬಡ್ಡಿ ಆಟಗಾರರಾದ ಕೆ.ಮಹೇಶ್, ದಿನೇಶ್ ಪ್ರಭು, ಕೃಷ್ಣಮೂರ್ತಿ, ಅಂತರರಾಷ್ಟ್ರೀಯ ಕಬಡ್ಡಿ ತರಬೇತಿದಾರ ನಾಗರಾಜು ಮಾತನಾಡಿದರು. ಪಂದ್ಯಾವಳಿಯಲ್ಲಿ 74 ತಂಡಗಳು ಭಾಗವಹಿಸಿದ್ದವು.

ಕ್ಲಾಸಿಕ್ ನ್ಯಾಷನಲ್ ತಂಡ ಮೊದಲನೇ ಬಹುಮಾನ, ವಿಜಯ ನಗರ ಸ್ಪೋರ್ಟ್ಸ್ ಕ್ಲಬ್ ಎರಡನೇ ಬಹುಮಾನ, ಅನ್ನಪೂರ್ಣೇಶ್ವರಿ ಕಬಡ್ಡಿ ತಂಡ ಮೂರನೇ ಬಹುಮಾನ ಪಡೆದುಕೊಂಡಿತು.

ಮಾನ್ಯ ಅಪರ ನಗರ ಜಿಲ್ಲಾ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಕೆ.ಎಸ್.ಸಿ/ಎಸ್.ಟಿ ಅಪೀಲು (ಪಿಟಿಸಿಎಲ್) ನಂ. 41/2007–08

ಶ್ರೀಮತಿ ಜೈಬುನ್ನಿಸಾ .....ಅರ್ಜಿದಾರರು
ವಿರುದ್ಧ
ಉಪ ವಿಭಾಗಾಧಿಕಾರಿಗಳು ಮತ್ತು ಇತರರು ....ಎದುರು ಅರ್ಜಿದಾರರು
2 ರಿಂದ 4 ನೇ ಎದುರು ಅರ್ಜಿದಾರರು

2. ಎಂ.ದೇವರಾಜು ಬಿನ್ ಮುನಿಆಂಜನಪ್ಪ, 3. ಸಿ.ಎಂ.ಮುನಿಕೃಷ್ಣ ಬಿನ್ ಮುನಿಆಂಜನಪ್ಪ ಇಬ್ಬರ ವಾಸ : ಚೊಕ್ಕೋನಹಳ್ಳಿ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು. 4. ಕಾತೀಜಬೀ ಕೋಂ ರಸೂಲ್ ಶರೀಫ್ ವಾಸ: ಡಾ. ಅಂಬೇಡ್ಕರ್ ನಗರ ದೇವರಜೀವನಹಳ್ಳಿ, ಶಾಂಪುರ ರೋಡ್, ಬೆಂಗಳೂರು–560 045,

ಸಾರ್ವಜನಿಕ ಪ್ರಕಟಣೆ / ಪತ್ರಿಕೆ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇ ನೆಂದರೆ, ಈ ಮೇಲಿನ ಅರ್ಜಿದಾರರು ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಬೆಂಗಳೂರು : ರವರಲ್ಲಿ ದಾವಾ ಸ್ವತ್ತಿನ ಸಂಖ್ಯೆ, ಚೋಳನಾಯಕನಹಳ್ಳಿ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು (ಅಪರ –1) ಸರ್ವೆ ನಂ. 31/2 ರಲ್ಲಿ 1 ಎಕರೆ 16 ಗುಂಟೆ ಇದರಲ್ಲಿ ಖರಾಬು 3 ಗುಂಟೆ ಸೇರಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಉಪ ವಿಭಾಗಾಧಿಕಾರಿಗಳರವರ ನ್ಯಾಯಾಲಯ ಬೆಂಗಳೂರು ಇಲ್ಲಿ ಮನವಿಯನ್ನು ಸಲ್ಲಿಸಿದ್ದು, ಸಂಖ್ಯೆ ಕೆ.ಎಸ್.ಸಿ / ಎಸ್.ಟಿ ಸಂಖ್ಯೆ 40/2006–07 ದಿನಾಂಕ : 10/04/2007 ರಲ್ಲಿ ನೀಡಿರುವ ಆದೇಶದ ವಿರುದ್ಧ ಈ ಘನ ನ್ಯಾಯಾಲಯದಲ್ಲಿ ಮನವಿಯನ್ನು ಸಲ್ಲಿಸಿರುತ್ತಾರೆ. ಮೇಲ್ಕಂಡ ಮನವಿಯು ದಿನಾಂಕ : 11–04–2022 ರಂದು ಸುಮಾರು 3:00 ಇರುತ್ತದೆ. ಆ ದಿನ ತಾವುಗಳಾಗಲೀ ಅಥವಾ ವಕೀಲರಾಗಲಿ ಬಂದು ಹಾಜರಾಗಬೇಕಾಗಿರುತ್ತದೆ ಇಲ್ಲದಿದ್ದಲ್ಲಿ ನ್ಯಾಯಾಲಯವು ಏಕಪಕ್ಷೀಯವಾಗಿ ಆದೇಶವನ್ನು ಮಾಡುತ್ತದೆ ಎಂದು ತಿಳಿಯುವುದು.

ನನ್ನ ಸಹಿಯೊಡನೆ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : 11/03/2022 ರಂದು ನೀಡಲಾಗಿದೆ.

ಮಾನ್ಯ ನ್ಯಾಯಲಯದ ಆದೇಶದಂತೆ
ಸಹಿ/– ಜಿಲ್ಲಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

ಸುದ್ದಿ 2 ನಿಮಿಷ

ಕೆಂಗೇರಿ ಬಳಿ ರಾಜೀವ್ ಗಾಂಧಿ ಆರೋಗ್ಯ ಸಂಸ್ಥೆ ಸ್ಥಾಪನೆ: ಸೋಮಶೇಖರ್

ಬೆಂಗಳೂರು: 'ಕೆಂಗೇರಿ ಬಳಿ ₹200 ಕೋಟಿ ವೆಚ್ಚದಲ್ಲಿ ರಾಜೀವ್ ಗಾಂಧಿ ಸಾರ್ವಜನಿಕ ಆರೋಗ್ಯ ಸಂಸ್ಥೆ ಹಾಗೂ ರೋಗ ನಿಯಂತ್ರಣ ಕೇಂದ್ರ ಸ್ಥಾಪಿಸಲಾಗುತ್ತದೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

'ಭೀಮನಕುಪ್ಪೆ ಗ್ರಾಮದ ಸರ್ವೆ ನಂ 73ರಲ್ಲಿ ಒಟ್ಟು 50 ಎಕರೆ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ. ಸುಧಾರಿತ ಸಂಶೋಧನಾ ಕೇಂದ್ರ ಮತ್ತು ವಿದ್ಯಾರ್ಥಿ ನಿಲಯಗಳ ಕಟ್ಟಡ ಕಾಮಗಾರಿಗೆ ಶೀಘ್ರವೇ ಚಾಲನೆ ನೀಡಲಾಗುತ್ತದೆ' ಎಂದಿದ್ದಾರೆ.

'ಸೂಕ್ತ ಮತ್ತು ವ್ಯವಸ್ಥಿತ ಶಿಕ್ಷಣ, ಬೋಧನೆ ದೃಷ್ಟಿಯಿಂದ ರಾಜ್ಯದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸ್ಥಾಪಿಸಲಾಗಿದೆ. ಸಂಶೋಧನೆ ಮತ್ತು ತರಬೇತಿ ಕಾರ್ಯಗಳಿಗಾಗಿ ಸಾರ್ವಜನಿಕ ಆರೋಗ್ಯ ಸಂಸ್ಥೆ ಹಾಗೂ ರೋಗ ನಿಯಂತ್ರಣ ಕೇಂದ್ರ ನಿರ್ಮಿಸಲು ಉದ್ದೇಶಿಸಲಾಗಿದೆ' ಎಂದು ಹೇಳಿದ್ದಾರೆ.

'ಈ ಯೋಜನೆಗೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಲಭಿಸಿದೆ. ಇನ್ನು ಎರಡು ವರ್ಷಗಳಲ್ಲಿ ನೂತನ ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು ಚಿಂತಿಸಲಾಗಿದೆ. ಆರೋಗ್ಯ ವಿಷಯಗಳಲ್ಲಿ ಅಧ್ಯಯನ ನಡೆಸುವವರಿಗೆ ಈ ಕೇಂದ್ರದಿಂದ ಅನುಕೂಲವಾಗಲಿದೆ. ಸಂಶೋಧನಾ ಚಟುವಟಿಕೆಗಳನ್ನು ಉತ್ತೇಜಿಸುವುದು ಈ ಯೋಜನೆಯ ಹಿಂದಿನ ಉದ್ದೇಶ' ಎಂದು ತಿಳಿಸಿದ್ದಾರೆ.

ಸಹಬಾಳ್ವೆ ಮೂಡಿಸುವ ರಾಷ್ಟ್ರೀಯ ಭಾವೈಕ್ಯ ಶಿಬಿರ: ಶಾಲಿನಿ ರಜನೀಶ್

ಬೆಂಗಳೂರು: 'ವಿದ್ಯಾರ್ಥಿಗಳಲ್ಲಿ ಸಹಬಾಳ್ವೆ ಮೂಡಿಸಲು ಮತ್ತು ಸಮಾಜಮುಖಿ ಕಾರ್ಯನಿರ್ವಹಿಸಲು ರಾಷ್ಟ್ರೀಯ ಭಾವೈಕ್ಯ ಶಿಬಿರಗಳು ಪೂರಕ' ಎಂದು ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಭಿಪ್ರಾಯಪಟ್ಟರು.

ಬೆಂಗಳೂರು ನಗರ ವಿಶ್ವವಿದ್ಯಾಲಯ, ರಾಜ್ಯ ಎನ್‌ಎಸ್‌ಎಸ್ ಕೋಶ, ರಾಜ್ಯ ಸರ್ಕಾರ ಮತ್ತು ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯ ವತಿಯಿಂದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯದ ಬಹುಶಿಸ್ತೀಯ ಕಾಲೇಜಿನ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಎನ್‌ಎಸ್‌ಎಸ್ ಏಳು ದಿನಗಳ ರಾಷ್ಟ್ರೀಯ ಭಾವೈಕ್ಯ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

'ಭಾರತ ವೈವಿಧ್ಯಮಯ ದೇಶ. ಇಲ್ಲಿ ಹಲವಾರು ಸಂಸ್ಕೃತಿಗಳಿವೆ. ನಮ್ಮ ಕಲೆ-ಸಂಸ್ಕೃತಿಯನ್ನು ಎತ್ತಿಹಿಡಿಯಲು ರಾಷ್ಟ್ರೀಯ ಭಾವೈಕ್ಯ ಶಿಬಿರಗಳು ಉತ್ತಮ ವೇದಿಕೆ ಒದಗಿಸಲಿವೆ' ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ.ಕೃಷ್ಣ, 'ಎನ್‌ಎಸ್‌ಎಸ್ ಮೂಲಕ ಉತ್ತಮ ನಾಯಕರಾಗಿ ದೇಶ ಸೇವೆ ಮಾಡಲು ಮತ್ತು ಜೀವನದ ಪಾಠ ಕಲಿಯಲು ಸಾಧ್ಯ. ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಅಳವಡಿಸಿಕೊಳ್ಳಬೇಕು' ಎಂದು ತಿಳಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಅಧ್ಯಕ್ಷತೆ ವಹಿಸಿದ್ದರು. ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕ ಖಾದ್ರಿ ನರಸಿಂಹಯ್ಯ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಇದ್ದರು.

ಬೆಂಗಳೂರು ವಿಶ್ವವಿದ್ಯಾಲಯ ವೇಣುಗೋಪಾಲ್ ನೇಮಕ ರದ್ದು

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಡಾ.ಕೆ.ಆರ್. ವೇಣುಗೋಪಾಲ್ ಅವರನ್ನು ನೇಮಕ ಮಾಡಿ ರಾಜ್ಯಪಾಲರು ಹೊರಡಿಸಿದ್ದ ಆದೇಶ ರದ್ದುಪಡಿಸಿದ್ದ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ತೀರ್ಪನ್ನು ವಿಭಾಗೀಯ ನ್ಯಾಯಪೀಠ ಎತ್ತಿಹಿಡಿದಿದೆ.

ಏಕಸದಸ್ಯ ನ್ಯಾಯಪೀಠದ ತೀರ್ಪು ಪ್ರಶ್ನಿಸಿ ಬೆಂಗಳೂರು ವಿಶ್ವವಿದ್ಯಾಲಯ, ರಾಜ್ಯಪಾಲರ ಕಚೇರಿ (ವಿಶ್ವವಿದ್ಯಾಲಯ ಕುಲಾಧಿಪತಿ), ಡಾ.ಕೆ. ಆರ್. ವೇಣುಗೋಪಾಲ್ ಮತ್ತು ರಾಜ್ಯ ಉನ್ನತ ಶಿಕ್ಷಣ ಇಲಾಖೆ ಸಲ್ಲಿಸಿದ್ದ ನಾಲ್ಕು ಪ್ರತ್ಯೇಕ ಮೇಲ್ಮನವಿಗಳ ವಿಚಾರಣೆ ನಡೆಸಿ, ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಸ್.ಸುಜಾತ ಮತ್ತು ನ್ಯಾಯಮೂರ್ತಿ ಶಿವಶಂಕರ ಅಮರಣ್ಣನವರ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ಪ್ರಕಟಿಸಿದೆ. 'ಏಕಸದಸ್ಯ ನ್ಯಾಯಪೀಠ ನೀಡಿರುವ ತೀರ್ಪು ಸೂಕ್ತವಾಗಿದೆ. ಇದರಲ್ಲಿ ಮಧ್ಯಪ್ರವೇಶಿಸಲು ಯಾವುದೇ ಸಕಾರಣ ಇಲ್ಲ' ಎಂದು ಸ್ಪಷ್ಟಪಡಿಸಿದೆ.

ಡಾ.ಕೆ.ಆರ್. ವೇಣುಗೋಪಾಲ್ ಅವರನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ನೇಮಕ ಮಾಡಿ ರಾಜ್ಯಪಾಲರು 2018ರ ಜೂನ್ 12ರಂದು ಆದೇಶಿಸಿದ್ದರು. ಇದನ್ನು ಪ್ರಶ್ನಿಸಿ ಪ್ರೊ.ಸಂಗಮೇಶ್ ಪಾಟೀಲ್ ಹೈಕೋರ್ಟ್ ಮೆಟ್ಟಿಲೇರಿದ್ದರು. 'ಸರ್ಕಾರದ ಅನುಮೋದನೆ ಇಲ್ಲದೆಯೇ ಡಾ.ವೇಣುಗೋಪಾಲ್ ಅವರನ್ನು ಕುಲಪತಿ ಹುದ್ದೆಗೆ ನೇಮಕ ಮಾಡಿರುವುದು ಕಾನೂನು ಬಾಹಿರ' ಎಂದು ಆಕ್ಷೇಪಿಸಿದ್ದರು.

ಈ ಅರ್ಜಿಯನ್ನು ಪುರಸ್ಕರಿಸಿದ್ದ ಏಕಸದಸ್ಯ ನ್ಯಾಯಪೀಠ, ಡಾ.ವೇಣುಗೋಪಾಲ್ ಅವರನ್ನು ಕುಲಪತಿ ಹುದ್ದೆಗೆ ನೇಮಕ ಮಾಡಿ ಹೊರಡಿಸಲಾಗಿದ್ದ ಆದೇಶವನ್ನು ರದ್ದುಪಡಿಸಿ 2019ರ ಸೆಪ್ಟೆಂಬರ್ 24ರಂದು ತೀರ್ಪು ನೀಡಿತ್ತು. ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ವಿಭಾಗೀಯ ನ್ಯಾಯಪೀಠ ತಡೆ ನೀಡಿತ್ತು. ಹೀಗಾಗಿ, ವೇಣುಗೋಪಾಲ್ ಕುಲಪತಿ ಹುದ್ದೆಯಲ್ಲಿ ಮುಂದುವರಿದಿದ್ದರು. 2022ರ ಜೂನ್ 12ಕ್ಕೆ ಅವರ ಅಧಿಕಾರದ ಅವಧಿ ಮುಗಿಯಲಿದೆ.

20 ರಂದು 'ಮತ್ತೆ ಮುಖ್ಯಮಂತ್ರಿ' ಪ್ರದರ್ಶನ


'ಮುಖ್ಯಮಂತ್ರಿ' ಚಂದ್ರು

ಮೈಸೂರು: ರಂಗಾಯಣದ ಬಹುರೂಪಿ ರಂಗೋತ್ಸವದಲ್ಲಿ 'ಮುಖ್ಯಮಂತ್ರಿ' ಚಂದ್ರು ಅಭಿನಯದ 'ಮತ್ತೆ ಮುಖ್ಯಮಂತ್ರಿ' ನಾಟಕ ಮಾರ್ಚ್ 20 ರಂದು ಸಂಜೆ 7ಕ್ಕೆ ಕಲಾಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

'ಮುಖ್ಯಮಂತ್ರಿ' ನಾಟಕ 735ಕ್ಕೂ ಅಧಿಕ ಪ್ರದರ್ಶನಗಳನ್ನು ಕಂಡು ದಾಖಲೆ ಸೃಷ್ಟಿಸಿತ್ತು. ಇದೀಗ 'ಮುಖ್ಯಮಂತ್ರಿ' ಚಂದ್ರು ಅವರೇ ಪ್ರಧಾನ ಪಾತ್ರದಲ್ಲಿರುವ 'ಮತ್ತೆ ಮುಖ್ಯಮಂತ್ರಿ' ಹೊಸ ನಾಟಕ ಸಿದ್ಧವಾಗಿದೆ.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ನಟ 'ಮುಖ್ಯಮಂತ್ರಿ' ಚಂದ್ರು, 'ಮುಖ್ಯಮಂತ್ರಿ' ನಾಟಕವನ್ನೇ ಮತ್ತೆ ಮತ್ತೆ ಪ್ರದರ್ಶಿಸುವ ಬದಲು ಭಿನ್ನವಾದ ನಾಟಕ ಮಾಡಬೇಕೆಂಬ ಉದ್ದೇಶದಿಂದ ಹೊಸ ನಾಟಕ ತಯಾರಾಗಿದೆ' ಎಂದರು.

'ಹಳೆಯ ನಾಟಕಕ್ಕೂ, ಹೊಸದಕ್ಕೂ ಸಂಬಂಧವಿಲ್ಲ. ಡಾ.ಕೆ.ವೈ.ನಾರಾಯಣಸ್ವಾಮಿ ರಚಿಸಿರುವ ನಾಟಕ ಸಂಪೂರ್ಣ ಭಿನ್ನವಾಗಿದೆ. ಬೆಂಗಳೂರಿನಲ್ಲಿ ತಾಂತ್ರಿಕ ಪ್ರದರ್ಶನ ಏರ್ಪಡಿಸಲಾಗಿತ್ತು. ಪ್ರೇಕ್ಷಕರ ಮುಂದೆ ಮೊದಲ ಪ್ರದರ್ಶನ ಮೈಸೂರಿನಲ್ಲಿ ನಡೆಯಲಿದೆ' ಎಂದರು.

'ರಾಜ್ಯಕ್ಕೆ ಎಂಥ ಮುಖ್ಯಮಂತ್ರಿ ಬೇಕು? ನಾವು ಬಯಸಿದಂತಹ ವ್ಯಕ್ತಿ ಮುಖ್ಯಮಂತ್ರಿಯಾದರೆ ಏನೇನು ಆಗಬಹುದೆಂಬುದನ್ನು ಚಿತ್ರಿಸಲಾಗಿದೆ. ಪ್ರಜಾಪ್ರಭುತ್ವದ ಲೋಪಗಳನ್ನು ಎತ್ತಿತೋರಿಸಲು ಪ್ರಯತ್ನಿಸಿದ್ದೇವೆ. ಪಾತ್ರಕ್ಕೆ ನ್ಯಾಯ ಒದಗಿಸಿದ್ದೇನೆಂಬ ವಿಶ್ವಾಸವಿದೆ' ಎಂದು ನುಡಿದರು. ಪ್ರಕಾಶಕ ಗಣೇಶ ಅಮೀನಗಡ ಇದ್ದರು.

FOTO CIRCLE
FOR EVERYTHING IN PHOTOGRAPHY
No.G.7,8,9, Brigade Plaza, S.C.Road, Near Anandrao Circle, Bangalore-09 Ph: +91-80-22874356, +91-80-22872572 E-mail : fotocirclenk@gmail.com

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ನಿ.,
ನಂ.14, ರಜತಾ ಭವನ, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ದೂ. 23300497 41159606 , ಫ್ಯಾಕ್ಸ್ : 23359600 ಇ–ಮೇಲ್ : vjn@jscbl.com

ಟೆಂಡರ್ ಮತ್ತು ಹರಾಜು ಮಾರಾಟ ಸೂಚನೆ

2002ರ ಹಣಕಾಸು ಆಸ್ತಿಗಳ ಭದ್ರತಾ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಅಡಿಯಲ್ಲಿ ಹರಾಜು ಮಾರಾಟ ಮುಂದುವರಿದಂತೆ

ಸಾಲಗಾರರಾದ 1) ಮೆ॥ ಭಾವನಾ ಕನ್‌ಸ್ಟ್ರಕ್ಷನ್ಸ್ ಪ್ರತಿನಿಧಿಸುವ ಮಾಲೀಕರು : ಶ್ರೀಮತಿ ಭಾವನ ಪ್ರವೀಣ್, ನಂ.7, ನೆಲ ಮಹಡಿ, ಮುತ್ತಯ್ಯ, ಕಂಪೌಂಡ್ ನಾಗರಭಾವಿ ಸರ್ಕಲ್, ನಾಗರಭಾವಿ, ಬೆಂಗಳೂರು–560072, **ಹಾಗೂ ವಿಳಾಸ** : ನಂ.326, 10ನೇ ಕ್ರಾಸ್, 5ನೇ ಮುಖ್ಯ ರಸ್ತೆ, 4ನೇ ಹಂತ, ವಿಜಯನಾಯಕ ಲೇಔಟ್, ನಾಗರಭಾವಿ, ಬೆಂಗಳೂರು–560072. **ಜಾಮೀನುದಾರರು : ರಾಜಕುಮಾರ್ ಡಿ ಎ ಬಿನ್ ಲೇಟ್ ದಾಸೇಗೌಡ**, ನಂ.309, 1ನೇ ಬಿ ಮುಖ್ಯ ರಸ್ತೆ, 6ನೇ ಕ್ರಾಸ್, 4ನೇ ಹಂತ, 9ನೇ ಬ್ಲಾಕ್, ವಿನಾಯಕ ಲೇಔಟ್, ನಾಗರಭಾವಿ, ಬೆಂಗಳೂರು–560072. ಇವರುಗಳು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು** ರವರಿಂದ ಪಡೆದ ಸಾಲ ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ. ಷರತ್ತು ಮತ್ತು ನಿಯಮಗಳ ಒಪ್ಪಂದದ ಅನುಸಾರ ಒಟ್ಟು ಮೊತ್ತ **ರೂ.6,66,95,260/–(ರೂಪಾಯಿ ಆರು ಕೋಟಿ ಅರವತ್ತಾರು ಲಕ್ಷದ ತೊಂಭತ್ತೈದು ಸಾವಿರದ ಇನ್ನೂರ ಅರವತ್ತು ಮಾತ್ರ)** ದಿನಾಂಕ **16.03.2022**ರಂದು ಇದ್ದಂತೆ ಜೊತೆಗೆ ನಂತರ ಅನ್ವಯವಾಗುವ ದರದಲ್ಲಿ ಬಡ್ಡಿ ಮತ್ತು ಖರ್ಚು ವೆಚ್ಚಗಳು. ಸರ್ಫೇಸಿ ಕಾಯ್ದೆ 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಮತ್ತು ಕಾಯಿದೆಯ ಸೆಕ್ಷನ್ 13 (4) ರ ಅಡಿಯಲ್ಲಿ ನೀಡಲಾಗಿರುವ ಅಧಿಕಾರಗಳನ್ನು ಅನುಸರಿಸಲು ಮತ್ತು ಚಲಾಯಿಸಲು ಬ್ಯಾಂಕ್ ನೋಟಿಸ್ ನೀಡಿರುತ್ತಾರೆ, ಅಧಿಕೃತ ಅಧಿಕಾರಿ ಅಡಮಾನದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಮತ್ತು ಅದರ ವಿವರಗಳನ್ನು ಕೆಳಗೆ ಸಂಪೂರ್ಣವಾಗಿ ವಿವರಿಸಲಾಗಿದೆ, ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಸಂಬಂಧಿತ ನಿಯಮಗಳೊಂದಿಗೆ ಓದಿದ ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಈ ಕೆಳಗಿನ ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕ್ ನಿರ್ಧರಿಸಿದೆ.

ಸ್ವತ್ತಿನ ವಿವರ	ಟೆಂಡರ್ ತೆರೆಯುವ ದಿನಾಂಕ, ಸಮಯ ಮತ್ತು ಹರಾಜಿನ ಸ್ಥಳ	ಮೀಸಲು ಬೆಲೆ
ಸ್ಥಿರಾಸ್ತಿಯ ಮನೆ ನಂ.310, ಮಧ್ಯಂತರ 78ಎ–01ಜಿ, ರಲ್ಲಿ ಸರ್ವೆ ನಂ.17,18/1 ರಿಂದ 6, 20, 23, 30, 31, 32, 36/1, 37, 64, 71, 95, 96, 97, 98, 112(19), 135 ರಿಂದ 137(17), ನಾಗರಭಾವಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆ, ಖಾಸಗಿ ಲೇಔಟ್, ಶ್ರೀ ವಿನಾಯಕ ಹೆಚ್‌ಬಿಸಿಎಸ್ ಲಿಮಿಟೆಡ್, ಬೆಂಗಳೂರು ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 40 ಅಡಿ, ಒಟ್ಟು ವಿಸ್ತೀರ್ಣ 2400 ಚದರ ಅಡಿ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನದ ನಂ.303, ಉತ್ತರಕ್ಕೆ: ನಿವೇಶನದ ನಂ.309, ದಕ್ಷಿಣಕ್ಕೆ: ನಿವೇಶನದ ನಂ.311.	20.04.2022 ಮಧ್ಯಾಹ್ನ 12.30 ಗಂಟೆಗೆ ನಂ.310, 1ನೇ ಬಿ ಮುಖ್ಯ ರಸ್ತೆ, 6ನೇ ಕ್ರಾಸ್, 4ನೇ ಹಂತ, 9ನೇ ಬ್ಲಾಕ್, ವಿನಾಯಕ ಲೇಔಟ್, ನಾಗರಭಾವಿ, ಬೆಂಗಳೂರು–560072.	ರೂ.3,30,00,000/– (ರೂಪಾಯಿ ಮೂರು ಕೋಟಿ ಮೂವತ್ತು ಲಕ್ಷ ಮಾತ್ರ) ಇಎಂಡಿ : 10% ರಂತೆ ಮೀಸಲು ಬೆಲೆ ರೂ.33,00,000/– (ರೂಪಾಯಿ ಮೂವತ್ತಮೂರು ಲಕ್ಷ ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು: –
(1) ಟೆಂಡರ್ ಫಾರಂಗಳನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ನಂ.14, "ರಜತಾ ಭವನ" 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು.** (ದೂ. 080–23300497, 41159606) ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. (2) ಇಚ್ಛಿಸುವ ಬಿಡ್‌ದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ಫಾರಂಗಳಲ್ಲಿ ಮೊಹರಾದ ಲಕೋಟೆಯಲ್ಲಿ ಮೀಸಲು ಬೆಲೆಯ ಶೇ.10% ಮೊತ್ತವನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ಬೆಂಗಳೂರು** ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್/ಬ್ಯಾಂಕರ್ಸ್ ಚೆಕ್/ಪೇ ಆರ್ಡರ್‌ಗಳನ್ನು ಈ ಟೆಂಡರ್–ಹರಾಜು ಮಾರಾಟ ಸೂಚನೆ ಪ್ರಕಟವಾದ ದಿನಾಂಕದ ನಂತರ ಪಡೆದಿರಬೇಕು. (3) ಅನಿಗದಿತ ರೂಪದಲ್ಲಿರುವ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಇಎಂಡಿಯೊಂದಿಗೆ ಟೆಂಡರ್‌ಗಳನ್ನು **ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ವಿಜಯನಗರ, ಬೆಂಗಳೂರು,** ಇವರಿಗೆ ದಿನಾಂಕ **19.04.2022** ಮತ್ತು ಸಮಯ **ಸಂಜೆ 5.30** ರ ಒಳಗೆ ಸಲ್ಲಿಸಬೇಕು. ಇಎಂಡಿ ರಹಿತವಾದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. (4) ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ. (5) ಒಂದು ವೇಳೆ ಬಿಡ್ಡರ್‌ಗಳು ಯಶಸ್ವಿಯಾಗದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು. (6) ಯಶಸ್ವಿ ಬಿಡ್‌ದಾರರು ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲು ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (7) ಮೊಹರಾದ ಟೆಂಡರ್‌ಗಳನ್ನು ಅಧಿಕೃತ ಅಧಿಕಾರಿಯವರು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ **ದಿನಾಂಕ 20.04.2022 ರಂದು ಮಧ್ಯಾಹ್ನ 12.30ಕ್ಕೆ** ತೆರೆಯುವರು. (8) ಟೆಂಡರ್‌ಗಳನ್ನು ತೆರೆದ ನಂತರ, ಉದ್ದೇಶಿತ ಬಿಡ್ದಾದರರಿಗೆ ಅಧಿಕೃತ ಅಧಿಕಾರಿಯ ವಿವೇಚನೆಯಿಂದ ಅವಕಾಶ ನೀಡಬಹುದು, ಆಫರ್ ಬೆಲೆಯನ್ನು ಹೆಚ್ಚಿಸಲು ತಮ್ಮ ನಡುವೆ ತೀವ್ರವಾದ ಬಿಡ್ಡಿಂಗ್ ಮಾಡಬಹುದು. (9) ಯಶಸ್ವಿ ಬಿಡ್‌ದಾರರು ಮಾರಾಟದ ಬೆಲೆಯ ಶೇ. 25% (ಇಎಂಡಿ ಹಣವನ್ನು ಸೇರಿ) ಹಣವನ್ನು ತಕ್ಷಣ ಹರಾಜಿನ ದಿನದಂದು ನಗದು ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಬೇಕು ಮತ್ತು ಬಾಕಿ ಉಳಿದ ಮಾರಾಟದ ಮೊತ್ತವನ್ನು ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗೆ ಪಾವತಿಸಬೇಕು. ಒಂದು ವೇಳೆ ಯಶಸ್ವಿ ಬಿಡ್‌ದಾರರು ಹಣ ಪಾವತಿಸದಿದ್ದಲ್ಲಿ ಈವರೆಗೆ ಪಾವತಿಸಿರುವ ಎಲ್ಲಾ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರುಮಾರಾಟ ಮಾಡಲಾಗುವುದು. (10) ಯಶಸ್ವಿ ಬಿಡ್ಡರ್ ಅನ್ವಯವಾಗುವಂತೆ ಕಾನೂನು ಬದ್ಧ ವೆಚ್ಚಗಳಾದ ತೆರಿಗೆಗಳು/ಶುಲ್ಕ/ಆಸ್ತಿ ತೆರಿಗೆ/ಬೆಸ್ಕಾಂ ಶುಲ್ಕ/ನೀರಿನ ಶುಲ್ಕ ವರ್ಗಾವಣೆ ವೆಚ್ಚಗಳಾದ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಅನ್ವಯವಾಗುವ ಕಾನೂನಿನಂತೆ ಪಾವತಿಸಿದಲ್ಲಿ ಆಸ್ತಿಯನ್ನು ಅವರ ಪರವಾಗಿ ವರ್ಗಾಯಿಸಿ ಕೊಡಲಾಗುವುದು. (11) ಅಧಿಕೃತ ಅಧಿಕಾರಿಯವರು ಯಾವುದೇ ಟೆಂಡರ್‌ನ್ನು ಸ್ವೀಕರಿಸುವ/ತಿರಸ್ಕರಿಸುವ ಅಥವಾ ಹರಾಜು ಮಾರಾಟವನ್ನು ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಯಾವುದೇ ಸೂಚನೆಯನ್ನು ನೀಡದೆ, ಜಾಹಿರಾತಿನಲ್ಲಿ ನೀಡಿರುವ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರವು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಒಳಪಟ್ಟಿದೆ. (12) ಮಾರಾಟವು ಬ್ಯಾಂಕ್ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. (13) ಈ ಮಾರಾಟವು ಇಚ್ಛಿಸುವ ಬಿಡ್‌ದಾರರು ಆಸ್ತಿಯನ್ನು **ಬೆಳಗ್ಗೆ 10.00 ಘಂಟೆಯಿಂದ ಸಂಜೆ 5.00 ರವರೆಗೆ**, ಷೆಡ್ಯೂಲಿನಲ್ಲಿ ತಿಳಿಸಿರುವ ವಿಳಾಸದಲ್ಲಿ ಅವರ ಸ್ವಂತ ಖರ್ಚಿನಲ್ಲಿ ಪರಿಶೀಲಿಸ ಬಹುದಾಗಿದೆ. (14) ಆಸ್ತಿಯನ್ನು **'ಎಲ್ಲಿ ಹೇಗಿದೆಯೋ ಹಾಗೆ'** ಮತ್ತು **'ಎಲ್ಲಿ ಏನಿದೆಯೋ ಹಾಗೆ'** ಆಧಾರದ ಮೇಲೆ ಮಾರಾಟಮಾಡಲಾಗುವುದು. ಇಚ್ಛಿಸುವ ಬಿಡ್‌ದಾರರು ಆಸ್ತಿಯ ಮೇಲಿನ ಋಣಭಾರಗಳು (ಎನ್‌ಕಂಬರೆನ್ಸ್) ಟೈಟಲ್ ಮಾಲೀಕತ್ವ ಶಾಸನಬದ್ಧ ಮಂಜೂರಾತಿಗಳು ಮುಂತಾದವುಗಳನ್ನು ಪರಿಶೀಲಿಸಬೇಕು.

ಹೆಚ್ಚಿನ ವಿವರಗಳಿಗಾಗಿ ಉದ್ದೇಶಿತ ಬಿಡ್ಡುದಾರರು ಅಧಿಕೃತ ಅಧಿಕಾರಿ, ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ನಂ.14, "ರಜತಾ ಭವನ" 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು. (ದೂ. 080–23300497, 41159606) ಇ–ಮೇಲ್: vjn@jscbl.com.

ಸೂಚನೆ: ದಿನಾಂಕ 28/02/2022 ರಂದು ಮಾರಾಟ ಸೂಚನೆಯನ್ನು ಹಿಂತೆಗೆದುಕೊಳ್ಳಲಾಗಿದೆ.

ದಿನಾಂಕ : 16.03.2022
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Business

INVEST OR Get Investments Minimum 2 Lakhs P.A. in #1 Banking Company. Build your Business with IIM ALUMNUS. Contact: 9702702999/ 83742-43687

REAL ESTATE BUYING

General

General

FOR AGRICULTURE Land Conversion,Change of land use,Phodi, Approvals/ Sanctions, NOC's, RERA Project Registration, Property Documentation work. Call Verna Developers, MG-Road, Bengaluru. 9916310226/ 9620253180.

REAL ESTATE SELLING

House

BTM Layout

SALE: BTM 1st Stage G+1 W/F on 39X60. Jayanagar E/F 100x150. Contact: 'LEO ESTATES' 93437-28200

RENTAL PROPERTIES

Accommodation Available

Commercial

6000 SQUARE feet builtup space Near Teachers College, R.V. Main Road facing reserved 5 car parking with 6000 Sq.ft open compound 45kw Power reasonable rent. Contact Owner: 9342819739.

PERSONAL

Lost

LOST
I, G. L. Raje Gowda have lost my original Sale deed issued by BDA vide their Letter No. BDA/DS-4/BLK-VI/SMUL/2003-04 dated 7-4-2003 for Site No 13 Vishweshwaraiah Layout, 6th Phase, while renovating the House.
Finder please contact:
G. L. Raje Gowda
Mobile No. 9448059408

Announcements

I, EDWIN. K, declare that, my Baptism Certificate, D.O.B wrongly mentioned as 19/08/1961 correct D.O.B. 19/08/1962, affidavit 16.03.2022, notary N. Kanchivaradaraju, Bangalore.

Change of Name

CHANGE OF NAME
I, GANGIREDDY ANJANAPPA Residing at #18, 5th Cross, 2nd Block, Sir M.V.Nagar, Kalkere Main Road, Ramammurthy Nagar, Bengaluru - 560016, have changed my name to **GANGA REDDY ANJANAPPA** vide affidavit dated 14.03.2022, before Notary G. Rajendra, Bangalore.Henceforth I shall be called **GANGA REDDY ANJANAPPA** only.

I, MADAMMA W/o. Ramareddy residing at No. 78, KEB office road, Near KEB, Talaghattapura, Bangalore South Talluk, Bangalore- 560062 wrongly mentioned my name as Mahadevamma in my husband pension order. Hereby declaring that actual & correct name is MADAMMA only, vide affidavit dated 09/03/2022 before notary L.Puttaraju, Bengaluru.

WE, KUBER DAS and SHILPA SMITA residing at Durga Nilaya, 3rd Floor, Opposite BJP Office, Avalahalli, Virgonagar Post, Bengaluru-560049 have changed our minor son's name from VRISHANK DAS to AHAAN VRISHANK DAS vide affidavit dated 11/03/2022 sworn before notary Manjunath.T, Bangalore

I, AYSVARYA CHANDRASEKARAN, resident of 0B1, Isha Misty Green, Gate 3, Channasandra, Whitefield, Bangalore-560067, have changed my name to AYSVARYA BALASUBRAMANIAN Vide Affidavit dated 16-03-2022 sworn before Advocate & Notary B.M. Chandrashekar, Bengaluru

I, NISHATH VUBAGADDI R/o #301, Lakshmi Residency, 2nd cross, Hennur Main Road, Lingarajapuram, Kacharakanahalli, Bengaluru-84 have changed my name as NISHATH JAHA VUBAGADDI Vide affidavit dated 14/03/2022 before notary L. Puttaraju, Bangalore

I, RENU KUMAR, Residing at No. 110, 3rd Cross, 2nd Block, New Ramana Vidyanikethan School, Akshaya Nagar, Bengaluru-560016, have changed my son's name from VIKRUTH. R to VARUN. R vide affidavit dated 16.03.2022, before notary G. Rajendra, Bengaluru.

I,_ASHA alias Asha Kumari alias Kumari Asha,W/o Pradhan Kudaithur,R/at No.258,1st Main Road, Chamarajapet, Bengaluru-560018.have changed my name to ASHA vide affidavit dated 16/03/2022sworn before Notary M.Prabhakar, Bengaluru.

I, DEEPIKA. N, Residing at #44, Nag Residency, 14th Cross, Jyothinagar, Chandra Layout, Bengaluru- 560072, have changed my name to DEEPIKA NAG, vide affidavit dated 16.03.2022, before notary K. Venkateshan, Bangalore.

I M. CHANDRA R/at 17, 2nd floor, Blue bell Apartments, Middle School Road, V.V. Puram, Bangalore-04 Have Changed my name to CHANDRA vide Affidavit Dated 15/03/2022 Before Notary D.S. Chandrakanth Bangalore.

I KAVALKATTE SIRAJUDDIN S/o SHEIKH IBRAHIM SAHEB R/o KAVALAKATTE HOUSE, KAVALMUDUR VILLAGE, DAKSHINA KANNADA, KARNATAKA 574265 have changed my name to SIRAJUDDIN

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

‘ಪತ್ರಿಕಾ ವಿತರಕರಿಗೆ ನಿಧಿ ಸ್ಥಾಪಿಸಿ’

ಬೆಂಗಳೂರು: ‘ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಪತ್ರಿಕಾ ವಿತರಕರು, ಹಂಚಿಕೆದಾರರು ಹಾಗೂ ಪತ್ರಿಕೆ ಹಾಕುವ ಹುಡುಗರಿಗೆ ಸರ್ಕಾರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಬೇಕು’ ಎಂದು ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಒತ್ತಾಯಿಸಿದರು.

ಶೂನ್ಯ ವೇಳೆಯಲ್ಲಿ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ವರದಿಯನ್ನು ಉಲ್ಲೇಖಿಸಿ ಮಾತನಾಡಿದ ಅವರು, ‘ರಾಜ್ಯದಲ್ಲಿ 70 ಸಾವಿರಕ್ಕೂ ಹೆಚ್ಚು ಮಂದಿ ಪತ್ರಿಕಾ ವಿತರಕರಿದ್ದಾರೆ. ಮನೆ ಬಾಗಿಲಿಗೆ ಪತ್ರಿಕೆ ಹಾಕುವ ಹುಡುಗರೂ ಸೇರಿ 2 ಲಕ್ಷ ಜನ ಪತ್ರಿಕೆಗಳನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದಾರೆ. ಸಂಕಷ್ಟದಲ್ಲಿರುವ ಇವರಿಗೆ ಸರ್ಕಾರ ವಿಶೇಷ ಅನುದಾನ ಮೀಸಲಿಡಬೇಕು’ ಎಂದು ಆಗ್ರಹಿಸಿದರು.

‘ಪತ್ರಿಕಾ ವಿತರಕರಿಗೆ ಉಚಿತ ವೈದ್ಯಕೀಯ ಸೌಲಭ್ಯ ಕಲ್ಪಿಸಬೇಕು. 60 ವರ್ಷ ಮೇಲ್ಪಟ್ಟವರಿಗೆ ಪ್ರತಿ ತಿಂಗಳು ₹5 ಸಾವಿರ ಪಿಂಚಣಿ ಹಾಗೂ ಇಎಸ್‌ಐ ಸೌಲಭ್ಯ ಒದಗಿಸಬೇಕು’ ಎಂದು ಆಗ್ರಹಿಸಿದರು.

ಕಬ್ಬು ಬೆಳೆಗಾರರಿಗೆ ನೆರವಾಗಲು ಸಂಶೋಧನಾ ವಿದ್ಯಾರ್ಥಿನಿಯಿಂದ ವಿನೂತನ ಪ್ರಯತ್ನ

ಗಿಡಮೂಲಿಕೆ ಸ್ವಾದದ ‘ಹರ್ಬಲ್ ಬೆಲ್ಲ’

● ಮನೋಹರ್ ಎಂ.

ಬೆಂಗಳೂರು: ಸಾವಯವ ಬೆಲ್ಲಕ್ಕೆ ಬೇಡಿಕೆ ಹೆಚ್ಚಿಸುವ ಮೂಲಕ ಕಬ್ಬು ಬೆಳೆಗಾರರಿಗೆ ಅನುಕೂಲ ಮಾಡುವ ಉದ್ದೇಶದಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸಂಶೋಧನಾ ವಿದ್ಯಾರ್ಥಿ ಪೂಜಾ ಕೋಲಾರ್ ಅವರು ಗಿಡಮೂಲಿಕೆಗಳ ಅಂಶವಿರುವ ಬೆಲ್ಲದ ಉತ್ಪನ್ನಗಳನ್ನು ತರಹೇವಾರಿ ಸ್ವಾದಗಳಲ್ಲಿ ತಯಾರಿಸಿದ್ದಾರೆ.

ತುಳಸಿ, ಪುದೀನ, ಶುಂಠಿಯಂತಹ ಔಷಧೀಯ ಗುಣಗಳ ಮೂಲಿಕೆಗಳನ್ನು ಬಳಸಿ ಬೆಲ್ಲಕ್ಕೆ ವಿವಿಧ ಸ್ವಾದ ನೀಡಿರುವ ಇವರು, ಜೇನುತುಪ್ಪ ಮಾದರಿಯಲ್ಲಿ ನೀರು ಬೆಲ್ಲ, ಬೆಲ್ಲದ ಪುಡಿ, ಚಾಕೊಲೇಟ್, ಬೆಲ್ಲದ ಚೌಕಾಕಾರದ ಉತ್ಪನ್ನಗಳನ್ನು (ಕ್ಯೂಬ್) ರಾಸಾಯನಿಕರಹಿತವಾಗಿ ಸಿದ್ಧಪಡಿಸಿದ್ದಾರೆ.

ಎಂ.ಎಸ್ಸಿ ಪದವೀಧರೆಯಾಗಿರುವ ಪೂಜಾ, ಕೃಷಿ ವಿಶ್ವವಿದ್ಯಾಲಯದ ಆಹಾರ ಮತ್ತು ಪೋಷಣೆ ವಿಭಾಗದ ಪ್ರೊ.ಕೆ.ವಿ.ಜಮುನಾ ಅವರ ಮಾರ್ಗದರ್ಶನದಲ್ಲಿ ‘ಹರ್ಬಲ್ ಬೆಲ್ಲ’ ಕುರಿತ ಪಿಎಚ್‌.ಡಿ ಅಧ್ಯಯನ ನಿರತರಾಗಿದ್ದಾರೆ.

ಹರ್ಬಲ್ ಬೆಲ್ಲದಿಂದ ತಯಾರಾದ ಚಿಕ್ಕಿ

ಹರ್ಬಲ್ ಬೆಲ್ಲದ ಉತ್ಪನ್ನಗಳು

‘ಮಾರುಕಟ್ಟೆಯಲ್ಲಿ ಲಭಿಸುವ ಮಾಮೂಲಿ ಬೆಲ್ಲಕ್ಕೆ ರಾಸಾಯನಿಕ ಸೇರಿಸಿರುತ್ತಾರೆ. ಆರೋಗ್ಯಕರ ಹಾಗೂ ಔಷಧೀಯ ಗುಣವುಳ್ಳ ಬೆಲ್ಲ ತಯಾರಿಸುವುದು ನನ್ನ ಸಂಶೋಧನೆಯ ಮೂಲ ಉದ್ದೇಶ. ಇದಕ್ಕಾಗಿ ತುಳಸಿ, ಪುದೀನ ಮತ್ತು ಶುಂಠಿಯಂತಹ ಗಿಡಮೂಲಿಕೆಗಳ ಪುಡಿ ಹಾಗೂ ಸಾರವನ್ನು ಪತ್ಯೇಕವಾಗಿ ಸೇರಿಸಿ, ಬೆಲ್ಲ ತಯಾರಿಸುವ ಪ್ರಯತ್ನ ಮಾಡಿದ್ದೇನೆ’ ಎಂದು ಪೂಜಾ ಕೋಲಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಂಶೋಧನೆಗೆ ವಿಷಯ ಆಯ್ಕೆ ಮಾಡಿಕೊಳ್ಳುವಾಗ ಗೊಂದಲವಿತ್ತು. ಈಗ ರಾಸಾಯನಿಕಗಳನ್ನು ಒಳಗೊಂಡಿರುವ ಸಕ್ಕರೆ ಬಳಸದಂತೆ ವೈದ್ಯರು ಸಲಹೆ ನೀಡುತ್ತಾರೆ. ಸಕ್ಕರೆಗೆ ಪರ್ಯಾಯವಾಗಿರುವ ಬೆಲ್ಲಕ್ಕೆ ಔಷಧೀಯ ಗುಣಗಳನ್ನು ನೀಡುವ ಪ್ರಯೋಗ ಮಾಡಿದ್ದೇನೆ. ನಮ್ಮ ಜಿಲ್ಲೆಯಾದ ಬೆಳಗಾವಿಯಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ. ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಹರ್ಬಲ್ ಬೆಲ್ಲ ತಯಾರಿಸುವುದನ್ನೇ ಸಂಶೋಧನೆಯ ವಿಷಯವನ್ನಾಗಿ ಆರಿಸಿಕೊಂಡೆ’ ಎಂದರು.

ಹರ್ಬಲ್ ಬೆಲ್ಲದಿಂದ ತಯಾರಾದ ಚಾಕೊಲೇಟ್

‘ಬೆಲ್ಲ ತಯಾರಿಸುವ ಆಲೆಮನೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡೆ. ಬೆಲ್ಲಕ್ಕೆ ಎಷ್ಟು ಪ್ರಮಾಣದಲ್ಲಿ ಗಿಡಮೂಲಿಕೆ ಸೇರಿಸಬಹುದು ಎಂಬ ಬಗ್ಗೆ ಸ್ಪಷ್ಟತೆ ಮೂಡಿತು. ಸಾಮಾನ್ಯ ಬೆಲ್ಲದ ಅಚ್ಚುಗಳು ಸೇರಿದಂತೆ ಸಕ್ಕರೆಗೆ ಪರ್ಯಾಯವಾಗಿ ಬಳಸಬಲ್ಲ ಉಪ ಉತ್ಪನ್ನಗಳನ್ನು ಬೆಲ್ಲದಿಂದಲೂ ತಯಾರಿಸಿದ್ದೇನೆ. ಬೆಲ್ಲದಲ್ಲಿ ಪ್ರೊಟೀನ್, ಕಬ್ಬಿಣ, ಮೆಗ್ನೀಷಿಯಂ, ಪೊಟ್ಯಾಷಿಯಂ, ಮ್ಯಾಂಗನೀಸ್ ಮುಂತಾದ ಖನಿಜಾಂಶಗಳು ಹೇರಳವಾಗಿರುತ್ತವೆ. ಇದಕ್ಕೆ ಗಿಡಮೂಲಿಕೆಗಳ ಸಾರವನ್ನು ಸೇರಿಸಿರುವುದರಿಂದ ಮತ್ತಷ್ಟು ಮೌಲ್ಯವರ್ಧನೆಗೊಂಡಿದೆ. ಸಕ್ಕರೆಗೆ ಬದಲಿಯಾಗಿ ಇದನ್ನು ಬಳಸುವುದು ಆರೋಗ್ಯಕ್ಕೂ ಒಳ್ಳೆಯದು’ ಎಂದು ಪೂಜಾ ವಿವರಿಸಿದರು.

‘ಹರ್ಬಲ್ ಬೆಲ್ಲದ ಉದ್ಯಮದ ಕನಸು’

ಪೂಜಾ ಕೋಲಾರ್

‘ಜನರು ಆರೋಗ್ಯ ದೃಷ್ಟಿಯಿಂದ ಈಗ ಬೆಲ್ಲದತ್ತ ಮುಖ ಮಾಡುತ್ತಿದ್ದಾರೆ. ಹರ್ಬಲ್ ಬೆಲ್ಲ ಮತ್ತು ಅದರ ಉತ್ಪನ್ನಗಳ ಬಗ್ಗೆ ಕಬ್ಬು ಬೆಳೆಗಾರರು ಆಸಕ್ತಿ ತೋರಿಸಿದ್ದಾರೆ. ಹಾಗಾಗಿ ಸಂಶೋಧನೆಗಾಗಿ ಆರಿಸಿಕೊಂಡ ವಿಷಯದಲ್ಲೇ ಉದ್ಯಮ ಕಟ್ಟುವ ಆಸೆಯೂ ಚಿಗುರೊಡೆದಿದೆ. ಮುಂದಿನ ದಿನಗಳಲ್ಲಿ ಈ ಉತ್ಪನ್ನಗಳನ್ನು ವಾಣಿಜ್ಯೀಕರಣಗೊಳಿಸುವ ಚಿಂತನೆ ಇದೆ. ಬೆಲ್ಲದ ಬಳಕೆ ಹೆಚ್ಚಾದರೆ, ಕಬ್ಬು ಬೆಳೆಗಾರರ ಬದುಕೂ ಹಸನಾಗುತ್ತದೆ’ ಎಂದು ಪೂಜಾ ತಮ್ಮ ಇಂಗಿತ ವ್ಯಕ್ತಪಡಿಸಿದರು.

ರಾಮೋಹಳ್ಳಿ ತಿರುವು ಬಳಿ ಹೆದ್ದಾರಿ ಕಾಮಗಾರಿ ನಡೆಯುತ್ತಿರುವುದು

ಬೆಂಗಳೂರು–ಮೈಸೂರು ಹೆದ್ದಾರಿ ಕಾಮಗಾರಿ ಡಿಸೆಂಬರ್‌ಗೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು 2022ರ ಡಿಸೆಂಬರ್‌ಗೆ ಪೂರ್ಣಗೊಳ್ಳಲಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಬುಧವಾರ ವಿಧಾನ ಪರಿಷತ್‌ನಲ್ಲಿ ತಿಳಿಸಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ದಶಪಥವನ್ನಾಗಿ ಮಾಡುವ ಈ ಹೆದ್ದಾರಿ ಕಾಮಗಾರಿಯನ್ನು ಎರಡು ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗಿದೆ. 56.20 ಕಿ.ಮೀ. ಉದ್ದದ ಬೆಂಗಳೂರಿನಿಂದ ನಿಡಘಟ್ಟದವರೆಗೆ ಒಂದನೇ ಪ್ಯಾಕೇಜ್ ಮತ್ತು 61.104 ಕಿ.ಮೀ. ಉದ್ದದ ನಿಡಘಟ್ಟದಿಂದ ಮೈಸೂರಿನವರೆಗೆ ಇನ್ನೊಂದು ಪ್ಯಾಕೇಜ್ ಮಾಡಲಾಗಿದೆ’ ಎಂದು ವಿವರಿಸಿದರು.

ಬೆಂಗಳೂರಿನಿಂದ ನಿಡಘಟ್ಟದವರೆಗಿನ ಕಾಮಗಾರಿಗೆ ₹2190 ಕೋಟಿ ಮೊತ್ತಕ್ಕೆ ಅನುಮೋದನೆ ನೀಡಲಾಗಿತ್ತು. ಆದರೆ, ಸಿವಿಲ್ ಕಾಮಗಾರಿಗೆ ₹875.90 ಕೋಟಿ ಮತ್ತು ಭೂಸ್ವಾಧೀನಕ್ಕೆ ₹2018.75 ಕೋಟಿ ವೆಚ್ಚವಾಗಿದೆ. 2022ರ ಮೇ 2ರ ಒಳಗೆ ಈ ಕಾಮಗಾರಿ ಮುಕ್ತಾಯಗೊಳಿಸುವಂತೆ ಸೂಚಿಸಲಾಗಿತ್ತು ಎಂದು ಸಚಿವರು ವಿವರಿಸಿದರು.

ನಿಡಘಟ್ಟದಿಂದ ಮೈಸೂರುವರೆಗಿನ ಕಾಮಗಾರಿಗೆ ₹2283 ಕೋಟಿ ಮೊತ್ತಕ್ಕೆ ಅನುಮೋದನೆ ನೀಡಲಾಗಿತ್ತು. ಆದರೆ, ಸಿವಿಲ್ ಕಾಮಗಾರಿಗೆ ₹882.66 ಕೋಟಿ ಮತ್ತು ಭೂಸ್ವಾಧೀನಕ್ಕೆ ₹1278.13 ಕೋಟಿ ವೆಚ್ಚವಾಗಿದೆ. ಈ ಕಾಮಗಾರಿಯನ್ನು ಸಹ 2022ರ ಸೆಪ್ಟೆಂಬರ್ 7ಕ್ಕೆ ಮುಕ್ತಾಗೊಳಿಸುವಂತೆ ಗಡುವು ನೀಡಲಾಗಿತ್ತು. ಆದರೆ, ಕೋವಿಡ್ ಮತ್ತು ಭೂಸ್ವಾಧೀನ ಕಾರಣಗಳಿಂದ ಪ್ರಸಕ್ತ ವರ್ಷ ಡಿಸೆಂಬರ್ ಅಂತ್ಯದ ಒಳಗೆ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ಎಂದು ವಿವರಿಸಿದರು.

ಕೆಳಸೇತುವೆ ಮತ್ತು ಸರ್ವಿಸ್ ರಸ್ತೆಗಳ ಗುಣಮಟ್ಟ ಕಾಪಾಡಲು ಸಮಿತಿ ರಚಿಸಲಾಗುವುದು ಎಂದು ತಿಳಿಸಿದರು.

ಟ್ವಿನ್ನಿಂಗ್: ಪದವಿ, ಪಿಜಿಗೂ ವಿಸ್ತರಣೆ

ಬೆಂಗಳೂರು: ರಾಜ್ಯದ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಇರುವ ಟ್ವಿನ್ನಿಂಗ್ (ವಿದ್ಯಾರ್ಥಿ ವಿನಿಮಯ) ಯೋಜನೆಯನ್ನು ಪದವಿ, ಸ್ನಾತಕೋತ್ತರ ಪದವಿ (ಪಿಜಿ) ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೂ ವಿಸ್ತರಿಸಲು ಅಮೆರಿಕದ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಬುಧವಾರ ಚರ್ಚೆ ನಡೆಸಿದರು.

ವಿಕಾಸಸೌಧದಲ್ಲಿ ನಡೆದ ಸಭೆಯಲ್ಲಿ ಅಮೆರಿಕದ ಪೆನ್ಸಿಲ್ವೇನಿಯಾದ ರಾಯಭಾರಿ ಕನ್ನಿಕಾ ಚೌಧರಿ ಮತ್ತು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ ಇದ್ದರು.

‘ಡಿಪ್ಲೊಮಾ ವಿದ್ಯಾರ್ಥಿಗಳು ಅಮೆರಿಕದ ಮಾಂಟ್ಗೊಮೆರಿ ಕೌಂಟಿ ಕಮ್ಯುನಿಟಿ ಕಾಲೇಜಿನಲ್ಲಿ ಓದುವ ಸಂಬಂಧ ಮಾಡಿಕೊಂಡಿದ್ದ ಒಪ್ಪಂದ ಅನುಷ್ಠಾನಕ್ಕೆ ಬಂದಿದೆ. ಅದನ್ನು ವಿಸ್ತರಿಸಬೇಕಾದ ಅಗತ್ಯವಿದೆ’ ಎಂದು ಅಶ್ವತ್ಥನಾರಾಯಣ ತಿಳಿಸಿದರು.

‘ಉದ್ದೇಶಿತ ಗುರಿ ಸಾಧಿಸಬೇಕೆಂದರೆ ಅಮೆರಿಕದ ಅಥೆನ್ಸ್ ವಿಶ್ವವಿದ್ಯಾಲಯ, ಪೆನ್ಸಿಲ್ವೇನಿಯಾದ ಯಾರ್ಕ್ ಕಾಲೇಜ್, ಹ್ಯಾರಿಸ್ ಬರ್ಗ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ, ಇಂಡಿಯಾನಾ ಯೂನಿವರ್ಸಿಟಿ ಆಫ್ ಪೆನ್ಸಿಲ್ವೇನಿಯಾ, ಹ್ಯೂಸನ್ ಯೂನಿವರ್ಸಿಟಿ, ಥಿಯಲ್ ಕಾಲೇಜು ಮತ್ತು ಅಲ್ವರ್ನಿಯಾ ಹಾಗೂ ಮಿಸರಿಕಾರ್ಡಿಯಾ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಸೂಕ್ತ’ ಎಂದು ಕನ್ನಿಕಾ ತಿಳಿಸಿದರು.

‘ಟ್ವಿನ್ನಿಂಗ್ ಯೋಜನೆಯಡಿ ವಿದ್ಯಾರ್ಥಿಗಳನ್ನು ಪದವಿ, ಸ್ನಾತಕೋತ್ತರ ಪದವಿಯ ನಿರ್ದಿಷ್ಟ ವರ್ಷಗಳಲ್ಲಿ ಅಮೆರಿಕದ ವಿಶ್ವವಿದ್ಯಾಲಯಗಳಿಗೆ ಕಳುಹಿಸಿಕೊಡಲಾಗುವುದು. ವೇತನಸಹಿತ ಇಂಟರ್ನ್‌-ಶಿಪ್ ವ್ಯವಸ್ಥೆ ಇದರ ಭಾಗವಾಗಿರಲಿದೆ. ಅಲ್ಲದೆ, ಇಷ್ಟವಿರುವವರು ಅಮೆರಿಕದಲ್ಲೇ ಉದ್ಯೋಗಿಗಳಾಗಿ ನೆಲೆಯೂರಲು ಅವಕಾಶ ಇರಲಿದೆ’ ಎಂದು ಸಚಿವರು ವಿವರಿಸಿದರು.

ಒಡಂಬಡಿಕೆಗಳು ಜಾರಿಗೆ ಬಂದರೆ ಆರು ವರ್ಷಗಳ ಟ್ವಿನ್ನಿಂಗ್ ಡಿಗ್ರಿ, ಐದು ವರ್ಷಗಳ ಇಂಟಿಗ್ರೇಟೆಡ್ ಸ್ನಾತಕೋತ್ತರ ಪದವಿ, ನಾಲ್ಕು ವರ್ಷಗಳ ಟ್ವಿನ್ನಿಂಗ್ ಸ್ನಾತಕೋತ್ತರ ಪದವಿ, ಎಂ.ಎಸ್. ನರ್ಸಿಂಗ್ (ಇಂಟಿಗ್ರೇಟೆಡ್) ಮತ್ತು ಎಂ.ಎಸ್.ಬಯೋಕೆಮಿಸ್ಟ್ರಿ (ಇಂಟಿಗ್ರೇಟೆಡ್) ಪದವಿ ಹೊಂದಲು ಅವಕಾಶ ಸಿಗಲಿವೆ ಎಂದರು.

ಒಡಂಬಡಿಕೆ: ಇಂಗ್ಲಿಷ್ ಕಲಿಕೆ ಮತ್ತು ಕಂಪ್ಯೂಟರ್ ವಿಜ್ಞಾನದಲ್ಲಿ ಇಂಟಿಗ್ರೇಟೆಡ್ ಪದವಿಗೆ ಅವಕಾಶ ಕಲ್ಪಿಸಲು ಬೆಂಗಳೂರು ನಗರ ವಿಶ್ವವಿದ್ಯಾಲಯದ ಪರ ಕುಲಪತಿ ಲಿಂಗರಾಜ ಗಾಂಧಿ ಮತ್ತು ಹ್ಯಾರಿಸ್ಬರ್ಗ್ ವಿಶ್ವವಿದ್ಯಾಲಯದ ಪರ ಕನ್ನಿಕಾ ಚೌಧರಿ ಅವರು ದಾಖಲಾತಿಗಳನ್ನು ವಿನಿಮಯ ಮಾಡಿಕೊಂಡರು.

12–14 ವರ್ಷದ ಮಕ್ಕಳಿಗೆ ಲಸಿಕೆ ವಿತರಣೆ ಅಭಿಯಾನಕ್ಕೆ ಚಾಲನೆ

‘ವಿದೇಶದಲ್ಲಿ ಸೋಂಕು: ಮತ್ತೆ ಅಲೆ ಆತಂಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚೀನಾ ಸೇರಿದಂತೆ ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚಳವಾಗುತ್ತಿದ್ದು, ಅಲ್ಲಿನ ಪರಿಸ್ಥಿತಿಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗುತ್ತಿದೆ. ಕೊರೊನಾ ಸೋಂಕು ಪೂರ್ಣ ಪ್ರಮಾಣದಲ್ಲಿ ನಿಯಂತ್ರಣಕ್ಕೆ ಬಂದಿಲ್ಲವಾದ್ದರಿಂದ ಇನ್ನೂ ಹಲವು ಅಲೆಗಳು ಬರಬಹುದು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಕಳವಳ ವ್ಯಕ್ತಪಡಿಸಿದರು

12ರಿಂದ 14 ವರ್ಷದವರಿಗೆ ‘ಕೊರ್ಬೆವ್ಯಾಕ್ಸ್’ ಲಸಿಕೆ ವಿತರಣೆಗೆ ಹಾಗೂ 60 ವರ್ಷಗಳು ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್ ವಿತರಿಸಲು ಸರ್ಕಾರ ಆರಂಭಿಸಿರುವ ಅಭಿಯಾನಕ್ಕೆ ಅವರು ನಗರದಲ್ಲಿ ಬುಧವಾರ ಚಾಲನೆ ನೀಡಿದರು.

‘ಕೋವಿಡ್ ಹೆಚ್ಚಾಗುತ್ತಿರುವ ದೇಶಗಳ ಹಾಗೂ ನಗರಗಳ ಪರಿಸ್ಥಿತಿಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೂಕ್ಷ್ಮವಾಗಿ ಅವಲೋಕಿಸುತ್ತಿವೆ. ರೋಗ ನಿಯಂತ್ರಣದಲ್ಲಿ ಸಾಗಬೇಕಾದ ಹಾದಿ ಇನ್ನೂ ದೂರವಿದೆ.

12ರಿಂದ 14 ವರ್ಷದವರಿಗೆ ಲಸಿಕೆ ವಿತರಣೆ ಅಭಿಯಾನಕ್ಕೆ ಡಾ.ಕೆ. ಸುಧಾಕರ್ ಚಾಲನೆ ನೀಡಿದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಬೌರಿಂಗ್ ಆಸ್ಪತ್ರೆ ನಿರ್ದೇಶಕ ಡಾ. ಮನೋಜ್ ಕುಮಾರ್ ಹಾಗೂ ಅಧಿಕಾರಿಗಳು ಇದ್ದಾರೆ — ಪ್ರಜಾವಾಣಿ ಚಿತ್ರ

ಲಸಿಕೆ ವಿತರಣೆಯಿಂದ ಸೋಂಕು ಸದ್ಯ ನಿಯಂತ್ರಣಕ್ಕೆ ಬಂದಿದೆ. 12ರಿಂದ 14 ವರ್ಷದೊಳಗಿನ 20 ಲಕ್ಷ ಮಕ್ಕಳಿಗೆ ಲಸಿಕೆ ನೀಡಲಾಗುತ್ತದೆ’ ಎಂದರು.

‘ಕೋವಿಡ್ ಲಸಿಕೆ ಪಡೆದವರೂ ಮುಂಜಾಗ್ರತಾ ಕ್ರಮಗಳನ್ನು ಮರೆಯುವಂತಿಲ್ಲ. ರಾಜ್ಯದಲ್ಲಿ ಲಸಿಕೆಯ 10 ಕೋಟಿಗೂ ಅಧಿಕ ಡೋಸ್‌ಗಳನ್ನು ನೀಡಲಾಗಿದೆ. ದೇಶದಲ್ಲಿ 180 ಕೋಟಿಗೂ ಹೆಚ್ಚು ಡೋಸ್‌ಗಳನ್ನು ವಿತರಿಸಲಾಗಿದೆ. ಈ ಸಾಧನೆ ವಿಶ್ವಮಟ್ಟದಲ್ಲೇ ದೊಡ್ಡದು. ಈ ಹಿಂದೆ ನೀಡಲಾದ ಲಸಿಕೆಗಳು 4 ಕೋಟಿಯಿಂದ 5 ಕೋಟಿ ಡೋಸ್‌ಗಳಷ್ಟು ತಲುಪಿತ್ತು’ ಎಂದು ಹೇಳಿದರು.

‘12 ವರ್ಷದೊಳಗಿನ ಮಕ್ಕಳಿಗೂ ಮುಂದಿನ ದಿನಗಳಲ್ಲಿ ಲಸಿಕೆ ದೊರೆಯಲಿದೆ. ಎಲ್ಲ ಲಸಿಕೆಯನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಸಂಶೋಧನೆ ನಡೆಸಿ, ಪರವಾನಗಿ ದೊರೆತ ಬಳಿಕವೇ ನೀಡಲಾಗುತ್ತಿದೆ’ ಎಂದರು.

‘ಉಕ್ರೇನ್ ವಿದ್ಯಾರ್ಥಿಗಳಿಗೆ ನ್ಯಾಯ’

‘ಉಕ್ರೇನ್ ದೇಶದಿಂದ ಮರಳಿದ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಮುಖ್ಯಮಂತ್ರಿ ಮತ್ತು ಹಿರಿಯ ಅಧಿಕಾರಿಗಳ ಜತೆ ಚರ್ಚಿಸಿದ್ದೇವೆ. ಕೇಂದ್ರ ಸರ್ಕಾರದ ಜತೆಗೂ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಈ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುತ್ತೇವೆ. ಅವರ ಶಿಕ್ಷಣಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಸುಧಾಕರ್ ತಿಳಿಸಿದರು.

ಕೋವಿಡ್ ಹೆಚ್ಚಳ- ನಿಗಾಕ್ಕೆ ಸೂಚನೆ

ನವದೆಹಲಿ (ಪಿಟಿಐ): ಯುರೋಪ್ ಮತ್ತು ಪೂರ್ವ ಏಷ್ಯಾದ ಕೆಲ ರಾಷ್ಟ್ರಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚಿನ ನಿಗಾ ಹಾಗೂ ಜಾಗರೂಕತೆ ವಹಿಸುವಂತೆ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಅವರು ಅಧಿಕಾರಿಗಳಿಗೆ ಬುಧವಾರ ಸೂಚಿಸಿದ್ದಾರೆ.

‘ಜಿನೋಮ್ ಸಿಕ್ವೆನ್ಸಿಂಗ್’ ಪರೀಕ್ಷೆಗಳನ್ನು ಹೆಚ್ಚಿಸುವಂತೆಯೂ ಸೂಚಿಸಿದರು.

‘ಸಮಾಜ ಮುನ್ನಡೆಸುವಲ್ಲಿ ಮಠಗಳ ಪಾತ್ರ ಮುಖ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನಾಥ ಮಕ್ಕಳನ್ನು ಪೋಷಿಸುವ ಜತೆಗೆ ಸಮಾಜ ಮುನ್ನಡೆಸುವಲ್ಲಿ ಮಠಗಳ ಪಾತ್ರ ಬಹುಮುಖ್ಯ’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಇಲಾಖೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ತಿಳಿಸಿದರು.

ವನಕಲ್ಲು ಮಲ್ಲೇಶ್ವರ ಮಹಾಸಂಸ್ಥಾನ ಮಠ ನಗರದಲ್ಲಿ ಹಮ್ಮಿಕೊಂಡ ವೇದ ಸಂಸ್ಕೃತ ಪಾಠಶಾಲೆ ಕಟ್ಟಡದ ಉದ್ಘಾಟನೆ, ಸಾಧಕರಿಗೆ ಪ್ರಶಸ್ತಿ ಪ್ರದಾನ ಹಾಗೂ ಬ್ರಹ್ಮರಥೋತ್ಸವ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ‘ಈ ಸಮಾಜಕ್ಕೆ ದೊಡ್ಡ ಮಟ್ಟದ ಸೇವೆ ಸಲ್ಲಿಸುತ್ತಿರುವ ಮಠಗಳು ಯಾರ ಕಣ್ಣಿಗೂ ಅಷ್ಟಾಗಿ ಬೀಳುವುದಿಲ್ಲ. ಅನಾಥ ಮಕ್ಕಳ ಅಭಿವೃದ್ಧಿಯ ಜೊತೆಗೆ ಸಮಾಜವನ್ನು ಮುನ್ನಡೆಸುವಲ್ಲಿ ಮಠಗಳ ಪಾತ್ರ ಬಹುಮುಖ್ಯವಾದದ್ದು. ಸಮಾಜಕ್ಕೆ ದಿಕ್ಸೂಚಿಯಾಗಿ ಮಠಗಳು ಇರಬೇಕು. ಆ ಹಾದಿಯಲ್ಲಿ ವನಕಲ್ಲು ಮಠ ಸಾಗುತ್ತಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಕೆ. ಶ್ರೀನಿವಾಸ ಮೂರ್ತಿ, ‘ರೈತಾಪಿ ವರ್ಗದ ಎಲ್ಲ ಜಾತಿಯ ಅನಾಥ ಮಕ್ಕಳಿಗೆ ಸಂಸ್ಕೃತಿ ಮತ್ತು ಸಂಸ್ಕಾರ ಕಲಿಸುವ ದೊಡ್ಡ ಕಾರ್ಯವನ್ನು ವನಕಲ್ಲು ಮಠ ಮಾಡುತ್ತಿದೆ.

ನಾರಾಯಣಸ್ವಾಮಿ

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಸಮಾಜವನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸುವ ಕೆಲಸವನ್ನೂ ಮಠ ಮಾಡುತ್ತಿದೆ’ ಎಂದು ಹೇಳಿದರು.

ಲೇಖಕ ಮಣ್ಣೆ ಮೋಹನ್ ಅವರ ‘ನಮ್ಮ ನಡುವಿನ ಸಾಧಕರು ಭಾಗ -2’ ಕೃತಿ ಬಿಡುಗಡೆ ಮಾಡಲಾಯಿತು. ಸಿದ್ದಗಂಗಾ ಮಠದ ಪೀಠಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಅವರ ಪಾದಪೂಜೆ ನೆರವೇರಿಸಲಾಯಿತು. ವನಕಲ್ಲು ಮಠದ ಪೀಠಾಧ್ಯಕ್ಷ ಬಸವರಮಾನಂದ ಸ್ವಾಮೀಜಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಪ್ರಶಸ್ತಿ ಪ್ರದಾನ: ಮಠದಿಂದ ನೀಡಲಾಗುವ 2021ನೇ ಸಾಲಿನ ‘ವನಕಲ್ಲು ಶ್ರೀ’ ಪ್ರಶಸ್ತಿಯನ್ನು ಸಂಶೋಧಕ ಡಾ.ಸಿ. ವೀರಣ್ಣ, ಬಸಪ್ಪ ರಾಜು ಅವರಿಗೆ ಪ್ರದಾನ ಮಾಡಲಾಯಿತು. ‘ಜಗಜ್ಯೋತಿ ಪ್ರಶಸ್ತಿ’ಯನ್ನು ಹೊಸದುರ್ಗದ ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ‘ವಿಶ್ವಜ್ಯೋತಿ ಪ್ರಶಸ್ತಿ’ಯನ್ನು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಹಾಗೂ ‘ಶ್ರೀ ಬಾಲಗಂಗಾಧರನಾಥ ನಿರ್ಮಲ ಜ್ಯೋತಿ ಪ್ರಶಸ್ತಿ’ಯನ್ನು ಚಲನಚಿತ್ರ ಕಲಾವಿದೆ ಅಭಿನಯ ಅವರಿಗೆ ನೀಡಿ ಗೌರವಿಸಲಾಯಿತು.

ಸಪ್ತಸ್ವರ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ವತಿಯಿಂದ ಸಂಸ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ‘ಸಂಕ್ರಮಣ 22’ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭರತನಾಟ್ಯವನ್ನು ಪ್ರಸ್ತುತಪಡಿಸಿದರು

‘ಕೆಆರ್‌ಐಡಿಎಲ್‌ಗೆ ವಹಿಸಿದ ಕಾಮಗಾರಿ ತನಿಖೆ ನಡೆಸಿ’

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ 2015-16ರಿಂದ 2021-22ರ ನಡುವೆ ವಿವಿಧ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) ಮೂಲಕ ನಿರ್ವಹಿಸಲಾಗಿದ್ದು, ₹12,944 ಕೋಟಿ ಅನುದಾನವನ್ನೂ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ. ಇವುಗಳಲ್ಲಿ ಶೇ 50ಕ್ಕೂ ಹೆಚ್ಚು ಕಾಮಗಾರಿಗಳು ನಡೆದೇ ಇಲ್ಲ. ಆದರೂ ಹಣ ಪಾವತಿಸಲಾಗಿದೆ’ ಎಂದು ಬಿಜೆಪಿಯ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಆರೋಪಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ಅವರು ದೂರು ಸಲ್ಲಿಸಿದ್ದಾರೆ.

‘ಕೆಆರ್‌ಐಡಿಎಲ್ ನಡೆಸಿರುವ ಕಾಮಗಾರಿಗಳು ಗುಣಮಟ್ಟದಿಂದ ಕೂಡಿಲ್ಲ. ನಡೆಯದ ಕಾಮಗಾರಿಗೂ ಬಿಲ್ ಪಾವತಿಸಲಾಗಿದ್ದು, ಇದರಲ್ಲಿ 6 ಐಎಫ್‌ಎಸ್ ಅಧಿಕಾರಿಗಳು, 62 ಅಧಿಕಾರಿಗಳು ಭಾಗಿಯಾಗಿದ್ದಾರೆ. ಈ ಬಗ್ಗೆ ಸಿಐಡಿಯಿಂದ ತನಿಖೆ ನಡೆಸಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

‘ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿ ನಿರ್ವಹಣೆ ಮಾಡಬೇಕಿರುವ ಕೆಆರ್‌ಐಡಿಎಲ್ ಸಂಸ್ಥೆಗೆ ಬಿಬಿಎಂಪಿ ವ್ಯಾಪ್ತಿಯ ಕಾಮಗಾರಿಗಳನ್ನು ವಹಿಸಿರುವುದೇ ನಿಯಮಬಾಹಿರ’ ಎಂದು ದೂರಿದ್ದಾರೆ.

ಆನೇಕಲ್ ಯೋಜನಾ ಪ್ರಾಧಿಕಾರ

“ಅಣ್ಣ” ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560099.
ದೂ.: 080-27835122 ಫ್ಯಾಕ್ಸ್: 080-27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/33/2021-22 ದಿನಾಂಕ: 15.03.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ಜಿ.ವಿ. ಲಕ್ಷ್ಮಣರೆಡ್ಡಿ ಬಿನ್ ಲೇ. ವೆಂಕಟರೆಡ್ಡಿ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	130	1-20	ಕೈಗಾರಿಕಾ	ವಸತಿ	
2	ಶ್ರೀಮತಿ ರಾಧಮ್ಮ ಕೋಂ ಲೇ. ಕೆ.ಎಂ.ರಾಜಪ್ಪ ಮತ್ತು ಶ್ರೀಮತಿ ಮಾನಸ ಕೋಂ. ಲೇ. ಮಧು	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	131/3	1-00	ಕೈಗಾರಿಕಾ	ವಸತಿ	
3	ಶ್ರೀ ಜಿ.ವಿ. ಲಕ್ಷ್ಮಣರೆಡ್ಡಿ ಬಿನ್ ಲೇ. ವೆಂಕಟರೆಡ್ಡಿ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	131/6	0-20	ಕೈಗಾರಿಕಾ	ವಸತಿ	
4	ಶ್ರೀಮತಿ ಎಸ್. ಮಾದವಿ ಕೋಂ. ಎಲ್.ಎಸ್. ಕಿಶೋರ್‌ಚೌದರಿ	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	131/9 (ಹಳೇ ನಂ.131/3)	0-31	ಕೈಗಾರಿಕಾ	ವಸತಿ	

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಹಾಗೂ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಹಾಗೂ ಕಾನೂನು ಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-,
ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ಉನಿನ/ಎಲ್‌ಸಿ/3799/2021-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ, ಎಂಸಿ ಬಡಾವಣೆ, ವಿಜಯನಗರ, ಬೆಂಗಳೂರು

ಸಂ: ಕಾಪಾಅ(ಗೋರಾವಿ)/ಟೆಂಡರ್/ಜಿಎಲ್-13/2021-22 ದಿನಾಂಕ: 16.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಜಿಟಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ಏಕ ಲಕೋಟೆ ಕಾಮಗಾರಿಗಳು)

ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕೆಳಕಂಡ ವಿವಿಧ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಾರ್ಡ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂಗಳಲ್ಲಿ)	ಕಾಮಗಾರಿಗಳ ಸಂಖ್ಯೆ
ಪರಿಶಿಷ್ಟ ಜಾತಿ ಪ್ರವರ್ಗಕ್ಕೆ :				
1	104	19.90	24,900	1
2	106	20.55	26,000	1
3	126	20.00	25,000	1
4	127	ತಲಾ 20.00	ತಲಾ 25,000	2
5	128	20.00	25,000	1
6	131	10.55 ರಿಂದ 20.00	14,000 ರಿಂದ 25,000	3
ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ :				
7	103	20.00	25,000	1
8	104	20.00	25,000	1
9	126	ತಲಾ 20.00	ತಲಾ 25,000	2
ಸಾಮಾನ್ಯ ಪ್ರವರ್ಗಕ್ಕೆ :				
10	103, 104, 105, 106, 125, 126, 127, 128, 131	12.40	31,000	1
11	103	8.00 ರಿಂದ 31.65	20,000 ರಿಂದ 79,125	7
12	104	10.00 & 20.00	25,000 & 50,000	2
13	105	ತಲಾ 20.00	ತಲಾ 50,000	4
14	106	ತಲಾ 20.00	ತಲಾ 50,000	4
15	125	ತಲಾ 20.00	ತಲಾ 50,000	4
16	126	20.00	50,000	1
17	127	10.55 ರಿಂದ 20.00	26,375 ರಿಂದ 50,000	4
18	128	ತಲಾ 20.00	ತಲಾ 50,000	3
19	131	7.50 ರಿಂದ 30.00	18,750 ರಿಂದ75,000	7
			ಒಟ್ಟು ಕಾಮಗಾರಿಗಳ ಸಂಖ್ಯೆ	50

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 30.03.2022 ರ ಸಂಜೆ 4.00 ಗಂಟೆಯವರೆಗೆ 3) ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ : 01.04.2022 ರ ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ

9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001. ದೂರವಾಣಿ: 080 – 22867172/22866302
ಫ್ಯಾಕ್ಸ್: 080–22863576/22861665
Email: sedmatech@gmail.com
Website: www.municipaladmn.gov.in

ಸಂಖ್ಯೆ: 715496 DMA/TECH/NUM4/3/2022 ದಿನಾಂಕ: 15–03–2022

ಆಸಕ್ತಿವುಳ್ಳ ಯೋಜನಾ ಸಮಾಲೋಚಕರ (ಪಿಎಂಸಿ) ಆಯ್ಕೆ

ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರವು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರಡಿಯಲ್ಲಿ 302 ನಗರ ಸ್ಥಳೀಯ ಸಂಸ್ಥೆಗಳಲ್ಲಿ ರೂ. 3885.00 ಕೋಟಿಗಳ ಮೊತ್ತದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಮಳೆ ನೀರು ಚರಂಡಿ ಅಭಿವೃದ್ಧಿ ಹಾಗೂ ಕಟ್ಟಡಗಳ ನಿರ್ಮಾಣ ಮತ್ತು ಇತರೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಯೋಜನೆಯನ್ನು ಕೈಗೆತ್ತಿಕೊಂಡಿರುತ್ತದೆ.

ಈ ಹಿನ್ನೆಲೆಯಲ್ಲಿ ಪೌರಾಡಳಿತ ನಿರ್ದೇಶನಾಲಯವು ಯೋಜನಾ ಸಮಾಲೋಚಕರನ್ನು ಡಿಪಿಆರ್ ತಯಾರಿಕೆ, ಟೆಂಡರ್ ಪ್ರಕ್ರಿಯೆಯಲ್ಲಿ ನೆರವು, ಕ್ರಿಯಾಯೋಜನೆ ತಯಾರಿಕೆ, ಅನುಷ್ಠಾನ ಮತ್ತು ಮೇಲ್ವಿಚಾರಣೆ ಹಾಗೂ ಗುಣಮಟ್ಟ ನಿಯಂತ್ರಣೆಗಾಗಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರಡಿಯಲ್ಲಿ ನೇಮಕ ಮಾಡಿಕೊಳ್ಳಲು ಆಹ್ವಾನಿಸಿರುತ್ತದೆ.

ಜಿಲ್ಲಾವಾರು ಮಾಹಿತಿ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ	ನಿಗದಿಪಡಿಸಿದ ಮೊತ್ತ (ರೂ. ಕೋಟಿಗಳಲ್ಲಿ)
1	ಕೋಲಾರ	7	145.00
2	ಚಿಕ್ಕಬಳ್ಳಾಪುರ	6	145.00
3	ಬೆಂಗಳೂರು (ನಗರ)	11	145.00
4	ಬೆಂಗಳೂರು (ಗ್ರಾಮಾಂತರ)	6	115.00
5	ರಾಮನಗರ	6	125.00
6	ತುಮಕೂರು	10	120.00
7	ಚಿತ್ರದುರ್ಗ	7	130.00
8	ದಾವಣಗೆರೆ	6	70.00
9	ಶಿವಮೊಗ್ಗ	10	125.00
10	ಮಂಡ್ಯ	8	105.00
11	ಚಾಮರಾಜನಗರ	5	90.00
12	ಮೈಸೂರು	13	165.00
13	ಹಾಸನ	8	120.00
14	ಚಿಕ್ಕಮಗಳೂರು	9	95.00
15	ಕೊಡಗು	4	55.00
16	ದಕ್ಷಿಣಕನ್ನಡ	13	130.00
17	ಉಡುಪಿ	6	80.00
18	ಹಾವೇರಿ	10	145.00
19	ಉತ್ತರ ಕನ್ನಡ	13	170.00
20	ಧಾರವಾಡ	5	35.00
21	ಗದಗ	9	105.00
22	ಬೆಳಗಾವಿ	37	315.00
23	ವಿಜಯಪುರ	14	95.00
24	ಬಾಗಲಕೋಟೆ	17	245.00
25	ಬೀದರ್	7	115.00
26	ಕಲಬುರಗಿ	11	115.00
27	ಯಾದಗಿರಿ	7	135.00
28	ರಾಯಚೂರು	13	155.00
29	ಬಳ್ಳಾರಿ	7	80.00
30	ವಿಜಯನಗರ	8	90.00
31	ಕೊಪ್ಪಳ	9	125.00
	ಒಟ್ಟು	302	3885.00

ಆಸಕ್ತಿ ಹೊಂದಿದ ಸಮಾಲೋಚಕರು/ಸಂಸ್ಥೆಗಳು ಯೋಜನೆಯ ಆಸಕ್ತಿ ಪತ್ರ ಹಾಗೂ ಈ ಕೆಳಕಂಡ ಮಾಹಿತಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಒದಗಿಸತಕ್ಕದ್ದು.

1) ಸಂಸ್ಥೆಯ ವಿವರಗಳು. 2) ತಾಂತ್ರಿಕ ಸಿಬ್ಬಂದಿಗಳ ವಿವರಗಳು. 3) ಕೈಗೊಂಡ ಕಾಮಗಾರಿಗಳ ಸ್ವರೂಪದ ಪುರಾವೆ (Similar nature of work done) 4) ಕಳೆದ 5 ವರ್ಷಗಳ ವಹಿವಾಟಿನ ಲೆಕ್ಕ ಪರಿಶೀಲನಾ ದಾಖಲೆಗಳು. 5) ಪ್ರಯೋಗಾಲಯಗಳ ಸೌಲಭ್ಯಗಳ ವಿವರಗಳು (ವಿವರವಾದ ಅರ್ಹತಾ ಮಾನದಂಡಗಳು Expression of Interest ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿರುವ ದಾಖಲೆಗಳ ಪ್ರಕಾರ ಅನ್ವಯಿಸುತ್ತದೆ)

ಯೋಜನಾ ಸಮಾಲೋಚಕರ ಆಯ್ಕೆ ಪ್ರಕ್ರಿಯೆಯು ಗುಣಮಟ್ಟ ಮತ್ತು ಮೌಲ್ಯದ ಆಧಾರದ ಮೇಲೆ ಆಯ್ಕೆ/ಕನಿಷ್ಠ ಮೌಲ್ಯದ ಆಧಾರದ ಮೇಲೆ ಆಯ್ಕೆ (QCBS/LCS) ಪ್ರಕಾರ. Expression of Interest ನ ಪ್ರಸ್ತಾವನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಲ್ಲಿ ದಿನಾಂಕ: 29-03-2022ರ ಒಳಗೆ ಸಲ್ಲಿಸುವುದು.

ಸಹಿ/–
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ

ವಾ.ಸಾ.ಸಂ.ಇ/ಬೆಂ.ನಗರ/3801/ಆಕಾರ್/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

21 ಐಷಾರಾಮಿ ಕಾರು ಕಳವು ಪ್ರಕರಣ ಭೇದಿಸಿದ ಪೊಲೀಸರು • ₹4 ಕೋಟಿ ಮೌಲ್ಯದ ಸ್ವತ್ತು ಜಪ್ತಿ

‘ಸಾಧ್ಯವಿದ್ದರೆ ಹಿಡಿಯಿರಿ’– ಸವಾಲೆಸೆದಿದ್ದ ಕಾರು ಚೋರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಧ್ಯವಿದ್ದರೆ ನನ್ನನ್ನು ಹಿಡಿಯಿರಿ’ (ಕ್ಯಾಚ್ ಮಿ ಇಫ್ ಯು ಕ್ಯಾನ್) ಎಂದು ತೆಲಂಗಾಣ ಪೊಲೀಸರಿಗೆ ಸವಾಲು ಹಾಕಿ ತಲೆಮರೆಸಿಕೊಂಡಿದ್ದ, ಐಷಾರಾಮಿ ಕಾರುಗಳನ್ನೇ ಕಳವು ಮಾಡುತ್ತಿದ್ದ ಅಂತರರಾಜ್ಯ ಕಳ್ಳನನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಈತನಿಂದ ₹ 4 ಕೋಟಿ ಮೌಲ್ಯದ ಸ್ವತ್ತು ಜಪ್ತಿ ಮಾಡಲಾಗಿದೆ.

‘ರಾಜಸ್ಥಾನದ ಸತ್ಯೇಂದರ್ ಸಿಂಗ್ ಶೇಖಾವತ್ (41) ಬಂಧಿತ. ಈತನಿಂದ ಟೊಯೊಟಾ ಫಾರ್ಚೂನರ್, ಔಡಿ ಹಾಗೂ ಹೊಂಡಾ ಆ್ಯಕ್ಟೀವಾ ಸ್ಕೂಟರ್, 20 ಕೀಗಳು, ಸ್ವಯಂಚಾಲಿತವಾಗಿ ಕೀ ಕತ್ತರಿಸಲು ಬಳಸುವ ಸುಮಾರು ₹2 ಲಕ್ಷ ಮೌಲ್ಯದ ಎಕ್ಸ್ ಹಾರ್ಸ್ ಡಾಲ್ಫಿನ್ ಯಂತ್ರ, 1 ಚಾರ್ಜರ್ ಕೇಬಲ್, 1 ಏರ್‌ಟೆಲ್ ಡಾಂಗಲ್, 2 ಎಕ್ಸ್ 100 ಪ್ಯಾಡ್, 1 ಎಕ್ಸ್ ಟೂಲ್, 1 ವಿವಿಡಿಐ ಮಿನಿ ಕೀ ಟೂಲ್, 1 ಚರ್ಮದ ಕೈಚೀಲ, 13 ಸ್ಮಾರ್ಟ್ ಕೀ, 1 ಎಕ್ಸ್ ಟೂಲ್ ಅಡಾಪ್ಟರ್, 1 ಬಟ್ಟೆಯ ಬ್ಯಾಗ್ ಹಾಗೂ 6 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಆರೋಪಿಯ ಬಂಧನದಿಂದ ಬೆಂಗಳೂರಿನ 14, ಹೈದರಾಬಾದ್‌ನ 5, ರಾಜಸ್ಥಾನ ಹಾಗೂ ಚೆನ್ನೈನ ತಲಾ 1 ಐಷಾರಾಮಿ ಕಾರು ಕಳವು ಹಾಗೂ 1 ಸ್ಕೂಟರ್ ಕಳವು ಪ್ರಕರಣ ಪತ್ತೆಯಾಗಿದೆ. ಕದ್ದ ಕಾರುಗಳಲ್ಲಿ ರಾಜಸ್ಥಾನಕ್ಕೆ ತೆರಳುತ್ತಿದ್ದ ಆರೋಪಿ ಅಲ್ಲಿ ಅವುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ. ಆತ ಮಾರಿದ್ದ ಕಾರುಗಳನ್ನು ರಾಜಸ್ಥಾನದ ವಿವಿಧ ಠಾಣೆಗಳ ಪೊಲೀಸರು ಈಗಾಗಲೇ ಜಪ್ತಿ ಮಾಡಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ.

‘ಬೆಂಗಳೂರಿನ ಉಪ್ಪಾರಪೇಟೆ (ಫಾರ್ಚೂನರ್), ಹನುಮಂತನಗರ (ಸ್ಕಾರ್ಪಿಯೊ), ಕಾಡುಗೊಂಡನಹಳ್ಳಿ (ಫಾರ್ಚೂನರ್), ಸುದ್ದಗುಂಟೆಪಾಳ್ಯ (ಇನ್ನೊವಾ ಕ್ರಿಸ್ಟಾ), ಕೊಡಿಗೆಹಳ್ಳಿ (ಸ್ಕಾರ್ಪಿಯೊ), ಯಲಹಂಕ (ಎಂಡೀವರ್), ಪರಪ್ಪನ ಅಗ್ರಹಾರ (ಔಡಿ), ಯಶವಂತಪುರ (ಫಾರ್ಚೂನರ್), ಜೆ.ಪಿ.ನಗರ (ಕ್ರೆಟಾ), ಅಮೃತಹಳ್ಳಿ (2 ಫಾರ್ಚೂನರ್), ಬಾಣಸವಾಡಿ (ಹೊಂಡಾ ಆ್ಯಕ್ಟೀವಾ), ಎಚ್‌ಎಸ್‌ಆರ್ ಲೇಔಟ್ (ಫಾರ್ಚೂನರ್) ಹಾಗೂ ಮಹದೇವಪುರ (ಡಸ್ಟರ್) ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈತ ಕಳವು ಮಾಡಿದ್ದ’ ಎಂದು ವಿವರಿಸಿದ್ದಾರೆ.

2003ರಿಂದಲೇ ಕಳವು ಆರಂಭಿಸಿದ್ದ: ಆರೋಪಿಯು 2003ರಿಂದಲೇ ಐಷಾರಾಮಿ ಕಾರುಗಳ ಕಳವು ಮಾಡಲು ಆರಂಭಿಸಿದ್ದ. ಈತನ ವಿರುದ್ಧ ನವದೆಹಲಿ, ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರ, ದಿಯು–ದಾಮನ್, ತೆಲಂಗಾಣ, ತಮಿಳುನಾಡು ರಾಜ್ಯಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ಈ ಎಲ್ಲಾ ಪ್ರಕರಣಗಳಲ್ಲೂ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ.

ಆರೋಪಿಯಿಂದ ಜಪ್ತಿ ಮಾಡಿರುವ ಕಾರುಗಳು

ಪತ್ತೆ ಆಗಿದ್ದು ಹೇಗೆ

ಅಮೃತಹಳ್ಳಿ ಠಾಣೆ ವ್ಯಾಪ್ತಿಯ ಗೋದ್ರೇಜ್ ವಸತಿ ಸಮುಚ್ಚಯದ ವಾಹನ ನಿಲುಗಡೆ ಪ್ರದೇಶದಲ್ಲಿ 2021ರ ಅಕ್ಟೋಬರ್ 19ರಂದು ಅಭಿಷೇಕ್ ಎಂಬುವರು ಫಾರ್ಚೂನರ್ ಕಾರು ನಿಲ್ಲಿಸಿದ್ದರು. ಅದೇ ದಿನ ಕಾರು ಕಳವಾಗಿತ್ತು. ಈ ಬಗ್ಗೆ ದೂರು ದಾಖಲಾಗಿತ್ತು.

ತನಿಖೆ ಆರಂಭಿಸಿದ್ದ ಪೊಲೀಸರಿಗೆ ಆರೋಪಿಯು ವಿವಿಧ ರಾಜ್ಯಗಳಲ್ಲಿ ಐಷಾರಾಮಿ ಕಾರುಗಳನ್ನು ಕಳವು ಮಾಡಿರುವ ಮಾಹಿತಿ ಲಭಿಸಿತ್ತು. ಆತನ ಬಂಧನಕ್ಕಾಗಿ ಈಶಾನ್ಯ ವಿಭಾಗದ ಡಿಸಿಪಿ, ವಿಶೇಷ ತಂಡವೊಂದನ್ನು ರಚಿಸಿದ್ದರು.

ಆರೋಪಿಯು ಜೈಪುರದಲ್ಲಿ ಇರುವ ಬಗ್ಗೆ ಮಾಹಿತಿ ಕಲೆಹಾಕಿದ್ದ ತಂಡವು ಅಲ್ಲಿಗೆ ತೆರಳಿ ಈ ವರ್ಷದ ಫೆಬ್ರುವರಿ 10ರಂದು ಆತನನ್ನು ಬಂಧಿಸಿತ್ತು.

ವಿದೇಶದಿಂದ ವಿದ್ಯುನ್ಮಾನ ಉಪಕರಣಗಳನ್ನು ತರಿಸಿದ್ದ

ಆರೋಪಿಯು ಕಾರುಗಳನ್ನು ಕದಿಯುವುದಕ್ಕಾಗಿಯೇ ವಿದೇಶದಿಂದ ಹಲವು ಉಪಕರಣಗಳನ್ನು ತರಿಸಿಕೊಂಡಿದ್ದ. ಎಕ್ಸ್ 100 ಪ್ಯಾಡ್ ಬಳಸಿ ಕಾರಿನ ಸಂಪೂರ್ಣ ಮಾಹಿತಿ ಹಾಗೂ ದತ್ತಾಂಶಗಳನ್ನು ಕಲೆಹಾಕುತ್ತಿದ್ದ ಈತ ಅದರ ಆಧಾರದಲ್ಲೇ ನಕಲಿ ಕೀ ತಯಾರಿಸುತ್ತಿದ್ದ.

ಕಾರುಗಳ ಮೇಲೆ ನಿಗಾ ಇಡುತ್ತಿದ್ದ ಈತ ಮಾಲೀಕರು ಅದನ್ನು ನಿಲುಗಡೆ ಮಾಡಿ ಬೇರೆಡೆ ಹೋಗುವುದನ್ನೇ ಕಾಯುತ್ತಿದ್ದ. ಯಾರೂ ಇಲ್ಲದ ಹೊತ್ತಿನಲ್ಲಿ ನಿಲುಗಡೆ ಪ್ರದೇಶಕ್ಕೆ ಹೋಗಿ ಅದನ್ನು ಕಳವು ಮಾಡುತ್ತಿದ್ದ.

ಆರೋಪಿಯಿಂದ ಜಪ್ತಿ ಮಾಡಿರುವ ಕೀಗಳು ಹಾಗೂ ವಿದ್ಯುನ್ಮಾನ ಯಂತ್ರಗಳು

ಸುದ್ದಿ 2 ನಿಮಿಷ

ಅತ್ಯಾಚಾರ: ನಟಿಯ ಸಹೋದರನ ವಿರುದ್ಧ ಪ್ರಕರಣ

ಬೆಂಗಳೂರು: ಮದುವೆಯಾಗುವುದಾಗಿ ನಂಬಿಸಿ ಯುವತಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ನಟಿಯೊಬ್ಬರ ಸಹೋದರ ಕೀರ್ತಿಚಂದ್ರ ಎಂಬಾತನ ವಿರುದ್ಧ ಬಸವನಗುಡಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಶಾದಿ ಡಾಟ್ ಕಾಂ ವೈವಾಹಿಕ ಜಾಲತಾಣದ ಮೂಲಕ 2021ರಲ್ಲಿ ಕೀರ್ತಿಚಂದ್ರನ ಪರಿಚಯವಾಗಿತ್ತು. ತಾನು ಕನ್ನಡದ ಹೆಸರಾಂತ ನಟಿಯ ಸಹೋದರ. ಪ್ರತಿಷ್ಠಿತ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವುದಾಗಿ ಆತ ತಿಳಿಸಿದ್ದ. ಪರಿಚಯ ಸ್ನೇಹವಾಗಿ ಬದಲಾದ ನಂತರ ಇಬ್ಬರೂ ಮೊಬೈಲ್ ಸಂಖ್ಯೆ ವಿನಿಮಯ ಮಾಡಿಕೊಂಡಿದ್ದೆವು. ಆಗಾಗ ದೂರವಾಣಿ ಕರೆಯ ಮೂಲಕ ಮಾತನಾಡುತ್ತಿದ್ದೆವು. ಪರಸ್ಪರ ಸಂದೇಶವನ್ನೂ ರವಾನೆ ಮಾಡುತ್ತಿದ್ದೆವು ಎಂದು ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

‘ಕೀರ್ತಿಚಂದ್ರನ ಜನ್ಮದಿನಕ್ಕೆ ಆ್ಯಪಲ್ ಫೋನ್ ಉಡುಗೊರೆಯಾಗಿ ನೀಡಿದ್ದೆ. ಬಳಿಕ ಆ್ಯಪಲ್ ವಾಚ್, ಲ್ಯಾಪ್‌ಟಾಪ್ ಕೂಡ ಕೊಡಿಸಿದ್ದೆ. ಈ ವರ್ಷದ ಆರಂಭದಲ್ಲಿ ಜಯನಗರದಲ್ಲಿರುವ ಹೋಟೆಲ್‌ವೊಂದಕ್ಕೆ ಕರೆದಿದ್ದ ಆತ ಬಲವಂತವಾಗಿ ದೈಹಿಕ ಸಂಪರ್ಕ ಬೆಳೆಸಿದ್ದ. ಮದುವೆಯಾಗುವುದಾಗಿಯೂ ಹೇಳಿದ್ದ. ಕೆಲ ದಿನಗಳ ನಂತರ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ ಆತ ಬಳಿಕ ತಲೆಮರೆಸಿಕೊಂಡಿದ್ದಾನೆ ಎಂದೂ ದೂರಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ.

ರೇವಾ ವಿವಿ: ಐಡಿಯಾಥಾನ್ 3ನೇ ಆವೃತ್ತಿಗೆ ಚಾಲನೆ

ಕಾರ್ಯಕ್ರಮಕ್ಕೆ ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ. ಶ್ಯಾಮರಾಜು ಚಾಲನೆ ನೀಡಿದರು. ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್‌.ರಮೇಶ್ ಇದ್ದರು.

ಯಲಹಂಕ: ವಿದ್ಯಾರ್ಥಿಗಳು ಅಧ್ಯಯನ ಪೂರ್ಣಗೊಳಿಸಿ, ಶಿಕ್ಷಣ ಸಂಸ್ಥೆಯಿಂದ ನಿರ್ಗಮಿಸುವ ವೇಳೆಗೆ ಉದ್ಯೋಗದಾತರಾಗಬೇಕೆಂಬ ಮಹತ್ವಾಕಾಂಕ್ಷಿ ಕಾರ್ಯಕ್ರಮ ‘ಐಡಿಯಾಥಾನ್’ 3ನೇ ಆವೃತ್ತಿಗೆ ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ನಮ್ಮಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ವ್ಯಾಸಂಗ ಮುಗಿಸಿ ಇಲ್ಲಿಂದ ಹೊರನಡೆಯುವ ವೇಳೆಗೆ ಉದ್ಯೋಗದಾತರಾಗಬೇಕೆಂಬುದು ನಮ್ಮ ಆಶಯ ಮತ್ತು ಸಂಕಲ್ಪವಾಗಿದೆ. ಈ ದಿಸೆಯಲ್ಲಿ ಕಳೆದ 2 ವರ್ಷಗಳಿಂದ ಈ ಕಾರ್ಯಕ್ರಮವನ್ನು ಆರಂಭಿಸಲಾಗಿದ್ದು, ಇದರಿಂದ ಉದ್ಯೋಗ ಸಮಸ್ಯೆ ನಿವಾರಣೆಯಾಗಲು ಸಾಧ್ಯವಾಗುತ್ತದೆ’ ಎಂದು ತಿಳಿಸಿದರು.

ಈ ಪರಿಕಲ್ಪನೆಯು ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ್ ಯೋಜನೆಗೆ ಹೋಲಿಕೆಯಾಗುತ್ತದೆ. 3ನೇ ಆವೃತ್ತಿಯ ಐಡಿಯಾಥಾನ್ನ ಪ್ರಮುಖ ಉದ್ದೇಶವೂ ಅದೇ ಆಗಿದ್ದು, ಇದರಲ್ಲಿ ವಿದ್ಯಾರ್ಥಿಗಳು ನಿಶ್ಚಿತವಾಗಿ ಸಫಲರಾಗುತ್ತಾರೆ ಎಂಬ ವಿಶ್ವಾಸವಿದೆ ಎಂದು ಮಾಹಿತಿ ನೀಡಿದರು.

ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ಪರೀಕ್ಷಾನಿಯಂತ್ರಣ ವಿಭಾಗದ ಮುಖ್ಯಸ್ಥೆ ಡಾ.ಜಿ.ಬೀನಾ, ವಾಣಿಜ್ಯ ಮತ್ತು ನಿರ್ವಹಣೆ ವಿಭಾಗದ ನಿರ್ದೇಶಕಿ ಡಾ.ಶುಭಾ ಉಪಸ್ಥಿತರಿದ್ದರು.

ಹೆಲ್ಮೆಟ್ ಅಭಿಯಾನ

ಬೆಂಗಳೂರು ನಗರ ಸಂಚಾರ ಪೊಲೀಸರು ಆಯೋಜಿಸಿದ್ದ ‘ಗುಣಮಟ್ಟದ ಹೆಲ್ಮೆಟ್ ಧರಿಸಿ–ಜೀವ ಉಳಿಸಿ’ ಅಭಿಯಾನಕ್ಕೆ ಅಶ್ವಿನಿ ಪುನೀತ್‌ರಾಜ್‌ಕುಮಾರ್ ಬುಧವಾರ ಚಾಲನೆ ನೀಡಿ ಮಹಿಳಾ ಸಿಬ್ಬಂದಿಗೆ ಹೆಲ್ಮೆಟ್ ವಿತರಿಸಿದರು. ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹಾಗೂ ನಗರ ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್‌.ರವಿಕಾಂತೇಗೌಡ ಇದ್ದರು – ಪ್ರಜಾವಾಣಿ ಚಿತ್ರ

ಸರ್ಕಾರಿ ಮಹಿಳಾ ಆಸ್ಪತ್ರೆಯಲ್ಲಿ ನವಜಾತ ಶಿಶು ಅಪಹರಣ?

ಪ್ರಜಾವಾಣಿ ವಾರ್ತೆ

ದಾವಣಗೆರೆ: ಇಲ್ಲಿನ ಕೆ.ಆರ್. ಮಾರ್ಕೆಟ್ ರಸ್ತೆಯಲ್ಲಿರುವ ಸರ್ಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಬುಧವಾರ ಜನಿಸಿದ ನವಜಾತ ಗಂಡು ಶಿಶು ನಾಪತ್ತೆಯಾಗಿದೆ. ನರ್ಸ್‌ಗಳ ನಿರ್ಲಕ್ಷ್ಯವೇ ಮಗು ಕಾಣೆಯಾಗಲು ಕಾರಣ ಎಂದು ಹೆತ್ತವರು ಆರೋಪಿಸಿದ್ದಾರೆ.

ಜಬಿವುಲ್ಲಾ–ಉಮ್ಮಿಸಲ್ಮಾ ದಂಪತಿಯ ಮಗು ಇದಾಗಿದ್ದು, ಬುಧವಾರ ಹೆರಿಗೆಯಾದ ಬಳಿಕ ನರ್ಸ್ ಬಂದು ಮಗುವನ್ನು ಐಸಿಯುಗೆ ಒಯ್ದಿದ್ದರು. ಬಳಿಕ ಎಲ್ಲ ಪರೀಕ್ಷೆಗಳು ಮುಗಿದ ಬಳಿಕ ಹೆತ್ತವರ ಕೈಗೆ ಮಗುವನ್ನು ನೀಡುವ ಬದಲು ಯಾವುದೋ ಮಹಿಳೆಯ ಕೈಗೆ ನೀಡಿದ್ದಾರೆ. ಆ ಮಹಿಳೆ ಮಗುವನ್ನು ತೆಗೆದುಕೊಂಡು ಹೋಗಿದ್ದಾರೆ.

‘ನಾವೆಲ್ಲ ವಾರ್ಡ್‌ನಲ್ಲೇ ಇದ್ದೆವು. ಇಲ್ಲಿಗೆ ಬಂದು ಮಗುವನ್ನು ನರ್ಸ್ ಒಯ್ದಿದ್ದಾರೆ. ವಾಪಸ್ ಇಲ್ಲೇ ತಂದು ಕೊಡಬೇಕಿತ್ತು. ಇಲ್ಲವೇ ನಮ್ಮನ್ನು ಕರೆಯಬೇಕಿತ್ತು. ಯಾರೋ ಮಹಿಳೆ ಬಂದರು ಎಂದು ಅವರ ಕೈಗೆ ಮಗುವನ್ನು ಏಕೆ ನೀಡಿದರು? ಅವರ ಉದ್ದೇಶವೇನು ಎಂಬುದೇ ಅರ್ಥವಾಗುತ್ತಿಲ್ಲ’ ಎಂದು ಹೆತ್ತವರ ಸಂಬಂಧಿ ಶಿರಿನ್‌ಬಾನು ತಿಳಿಸಿದರು.

‘ಮಗುವನ್ನು ತೆಗೆದುಕೊಂಡು ಹೋಗಿ ಎಂದು ನರ್ಸ್ ಕೂಗಿದಾಗ ಬುರ್ಕಾ ಹಾಕಿದ್ದ ಮಹಿಳೆಯೊಬ್ಬರು ಬಂದು ನಮ್ಮ ಮಗು ಎಂದು ಕೈ ಚಾಚಿದರು. ಅವರಿಗೆ ನೀಡಿರುವುದಾಗಿ ನರ್ಸ್ ತಿಳಿಸಿದ್ದಾರೆ. ನಾನು ಆ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಇರಲಿಲ್ಲ. ಶನಿವಾರ ಬೆಳಿಗ್ಗೆ ಸಿಸಿಟಿವಿ ಕ್ಯಾಮೆರಾದ ಫೂಟೇಜ್ ಪರಿಶೀಲಿಸುತ್ತೇನೆ’ ಎಂದು ಆಸ್ಪತ್ರೆಯ ಅಧೀಕ್ಷಕ ಡಾ.ನೀಲಕಂಠ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ್ದಾರೆ.

ಮಗು ಕಳೆದುಕೊಂಡವರು ದೂರು ನೀಡಲು ಬುಧವಾರ ರಾತ್ರಿ ಬಸವನಗರ ಪೊಲೀಸ್ ಠಾಣೆಗೆ ತೆರಳಿದ್ದಾರೆ.

ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಷ್ಕರ್ಮಿಗಳು ತಲೆಯ ಮೇಲೆ ಕಲ್ಲು ಎತ್ತಿಹಾಕಿದ್ದರಿಂದ ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯೊಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಬುಧವಾರ ಮೃತಪಟ್ಟಿದ್ದಾರೆ. ಈ ಸಂಬಂಧ ರಾಜಗೋಪಾಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮೃತರನ್ನು ಕೃಷ್ಣಪ್ಪ (65) ಎಂದು ಗುರುತಿಸಲಾಗಿದೆ. ಹೆಗ್ಗನಹಳ್ಳಿ ಮುಖ್ಯ ರಸ್ತೆಯ ಬಸ್ ನಿಲ್ದಾಣದ ಬಳಿಯ ಪಾದಚಾರಿ ಮಾರ್ಗದಲ್ಲಿ ಕೃಷ್ಣಪ್ಪ ಮಲಗಿದ್ದರು. ಈ ವೇಳೆ ಅವರ ತಲೆಯ ಮೇಲೆ ದುಷ್ಕರ್ಮಿಗಳು ಕಲ್ಲು ಎತ್ತಿಹಾಕಿ ಪರಾರಿಯಾಗಿದ್ದಾರೆ. ಕೃಷ್ಣಪ್ಪ ರಕ್ತದ ಮಡುವಿನಲ್ಲಿ ಬಿದ್ದಿರುವುದನ್ನು ಕಂಡ ಸಾರ್ವಜನಿಕರು ಠಾಣೆಗೆ ಮಾಹಿತಿ ನೀಡಿದ್ದರು. ಅವರನ್ನು ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು–ಮಂಗಳೂರು ನಡುವಿನ ಎಲ್ಲಾ ರೈಲು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಡೀಲ್ ಮತ್ತು ಕುಲಶೇಖರ ನಿಲ್ದಾಣಗಳ ನಡುವೆ ಜೋಡಿ ಮಾರ್ಗದ ಕಾಮಗಾರಿ ನಿರ್ವಹಿಸಲು ಗುರುವಾರದಿಂದಲೇ 18 ರೈಲುಗಳ ಸಂಚಾರವನ್ನು ನೈರುತ್ಯ ರೈಲ್ವೆ ತಾತ್ಕಾಲಿಕವಾಗಿ ರದ್ದುಗೊಳಿಸಿದೆ.

ಸುಬ್ರಹ್ಮಣ್ಯ ರಸ್ತೆ–ಮಂಗಳೂರು ಸೆಂಟ್ರಲ್ (ಗಾಡಿ ಸಂಖ್ಯೆ 06488/06489) ಮಧ್ಯದ ಪ್ರಯಾಣಿಕರ ವಿಶೇಷ ರೈಲು, ಮಂಗಳೂರು ಸೆಂಟ್ರಲ್–ಕಬಕ ಪುತ್ತೂರು ಪ್ರಯಾಣಿಕರ ರೈಲುಗಳು (06487/06486) ಮಾ.17ರಿಂದ 20ರವರೆಗೆ ಸಂಚರಿಸುವುದಿಲ್ಲ.

ಪುಣೆ– ಎರ್ನಾಕುಲಂ ಎಕ್ಸ್‌ಪ್ರೆಸ್ ರೈಲು (11097/11098) ಮಾ.19ರಂದು ಮತ್ತು 21ರಂದು ರದ್ದಾಗಿದೆ. ಯಶವಂತಪುರ–ಕಾರವಾರ ಎಕ್ಸ್‌ಪ್ರೆಸ್ ರೈಲುಗಳ ಸಂಚಾರ(16515/16516) ಮಾ.18 ಮತ್ತು 19ರಂದು ಇರುವುದಿಲ್ಲ.

ಯಶವಂತಪುರ–ಮಂಗಳೂರು ಎಕ್ಸ್‌ಪ್ರೆಸ್ ರೈಲು(16575/16576) ಮಾ.17 ಮತ್ತು 18ರಂದು ಇರುವುದಿಲ್ಲ.

ಯವಂತಪುರ–ಮಂಗಳೂರು ಎಕ್ಸ್‌ಪ್ರೆಸ್(16539/16540) ರೈಲು ಮಾ.19 ಮತ್ತು 20ರಂದು ಸಂಚರಿಸುವುದಿಲ್ಲ.

ಬೆಂಗಳೂರು–ಕಾರವಾರ ಎಕ್ಸ್‌ಪ್ರೆಸ್(16595/16596), ಯಶವಂತಪುರ–ಕಣ್ಣೂರು ಎಕ್ಸ್‌ಪ್ರೆಸ್(16511/16511), ಕೆಎಸ್‌ಆರ್ ಬೆಂಗಳೂರು - ಮಂಗಳೂರು ಸೆಂಟ್ರಲ್ ಎಕ್ಸ್‌ಪ್ರೆಸ್(16585/16586) ರೈಲುಗಳು ಸಂಚಾರ ಮಾ.19 ಮತ್ತು 20ರಂದು ಇರುವುದಿಲ್ಲ ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ ಹೆಗಡೆ ತಿಳಿಸಿದ್ದಾರೆ.

ಗುರುವಾರದಿಂದ ರೈಲು ಸಂಚಾರ ರದ್ದಾಗುವ ಬಗ್ಗೆ ಬುಧವಾರ ಸಂಜೆ ಪ್ರಕಟಣೆ ಹೊರಡಿಸಿರುವುದು ಪ್ರಯಾಣಿಕರ ಅಸಮಾಧಾನಕ್ಕೆ ಕಾರಣವಾಗಿದೆ. ‘ರೈಲು ಮಾರ್ಗದಲ್ಲಿ ತೊಂದರೆ ಕಾಣಿಸಿಕೊಂಡರೆ ಸಂಚಾರವನ್ನು ದಿಢೀರ್ ರದ್ದುಗೊಳಿಸುವುದು ಅನಿವಾರ್ಯ. ಜೋಡಿ ಮಾರ್ಗದ ಕಾಮಗಾರಿ ಕೈಗೊಳ್ಳುವ ಬಗ್ಗೆ ಮೊದಲೇ ಮಾಹಿತಿ ಇರುತ್ತದೆ. ಆದರೂ ಟಿಕೆಟ್ ಕಾಯ್ದಿರಿಸಲು ಅವಕಾಶ ನೀಡಿರುವುದು ಏಕೆ’ ಎಂಬುದು ಪ್ರಯಾಣಿಕರ ಪ್ರಶ್ನೆ.

‘ಒಂದು ವಾರ ಮೊದಲೇ ಟಿಕೆಟ್ ಕಾಯ್ದಿರಿಸಿ ಪ್ರಯಾಣಕ್ಕೆ ಸಿದ್ಧವಾಗಿದ್ದೇವೆ. ಈಗ ರೈಲು ರದ್ದಾಗಿದೆ ಎಂಬ ಸಂದೇಶ ಬಂದಿದೆ. ಈ ರೀತಿ ಅನಾನುಕೂಲ ಮಾಡುವುದು ಸರಿಯಲ್ಲ’ ಎಂದು ಪ್ರಯಾಣಿಕ ಸತೀಶ್ ಆಕ್ರೋಶ ವ್ಯಕ್ತಪಡಿಸಿದರು.

‘ಪಾಲಕ್ಕಾಡು ವಿಭಾಗದಿಂದ ಕಾಮಗಾರಿ ಕೈಗೊಳ್ಳಲಾಗಿದ್ದು, ರೈಲ್ವೆ ಸಚಿವಾಲಯದಿಂದ ಅನುಮತಿ ಸಿಕ್ಕ ಬಳಿಕವೇ ಪ್ರಕಟಣೆ ಹೊರಡಿಸಬೇಕಾಗುತ್ತದೆ. ಅನುಮತಿ ಸಿಕ್ಕ ಕೂಡಲೇ ದಿಢೀರ್ ನಿರ್ಧಾರ ಕೈಗೊಂಡಿರಬಹುದು. ರೈಲು ಸಂಚಾರ ರದ್ದಾಗಿರುವುದು ತಾತ್ಕಾಲಿಕ ಅಷ್ಟೆ. ಜೋಡಿ ಮಾರ್ಗದ ಕಾಮಗಾರಿ ಒಮ್ಮೆ ಪೂರ್ಣಗೊಂಡರೆ ಅನುಕೂಲ ಆಗಲಿದೆ. ಪ್ರಯಾಣಿಕರು ಸಹಕರಿಸಬೇಕು’ ಎಂದು ನೈರುತ್ಯ ರೈಲ್ವೆ ವಿಭಾಗದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಸ್ಪಷ್ಟಪಡಿಸಿದರು.

ಜಲಮಂಡಳಿ ಗುತ್ತಿಗೆ ಕಾರ್ಮಿಕರ ಪ್ರತಿಭಟನೆ • ಅಧಿಕಾರಿಗಳ ವಿರುದ್ಧ ಆಕ್ರೋಶ

ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾನ ಕೆಲಸಕ್ಕೆ ಸಮಾನ ವೇತನ’ ಜಾರಿ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜಲಮಂಡಳಿ ಗುತ್ತಿಗೆ ಕಾರ್ಮಿಕರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

ಜಲಮಂಡಳಿಯ ಕೇಂದ್ರ ಕಚೇರಿ ಎದುರು ಬುಧವಾರ ಸೇರಿದ್ದ ನೂರಾರು ಕಾರ್ಮಿಕರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ‘ಜನರಿಗೆ ನೀರುಣಿಸುವ ನಮ್ಮ ಬದುಕು ನೀರುಪಾಲಾಗದಿರಲಿ’ ಎಂಬ ಘೋಷಣೆ ಕೂಗಿದರು.

‘ವಾಲ್ ಮ್ಯಾನ್, ಚಾಲಕರು, ನೀರುಗಂಟಿ, ಎಟಿಎಂ ಹಾಗೂ ದೂರವಾಣಿ ಆಪರೇಟರ್‌ಗಳು, ಪಂಪ್‌ಹೌಸ್ ಆಪರೇಟರ್‌ಗಳು ಹಾಗೂ ಇತರೆ ಸಿಬ್ಬಂದಿ ಹಗಲಿರುಳೆನ್ನದೆ ದುಡಿಯುತ್ತಿರುವುದರಿಂದ ಬೆಂಗಳೂರಿನ ನಿವಾಸಿಗಳು ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ. ಹೀಗಿದ್ದರೂ ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಅಧಿಕಾರಿಗಳ ದರ್ಪದ ವಿರುದ್ಧ ಧ್ವನಿ ಎತ್ತುವವರನ್ನು ಏಕಾಏಕಿ ವರ್ಗಾವಣೆ ಮಾಡಲಾಗುತ್ತಿದೆ’ ಎಂದು ಪ್ರತಿಭಟನಕಾರರು ದೂರಿದರು.

‘ಕೋವಿಡ್ ಸಮಯದಲ್ಲಿ ನಾವೆಲ್ಲಾ ಜೀವದ ಹಂಗು ತೊರೆದು ಕೆಲಸ ಮಾಡಿದ್ದೇವೆ. ಇದನ್ನು ರಾಜ್ಯ ಸರ್ಕಾರ ಹಾಗೂ ಜಲಮಂಡಳಿ ಗುರುತಿಸಲಿಲ್ಲ. ಕಾಯಂ ನೌಕರರಿಗೆ ಸರಿಯಾದ ಸಮಯಕ್ಕೆ ವೇತನ ನೀಡಲಾಗುತ್ತದೆ. ಗುರುತಿನ ಚೀಟಿ ವಿತರಿಸಲಾಗಿದೆ. ವಾರದ ರಜೆ ಹಾಗೂ ಬೋನಸ್ ಕೂಡ ಸಿಗುತ್ತಿದೆ. ನಮ್ಮ ಪಾಲಿಗೆ ಇವೆಲ್ಲಾ ಕನಸಾಗಿಯೇ ಉಳಿದಿವೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಕಾಯಂ ನೌಕರರಂತೆ ಗುತ್ತಿಗೆ ಕಾರ್ಮಿಕರಿಗೂ ವಾರದ ರಜೆ ಹಾಗೂ ಸರ್ಕಾರಿ ರಜೆಗಳನ್ನು ಕಡ್ಡಾಯವಾಗಿ ನೀಡಬೇಕು. ಕೆಲಸದ ಅವಧಿಯನ್ನು 8 ಗಂಟೆಗೆ ನಿಗದಿಪಡಿಸಬೇಕು. ಹೆಚ್ಚುವರಿ ಅವಧಿ ಕೆಲಸ ಮಾಡಿದವರಿಗೆ ಅಗತ್ಯ ಭತ್ಯೆ ಒದಗಿಸಬೇಕು. ಜಲಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಬಿಬಿಎಂಪಿ ಮಾದರಿಯಲ್ಲೇ ನೇರ ವೇತನ ಪಾವತಿಸಬೇಕು. ಜೊತೆಗೆ ಗುರುತಿನ ಚೀಟಿಗಳನ್ನೂ ವಿತರಿಸಬೇಕು’ ಎಂದು ಆಗ್ರಹಿಸಿದರು.

‘ಗುತ್ತಿಗೆ ಕಾರ್ಮಿಕರಿಗೆ ಕೆಲಸದ ಭದ್ರತೆ ಒದಗಿಸಬೇಕು. ಬೋನಸ್ ಕೂಡ ನೀಡಬೇಕು. ಆಡಳಿತ ವರ್ಗದವರು ಕಾರ್ಮಿಕರೊಂದಿಗೆ ಘನತೆಯಿಂದ ವರ್ತಿಸಬೇಕು. ದೌರ್ಜನ್ಯ ನಡೆಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

‘15 ದಿನಗಳಲ್ಲಿ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸುತ್ತೇವೆ’ ಎಂದು ಎಚ್ಚರಿಸಿದರು.

ಸಂಘದ ಅಧ್ಯಕ್ಷ ಬಾಲನ್, ರವಿಮೋಹನ್, ನಟ ಚೇತನ್ ಅಹಿಂಸಾ ಹಾಗೂ ಸತೀಶ್ ಅರವಿಂದ್ ಇದ್ದರು.

ಜಲಮಂಡಳಿಯ ಕೇಂದ್ರ ಕಚೇರಿ ಎದುರು ಕಾರ್ಮಿಕರು ಪ್ರತಿಭಟನೆ ನಡೆಸಿದರು– ಪ್ರಜಾವಾಣಿ ಚಿತ್ರ

ಚಿತ್ರಾವಳಿ

ರಂಗು ರಂಗಿನ ಹೋಳಿ... ಶುಕ್ರವಾರ ಹೋಳಿ ಹಬ್ಬ ಇರುವುದರಿಂದ ಅವೆನ್ಯೂ ರಸ್ತೆಯಲ್ಲಿ ಬಣ್ಣ ಎರಚುವ ಪಿಚಕಾರಿ ಮಾರಾಟದ ಭರಾಟೆ ಬುಧವಾರ ಜೋರಾಗಿತ್ತು –ಪ್ರಜಾವಾಣಿ ಚಿತ್ರ

ನಂದಿನಿ ಬ್ರ್ಯಾಂಡ್ ರಾಯಭಾರಿಯಾಗಿದ್ದ ಪುನೀತ್ ರಾಜ್‌ಕುಮಾರ್ ಜನ್ಮದಿನದ ಅಂಗವಾಗಿ ರಾಷ್ಟ್ರೋತ್ಥಾನ ರಕ್ತಕೇಂದ್ರದ ಸಹಯೋಗದಲ್ಲಿ ಕೆಎಂಎಫ್ ಕಚೇರಿಯಲ್ಲಿ ಬುಧವಾರ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ರಕ್ತದಾನ ಮಾಡಿದ ಸಿಬ್ಬಂದಿಗೆ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಮತ್ತು ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಪ್ರಮಾಣಪತ್ರ ವಿತರಿಸಿದರು. ನಟಿ ಧನ್ಯಾ ರಾಮ್‌ಕುಮಾರ್, ಆಡಳಿತ ಮಂಡಳಿ ನಿರ್ದೇಶಕ ಕಾಪು ದಿವಾಕರ ಶೆಟ್ಟಿ, ಶ್ರೀಶೈಲಗೌಡ ಪಾಟೀಲ, ನಂಜುಂಡಸ್ವಾಮಿ ಇದ್ದರು.

ಆಂಬುಲೆನ್ಸ್ - ಲಾರಿ ಡಿಕ್ಕಿ: ಇಬ್ಬರ ಸಾವು

ಚನ್ನಪಟ್ಟಣ: ನಗರದ ಸಾತನೂರು ಸರ್ಕಲ್ ಬಳಿ ಆಂಬುಲೆನ್ಸ್ ವಾಹನ ಹಾಗೂ ಲಾರಿ ನಡುವೆ ಅಪಘಾತ ಸಂಭವಿಸಿ ಇಬ್ಬರು ಮೃತಪಟ್ಟಿರುವ ಘಟನೆ ಮಂಗಳವಾರ ನಡೆದಿದೆ.

ಆಂಬಲೆನ್ಸ್ ಒಳಗಿದ್ದ ಬೆಂಗಳೂರಿನ ಮುದಾಸೀರ್ (40) ಹಾಗೂ ಮಂಡ್ಯದ ಕೃಷ್ಣಮೂರ್ತಿ (60) ಮೃತಪಟ್ಟವರು. ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ಕೃಷ್ಣಮೂರ್ತಿ ಅವರನ್ನು ಬೆಂಗಳೂರಿನಿಂದ ಮಂಡ್ಯ ಕಡೆಗೆ ಆಂಬುಲೆನ್ಸ್ ನಲ್ಲಿ ಕರೆದೊಯ್ಯುತ್ತಿದ್ದ ವೇಳೆ ಈ ಘಟನೆ ನಡೆದಿದೆ.

ಮಂಡ್ಯದವರಾದ ಕೃಷ್ಣಮೂರ್ತಿಯನ್ನು ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ದಾಖಲಿಸಲಾಗಿತ್ತು. ರೋಗ ಉಲ್ಬಣಗೊಂಡಿದ್ದರಿಂದ ಅವರನ್ನು ವಾಪಸ್ ಮನೆಗೆ ಕರೆದುಕೊಂಡು ಹೋಗುವಂತೆ ವೈದ್ಯರು ತಿಳಿಸಿದ್ದರು ಎಂದು ತಿಳಿದುಬಂದಿದೆ. ಆಂಬುಲೆನ್ಸ್ ನಲ್ಲಿ ಮಂಡ್ಯದ ಕಡೆಗೆ ಕರೆದುಕೊಂಡು ಹೋಗುವಾಗ ಮುಂದೆ ಹೋಗುತ್ತಿದ್ದ ಲಾರಿಗೆ ಆಂಬುಲೆನ್ಸ್ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಆಂಬುಲೆನ್ಸ್ ಮುಂಭಾಗ ನಜ್ಜುಗುಜ್ಜಾಗಿದೆ. ಘಟನೆಯಲ್ಲಿ ಚಾಲಕನ ಪಕ್ಕ ಕುಳಿತಿದ್ದ ಚಾಲಕನ ಗೆಳೆಯ ಮುದಾಸೀರ್ ಸ್ಥಳದಲ್ಲೆ ಮೃತಪಟ್ಟರೆ, ಕೃಷ್ಣಮೂರ್ತಿ ಮಂಡ್ಯದಲ್ಲಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಣು ಹಾಕಿಕೊಂಡು ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಹೋಟೆಲ್ ಮ್ಯಾನೇಜ್‌ಮೆಂಟ್ ಕಾಲೇಜೊಂದರಲ್ಲಿ ಓದುತ್ತಿದ್ದ ವಿದ್ಯಾರ್ಥಿಯೊಬ್ಬರು ತಾವು ವಾಸವಿದ್ದ ಪಿ.ಜಿ. ಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಂಗಳೂರು ಕುಮಾರಸ್ವಾಮಿ ಬಡಾವಣೆಯ ಭರತ್ ಭಾಸ್ಕರ್ (20) ಆತ್ಮಹತ್ಯೆ ಮಾಡಿಕೊಂಡವರು. ಆತ್ಮಹತ್ಯೆಗೆ ಮುನ್ನ ತಾಯಿಗೆ ಕರೆ ಮಾಡಿದ್ದಾರೆ. ಆ ವೇಳೆ ಕರೆ ಸ್ವೀಕರಿಸಲು ತಾಯಿಗೆ ಸಾಧ್ಯವಾಗಿರಲಿಲ್ಲ ಎಂದು ಮನೆಯವರು ತಿಳಿಸಿದ್ದಾರೆ.


ಭರತ್

‘ಡೊನೇಶನ್ ನೀಡಿದರೂ ಕಾಲೇಜಿನಲ್ಲಿ ವ್ಯವಸ್ಥೆ ಸರಿಯಿಲ್ಲ. ಪ್ರಾಧ್ಯಾಪಕರೊಬ್ಬರು ನಾನು ಮಾಡಿದ ಪ್ರಾಜೆಕ್ಟ್ ವರ್ಕ್ ಸರಿ ಇಲ್ಲ ಎಂದು ಸಹಿ ಮಾಡದೆ ಮನಸ್ಸಿಗೆ ನೋವಾಗುವಂತೆ ನಡೆದುಕೊಂಡರು. ಪರೀಕ್ಷೆಗೆ ಕುಳಿತುಕೊಳ್ಳಲು ಸಾಧ್ಯವಿಲ್ಲ ಎಂದಿದ್ದಾರೆ. ಆದ್ದರಿಂದ ಈ ಲೋಕವನ್ನು ತ್ಯಜಿಸುತ್ತಿದ್ದೇನೆ’ ಎಂದು ಭರತ್, ವಾಟ್ಸ್‌ಆ್ಯಪ್ ಸಂದೇಶವನ್ನು ತಾಯಿಗೆ ಕಳುಹಿಸಿ, ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಂಗಳೂರಿಗೆ ಬಂದಿರುವ ತಂದೆ, ತಾಯಿ ಮಗನ ಸಾವಿಗೆ ಕಾರಣರಾಗಿರುವವರ ವಿರುದ್ಧ ತನಿಖೆ ನಡೆಸಿ ನ್ಯಾಯ ದೊರಕಿಸಿ ಕೊಡಬೇಕು ಎಂದು ಉರ್ವ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ಒತ್ತಾಯಿಸಿದ್ದಾರೆ.

ನಾಲ್ವರ ಜೀವ ಉಳಿಸಿದ ಉಮೇಶ್ ದಂಡಗಿ

ಸಾವಿನಲ್ಲೂ ಸಾರ್ಥಕತೆ; ಅಂಗಾಂಗ ದಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಮಹಾಬಳೇಶ್ವರ ನಗರದ ನಿವಾಸಿ ಉಮೇಶ ಬಸವಣ್ಣಿ ದಂಡಗಿ (51) ಅವರು ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.

ಮನೆಯಲ್ಲಿ ಆಕಸ್ಮಿಕವಾಗಿ ಬಿದ್ದು ತಲೆಗೆ ತೀವ್ರವಾದ ಗಾಯದೊಂದಿಗೆ ಬಳಲುತ್ತಿದ್ದ 51 ವರ್ಷದ ಅವರು, ಚಿಕಿತ್ಸೆಗೆ ಸ್ಪಂದಿಸದೆ ಮಿದುಳು ನಿಷ್ಕ್ರಿಯಗೊಂಡಿತ್ತು. ಜೀವನ್ಮರಣದ ನಡುವೆ ಹೋರಾಡುತ್ತಿದ್ದ ಅವರು ತಮ್ಮ ಅಂಗಾಂಗಗಳನ್ನು ದಾನ ಮಾಡುವ ಮೂಲಕ ನಾಲ್ವರ ಜೀವ ಉಳಿಸಿದ್ದಾರೆ. ಇಬ್ಬರು ದೃಷ್ಟಿದೋಷವುಳ್ಳವರಿಗೆ ಬೆಳಕಾಗಿದ್ದಾರೆ.

ಹೃದಯವನ್ನು ಇಲ್ಲಿನ ಕೆಎಲ್‌ಇ ಸೊಸೈಟಿಯ ಪ್ರಭಾಕರ ಕೋರೆ ಆಸ್ಪತ್ರೆಗೆ, ಲಿವರ್ ಅನ್ನು ಬೆಂಗಳೂರಿಗೆ, ಒಂದು ಕಿಡ್ನಿಯನ್ನು ಧಾರವಾಡದ ಎಸ್‌ಡಿಎಂಗೆ ಹಾಗೂ ಮತ್ತೊಂದು ಕಿಡ್ನಿಯನ್ನು ಹುಬ್ಬಳ್ಳಿಯ ತತ್ವಾದರ್ಶ ಆಸ್ಪತ್ರೆಗೆ ಬುಧವಾರ ಆಂಬ್ಯುಲೆನ್ಸ್‌ಗಳಲ್ಲಿ ಬುಧವಾರ ಕಳುಹಿಸಿಕೊಡಲಾಯಿತು.

ಆ ಕುಟುಂಬದವರ ಸಮ್ಮತಿಯ ಮೇರೆಗೆ ಈ ಪ್ರಕ್ರಿಯೆಗಳು ನಡೆದಿವೆ ಎಂದು ಆಸ್ಪತ್ರೆಯ ಮೂಲಗಳು ಮಾಹಿತಿ ನೀಡಿವೆ.

ಕೆಎಲ್‌ಇ ಆಸ್ಪತ್ರೆಯಿಂದ ಸಾಂಬ್ರಾ ವಿಮಾನ ನಿಲ್ದಾಣದವರೆಗೆ ಝೀರೊ ಟ್ರಾಫಿಕ್ ವ್ಯವಸ್ಥೆ ಮಾಡಲಾಗಿತ್ತು. ವಿಮಾನದ ಮೂಲಕ ಲಿವರ್ ಅನ್ನು ಬೆಂಗಳೂರಿಗೆ ರವಾನಿಸಲಾಯಿತು. ಪೊಲೀಸರು ಗ್ರೀನ್ ಕಾರಿಡಾರ್ ನಿರ್ಮಿಸಿ ಅಂಗಾಂಗಗಳನ್ನು ತ್ವರಿತವಾಗಿ ಸ್ಥಳಾಂತರಿಸಲು ಅವಕಾಶ ಕಲ್ಪಿಸಿ ಕೊಟ್ಟರು ಎಂದು ತಿಳಿದುಬಂದಿದೆ.

ಉಮೇಶ ಆರ್‌ಎಸ್‌ಎಸ್ ಕಾರ್ಯಕರ್ತ ಆಗಿದ್ದರು ಎಂದು ತಿಳಿದುಬಂದಿದೆ. ಅವರಿಗೆ ತಾಯಿ, ಪತ್ನಿ, ಮಗಳು, ಸಹೋದರ ಇದ್ದಾರೆ.

ಬೆಳಗಾವಿಯ ಕೆಎಲ್‌ಇ ಆಸ್ಪತ್ರೆಯಿಂದ ಅಂಗಾಂಗಗಳನ್ನು ಸಾಗಿಸಿದ ಸಂದರ್ಭ

ಎಲ್‌ಇಟಿಯ ಮೂವರು ಉಗ್ರರ ಹತ್ಯೆ

ಶ್ರೀನಗರ: ಇಲ್ಲಿನ ಹೊರವಲಯದ ನೌಗಾಮ್ ಪ್ರದೇಶದಲ್ಲಿ ಬುಧವಾರ ಉಗ್ರರು ಹಾಗೂ ಭದ್ರತಾ ಪಡೆಗಳ ನಡುವಿನ ಗುಂಡಿನ ಚಕಮಕಿಯಲ್ಲಿ ಮೂವರು ಲಷ್ಕರ್–ಎ–ತೈಬಾ (ಎಲ್‌ಇಟಿ) ಉಗ್ರರು ಹತರಾಗಿದ್ದಾರೆ.

‘ಹತ್ಯೆಯಾದವರನ್ನು ಶೋಪಿಯಾನ್‌ನ ಆದಿಲ್ ತೇಲಿ, ಸಾಕಿಬ್ ತಂತ್ರಾಯ್ ಎಂದು ಗುರುತಿಸಲಾಗಿದ್ದು, ಮೂರನೇ ವ್ಯಕ್ತಿ ಉಮರ್ ತೇಲಿ ಎಂದು ತಿಳಿದು ಬಂದಿದೆ ಎಂದು ಕಾಶ್ಮೀರ ವಲಯ ಐಜಿಪಿ ವಿಜಯಕುಮಾರ್ ತಿಳಿಸಿದರು.

‘ಹತ್ಯೆಯಾದ ಎಲ್‌ಇಟಿಯ ಈ ಮೂವರು ಉಗ್ರರು ಸ್ಥಳೀಯರಾಗಿದ್ದು, ಮಾರ್ಚ್ 9ರಂದು ಶ್ರೀನಗರದ ಖೋನ್‌ಮೋಹ್ ಪ್ರದೇಶದಲ್ಲಿ ನಡೆದಿದ್ದ ಪಿಡಿಪಿ ಸರಪಂಚ ಸಮೀರ್ ಅಹ್ಮದ್ ಭಟ್ ಅವರ ಹತ್ಯೆಯಲ್ಲಿ ಭಾಗಿಯಾಗಿದ್ದರು. ಇವರಿಂದ ಒಂದು ಎಕೆ-47 ರೈಫಲ್ ಮತ್ತು ಎರಡು ಪಿಸ್ತೂಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ’ ಎಂದರು.

ಸಾಮೂಹಿಕ ನಾಯಕತ್ವ: ಜಿ-23 ನಾಯಕರ ಒಲವು

ನವದೆಹಲಿ(ಪಿಟಿಐ): 'ಎಲ್ಲಾ ಹಂತಗಳಲ್ಲಿ ನಿರ್ಧಾರ ಕೈಗೊಳ್ಳುವಾಗ 'ಎಲ್ಲರನ್ನು ಒಳಗೊಳ್ಳುವ ಹಾಗೂ ಸಾಮೂಹಿಕ ನಾಯಕತ್ವ' ಮಾದರಿಯನ್ನು ಅಳವಡಿಸಿಕೊಳ್ಳುವುದೊಂದೇ ಪಕ್ಷವನ್ನು ಮುನ್ನಡೆಸಲು ಬೇಕಾಗಿರುವ ಮಾರ್ಗ' ಎಂದು ಕಾಂಗ್ರೆಸ್‌ನ ಜಿ-23 ನಾಯಕರು ಬುಧವಾರ ಪ್ರತಿಪಾದಿಸಿದರು.

ಹಿರಿಯ ಮುಖಂಡ ಗುಲಾಂ ನಬಿ ಆಜಾದ್ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಮುಖಂಡರು, 'ಸಮಾನ ಮನಸ್ಕ ಪಕ್ಷಗಳ ಜತೆ ಮಾತುಕತೆ ನಡೆಸುವ ಮೂಲಕ 2024ರ ಲೋಕಸಭಾ ಚುನಾವಣೆ ವೇಳೆಗೆ ಪರ್ಯಾಯ ರಂಗ ರಚನೆಗೆ ಪಕ್ಷ ಮುಂದಾಗಬೇಕು ಎಂದು ನಾಯಕತ್ವವನ್ನು ಒತ್ತಾಯಿಸಲಾಯಿತು' ಎಂದು ಸಭೆ ನಂತರ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮುಖಂಡರಾದ ಕಪಿಲ್ ಸಿಬಲ್, ಆನಂದ ಶರ್ಮಾ, ಭೂಪಿಂದರ್ ಸಿಂಗ್ ಹೂಡಾ, ಪೃಥ್ವಿರಾಜ್ ಚವಾಣ್, ಮನೀಷ್ ತಿವಾರಿ, ಶಶಿ ತರೂರ್ ಇತರರು ಇದ್ದರು.

ಅಧ್ಯಕ್ಷರು– ಸದಸ್ಯರ ಜನ್ಮದಿನಾಂಕ ನೀಡುವಂತೆ ಕಾರ್ಯದರ್ಶಿಗೆ ಡಿಪಿಎಆರ್ ಪತ್ರ

ಕೆಪಿಎಸ್‌ಸಿ ಸದಸ್ಯರ ಜನ್ಮದಿನಾಂಕ 'ರಹಸ್ಯ'!

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷ ಮತ್ತು ಸದಸ್ಯರ ಜನ್ಮದಿನಾಂಕದ ಮಾಹಿತಿ ಸರ್ಕಾರದಲ್ಲಿ ಲಭ್ಯವಿಲ್ಲ. ಹೀಗಾಗಿ, ಅವರ ನಿವೃತ್ತಿ ದಿನಾಂಕ ನಿಗದಿ ಪಡಿಸಲು ಸಾಧ್ಯವಾಗುತ್ತಿಲ್ಲ!

2022ರಲ್ಲಿ ಅವಧಿ ಮುಕ್ತಾಯವಾಗುತ್ತಿರುವ ಸದಸ್ಯರ ವಿವರ ಹಾಗೂ ಜನ್ಮ ದಿನಾಂಕದ ಮಾಹಿತಿ ನೀಡುವಂತೆ ಕೆಪಿಎಸ್‌ಸಿ ಕಾರ್ಯದರ್ಶಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿ ಪತ್ರ ಬರೆದಿದ್ದಾರೆ.

ಅಧಿಕಾರೇತರ ಸದಸ್ಯರಿಂದ ಎಸ್ಸೆಸ್ಸೆಲ್ಸಿ ಅಂಕಪಟ್ಟಿ ಮತ್ತು ಅಧಿಕಾರಿ ವಿಭಾಗದ ಸದಸ್ಯರ ಎಸ್ಸೆಸ್ಸೆಲ್ಸಿ ಅಂಕ ಪಟ್ಟಿ, ಸೇವಾ ಪುಸ್ತಕದಲ್ಲಿನ ಜನ್ಮ ದಿನಾಂಕದ ವಿವರ ಒದಗಿಸ ಬೇಕು

'ಜನ್ಮದಿನ' ಬದಲಿಸಲು ಇಕ್ಕೇರಿ ಮನವಿ

2006ನೇ ಬ್ಯಾಚಿನ ಐಎಎಸ್ ಅಧಿಕಾರಿ ಇ.ಪಿ. ಇಕ್ಕೇರಿ ಅವರು 2020ರ ಜುಲೈ 14ರಂದು ಅಧಿಕಾರಿ ವಿಭಾಗದಿಂದ ಕೆಪಿಎಸ್‌ಸಿ ಸದಸ್ಯರಾಗಿ ನೇಮಕವಾಗಿದ್ದರು. ತಮ್ಮ ಜನ್ಮದಿನಾಂಕ ತಪ್ಪಾಗಿದ್ದು ಅದನ್ನು ಸರಿಪಡಿಸುವಂತೆ ಇಕ್ಕೇರಿ ಅವರು, ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಕೆಪಿಎಸ್‌ಸಿಗೆ ಇಕ್ಕೇರಿ ಸಲ್ಲಿಸಿರುವ ಸ್ವವಿವರದಲ್ಲಿ ಜನ್ಮ ದಿನಾಂಕ (ಸೇವಾ ಪುಸ್ತಕದಲ್ಲಿ ಇರುವಂತೆ) 1960 ಜೂನ್ 20 ಎಂದು ನಮೂದಿಸಿದ್ದು, ಅದರ ಪ್ರಕಾರ ಇದೇ ಜೂನ್‌ನಲ್ಲಿ ಅವರು ನಿವೃತ್ತಿಯಾಗಬೇಕಿದೆ. ಆದರೆ, ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ, 'ನನ್ನ ನಿಜವಾದ ಜನ್ಮದಿನಾಂಕ 1961 ನ. 14. ಈ ಬಗ್ಗೆ ಕೆಪಿಎಸ್‌ಸಿ ಮತ್ತು ಮಹಾ ಲೆಕ್ಕಪರಿಶೋಧಕರಿಗೆ ಸೂಚನೆ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

'ನನ್ನ ಸರಿಯಾದ ಜನ್ಮ ದಿನಾಂಕ ಘೋಷಿಸುವಂತೆ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ (ಒ.ಎಸ್. 4724/2020) ದಾವೆ ಹೂಡಿದ್ದೆ. 2021ರ ಏ. 23ರಂದು ತೀರ್ಪು ನೀಡಿರುವ ಕೋರ್ಟ್, ನನ್ನ ಜನ್ಮದಿನವನ್ನು 1961 ನ. 14 ಎಂದು ಘೋಷಿಸಿದೆ. ಎಸ್ಸೆಸ್ಸೆಲ್ಸಿ ಅಂಕ ಪಟ್ಟಿಯಲ್ಲಿರುವ ಜನ್ಮ ದಿನಾಂಕ ಸರಿಪಡಿಸುವಂತೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೂ ಸೂಚಿಸಿದೆ. ಅದರಂತೆ, ಮಂಡಳಿ ಹೊಸ ಅಂಕಪಟ್ಟಿ ನೀಡಿದೆ' ಎಂದೂ ಅವರು ದಾಖಲೆಗಳನ್ನೂ ಸಲ್ಲಿಸಿದ್ದಾರೆ.

ಎಂದೂ ತಿಳಿಸಿದ್ದಾರೆ.

ಅಧಿಕಾರೇತರ ಅಥವಾ ಅಧಿಕಾರಿ ವಿಭಾಗದಿಂದ ಕೆಪಿಎಸ್‌ಸಿ ಸದಸ್ಯರಾಗಿ ನೇಮಕಗೊಂಡಿದ್ದರೂ, ನೇಮಕಗೊಂಡ ದಿನದಿಂದ 6 ವರ್ಷ ಅವಧಿ ಅಥವಾ 62 ವರ್ಷ ವಯಸ್ಸು ಈ ಪೈಕಿ ಯಾವುದು ಮೊದಲೋ ಅಲ್ಲಿಯವರೆಗೆ ಕರ್ತವ್ಯ ಸಲ್ಲಿಸಬಹುದು. ಆದರೆ, ಇನ್ನಷ್ಟು ದಿನ 'ಅಧಿಕಾರ'ದ ಕುರ್ಚಿಯಲ್ಲಿರಲು ಬಯಸಿರು ವ ಕೆಲವು ಸದಸ್ಯರು ಜನ್ಮ ದಿನಾಂಕವನ್ನೇ ತಿದ್ದಿದ್ದಾರೆ ಎಂದು ಆರೋಪಿಸಲಾಗಿದೆ. ಹೀಗಾಗಿ, ನಿಖರ ಮಾಹಿತಿ ಕೇಳಲಾಗಿದೆ.

ಯಾಕೆ ಈ ಗೊಂದಲ?: ಇದೇ ಜ.7ರಂದು ನಿವೃತ್ತಿಯಾಗಬೇಕಿದ್ದ ಕೆಪಿಎಸ್‌ಸಿ ಸದಸ್ಯ ಆರ್.ಲಕ್ಷ್ಮೀನಾರಾಯಣ ನಿವೃತ್ತಿಗೆ ಸಂಬಂಧಿಸಿದಂತೆ ಸೂಚನೆ ಬಂದಿಲ್ಲ ಎಂಬ ಕಾರಣಕ್ಕೆ ಜ. 12ವರೆಗೆ ಕರ್ತವ್ಯ ನಿರ್ವಹಿಸಿದ್ದರು. ಈ ಬಗ್ಗೆ ವೆಂಕಟೇಶ್ ಆರ್. ವರ್ಣೇಕರ್ ಎಂಬುವರು ರಾಜ್ಯಪಾಲರಿಗೆ ಜ.10ರಂದು ದೂರು ನೀಡಿದ್ದರು. ದೂರು ಸಲ್ಲಿಕೆಯಾಗಿದ್ದು ಗೊತ್ತಾಗುತ್ತಿದ್ದಂತೆ, ರಾಜ್ಯಪಾಲರಿಗೆ ಪತ್ರ ಬರೆದ (ಜ. 12ರಂದು) ಲಕ್ಷ್ಮೀನಾರಾಯಣ, '2017ರ ಅ. 30ರಿಂದ ನಾನು ಕೆಪಿಎಸ್‌ಸಿ ಸದಸ್ಯನಾಗಿದ್ದು, ನನ್ನ ಅವಧಿ ಜ. 7ರಂದು ಮುಕ್ತಾಯಗೊಂಡಿರುವ ಬಗ್ಗೆ ಸರ್ಕಾರದಿಂದ ಅಧಿಸೂಚನೆಗಾಗಿ ಕಾಯುತ್ತಿದ್ದೆ. ಆದರೆ, ನನಗೆ ಯಾವುದೇ ಪತ್ರ ಬಾರದಿರುವುದರಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹುದ್ದೆ ಬಿಟ್ಟುಕೊಡುತ್ತಿದ್ದೇನೆ' ಎಂದು ತಿಳಿಸಿದ್ದರು.

'ಕೈ' ಹಿಡಿದ ಎಸ್. ನಾರಾಯಣ್, ಪುರ್ಲೆ

ಬೆಂಗಳೂರು: ಸಿನಿಮಾ ನಿರ್ಮಾಪಕ, ನಿರ್ದೇಶಕ, ನಟ ಎಸ್. ನಾರಾಯಣ್ ಮತ್ತು ರಾಜ್ಯ ಪಿಯು ಉಪನ್ಯಾಸಕರ ಸಂಘದ ನಿಕಟಪೂರ್ವ ಅಧ್ಯಕ್ಷ ತಿಮ್ಮಯ್ಯ ಪುರ್ಲೆ ಅವರು ಬುಧವಾರ ಕಾಂಗ್ರೆಸ್ ಪಕ್ಷ ಸೇರಿದರು.

ಕೆಪಿಸಿಸಿ ಕಚೇರಿಯಲ್ಲಿ ಇಬ್ಬರಿಗೂ ಪಕ್ಷದ ಧ್ವಜ ನೀಡಿ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬರಮಾಡಿಕೊಂಡರು.

ಈ ವೇಳೆ ಮಾತನಾಡಿದ ಡಿ.ಕೆ. ಶಿವಕುಮಾರ್, 'ನಾರಾಯಣ್ ಅವರು ಪಕ್ಷದ ಸಿದ್ಧಾಂತ ಒಪ್ಪಿ ಸ್ವಇಚ್ಛೆಯಿಂದ ಸೇರುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಅವರು ತಮ್ಮ ಸಮುದಾಯ, ಚಿತ್ರರಂಗ, ವಾಣಿಜ್ಯ ಮಂಡಳಿ ಸೇರಿದಂತೆ ಎಲ್ಲ ಕಡೆ ಪಕ್ಷದ ಸಂಘಟನೆ ಮಾಡುವ ವಿಶ್ವಾಸವಿದೆ' ಎಂದರು.

'ಉತ್ತರ ಕರ್ನಾಟಕದ ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನವರಾದ ತಿಮ್ಮಯ್ಯ ಪುರ್ಲೆ, ರಾಜ್ಯ ಪಿಯುಸಿ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ. ಜೆಡಿಎಸ್‌ನಲ್ಲಿ ಕೆಲಸ ಮಾಡುತ್ತಿರುವ

> **ಬಿಜೆಪಿ ಸೇರಲು ಕಾಂಗ್ರೆಸ್ ಶಾಸಕರು ಸರದಿ ಸಾಲಲ್ಲಿ ನಿಂತಿರುವುದಾಗಿ ಹೇಳುತ್ತಿರುವ ಆ ಪಕ್ಷದ ಅಧ್ಯಕ್ಷರು, ತಡಮಾಡದೆ ಸೇರಿಸಿಕೊಳ್ಳಲಿ. ನನ್ನನ್ನು ಯಾರು ಸಂಪರ್ಕಿಸುತ್ತಿದ್ದಾರೆಂದು ಹೇಳುವುದಿಲ್ಲ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಅವರು ನಮಗೆ ಉತ್ತರ ಕರ್ನಾಟಕವಷ್ಟೆ ಅಲ್ಲ, ಇಡೀ ರಾಜ್ಯದಲ್ಲಿ ದೊಡ್ಡ ಶಕ್ತಿ ತುಂಬಲಿದ್ದಾರೆ' ಎಂದರು.

ಎಸ್. ನಾರಾಯಣ್ ಮಾತನಾಡಿ, 'ಕಾಂಗ್ರೆಸ್ ಪಕ್ಷ ಹಿಂದುಳಿದ ವರ್ಗಗಳ ಧ್ವನಿಯಾಗಿದೆ. ಜಾತ್ಯತೀತ ಸಿದ್ಧಾಂತ ನನಗೆ ಇಷ್ಟ. ನಾನು ವಿದ್ಯಾರ್ಥಿಯಾಗಿ ಕಾಂಗ್ರೆಸ್‌ಗೆ ಸೇರಿದ್ದೇನೆ. ಕಾಂಗ್ರೆಸ್ ಸೇರ್ಪಡೆ ನನಗೆ ಹೊಸ ಹುರುಪು ತಂದಿದೆ. ಪಕ್ಷಕ್ಕೆ ಹಗಲು ರಾತ್ರಿ ಕೆಲಸ ಮಾಡಲು ಸಿದ್ಧ. 2023ರ ಸಾರ್ವತ್ರಿಕ ಚುನಾವಣೆಗೆ ಪಕ್ಷ ಅಧಿಕಾರಕ್ಕೆ ಬರಬೇಕು. 2023ರ ಚುನಾವಣೆ-ಕಾಂಗ್ರೆಸ್ ಕರ್ನಾಟಕ ಎಂಬ ಘೋಷಣೆಯಡಿ ಕೆಲಸ ಮಾಡೋಣ' ಎಂದರು.

ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಉಲ್ಲೇಖ

ಬಿಬಿಎಂಪಿ ರಸ್ತೆಗಳು ಅತ್ಯಂತ ಅಪಾಯಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳು ಅತ್ಯಂತ ಅಪಾಯಕಾರಿ. ಪ್ರತಿ ಕಿಲೋ ಮೀಟರ್‌ಗೆ 19ರಿಂದ 20 ಅಪಾಯಗಳನ್ನು ಈ ರಸ್ತೆಗಳು ಹೊಂದಿವೆ' ಎಂದು ಭಾರತದ ಲೆಕ್ಕನಿಯಂತ್ರಕರು ಹಾಗೂ ಮಹಾಲೆಕ್ಕಪರಿಶೋಧಕರ (ಸಿಎಜಿ) ವರದಿ ತಿಳಿಸಿದೆ.

ಕರ್ನಾಟಕ ರಾಜ್ಯ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಕಾರ್ಯನಿರ್ವಹಣೆಯ ಕಾರ್ಯಕ್ಷಮತೆ ಕುರಿತ ಮಹಾಲೇಖಪಾಲರ ವರದಿಯನ್ನು ಉಭಯ ಸದನಗಳಲ್ಲಿ ಬುಧವಾರ ಮಂಡಿಸಲಾಯಿತು.

ರಸ್ತೆಗಳ ಸ್ಥಿತಿಗತಿಯ ಬಗ್ಗೆ 2014ರಿಂದ 2021ರ ಮಾರ್ಚ್‌ವರೆಗಿನ ಅವಧಿಯಲ್ಲಿ ಈ ಪರಿಶೋಧನೆಯನ್ನು ಕೈಗೊಳ್ಳಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ನಿರ್ವಹಿಸಿದ ದಾಖಲೆಗಳು, ಚಾಲನಾ ಪರವಾನಗಿಗಳ ವಿತರಣೆ ಮತ್ತು 108 ಆಂಬುಲೆನ್ಸ್‌ಗಳ ದತ್ತಾಂಶಗಳು ಸೇರಿದಂತೆ ವಿವಿಧ ಮಾಹಿತಿಗಳನ್ನು ವಿಶ್ಲೇಷಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ರಾಜ್ಯ ಹೆದ್ದಾರಿಗಳು, ಪ್ರಮುಖ ಜಿಲ್ಲಾ ರಸ್ತೆಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕ್ರಮವಾಗಿ ಪ್ರತಿ ಕಿ.ಮೀ.ಗೆ 8.87, 8.43 ಮತ್ತು 7.39 ಅಪಾಯದ ತಿರುವುಗಳಿವೆ. ರಸ್ತೆ ವಿನ್ಯಾಸದಲ್ಲಿನ ದೋಷ, ಫಲಕಗಳು ಮತ್ತು ವೇಗ ನಿಯಂತ್ರಕಗಳು ಸೇರಿದಂತೆ ವಿವಿಧ ಲೋಪಗಳು ಅಪಘಾತಕ್ಕೆ ಕಾರಣವಾಗುತ್ತಿವೆ ಎಂದು ಸಿಎಜಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯ 90 ಕಿ.ಮೀ. ರಸ್ತೆಯಲ್ಲಿ 1,737 ಅಪಾಯಗಳನ್ನು ಗುರುತಿಸಲಾಗಿದ್ದು, ಸರಾಸರಿ ಪ್ರತಿ ಕಿಲೋ ಮೀಟರ್‌ಗೆ 19.36 ಅಪಾಯಗಳನ್ನು ಗುರುತಿಸಲಾಗಿದೆ. ಗುಂಡಿಗಳ ಸೃಷ್ಟಿ ಮತ್ತು ಅವ್ಯವಸ್ಥೆಯಿಂದ ಕೂಡಿರುವ ಪಾದಚಾರಿ ಮಾರ್ಗಗಳು, ಅಸಮರ್ಪಕ ಒಳಚರಂಡಿ ವ್ಯವಸ್ಥೆ ರಸ್ತೆಯಲ್ಲಿನ ಸಮಸ್ಯೆಗಳಿಗೆ ಕಾರಣವಾಗಿವೆ. ಈ ಅಧ್ಯಯನಕ್ಕಾಗಿ 290 ರಸ್ತೆಗಳಲ್ಲಿ ಮತ್ತು 49 ರಸ್ತೆಗಳಲ್ಲಿನ ಒಳಚರಂಡಿಗಳನ್ನು ಪರಿಶೀಲಿಸಲಾಗಿದೆ. ಅಸಮರ್ಪಕ ರಸ್ತೆ ವಿಭಜಕಗಳು ಸಹ ಬಿಬಿಎಂಪಿ ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿನ ಅಪಘಾತಗಳಿಗೆ ಕಾರಣಗಳಾಗಿವೆ. ಅನಿರೀಕ್ಷಿತವಾಗಿ ಪಾದಚಾರಿಗಳು, ಜಾನುವಾರುಗಳು ಮತ್ತು ವಾಹನಗಳು ಪ್ರವೇಶಿಸುವದರಿಂದ ಅಪಾಯಕ್ಕೆ ಆಹ್ವಾನ ನೀಡಿದಂತಾಗುತ್ತಿದೆ. ಈ ಬಗ್ಗೆ ರಸ್ತೆ ನಿರ್ವಹಣೆ ಮಾಡುವ ಸಂಸ್ಥೆಗಳು ಮತ್ತು ಪೊಲೀಸ್ ಇಲಾಖೆ ಗಮನಹರಿಸಬೇಕಾಗಿದೆ ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ.

ಬಿಬಿಎಂಪಿಯಿಂದ ಪಡೆಯಲಾದ ರಸ್ತೆ ಆಸ್ತಿಗಳ ದತ್ತಾಂಶದ ಅನ್ವಯ, 1,400 ಕಿ.ಮೀ. ಉದ್ದದ ರಸ್ತೆಯಲ್ಲಿ ಶೇಕಡ 43 ರಸ್ತೆಗಳಲ್ಲಿ ಪಾದಚಾರಿ ಮಾರ್ಗವೇ ಇಲ್ಲ. ಪಾದಚಾರಿ ಮಾರ್ಗಗಳಿದ್ದರೂ ಹಲವಾರು ಕೊರತೆಗಳಿವೆ. ಈ ಪಾದಚಾರಿ ಮಾರ್ಗಗಳನ್ನು ಅಂಗಡಿಗಳು, ಹೋಟೆಲ್‌ಗಳು, ವಾಹನಗಳ ಪಾರ್ಕಿಂಗ್, ತ್ಯಾಜ್ಯ ಸುರಿಯಲು, ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲು ಬಳಸಲಾಗಿದೆ.

ಲಖಿಂಪುರ ಖೇರಿ: ಜಾಮೀನು ವಿಚಾರಣೆ ಆರಂಭ

ನವದೆಹಲಿ(ಪಿಟಿಐ): ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಅವರಿಗೆ ಅಲಹಾಬಾದ್ ಹೈಕೋರ್ಟ್ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ಬುಧವಾರ ನಡೆಸಿದ ಸುಪ್ರೀಂ ಕೋರ್ಟ್, ಈ ಕುರಿತು ಪ್ರತಿಕ್ರಿಯಿಸುವಂತೆ ಉತ್ತರ ಪ್ರದೇಶ ಸರ್ಕಾರ ಮತ್ತು ಆಶಿಶ್ ಮಿಶ್ರಾ ಅವರಿಗೆ ಸೂಚಿಸಿದೆ. ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಮತ್ತು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ವಿಶೇಷ ಪೀಠವು, ಈ ಪ್ರಕರಣದ ಸಾಕ್ಷಿಗಳ ರಕ್ಷಣೆಯನ್ನು ಖಚಿತಪಡಿಸಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು.

ಚಿತ್ರಾವಳಿ

ಮಾರಿಕಾಂಬಾ ಜಾತ್ರೆ ಶಿರಸಿ ಶ್ರೀ ಮಾರಿಕಾಂಬಾ ಜಾತ್ರೆಯ ರಥೋತ್ಸವದಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು. –ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ರಥೋತ್ಸವ ನಂಜನಗೂಡಿನಲ್ಲಿ ಬುಧವಾರ ಬೆಳಗಿನ ಜಾವ ನಡೆದ ಗೌತಮ ಪಂಚ ರಥೋತ್ಸವದಲ್ಲಿ ಲಕ್ಷಾಂತರ ಭಕ್ತರು ಸೇರಿದ್ದರು.

'ಹಿಜಾಬ್ ತೀರ್ಪು:ಸರ್ಕಾರ ಸ್ಪಷ್ಟನೆ ನೀಡಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಜಾಬ್ ಕುರಿತು ಹೈಕೋರ್ಟ್ ನೀಡಿರುವ ತೀರ್ಪು ಯಾವ ಶಾಲಾ-ಕಾಲೇಜುಗಳಲ್ಲಿ ಅನ್ವಯವಾಗುತ್ತದೆ, ಎಲ್ಲಿ ಅನ್ವಯಿಸುವುದಿಲ್ಲ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು' ಎಂದು ಸಾಮಾಜಿಕ ಕಾರ್ಯಕರ್ತರು ಹಾಗೂ ಚಿಂತಕರು ಆಗ್ರಹಿಸಿದ್ದಾರೆ.

ಚಿಂತಕರಾದ ಜಿ.ರಾಮಕೃಷ್ಣ, ಕೆ.ಮರುಳಸಿದ್ದಪ್ಪ, ಕೆ.ಎಸ್.ಪಾರ್ಥಸಾರಥಿ, ವೈದ್ಯರಾದ ಶ್ರೀನಿವಾಸ ಕಕ್ಕಿಲ್ಲಾಯ, ಲೇಖಕರಾದ ಎನ್. ಗಾಯತ್ರಿ, ಪೀರ್ ಬಾಷಾ, ವಕೀಲ ಮುರಳೀಧರ್, ಸಾಮಾಜಿಕ ಕಾರ್ಯಕರ್ತರಾದ ಎಚ್.ಜಿ.ಜಯಲಕ್ಷ್ಮಿ, ಅಮ್ಜದ್, ಶಂಕರ ಹಲಗತ್ತಿ, ಬಿ.ಆರ್.ಮಂಜುನಾಥ್, ಸಿದ್ದನಗೌಡ ಪಾಟೀಲ ಸೇರಿದಂತೆ ಹಲವರು ಈ ಆಗ್ರಹ ಮಾಡಿದ್ದಾರೆ.

'ಈ ಹಿಂದೆ ಸಮವಸ್ತ್ರವನ್ನು ಕಡ್ಡಾಯಗೊಳಿಸದಿದ್ದ, ಹಿಜಾಬ್‌ಗೆ ನಿರ್ಬಂಧ ಇಲ್ಲದಿದ್ದ ಶಾಲಾ ಕಾಲೇಜುಗಳು ಈ ತೀರ್ಪನ್ನು ಯಾವ ರೀತಿ ಅನ್ವಯಿಸುತ್ತಿದೆ ಎಂಬುದನ್ನು ಬಹಿರಂಗಪಡಿಸಬೇಕು' ಎಂದೂ ಒತ್ತಾಯಿಸಿದ್ದಾರೆ.

'ತೀರ್ಪಿನ ಬಗ್ಗೆ ವಿಭಿನ್ನ ವಿಶ್ಲೇಷಣೆಗಳು ನಡೆಯುತ್ತಿವೆ. ಕೆಲ ಶಕ್ತಿಗಳು ಭವಿಷ್ಯದಲ್ಲಿ ಈ ವಿಚಾರದಿಂದ ಗೊಂದಲ-ಗದ್ದಲ ಮಾಡುವ ಸಾಧ್ಯತೆಗಳನ್ನು ಸರ್ಕಾರ ನಿಯಂತ್ರಿಸಬೇಕು. 'ಹಿಜಾಬ್ ನಿಷೇಧ' ಎನ್ನುವ ಹೇಳಿಕೆಗಳು ತೀರ್ಪಿನ ತಿರುಚುವಿಕೆಯೇ ಆಗಿದ್ದು, ಇಂತಹ ಹೇಳಿಕೆಗಳಿಂದ ಗೊಂದಲ ಸೃಷ್ಟಿಸುವ ಹಾಗೂ ಮಕ್ಕಳ ಕಲಿಕೆಗೆ ಅಡ್ಡಿಪಡಿಸುವ ಸಾಧ್ಯತೆಗಳಿವೆ. ತೀರ್ಪಿನ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಲೇಬೇಕು' ಎಂದು ಆಗ್ರಹಿಸಿದ್ದಾರೆ.

'ಸರ್ಕಾರವು ಈ ಬಿಕ್ಕಟ್ಟಿನ ಸಂದರ್ಭದಲ್ಲಿ ವಿವೇಕಯುತ ನಿರ್ಧಾರ ತಳೆಯಬೇಕು. ಪಕ್ಷದ ಹಾಗೂ ಜೊತೆಗಾರ ಸಂಘಟನೆಗಳ ಹಿತಾಸಕ್ತಿಗಿಂತಲೂ ರಾಜ್ಯದ ಹಿತ ಮುಖ್ಯ ಎಂಬುದನ್ನು ಆಡಳಿತ ವೈಖರಿಯ ಮೂಲಕ ಸಾಬೀತು ಪಡಿಸಬೇಕು. ಸಂವಿಧಾನಬದ್ಧವಾಗಿ ಕೆಲಸ ಮಾಡುವ ಹಾಗೂ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವ ಜವಾಬ್ದಾರಿ ಮುಖ್ಯಮಂತ್ರಿ ಬೊಮ್ಮಾಯಿ ಅವರ ಮೇಲಿದೆ. ಯಾವುದೇ ಪಕ್ಷವು ಮತ ಗಳಿಕೆಗಾಗಿ ಈ ವಿಷಯವನ್ನು ಬಳಸಿಕೊಳ್ಳಲು ಪ್ರಯತ್ನಿಸಬಾರದು' ಎಂದೂ ಹೇಳಿದ್ದಾರೆ.

'ಸಮವಸ್ತ್ರವು ಧಾರ್ಮಿಕ ಆಚರಣೆಯ ಭಾಗವಾಗಿರಲಿ'

ನವದೆಹಲಿ: ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಭಾರತದ ಶಾಲೆ– ಕಾಲೇಜುಗಳಲ್ಲಿ ರೂಪಿಸಲಾದ ಸಮವಸ್ತ್ರ ನಿಯಮವು ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಯ ಭಾಗವಾಗಿರಬೇಕು ಎಂದು ವಿವಿಧ ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಪ್ರತಿಪಾದಿಸಿದರು.

ಬುಧವಾರ ಇಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಕೆಲವು ವಿದ್ಯಾರ್ಥಿನಿಯರು, ಹಿಜಾಬ್ ಕುರಿತಾಗಿ ಕರ್ನಾಟಕ ಹೈಕೋರ್ಟ್ ನೀಡಿರುವ ತೀರ್ಪಿನಿಂದ ತೀವ್ರ ನಿರಾಶೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಹಿಜಾಬ್ ಕುರಿತಾದ ಗೊಂದಲ ಹಾಗೂ ಸಮವಸ್ತ್ರದ ನಿಯಮಗಳ ಬಗ್ಗೆ ಆರೋಗ್ಯಕರ ಚರ್ಚೆ ಆಗಬೇಕಿತ್ತು ಎಂದು ವಿದ್ಯಾರ್ಥಿ ಸಂಘಟನೆಯ ಕಾರ್ಯಕರ್ತೆ ಹುಮಾ ಮಸೀಹ್ ಹೇಳಿದರು.

ಸಮವಸ್ತ್ರ ಕುರಿತಾದ ಬೆಳವಣಿಗೆಯು ಸಮುದಾಯಗಳನ್ನು ಒಳಗೊಳ್ಳುವ, ಪ್ರಜಾಪ್ರಭುತ್ವದ ಬಗೆಗಿನ ಚರ್ಚೆಯನ್ನು ಹುಟ್ಟುಹಾಕಬೇಕಿತ್ತು. ಆದರೆ, ಯಾರೂ ಈ ಬಗ್ಗೆ ಮಾತನಾಡುತ್ತಿಲ್ಲ ಎಂದು ಜಾಮಿಯಾ ಮಿಲಿಯಾದ ವಿದ್ಯಾರ್ಥಿ ನಾಯಕಿ ಸಿಮ್ರಾ ಅನ್ಸಾರಿ ಬೇಸರ ವ್ಯಕ್ತಪಡಿಸಿದರು.

ಕೆಲವು ನಿರ್ದಿಷ್ಟ ಸಿದ್ಧಾಂತದ ಜನರು ಇಂಥ ಸಮಸ್ಯೆಗಳನ್ನು ಸೃಷ್ಟಿಸುತ್ತ ಮುಸ್ಲಿಂ ಮಹಿಳೆಯರ ಹಕ್ಕುಗಳನ್ನು ಮೊಟಕುಗೊಳಿಸಲು ಮುಂದಾಗಿದ್ದಾರೆ. ಹಿಜಾಬ್ ಧರಿಸದಂತೆ ನಿರ್ಬಂಧಿಸಿರುವುದು ಮುಸ್ಲಿಂ ಮಹಿಳೆಯರು ಶಿಕ್ಷಣ ಪಡೆಯದಂತೆ ತಡೆಯುವ ವ್ಯವಸ್ಥಿತ ಸಂಚಾಗಿದೆ ಎಂದು ಅವರು ಆರೋಪಿಸಿದರು.

'ಮುಸ್ಲಿಂ ಮಹಿಳೆಯರು ಶಿಕ್ಷಣ ಪಡೆಯುವುದನ್ನು ಇಚ್ಛಿಸದ ಕೆಲವರು ಅಧ್ಯಯನ ಅಥವಾ ಹಿಜಾಬ್‌ಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ಒತ್ತಾಯಿಸುತ್ತಿದ್ದಾರೆ. ಆದರೆ, ನಾವು ಶಿಕ್ಷಣದ ಹಕ್ಕನ್ನು ಪ್ರತಿಪಾದಿಸುವುದರ ಮೂಲಕ ನಮ್ಮ ಗುರುತನ್ನು ಉಳಿಸಿಕೊಳ್ಳುತ್ತೇವೆ' ಎಂದು ಅವರು ಹೇಳಿದರು.

'ಮುಸ್ಲಿಂ ಮಹಿಳೆಯರು ಹಿಜಾಬ್ ಧರಿಸಿ ಸಾರ್ವಜನಿಕ ಸ್ಥಳಗಳಿಗೆ ತೆರಳಿದಾಗ ಅನೈತಿಕ ಪೊಲೀಸ್‌ಗಿರಿಗೆ ಒಳಗಾಗುವುದಿಲ್ಲ ಎಂಬುದನ್ನು ಹೇಳಲಾಗದು. ಅವರ ಮೇಲೆ ದಾಳಿ ನಡೆದರೆ ಅದಕ್ಕೆ ಯಾರು ಹೊಣೆ?' ಎಂದು ಪ್ರಶ್ನಿಸಿದ ಸಾಮಾಜಿಕ ಕಾರ್ಯಕರ್ತೆ ಖಾಲಿದಾ ಪರ್ವೀನ್, ಒಂದೆಡೆ, ಕೇಂದ್ರ ಸರ್ಕಾರವು 'ಬೇಟಿ ಬಚಾವೋ ಬೇಟಿ ಪಡಾವೋ' ಎಂದು ಹೇಳುತ್ತದೆ. ಇನ್ನೊಂದೆಡೆ, ಕರ್ನಾಟಕ ಸರ್ಕಾರವು ಅದಕ್ಕೆ ತದ್ವಿರುದ್ಧವಾಗಿ ವರ್ತಿಸುತ್ತಿದೆ' ಎಂದರು.

ಹಿಜಾಬ್ ನಿಷೇಧದ ಆದೇಶದ ವಿರುದ್ಧ ಪ್ರತಿಭಟನೆ ನಡೆಸಿದವರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಹಿಂದಕ್ಕೆ ಪಡೆಯಬೇಕು ಎಂದೂ ಅವರು ಇದೇ ವೇಳೆ ಒತ್ತಾಯಿಸಿದರು.

ಮೈಸೂರು: ಇಂದು ಬಂದ್‌ಗೆ ಕರೆ

ಮೈಸೂರು: ಹಿಜಾಬ್ ಕುರಿತ ಸರ್ಕಾರ ಹಾಗೂ ಹೈಕೋರ್ಟ್ ತೀರ್ಪಿಗೆ ಅಸಮಾಧಾನ ವ್ಯಕ್ತಪಡಿಸಿರುವ ಫೆಡರೇಷನ್ ಆಫ್ ಮುಸ್ಲಿಂ ಆರ್ಗನೈಜೇಷನ್ಸ್ ಮಾರ್ಚ್ 17ರಂದು ನಗರದ ಬಂದ್‌ಗೆ ಕರೆ ನೀಡಿದೆ.

ಇಲ್ಲಿನ ಉದಯಗಿರಿಯ ಜಂಜಂ ಛತ್ರದಲ್ಲಿ ಬುಧವಾರ ನಡೆದ ವಿವಿಧ ಸಂಘಟನೆಗಳ ಪ್ರಮುಖರ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.'ಶಾಂತಿಯುತ, ಸ್ವಯಂಪ್ರೇರಿತ ಬಂದ್ ನಡೆಸಿ ಅಸಮಾಧಾನ ವ್ಯಕ್ತಪಡಿಸಬೇಕಾಗಿದೆ. ಬಂದ್‌ನಲ್ಲಿ ಭಾಗವಹಿಸಬೇಕು ಎಂದು ಒತ್ತಾಯಿಸುವುದಿಲ್ಲ. ನಮ್ಮ ಭಾವನೆಗಳನ್ನು ಗೌರವಿಸಿ ಬಂದ್‌ಗೆ ಸಹಕರಿಸಬೇಕು' ಎಂದು ಮೌಲಾನ ಹರ್ಷದ್ ಅಹಮ್ಮದ್ ತಿಳಿಸಿದರು.

ಪಾಲಿಕೆ ಸದಸ್ಯರಾದ ಅಯೂಬ್‌ಖಾನ್, ಆರಿಫ್ ಹುಸೇನ್, ಸೈಯ್ಯದ ಹಸ್ರತ್ ಉಲ್ಲಾ, ಸಮೀ, ಮುಖಂಡರಾದ ಜಕಾವುಲ್ಲಾ, ಮೌಲಾನ ಸಲ್ಮಾನ್ ಸೇರಿ 10ಕ್ಕೂ ಹೆಚ್ಚು ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

'ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಬಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಸ್ತ್ರವಿವಾದದಿಂದಾಗಿ ಮುಸ್ಲಿಂ ವಿದ್ಯಾರ್ಥಿನಿಯರ ಶೈಕ್ಷಣಿಕ ಭವಿಷ್ಯ ಅತಂತ್ರಕ್ಕೆ ಸಿಲುಕಿದೆ. ವಿದ್ಯಾರ್ಥಿನಿಯರಿಗೆ ಈಗ ನಡೆಯಲಿರುವ ವಾರ್ಷಿಕ ಪರೀಕ್ಷೆಗಳಿಗೆ ಹಿಜಾಬ್ ಧರಿಸಿ ಹಾಜರಾಗಲು ಅನುಮತಿ ನೀಡಬೇಕು' ಎಂದು ಬಹುತ್ವ ಕರ್ನಾಟಕ ಸಂಘಟನೆ ಆಗ್ರಹಿಸಿದೆ.

'ಶಾಲಾ ಕಾಲೇಜುಗಳಲ್ಲಿ ವಸ್ತ್ರಸಂಹಿತೆ ಕುರಿತಾಗಿ ಹೈಕೋರ್ಟ್ ನೀಡಿರುವ ಆದೇಶ ಮುಸ್ಲಿಂ ಮಹಿಳೆಯರ ಆಯ್ಕೆಯ ಹಕ್ಕಿಗೆ ಧಕ್ಕೆ ಉಂಟುಮಾಡಿದೆ. ಸುಪ್ರೀಂ ಕೋರ್ಟ್ ಅವರ ಹಕ್ಕುಗಳನ್ನು ರಕ್ಷಿಸುವ ವಿಶ್ವಾಸವಿದೆ' ಎಂದೂ ಸಂಘಟನೆ ಹೇಳಿದೆ.

'ಹಲವಾರು ಸವಾಲುಗಳನ್ನು ಎದುರಿಸಿ, ಶಾಲೆಗಳತ್ತ ಮುಖ ಮಾಡಿದ್ದ ಹೆಣ್ಣುಮಕ್ಕಳನ್ನು ಈಗ ಶಾಲೆಯಿಂದಲೇ ಹೊರಹಾಕಲಾಗುತ್ತಿದೆ' ಎಂದು ಸಂಘಟನೆಯ ಮೈತ್ರೇಯಿ ಬೇಸರ ವ್ಯಕ್ತಪಡಿಸಿದರು.

ಗರ್ಲ್ಸ್ ಇಸ್ಲಾಮಿಕ್ ಆರ್ಗನೈಸೇಷನ್‌ನ ಕರ್ನಾಟಕ ಘಟಕದ ಅಧ್ಯಕ್ಷೆ ಸುಮೈಯಾ ರೋಷನ್,'ಹಿಜಾಬ್ ಹೆಸರಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡಲಾಯಿತು. ಇದರಿಂದ ಅವರು ಪ್ರಾಯೋಗಿಕ ಪರೀಕ್ಷೆಗಳಿಂದ ವಂಚಿತರಾದರು. ಈಗ ವಾರ್ಷಿಕ ಪರೀಕ್ಷೆಗಳಿಂದಲೂ ವಂಚಿತರಾದರೆ, ಅವರ ಶೈಕ್ಷಣಿಕ ಭವಿಷ್ಯಕ್ಕೆ ಪೆಟ್ಟು ಬೀಳಲಿದೆ' ಎಂದರು.

'ಪ್ರಜಾಪ್ರಭುತ್ವದಲ್ಲಿ ಹಕ್ಕುಗಳ ಉಲ್ಲಂಘನೆಯಾದಾಗ ದನಿ ಎತ್ತುವುದು ವಿರೋಧ ಪಕ್ಷಗಳ ಜವಾಬ್ದಾರಿ. ಈಗ ನಡೆಯುತ್ತಿರುವ ಅಧಿವೇಶನದಲ್ಲಿ ವಿರೋಧ ಪಕ್ಷಗಳು ಬದ್ಧತೆ ತೋರಬೇಕು' ಎಂದು ದಲಿತ ಸಂಘರ್ಷ ಸಮಿತಿಯ (ಭೀಮವಾದ) ರಾಜ್ಯ ಸಂಚಾಲಕ ಆರ್.ಮೋಹನ್‌ರಾಜ್ ಹೇಳಿದರು.

'ಮಹಿಳೆಯರ ಆಯ್ಕೆಯ ಹಕ್ಕಿಗೆ ಧಕ್ಕೆಯಾಗಿದೆ. ಶೋಷಿತ ಸಮುದಾಯವನ್ನು ಶಿಕ್ಷಣದಿಂದ ಹೊರಗಿಡುವ ಹುನ್ನಾರಗಳು ನಡೆಯುತ್ತಿವೆ' ಎಂದು ಕರ್ನಾಟಕ ಜನಶಕ್ತಿಯ ಎಸ್.ಗೌರಿ ಅಭಿಪ್ರಾಯಪಟ್ಟರು.

'ಮಹಿಳಾ ಶಿಕ್ಷಣದ ಮೇಲೆ ತೀರ್ಪಿನ ಪರಿಣಾಮ'

'ಹಿಜಾಬ್ ವಿಚಾರವಾಗಿ ಹೈಕೋರ್ಟ್ ನೀಡಿರುವ ತೀರ್ಪು ಮಹಿಳಾ ಶಿಕ್ಷಣದ ಮೇಲೆ ದೂರಗಾಮಿ ಪರಿಣಾಮ ಬೀರಲಿದೆ' ಎಂದು ನ್ಯಾಷನಲ್ ವುಮನ್ಸ್ ಫ್ರಂಟ್‌ನ (ಎನ್‌ಡಬ್ಲ್ಯುಎಫ್) ರಾಷ್ಟ್ರೀಯ ಅಧ್ಯಕ್ಷೆ ಲುಬ್ನಾ ಮೆಹನಾಝ್ ಕಳವಳ ವ್ಯಕ್ತಪಡಿಸಿದರು.

'ಕೋಮುಶಕ್ತಿಯೊಂದರ ಪ್ರೇರಿತ ಸಮಸ್ಯೆಯನ್ನು ಸಾಂವಿಧಾನಿಕ ಚೌಕಟ್ಟಿನಲ್ಲಿ ಬಗೆಹರಿಸಬೇಕಿದ್ದ ಬಿಜೆಪಿ ಸರ್ಕಾರ, ದ್ವೇಷ ಭಾವನೆಯಿಂದ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯ ಎಂದು ಆದೇಶಿಸಿತು. ಇದರಿಂದ ಮುಸ್ಲಿಂ ಸಮುದಾಯಕ್ಕೆ ಅಭದ್ರತೆಯ ಭಾವನೆ ಮೂಡಿತು' ಎಂದು ಅವರು ಹೇಳಿದರು.

'ಸ್ವಾತಂತ್ರ್ಯದ ನಂತರ ಮಹಿಳಾ ಸಾಕ್ಷರತೆ ಹೆಚ್ಚಾಗಿರುವುದು ಸಂತೋಷದಾಯಕ. ಹಿಜಾಬ್ ವಿಚಾರವಾಗಿ ನ್ಯಾಯದ ಕಾತರದಲ್ಲಿದ್ದ ಸಮುದಾಯಕ್ಕೆ ಅನ್ಯಾಯದ ತೀರ್ಪಿನಿಂದ ನೋವು ಉಂಟಾಗಿದೆ. ಇದರಿಂದ ಪ್ರತಿಗಾಮಿ ಶಕ್ತಿಗಳು ಸಂತೋಷಗೊಂಡಿವೆ' ಎಂದರು. 'ನ್ಯಾಯದ ಹಕ್ಕಿಗಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗುವ ಅವಕಾಶ ಇನ್ನೂ ಇದೆ. ಸಾಂವಿಧಾನಿಕ ಮತ್ತು ಧಾರ್ಮಿಕ ಹಕ್ಕಿಗಾಗಿ ಹೋರಾಡುತ್ತಿರುವ ವಿದ್ಯಾರ್ಥಿನಿಯರಿಗೆ ನ್ಯಾಷನಲ್ ವುಮನ್ಸ್ ಫ್ರಂಟ್ ಬೆಂಬಲ ನೀಡಲಿದೆ' ಎಂದರು.

'ಮುಸ್ಲಿಂ ವಿದ್ಯಾರ್ಥಿನಿಯರು ಪರೀಕ್ಷೆ ಬರೆಯಲು ಕ್ರಮವಹಿಸಿ'

ಬೆಂಗಳೂರು: 'ರಾಜ್ಯದ ಶಾಂತಿ ಸೌಹಾರ್ದ ಕಾಪಾಡಲು ಹಾಗೂ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಪರೀಕ್ಷೆಗಳಲ್ಲಿ ಭಾಗಿಯಾಗಲು ಸಾಧ್ಯವಾಗುವಂತೆ ಸರ್ಕಾರ ಅಗತ್ಯ ಕ್ರಮವಹಿಸಬೇಕು' ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿದೆ.

'ಹೈಕೋರ್ಟ್ ತೀರ್ಪಿನಿಂದ ಮುಸ್ಲಿಂ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ. ತಾರತಮ್ಯವಿಲ್ಲದೆ ಸಾರ್ವತ್ರಿಕ ಶಿಕ್ಷಣ ಪಡೆಯುವ ಹಕ್ಕಿಗೆ ಈ ತೀರ್ಪು ಹೊಡೆತ ನೀಡಲಿದೆ. ನೇರವಾಗಿ ಅಥವಾ ಪರೋಕ್ಷವಾಗಿ ಕೋಮುವಾದಿ ಮತ್ತು ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು ನೀಡಿದಂತಾಗಿದೆ. ಇದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ' ಎಂದು ಸಿಪಿಐ (ಎಂ) ಕಾರ್ಯದರ್ಶಿ ಯು.ಬಸವರಾಜ ತಿಳಿಸಿದ್ದಾರೆ.

'ಹೈಕೋರ್ಟ್ ತೀರ್ಪಿನ ವಿರುದ್ಧ ಸಲ್ಲಿಕೆಯಾಗಿರುವ ಮೇಲ್ಮನವಿಗಳ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಕೂಡಲೇ ಮಧ್ಯಪ್ರವೇಶಿಸಿ, ತಾರತಮ್ಯವಿಲ್ಲದ ಸಾರ್ವತ್ರಿಕ ಶೈಕ್ಷಣಿಕ ಹಕ್ಕನ್ನು ಖಾತರಿಪಡಿಸಬೇಕು' ಎಂದು ಅವರು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘವು ಎಸ್ಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಿದೆ.

ಶೇ 85ಕ್ಕಿಂತ ಹೆಚ್ಚು ಅಂಕ ಪಡೆದ ತಿಗಳ ಜನಾಂಗದ (ಅಗ್ನಿವಂಶ ಕ್ಷತ್ರಿಯ) ವಿದ್ಯಾರ್ಥಿಗಳು ಮಾ.23ರೊಳಗೆ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. **ವಿಳಾಸ:** ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ, ರಾಜಾಜಿ ನಗರ. ಸಂಪರ್ಕ:080-23200608

ಹೆಂಡತಿ ಕಾಲು ಕತ್ತರಿಸಿದ ಗಂಡ

ತುಮಕೂರು: ನಗರದ ಅಶೋಕ ಹೋಟೆಲ್‌ನಲ್ಲಿ ಬುಧವಾರ ವ್ಯಕ್ತಿಯೊಬ್ಬರು ಮಚ್ಚಿನಿಂದ ಹೆಂಡತಿ ಅನಿತಾ ಅವರ ಕಾಲು ಕತ್ತರಿಸಿದ್ದಾರೆ. ಕಾಲಿನ ಅರ್ಧಷ್ಟು ಭಾಗ ಕತ್ತರಿಸಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಗದಗ ಮೂಲದ ಬಾಬು ಎಂಬುವರು ಮಧುಗಿರಿಯ ಅನಿತಾ ಅವರನ್ನು ನಾಲ್ಕು ವರ್ಷದ ಹಿಂದೆ ಮದುವೆಯಾಗಿದ್ದರು. ಎರಡು ವರ್ಷಗಳಿಂದ ಇಬ್ಬರು ಪ್ರತ್ಯೇಕವಾಗಿದ್ದರು. ವಿಚ್ಛೇದನಕ್ಕಾಗಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು ಎನ್ನಲಾಗಿದೆ.

ಇಬ್ಬರು ಬುಧವಾರ ಹೋಟೆಲ್‌ಗೆ ಬಂದು ಕೊಠಡಿ ಪಡೆದಿದ್ದರು.

ಬಾರದ ಸಚಿವರು: ಸಿಟ್ಟಿಗೆದ್ದ ಶಾಸಕರಿಂದ ಪ್ರತಿಭಟನೆ

ರಾಜಕೀಯ ಮೇಲಾಟಕ್ಕೆ ಕಳೆಗುಂದಿದ ಸಮಾರಂಭ!

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಇಲ್ಲಿಯ ನಗರಸಭೆಯ ನೂತನ ಕಾರ್ಯಾಲಯವನ್ನು ಬುಧವಾರ ಉದ್ಘಾಟಿಸಬೇಕಿದ್ದ ಸಚಿವರು ಸಂಜೆಯವರೆಗೂ ಬಾರದ ಕಾರಣ ಸಿಟ್ಟಿಗೆದ್ದ ಕಾಂಗ್ರೆಸ್ ಶಾಸಕರು ತಾವೇ ಕಾರ್ಯಾಲಯ ಉದ್ಘಾಟಿಸಿ ತೆರಳಿದರು.

ಎರಡು ಬಾರಿ ಮುಂದೂಡಲಾಗಿದ್ದ ನಗರಸಭೆಯ ನೂತನ ಕಾರ್ಯಾಲಯ ಉದ್ಘಾಟನೆ ಕಾರ್ಯಕ್ರಮ ಮೂರನೇ ಬಾರಿಯೂ ಸಹ ರಾಜಕೀಯ ಮೇಲಾಟದಿಂದಾಗಿ ಗೊಂದಲದ ಗೂಡಾಗಿ ಪರಿಣಮಿಸಿತು.

ಎರಡು ಬಾರಿ ನೂತನ ಕಟ್ಟಡ ಉದ್ಘಾಟನೆ ದಿನಾಂಕ ನಿಗದಿಯಾಗಿ ಸಿದ್ಧತೆ ಪೂರ್ಣಗೊಂಡಿದ್ದರೂ ಕೊನೆಗಳಿಗೆಯಲ್ಲಿ ಮುಂದೂಡಲಾಗಿತ್ತು. ಮೂರನೇ ಬಾರಿಯಾದರೂ ನಿರ್ವಿಘ್ನವಾಗಿ ನಡೆಯಬೇಕಿದ್ದ ಸಮಾರಂಭ ಸಚಿವರ ವಿರುದ್ಧ ಧಿಕ್ಕಾರ ಘೋಷಣೆ ಮತ್ತು ಪ್ರತಿಭಟನೆಗಳೊಂದಿಗೆ ಮುಗಿಯಿತು.

ಅಂದಾಜು ₹5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ನಗರಸಭೆ ಕಚೇರಿ ಉದ್ಘಾಟನೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸುಧಾಕರ್, ಪೌರಾಡಳಿತ ಸಚಿವ ಎಂ.ಟಿ.ಬಿ ನಾಗರಾಜ್ ಅವರು ಬೆಳಿಗ್ಗೆ 11 ಗಂಟೆಗೆ ಆಗಮಿಸಬೇಕಿತ್ತು. ಆದರೆ, ಕೊನೆಗಳಿಗೆಯಲ್ಲಿ ಸಚಿವರ ಭೇಟಿ ಸಮಯ ಬದಲಾದ ಕಾರಣ ಕಾರ್ಯಕ್ರಮವನ್ನು ಸಂಜೆ 4 ಗಂಟೆಗೆ ಮುಂದೂಡಲಾಯಿತು. ಸಚಿವರಿಗಾಗಿ ಕಾಯ್ದು ಕುಳಿತಿದ್ದ ಶಾಸಕ ಟಿ. ವೆಂಕಟರಮಣಯ್ಯ ಹಿಂದಿರುಗಿದರು.

ಸಂಜೆ 4 ಗಂಟೆಗೆ ಮತ್ತೆ ಶಾಸಕ ಟಿ. ವೆಂಕಟರಮಣಯ್ಯ, ವಿಧಾನ ಪರಿಷತ್ ಸದಸ್ಯ ಎಸ್.ರವಿ ಅವರು ಕಾಂಗ್ರೆಸ್ ಪಕ್ಷದ ನಗರಸಭಾ ಸದಸ್ಯರು ಹಾಗೂ ಬಂದರು. ಸಂಜೆ 5 ಗಂಟೆವರೆಗೂ ಕಾದು ಕುಳಿತರೂ ಸಚಿವರು ಸುಳಿಯಲಿಲ್ಲ. ನಗರಸಭೆ ಅಧ್ಯಕ್ಷರು, ಉಪಾಧ್ಯಾಕ್ಷರು, ಪೌರಾಯುಕ್ತರು, ಬಿಜೆಪಿ ಹಾಗೂ ಜೆಡಿಎಸ್ ಕೆಲ ಸದಸ್ಯರು ಕಾರ್ಯಕ್ರಮಕ್ಕೆ ಬರಲಿಲ್ಲ.

ಇದರಿಂದ ಸಿಟ್ಟಿಗೆದ್ದ ಶಾಸಕ ಟಿ. ವೆಂಕಟರಮಣಯ್ಯ ಅವರು ತಮ್ಮ ಬೆಂಬಲಗರೊಂದಿಗೆ ನಗರಸಭೆಯ ನೂತನ ಕಚೇರಿ ಮುಂದೆಯೇ ಪ್ರತಿಭಟನೆ ನಡೆಸಿ ಸಚಿವರು ಹಾಗೂ ಬಿಜೆಪಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ನಗರಸಭೆಯ ಆವರಣದಲ್ಲಿ ಹಾಕಲಾಗಿದ್ದ ನಾಮಫಲಕವನ್ನು ಪೌರಕಾರ್ಮಿಕ ಮುತ್ತುರಾಜ್ ಮತ್ತು ಇತರ ಕಾರ್ಮಿಕರಿಂದ ಅನಾವರಣ ಮಾಡಿಸಿದರು. ಪೌರಕಾರ್ಮಿಕರು ಹಾಗೂ ನಗರಸಭೆ ಸದಸ್ಯೆ ರಜನಿ ಸುಬ್ರಹ್ಮಣಿ ಅವರ ಒಂದುವರೆ ವರ್ಷದ ಮಗಳಿಂದ ವೇದಿಕೆಯ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಸುಮಾರು ₹2 ಲಕ್ಷ ವೆಚ್ಚ ಮಾಡಿ ಊಟ, ಉಪಚಾರದ ವ್ಯವಸ್ಥೆ, ವೇದಿಕೆ ಮತ್ತು ಹೂವಿನ ಅಲಂಕಾರ ಮಾಡಲಾಗಿತ್ತು. ಆದರೆ,ನಗರಸಭೆಯ ಸಿಬ್ಬಂದಿಯೂ ಸಮಾರಂಭದಿಂದ ದೂರ ಉಳಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಹುದ್ದೆ ಭರ್ತಿ: ಉದ್ಯೋಗಾಕಾಂಕ್ಷಿಗಳಿಂದ ಪ್ರತಿಭಟನೆ ಇಂದು

ಬೆಂಗಳೂರು: ರಾಜ್ಯದಲ್ಲಿ ಖಾಲಿ ಇರುವ 'ಆರೋಗ್ಯ ನಿರೀಕ್ಷಣಾಧಿಕಾರಿ' ಹುದ್ದೆಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಿ ರಾಜ್ಯ ಆರೋಗ್ಯ ನಿರೀಕ್ಷಣಾಧಿಕಾರಿ ಉದ್ಯೋಗಾಕಾಂಕ್ಷಿಗಳ ಸಂಘವು ಮಾ.17ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಆರ್.ಶಿವರಾಜ್,'ರಾಜ್ಯದಲ್ಲಿ ಆರೋಗ್ಯ ಇಲಾಖೆಯ ಆರೋಗ್ಯ ನಿರೀಕ್ಷಣಾಧಿಕಾರಿ ಹುದ್ದೆಗಳು 7 ವರ್ಷಗಳಿಂದ ಖಾಲಿ ಇವೆ. ಇದರಿಂದ ಪ್ಯಾರಮೆಡಿಕಲ್ ವಿಭಾಗದಲ್ಲಿ 'ಡಿಪ್ಲೊಮ ಇನ್ ಹೆಲ್ತ್ ಇನ್‌ಸ್ಪೆಕ್ಟರ್' ವಿದ್ಯಾರ್ಹತೆ ಪೂರ್ಣಗೊಳಿಸಿರುವ 5 ಸಾವಿರಕ್ಕೂ ಹೆಚ್ಚು ಮಂದಿ ನಿರುದ್ಯೋಗಿಗಳಾಗಿಯೇ ಉಳಿದಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಗ್ರಾಮ ಪಂಚಾಯಿತಿ, ನಗರಸಭೆ, ಪುರಸಭೆ, ಪಾಲಿಕೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ಸರ್ಕಾರಿ ವಲಯದಲ್ಲಿನ ಈ ಹುದ್ದೆಗಳು ಖಾಲಿ ಇವೆ. ಇತ್ತ ಸರ್ಕಾರದಿಂದ ನೇಮಕಾತಿ ನಡೆಯದೆ, ಖಾಸಗಿ ವಲಯದಲ್ಲೂ ಉದ್ಯೋಗವಿಲ್ಲದೆ ಜೀವನಕ್ಕಾಗಿ ಪರದಾಡುತ್ತಿದ್ದೇವೆ' ಎಂದು ಕಣ್ಣೀರು ಹಾಕಿದರು.

ಸಂಘದ ಉಪಾಧ್ಯಕ್ಷೆ ಆರ್.ನೇತ್ರಾವತಿ,'ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸದ ಮುಂದೆ ಧರಣಿ ನಡೆಸಿದೆವು. ಕ್ರಮ ಕೈಗೊಳ್ಳುವುದಾಗಿ ಅವರೂ ಭರವಸೆ ನೀಡಿದರು. ಆರೋಗ್ಯ ಸಚಿವ ಕೆ.ಸುಧಾಕರ್ ಅವರಿಗೂ ಮನವಿ ಸಲ್ಲಿಸಲಾಗಿದೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಈ ಕಾರಣದಿಂದ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ರಾಜ್ಯದ ವಿವಿಧ ಜಿಲ್ಲೆಗಳ ಉದ್ಯೋಗಾಕಾಂಕ್ಷಿಗಳು ಪ್ರತಿಭಟನೆಗೆ ಸೇರಲಿದ್ದಾರೆ' ಎಂದರು.

ಹೊಂಬುಜ: 19ರಿಂದ ವಾರ್ಷಿಕ ಜಾತ್ರೆ

ಪ್ರಜಾವಾಣಿ ವಾರ್ತೆ

ರಿಪ್ಪನ್‌ಪೇಟೆ (ಶಿವಮೊಗ್ಗ ಜಿಲ್ಲೆ): ಜೈನರ ದಕ್ಷಿಣಕಾಶಿ ಎಂದೇ ಖ್ಯಾತಿ ಪಡೆದಿರುವ ಹೊಂಬುಜ ಅತಿಶಯ ಮಹಾಕ್ಷೇತ್ರದಲ್ಲಿ ಮಾರ್ಚ್ 19ರಿಂದ 27ರವರೆಗೆ ಭಗವಾನ್ ಪಾರ್ಶ್ವನಾಥ ಸ್ವಾಮಿ ಮತ್ತು ಜಗನ್ಮಾತೆ ಪದ್ಮಾವತಿ ದೇವಿಯ ವಾರ್ಷಿಕ ರಥೋತ್ಸವ ಮತ್ತು ಜಾತ್ರಾ ಮಹೋತ್ಸವ ನಡೆಯಲಿದೆ.

ದೌರ್ಜನ್ಯ ತಡೆ ಕಾಯ್ದೆ: ದೂರು ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆ-1989ರ ಜಾರಿಗೂ ಮುನ್ನ ನಡೆದ ಕೃತ್ಯವನ್ನು ಕಾಯ್ದೆ ಜಾರಿಯಾದ ನಂತರ ಅಪರಾಧ ಎಂದು ಪರಿಗಣಿಸಲಾಗದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನಮ್ಮ ವಿರುದ್ಧ ದಾಖಲಿಸಲಾದ ಖಾಸಗಿ ದೂರಿನ ಆಧಾರದಡಿ ತನಿಖೆಗೆ ಆದೇಶಿಸಿರುವ ಮ್ಯಾಜಿಸ್ಟ್ರೇಟ್ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಿ ಕಲಬುರಗಿ ಜಿಲ್ಲೆಯ ಚಿತ್ತಾಪುರ ನಿವಾಸಿ ಡಾ. ಶಾಂತರಾಜ್ ಟಿ.ಆರ್ ಸೇರಿದಂತೆ ಒಟ್ಟು ಆರು ಜನರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದೆ.

ಪೋಕ್ಸೊ ಕಾಯ್ದೆ ಪರಿಣಾಮಕಾರಿ ಜಾರಿ ಕೋರಿದ ಪಿಐಎಲ್

'ಮಾಹಿತಿ ನೀಡಿಕೆ ಕಡ್ಡಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ-2012ರ ಅಡಿಯಲ್ಲಿ ದಾಖಲಾಗುವ ಪ್ರಕರಣಗಳಲ್ಲಿ ಆರೋಪಿಯು ಜಾಮೀನು ಕೋರಿ ಅರ್ಜಿ ಸಲ್ಲಿಸಿದಾಗ ವಿಶೇಷ ನ್ಯಾಯಾಲಯಗಳು ಸಂತ್ರಸ್ತರ ಕುಟುಂಬಕ್ಕೆ, ಪೋಷಕರಿಗೆ ಅಥವಾ ಅವರ ವಕೀಲರಿಗೆ ಮಾಹಿತಿ ನೀಡುವುದು ಕಡ್ಡಾಯ' ಎಂದು ಹೈಕೋರ್ಟ್ ಆದೇಶಿಸಿದೆ.

'ಪೋಕ್ಸೊ ಕಾಯ್ದೆ-2012 ಹಾಗೂ ಪೋಕ್ಸೊ ನಿಯಮ-2020 ಅನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಿ ಮೂವರು ಸಂತ್ರಸ್ತರ ಪೋಷಕರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ವಿಭಾಗೀಯ ನ್ಯಾಯಪೀಠ, ಕೆಲವು ಮಹತ್ವದ ನಿರ್ದೇಶನಗಳನ್ನು ನೀಡಿದೆ.

ನಿರ್ದೇಶನಗಳು

- ಪೋಕ್ಸೊ ಪ್ರಕರಣದಲ್ಲಿ ಆರೋಪಿ ಜಾಮೀನು ಕೋರಿ ಅರ್ಜಿ ಸಲ್ಲಿಸಿದಾಗ ತನಿಖಾಧಿಕಾರಿ ಅಥವಾ ವಿಶೇಷ ಬಾಲನ್ಯಾಯ ಪೊಲೀಸ್ ಘಟಕವು ಸಂತ್ರಸ್ತರ ಪೋಷಕರು ಅಥವಾ ಪಾಲಕರು ಹಾಗೂ ಅವರನ್ನು ಪ್ರತಿನಿಧಿಸುವ ವಕೀಲರಿದ್ದರೆ ಅವರಿಗೆ ಮಾಹಿತಿ ನೀಡಬೇಕು.
- ಜಾಮೀನು ಅರ್ಜಿಗೆ ಪ್ರಾಸಿಕ್ಯೂಟರ್ ತಡಮಾಡದೆ ಆಕ್ಷೇಪಣೆ ಸಲ್ಲಿಸಬೇಕು. ಈ ವೇಳೆ ಪ್ರಾಸಿಕ್ಯೂಟರ್‌ಗೆ ತನಿಖಾಧಿಕಾರಿ ಹಾಗೂ ಸಂತ್ರಸ್ತರ ಕುಟುಂಬದವರು ಅಗತ್ಯ ಸಹಕಾರ ಹಾಗೂ ಮಾಹಿತಿ ಒದಗಿಸಬೇಕು.
- ಆಕ್ಷೇಪಣೆ ಸಲ್ಲಿಸಲು ಪ್ರಾಸಿಕ್ಯೂಟರ್, ತನಿಖಾಧಿಕಾರಿಯ ಸಹಾಯ ಪಡೆಯಬೇಕು.
- ಒಂದು ವೇಳೆ ಆರೋಪಿ ಸಂತ್ರಸ್ತ ಕುಟುಂಬಕ್ಕೆ ಪರಿಚಯಸ್ಥನೇ ಆಗಿದ್ದರೆ ಜಾಮೀನಿಗೆ ಸಲ್ಲಿಸಿರುವ ಆಕ್ಷೇಪಣೆಯ ದಾಖಲೆಗಳನ್ನು ಮಕ್ಕಳ ಕಲ್ಯಾಣ ಸಮಿತಿಗೂ (ಸಿಡಬ್ಲ್ಯುಸಿ) ಸಲ್ಲಿಸಬೇಕು.
- ಜಾಮೀನು ಅರ್ಜಿ ವಿಚಾರಣೆಗೂ ಮುನ್ನ ಸಂಬಂಧಿಸಿದ ನ್ಯಾಯಾಲಯವು; ಸಂತ್ರಸ್ತರ ಕುಟುಂಬಕ್ಕೆ ನೋಟಿಸ್ ಜಾರಿಯಾಗಿದೆಯೇ, ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು ಹಾಗೂ ಸಂತ್ರಸ್ತರ ವಾದ ಆಲಿಸಬೇಕು.
- ಒಂದು ವೇಳೆ ನೋಟಿಸ್ ಜಾರಿಯಾದ ನಂತರವೂ ಸಂತ್ರಸ್ತರ ಪರವಾಗಿ ಯಾರೂ ಹಾಜರಾಗದಿದ್ದರೆ ವಿಶೇಷ ನ್ಯಾಯಾಲಯ ತನ್ನ ವಿಚಾರಣಾ ಪ್ರಕ್ರಿಯೆ ಮುಂದುವರಿಸಬಹುದು.
- ಹೈಕೋರ್ಟ್‌ನ ಈ ಆದೇಶದ ಪ್ರತಿಯನ್ನು ಎಲ್ಲ ಸೆಷನ್ಸ್ ಕೋರ್ಟ್ ನ್ಯಾಯಾಧೀಶರು ಮತ್ತು ವಿಶೇಷ ಕೋರ್ಟ್‌ಗಳ ನ್ಯಾಯಾಧೀಶರಿಗೆ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ತಲುಪಿಸಬೇಕು. ರಾಜ್ಯ ಪೊಲೀಸ್ ಮಹಾನಿರ್ದೇಶಕರು ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಿಗೆ ಈ ಕುರಿತಂತೆ ಅಗತ್ಯ ಸೂಚನೆಗಳನ್ನು ನೀಡಬೇಕು.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052.
ಸಂ.: ಕವಶಿಸಸ/ಆಡಳಿತ/ಸಿ.ಆರ್–04/2021–22 ದಿನಾಂಕ: 16.03.2022
ಟೆಂಡರ್ ಪ್ರಕಟಣೆ
(ಇ–ಟೆಂಡರ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಗೆ ಚಾಲಕರ ಸಹಿತ ಬಾಡಿಗೆ ವಾಹನಗಳನ್ನು ಒದಗಿಸುವ ಕಾಮಗಾರಿಗೆ ಅರ್ಹ ಏಜೆನ್ಸಿಯನ್ನು ನೇಮಿಸಲು ಇ ಪೋರ್ಟಲ್ ಮುಖಾಂತರ ದಿನಾಂಕ: 17.03.2022 ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 16.04.2022 ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://eproc.karnataka.gov.in ರಲ್ಲಿ ನೋಡಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು, ಕ.ವ.ಶಿ.ಸ.ಸಂ.
ವಾಸಾಸಂಇ/ಉನಿನ/ಎಲ್‌ಸಿ/3794/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

भारतीय प्रबंध संस्थान बेंगलूर
INDIAN INSTITUTE OF MANAGEMENT BANGALORE
NOTICE INVITING TENDER
Applications from reputed companies/individuals are invited, on or before 05th April 2022, in the prescribed format, for Appointment of Licensee for Lease of the Cafeteria, at Indian Institute of Management Bangalore.
For further details, please log on to: www.iimb.ac.in/tender_notices
Chief Administrative Officer

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ರಾಮನಗರ. ದೂರವಾಣಿ: 080–27271104
ಸಂಖ್ಯೆ: ಡಿಎಂ/ಸಿಬ್ಬಂದಿ-1/ಹೊ.ಸಂ.ಟೆಂಡರ್/ಸಿ.ಆರ್–45/2021–22 ದಿನಾಂಕ: 16.03.2022
ಮರು ಟೆಂಡರ್ ಪ್ರಕಟಣೆ
ರಾಮನಗರ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಹೊರಸಂಪನ್ಮೂಲ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಎರಡು ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸಂಸ್ಥೆಯವರು https://eproc.karnataka.gov.in/ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಟೆಂಡರ್ ಅಂದಾಜು ಮೊತ್ತ	ಪಾವತಿಸಬೇಕಾದ ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ
ರೂ. 168.55 ಲಕ್ಷಗಳು	ರೂ. 2,52,836/–	16.03.2022	31.03.2022 ಸಂಜೆ 4.00 ಗಂಟೆಗೆ

(ಸಹಿ/–) ಜಿಲ್ಲಾ ಅಧಿಕಾರಿಗಳು
ವಾಸಾಸಂಇ/ರಾನ/ಬ್ರಾಂಚ್/546/2021–22 ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ
ಕ್ರಸಂ:ಟೆಂಡರ್ ಅಧಿಸೂಚನೆ/5054 ಎಸ್.ಡಿ.ಪಿ.//ಅಧಿಸೂಚನೆ: 2021–22/3440 ದಿನಾಂಕ: 10.03.2022
ಇ–ಟೆಂಡರ್ ಅಧಿಸೂಚನೆ IFT-KW-3
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ) (ಅಲ್ಪಾವಧಿ)
ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಒಟ್ಟು 2 ಕಾಮಗಾರಿಗಳು.
(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 21–03–2022 (16.00 ಗಂಟೆಗೆ)
(2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 22–03–2022 (16.00 ಗಂಟೆವರೆಗೆ)
(3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23–03–2022 (16.30 ಗಂಟೆವರೆಗೆ)
(4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 25–03–2022 (16.00 ಗಂಟೆವರೆಗೆ)
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ ಲೋಕೋಪಯೋಗಿ ಇಲಾಖೆ, ವಿಭಾಗ ಶಿರಸಿ (ಉತ್ತರ ಕನ್ನಡ ಜಿಲ್ಲೆ)
DIPR/ADK/MCA/903/21-22 dt.15.03.2022

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ಸಂಖ್ಯೆ: ಕಾಇಂ:ಲೋಇ:ಜೆಇ:–1:2021–22 ದಿನಾಂಕ :15.03.2022
ಟೆಂಡರ್ ಸ್ವೀಕೃತಿ ದಿನಾಂಕದಲ್ಲಿ ಬದಲಾವಣೆ
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 43/2021–22 ದಿನಾಂಕ :11.03.2022
ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಈ ಇಲಾಖೆಯಿಂದ ಹೊರಡಿಸಲಾದ ಮೆಲ್ಕಂಡ ಪ್ರಕಟಣೆಯಲ್ಲಿನ ಕ್ರಮ ಸಂಖ್ಯೆ 5 ಮತ್ತು 6 ನೇ (ವರ್ಕ್ ಇಂಡೆಂಟ್ ಸಂಖ್ಯೆ:150507 ಹಾಗೂ150622) ಕಾಮಗಾರಿಗಳ ಟೆಂಡರ್ ಸ್ವೀಕೃತಿ ಕೊನೆ ದಿನಾಂಕ : 22.03.2022 ಸಂಜೆ 5.00 ಗಂಟೆ ಎಂದು ಓದಿಕೊಳ್ಳುವುದು. ಉಳಿದ ಕಾಮಗಾರಿಗಳ ದಿನಾಂಕಗಳಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ.
ಸಹಿ – ಕಾರ್ಯಪಾಲಕ ಇಂಜನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಿಯು ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ಬೋಧನಾ ಸರಣಿ
ಕೆಮಿಸ್ಟ್ರಿ ಟಿಪ್ಸ್
ಶ್ರೀಮತಿ ಅಶ್ವಿನಿ ಎ
ರಸಾಯನಶಾಸ್ತ್ರ ಉಪನ್ಯಾಸಕರು, ಕಲಬುರಗಿ

ಸಂಜೆ 4 ರಿಂದ 6 ರವರೆಗೆ
ಮಿಸಳ್ ಹಾಪ್ಚಾ
ವಿಜಯಪುರದ ಸಿಹಿ ದ್ರಾಕ್ಷಿ ಸವಿ
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, ಸಂಪಾದಕೀಯ: ಬೆಳಿಗ್ಗೆ 9.30, ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:KW-4:ಟೆಂ:2021–22: 4840 ದಿನಾಂಕ:11–03–2022.
ಅಲ್ಪಾವಧಿ ಟೆಂಡರ್ ಪ್ರಕಟಣೆ
2021–22ನೇ ಸಾಲಿನ ಲೆಕ್ಕ ಶೀರ್ಷಿಕೆ: 3054–ರಾಜ್ಯ ಹೆದ್ದಾರಿಗಳ ರಸ್ತೆ ನಿರ್ವಹ2021–22ನೇ ಸಾಲಿನ ಲೆಕ್ಕ ಶೀರ್ಷಿಕೆ 3054–04–337–1–10 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ 422 ಪರಿಶಿಷ್ಟ ಜಾತಿ ಉಪಯೋಜನೆ ಅಡಿಯಲ್ಲಿ ಮಂಜೂರಾದ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW-3ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in. ಮುಖಾಂತರ ಭಾಗವಹಿಸಬಹುದು. ಕಾಮಗಾರಿ ವರ್ಕ ಇಂಡೆಂಟ್ ಸಂಖ್ಯೆ: 150260 ಅಂದಾಜು ಮೊತ್ತ 100.00 ಲಕ್ಷಗಳು ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ದಿನಾಂಕ: 11–03–2022ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: 22–03–2022 ಸಮಯ 16.00 ಗಂಟೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 23–03–2022 ಸಮಯ 16.30 ಗಂಟೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 25–03–2022 ಸಮಯ 11.00 ಗಂಟೆ,ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಇ.ಎಂ.ಡಿ., ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣಗಳಿಗಾಗಿ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳುವುದು.
ಸಹಿ/–ಕಾರ್ಯನಿರ್ವಾಹಕ ಇಂಜನೀಯರು, ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/601/ಎಂಸಿಎ/2021–22

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001
ದೂರವಾಣಿ: 080–22215601, 22211246 ಫ್ಯಾಕ್ಸ್: 22215602
ಸಂಖ್ಯೆ:ಡಿವೈಇಎಸ್/ಸಿ5/150/2021–22 ದಿನಾಂಕ: 13.03.2022
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಉಪ ನಿರ್ದೇಶಕರು (ಆಡಳಿತ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001 ಕರ್ನಾಟಕ ಇವರು "ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್–2021 ಕ್ರೀಡಾಕೂಟದ ಆಯೋಜನೆಗೆ ಸಂಬಂಧಿಸಿದಂತೆ ಸಂಘಟನಾ ಸ್ಥಳಗಳಿಗೆ ಪರಿಕರಗಳು ಹಾಗೂ ICT ಸೇವೆ ಪಡೆಯಲು ಇ–ಟೆಂಡರ್ ಮೂಲಕ ಗುತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದೆ.
ಟೆಂಡರ್ ಮೊತ್ತ : ರೂ. 7,56,89,625/–. ಇಎಂಡಿ ಮೊತ್ತ : ರೂ. 11,35,344/–.
ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. 1) ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 23.03.2022ರ ಸಂಜೆ 4.30 ಗಂಟೆಯವರೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24.03.2022ರ ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/– ಉಪ ನಿರ್ದೇಶಕರು (ಆಡಳಿತ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.
ವಾಸಾಸಂಇ/ಬೆಂನ/ಜಿಎ/3783/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
59, ರಿಚ್‌ಮಂಡ್ ರಸ್ತೆ, ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ ಬೆಂಗಳೂರು – 25
Ph: 080 – 25584102 / 25594893, Website: www.ksphc.org
e-mail: eecontractksphc@gmail.com
No.: EE/KSPH&IDCL/CNT/TND/2021-2022/907 Date: 16.03.2022
ಅಲ್ಪಾವಧಿ ಟೆಂಡರ್ ಅಧಿಸೂಚನೆ ಪ್ರಕಟಣೆ
ಕೆಎಸ್‌ಪಿಹೆಚ್ & ಐಡಿಸಿಎಲ್ "ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಗೃಹ–2025 ಹಂತ 2ರ ಅಡಿಯಲ್ಲಿ ಪೊಲೀಸ್ ಕ್ವಾರ್ಟರ್ಸ್‌ಗಳ ನಿರ್ಮಾಣದ ಕಾಮಗಾರಿ"ಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಆನ್‌ಲೈನ್ ಟೆಂಡರ್ ಅನ್ನು ಆಹ್ವಾನಿಸಲಾಗುತ್ತಿದೆ.
ಆಸಕ್ತ ವರ್ಗ 1 ಮತ್ತು ಮೇಲಿನ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.
ಹೆಚ್ಚಿನ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 22.03.2022 ರಿಂದ ಲಭ್ಯವಿದೆ.
"ಕೆಎಸ್‌ಪಿಹೆಚ್ & ಐಡಿಸಿಎಲ್ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ."
ಸೂಚನೆ: ಯಾವುದೇ ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು–ಗುತ್ತಿಗೆ ಪ್ರಭಾರ
ವಾಸಾಸಂ/ಬೆಂ.ನ/ಎಎಎ/3790/2021–2022
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆದಿತ್ಯ ರಾವ್‌ಗೆ 20 ವರ್ಷ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಾಂಬ್ ಇಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ, ಆರೋಪಿ ಆದಿತ್ಯ ರಾವ್‌ಗೆ ಜಿಲ್ಲಾ 4ನೇ ಹೆಚ್ಚುವರಿ ನ್ಯಾಯಾಲಯವು 20 ವರ್ಷ ಜೈಲು ಶಿಕ್ಷೆ ಮತ್ತು ₹10 ಸಾವಿರ ದಂಡ ವಿಧಿಸಿ ಆದೇಶ ನೀಡಿದೆ.

ಸ್ಫೋಟಕ ವಸ್ತು ತಡೆ ಕಾಯ್ದೆ ಅಡಿ 5 ವರ್ಷ ಹಾಗೂ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿ 20 ವರ್ಷ ಶಿಕ್ಷೆ ವಿಧಿಸಿ ಬುಧವಾರ ಆದೇಶ ನೀಡಿದೆ. ಎರಡೂ ಶಿಕ್ಷೆಗಳು ಏಕ ಕಾಲದಲ್ಲಿ ಜಾರಿಯಾಗಲಿವೆ.

ಘಟನೆ ಹಿನ್ನೆಲೆ: 2020ರ ಜನವರಿ 20ರಂದು ರಿಕ್ಷಾ ಒಂದರಲ್ಲಿ ಮಂಗಳೂರು ವಿಮಾನ ನಿಲ್ದಾಣಕ್ಕೆ ಬಂದಿದ್ದ ಆದಿತ್ಯ ರಾವ್, ಸ್ಫೋಟಕ ವಸ್ತು ತುಂಬಿದ್ದ ಬ್ಯಾಗ್‌ಅನ್ನು ನಿರ್ಗಮನ ದ್ವಾರ ಸಮೀಪದ ಟಿಕೆಟ್ ಕೌಂಟರ್ ಬಳಿಯ ಆಸನದ ಮೇಲಿಟ್ಟು ಪರಾರಿಯಾಗಿದ್ದ. ಸಿಸಿಟಿವಿ ಕ್ಯಾಮೆರಾದಲ್ಲಿ ಇದು ಸೆರೆಯಾಗಿತ್ತು.

ಇದಾಗಿ ಕೆಲವು ದಿನಗಳ ನಂತರ ಆದಿತ್ಯ ರಾವ್ ಬೆಂಗಳೂರಿನಲ್ಲಿ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ಶರಣಾಗಿದ್ದ. ಆತನನ್ನು ಹಲಸೂರು ಗೇಟ್ ಪೊಲೀಸ್ ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಲಾಗಿತ್ತು. ನಂತರ ಮಂಗಳೂರು ಪೊಲೀಸ್ ತಂಡ ಬೆಂಗಳೂರಿಗೆ ತೆರಳಿ ಆದಿತ್ಯನನ್ನು ಬಂಧಿಸಿ ಮಂಗಳೂರಿಗೆ ಕರೆ ತಂದಿತ್ತು.

ಆದಿತ್ಯ ರಾವ್

ವಿಚಾರಣೆ ಆರಂಭವಾಗುತ್ತಿದ್ದಂತೆಯೇ ತಾನು ತಪ್ಪಿತಸ್ಥ ಎಂಬುದನ್ನು ಆದಿತ್ಯ ಒಪ್ಪಿಕೊಂಡಿದ್ದ. ಆದರೆ ಇದು ಗಂಭೀರ ಪ್ರಕರಣವಾಗಿದ್ದರಿಂದ ಅಪರಾಧ ಸಾಬೀತಾಗಲೇಬೇಕು ಎಂದು ನ್ಯಾಯಾಲಯ ಸೂಚಿಸಿದ್ದರಿಂದ ಕ್ರಮದಂತೆ ವಿಚಾರಣೆ ನಡೆದಿದೆ ಎಂದು ಸರ್ಕಾರದ ಪರ ವಕೀಲ ಹರೀಶ್ ಉದ್ಯಾವರ ತಿಳಿಸಿದರು.

ಆದಿತ್ಯ ರಾವ್ ವಿರುದ್ಧ 700 ಪುಟಗಳ ದೋಷಾರೋಪಣೆ ಪಟ್ಟಿಯನ್ನು ತನಿಖಾಧಿಕಾರಿಗಳು ಮಂಗಳೂರಿನ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು ಆತನನ್ನು ತಪ್ಪಿತಸ್ಥ ಎಂದು ಘೋಷಿಸಿ, ಶಿಕ್ಷೆ ವಿಧಿಸಿದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
Phone No: 0836-2747944, Fax No. 0836-2747944. Email.ID :eepwddha@gmail.com
ಸಂ.ಕ್ರಸಂ : ಕಾನಿಇಂ/ಲೋಇ/ಧಾ/ಪಿಬಿ–7/ಟೆಂಡರ/2021–22/10236 ದಿನಾಂಕ:–16–03–2022
ಅಲ್ಪಾವಧಿ ಟೆಂಡರ ಪ್ರಕಟಣೆ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ ಡಾಕ್ಯೂಮೆಂಟ್ ಕೆ ಡಬ್ಲ್ಯೂ–4 ರ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ (e-Procurement) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರಗಳನ್ನು ಅಹ್ವಾನಿಸಲಾಗಿದೆ. ಧಾರವಾಡ ವಿಭಾಗ ವ್ಯಾಪ್ತಿಯಲ್ಲಿ ಸಂಬಂಧಿಸಿದಂತೆ ಲೆಕ್ಕ ಶೀರ್ಷಿಕೆ 2022–23 ನೇ ಸಾಲಿನ 2059–80–053–4–00–200 ಕಟ್ಟಡಗಳ ದುರಸ್ತಿ ಹಾಗೂ ನಿರ್ವಹಣೆ (ಅಡಿಯ ಒಟ್ಟು 01), 2216–07–053–0–01–200 ವಸತಿ ಕಟ್ಟಡಗಳ ನಿರ್ವಹಣೆ (ಅಡಿಯ ಒಟ್ಟು 01) ಕಾಮಗಾರಿಗಳ ಟೆಂಡರ ಪ್ರಕ್ರೀಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.
1) ಆಕ್ಷೇಪಣೆ–ಸಂದೇಹ ಮತ್ತು ವಿವರಣೇಗಳಿಗೆ ಕೊನೆಯ ದಿನಾಂಕ: 23/03/2022 (ಸಾಯಂಕಾಲ 5:30 ಗಂಟೆಯವರೆಗೆ) 2) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 24/03/2022 (ಸಾಯಂಕಾಲ 4:00 ಗಂಟೆಯವರೆಗೆ) 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25/03/2022 (ಸಾಯಂಕಾಲ 4:00 ಗಂಟೆಯ ನಂತರ) 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 28/03/2022 (ಸಾಯಂಕಾಲ 4:30 ಗಂಟೆಯ ನಂತರ)
ಕಾಮಗಾರಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ http://www.eproc.karnataka.gov.in ದಲ್ಲಿ ಹಾಗೂ ಲೋಕೊಪಯೋಗಿ ಇಲಾಖೆ ಧಾರವಾಡ ವಿಭಾಗ ಕಛೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/–(ಶ್ರೀ.ಎಸ್.ಬಿ. ಚೌಡಣ್ಣವರ) ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ವಾ.ಸಾ.ಇ./ಧಾ/1150/2021–22/ದೇಶಪಾಂಡೆಪಬ್ಲಿಸಿಟಿ

ವಿಭಜಕಕ್ಕೆ ಟ್ರ್ಯಾಕ್ಸ್ ಡಿಕ್ಕಿ; ಐವರ ಸಾವು

ಪ್ರಜಾವಾಣಿ ವಾರ್ತೆ

ಕಾನಹೊಸಹಳ್ಳಿ (ವಿಜಯನಗರ ಜಿಲ್ಲೆ): ಸಮೀಪದ ಬಣವಿಕಲ್ಲು ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಮಂಗಳವಾರ ತಡರಾತ್ರಿ ಟ್ರ್ಯಾಕ್ಸ್ ಪಲ್ಟಿಯಾಗಿ ಐವರು ಮೃತಪಟ್ಟಿದ್ದು, ಒಂಬತ್ತು ಜನರಿಗೆ ಗಾಯಗಳಾಗಿವೆ.

ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ವಂದಾಲ ಗ್ರಾಮದ ಚಾಲಕ ಸಿದ್ದಯ್ಯ ಕಾಳಗಿ (42), ನಿಡಗುಂದಿಯ ಕಲ್ಲವ್ವ (60), ಕಿರಾಳ್ ಗ್ರಾಮದ ಕುಂತ್ತವ್ವ (50), ಆಲಮಟ್ಟಿಯ ನೀಲಮ್ಮ (54) ಹಾಗೂ ನಿಡಗುಂದಿಯ ಲಕ್ಷ್ಮಿ ಬಾಯಿ (60) ಮೃತರು. ಗಾಯಗೊಂಡ ಒಂಬತ್ತು ಜನರ ಪೈಕಿ ಕೆಲವರನ್ನು ಕೂಡ್ಲಿಗಿ, ಮತ್ತೆ ಕೆಲವರನ್ನು ಬಳ್ಳಾರಿಯ ವಿಮ್ಸ್, ದಾವಣಗೆರೆ ಆಸ್ಪತ್ರೆಗಳಿಗೆ ಕಳುಹಿಸಿಕೊಡಲಾಗಿದೆ. ಕೂಡ್ಲಿಗಿ ತಾಲ್ಲೂಕಿನ ಕಾನಹೊಸಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಗುಂಬೆ ಘಾಟಿ ಸಂಚಾರ ಮುಕ್ತ

ತೀರ್ಥಹಳ್ಳಿ: ರಾಷ್ಟ್ರೀಯ ಹೆದ್ದಾರಿ– 169 (ಎ) ಮಾರ್ಗದ ಆಗುಂಬೆ– ಹೆಬ್ರಿ ಸಂಪರ್ಕದ ರಸ್ತೆ ಬುಧವಾರದಿಂದ ವಾಹನ ಸಂಚಾರಕ್ಕೆ ಮುಕ್ತಗೊಂಡಿದೆ.

ಹೆದ್ದಾರಿಗೆ ಡಾಂಬರು ಹಾಕುತ್ತಿರುವುದರಿಂದ ಮಾರ್ಚ್ 5ರಿಂದ 15ರವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಶೃಂಗೇರಿ ಉಪ ವಿಭಾಗದ ತಾಂತ್ರಿಕ ವಿಭಾಗದಿಂದ 18 ಕಿ.ಮೀ ದೂರ ದವರೆಗೆ ₹ 5.34 ಕೋಟಿ ವೆಚ್ಚದ ಕಾಮಗಾರಿ ನಡೆದಿದೆ. ತೀರ್ಥಹಳ್ಳಿಯ 'ನ್ಯಾಷನಲ್ ನಿರ್ಮಾಣ ಸಂಸ್ಥೆ' ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಿದ್ದು, ಹಲವು ವರ್ಷಗಳಿಂದ ಕಾಡುತ್ತಿದ್ದ ಹೊಂಡಗಳಿಂದ ಮುಕ್ತಿ ದೊರೆತಂತಾಗಿದೆ.

ತಣಿಯದ ಹಿಜಾಬ್ ಕಾವು

ಒಂದನೇ ಪುಟದಿಂದ...

'ಹಿಜಾಬ್ ಕುರಿತಂತೆ ಹೈಕೋರ್ಟ್ ನೀಡಿರುವುದು ಅನ್ಯಾಯದ ತೀರ್ಪು. ಇದಕ್ಕೆ ಇಡೀ ಮುಸ್ಲಿಂ ಸಮುದಾಯದ ವಿರೋಧವಿದೆ. ಬಂದ್‌ಗೆ ಬೆಂಬಲ ನೀಡುತ್ತೇವೆ' ಎಂದು 'ಪಾಪ್ಯುಲರ್ ಫ್ರಂಟ್ ಆಫ್' ಇಂಡಿಯಾದ ಕರ್ನಾಟಕ ಘಟಕದ ಅಧ್ಯಕ್ಷ ಯಾಸಿರ್ ಹಸನ್ ಅವರು ತಿಳಿಸಿದರು.

'ಜಮಾತ್ ಇ ಇಸ್ಲಾಮಿ ಹಿಂದ್–ಕರ್ನಾಟಕ'ದ ಉಪಾಧ್ಯಕ್ಷ ಮೊಹಮ್ಮದ್ ಯೂಸುಫ್ ಖನ್ನಿ, 'ನಮ್ಮದು ಬಹುಸಂಸ್ಕೃತಿ ಹಾಗೂ ಬಹುಧರ್ಮಗಳ ದೇಶ. ಹಿಜಾಬ್ ವಿಚಾರದಲ್ಲಿ ಮುಸ್ಲಿಂ ಧರ್ಮಕ್ಕೆ ತಾರತಮ್ಯ ಮಾಡಲಾಗುತ್ತಿದೆ. ಇದನ್ನು ವಿರೋಧಿಸಿ, ಸಮುದಾಯದವರು ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ, ಶಾಂತಿಯುತವಾಗಿ ಬಂದ್ ನಡೆಸಲಿದ್ದೇವೆ' ಎಂದರು.

'ಫೆಡರೇಷನ್ ಆಫ್ ಮುಸ್ಲಿಂ ಆರ್ಗನೈಜೇಷನ್ಸ್' ಸಂಸ್ಥೆಯು ಮೈಸೂರು ಬಂದ್ ನಡೆಸಲು ಉದ್ದೇಶಿಸಿದೆ. ಭಟ್ಕಳದ ತಂಝೀಂ ಸಂಘಟನೆಯೂ ಬಂದ್‌ಗೆ ಬೆಂಬಲ ನೀಡುವುದಾಗಿ ಘೋಷಿಸಿದೆ.

ನಗರಸಭಾ ಕಾರ್ಯಾಲಯ, ಅರಸೀಕೆರೆ
ದೂ.ಸಂ:08174–232201 E mail:itstaff_ulb_arasikere@yahoo.com
ಫ್ಯಾಕ್ಸ್ ನಂ: 08174–233274 ವೆಬ್‌ಸೈಟ್ www.arasikerecity..mrc.gov.in
ನಂ:ನ.ಸ.ಅ./ಸಿ.ಆರ್ /ಕಿ.ಅ.(ವಿ)/03/2021–22 ದಿನಾಂಕ: 15–03–2022
ವಾರ್ಷಿಕ ಮರು–ಟೆಂಡರ್ ಪ್ರಕಟಣೆ (CALL-3)
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ
ಅರಸೀಕೆರೆ ನಗರಸಭಾ ವ್ಯಾಪ್ತಿಯಲ್ಲಿ ನಗರಸಭಾ ನಿಧಿಯಡಿ ನೀರು, ಸರಬರಾಜು ವಿಭಾಗಕ್ಕೆ 2021–22 ನೇ ಸಾಲಿನ ವಾರ್ಷಿಕ ಸರಬರಾಜು/ನಿರ್ವಾಹಣೆ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದ್ದು, ನೊಂದಾಯಿತ ಅರ್ಹ ಸರಬರಾಜುದಾರರು/ ಗುತ್ತಿಗೆದಾರರು ತಯಾರಕರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮತ್ತ ಟೆಂಡರ್ ಬಗ್ಗೆ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: www.arasikerecity.mrc.gov.in ನ್ನು ಅಥವಾ ಕಛೇರಿ ಅಭಿಯಂತರರ ಶಾಖೆಯನ್ನು ಸಂಪರ್ಕಿಸಬಹುದಾಗಿದೆ. 1.ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ: 29.03.2022 ರ ಸಂಜೆ 17:30 ಗಂಟೆಗೆ. 2.ಟೆಂಡರ್‌ನ್ನು ತೆರೆಯುವ ದಿನಾಂಕ 31.03.2022 ರ ಬೆಳಗ್ಗೆ 11:00 ಗಂಟೆಗೆ. ಕ್ರ.ಸಂ.1.ಕಾಮಗಾರಿ ವಿವರ: ಅರಸೀಕೆರೆ ನಗರಸಭೆ ನೀರು ಸರಬರಾಜು ವಿಭಾಗಕ್ಕೆ ಅಗತ್ಯವಿರುವ ಪಿ.ವಿ.ಸಿ. ಪೈಪ್‌ಗಳು, ಹೆಚ್.ಡಿ.ಪಿ.ಇ. ಪೈಪ್‌ಗಳು ಹಾಗೂ ಬಿಡಿಭಾಗಗಳನ್ನು ಸರಬರಾಜು ಮಾಡುವುದು. 2.ಅರಸೀಕೆರೆ ನಗರಸಭೆ ನೀರು ಸರಬರಾಜು ವಿಭಾಗಕ್ಕೆ ಸಂಬಂಧಿಸಿದ ಕಿರು ನೀರು ಸರಬರಾಜು ಕೇಂದ್ರದ ಮೋಟರ್‌ಗಳು, ಪಂಪ್‌ಗಳು ಮತ್ತು ಎಲೆಕ್ಟ್ರಿಕ್ ಬಿಡಿಭಾಗಗಳನ್ನು ದುರಸ್ತಿ ಪಡಿಸುವುದು.
ಸಹಿ/– ಪೌರಾಯುಕ್ತರು, ನಗರಸಭೆ, ಅರಸೀಕೆರೆ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/839/2021–22

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು
E-Mail:-dudc_ckg@yahoo.co.in PH: 08262-239010 FAX : 08262-231044
ಸಂ/ಡಿಯುಡಿಸಿ(1)ಸಿಆರ್/33/2020–21 ದಿನಾಂಕ : 15.03.2022
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
ಇಂಡೆಂಟ್ ನಂ : DUDC(1)CR/33/2020-21 CALL-2
ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು ಜಿಲ್ಲೆರವರು ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ ಇವರ ಪರವಾಗಿ ಕೆ.ಟಿ.ಪಿ.ಪಿ.ಕಾಯ್ದೆ 1999 ನಿಯಮಗಳು 2000 ರ ರೀತ್ಯಾ ಅರ್ಹ ನೋಂದಾಯಿತ ಅಧಿಕೃತ ಸಂಸ್ಥೆ/ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಗಿನ ಕಾಮಗಾರಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಅಡಿಯಲ್ಲಿ ಟೆಂಡರನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://www.eproc.karanataka.gov.in ರಲ್ಲಿ ಪಡೆಯಬಹುದು. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್‌ನಲ್ಲಿ ಯಾವುದಾದರೂ ತಿದ್ದುಪಡಿ/ ಬದಲಾವಣೆಯಾದಲ್ಲಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಸಲಾಗುವುದು.
ಕಾಮಗಾರಿ ವಿವರ- Implementation of Energy Efficiency Project for streetlights by replacement of existing conventional lamps with LED lamps along with Centralized Control & Monitoring System (CCMS) in ULBs of Chikkamagaluru District ಇ.ಎಂ.ಡಿ. ಮೊತ್ತ : ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಿಗದಿಪಡಿಸಿರುವಂತೆ ಪೂರ್ವಭಾವಿ ಸಭೆ ದಿನಾಂಕ: 31.03.2022 ಸಮಯ 11ಗಂಟೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:16.04.2022 ಸಮಯ 17.00ರವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18.04.2022 ಸಮಯ 11.00ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ:31.05.2022 ಸಮಯ 11.00 ಗಂಟೆಗೆ ಕಾಮಗಾರಿ ಅವಧಿ: 08 ತಿಂಗಳು (ಮಳೆಗಾಲ ಸೇರಿ) ಮತ್ತು 07 ವರ್ಷಗಳ ನಿರ್ವಹಣೆ, ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಹಾಗೂ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ದೂರವಾಣಿ ಸಂ:08338/273859 ಇ–ಮೇಲ್:eepwdckd@gmail.com
ಕ್ರ.ಸಂ. ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/7444 ದಿನಾಂಕ:15/03/2022
ಅವಧಿ ವಿಸ್ತರಣೆ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ–1
ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/7252 ದಿನಾಂಕ:08/03/2022 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕಾಮಗಾರಿಗಳಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.
ಕ್ರ.ಸಂ. 1, 3 & 4 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:18–03–2022 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:19–03–2022(ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 22–03–2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ(Two Cover System):24–03–2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕ್ರ.ಸಂ. 2 & 5 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:21–03–2022 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:23–03–2022(ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:25–03–2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):28–03–2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/–ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1802/MCA/2021-22

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು
ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102
ದೂರವಾಣಿ:0816–2278190
ವೆಬ್‌ಸೈಟ್: www.smartcitytumakuru.in
ಇ–ಮೇಲ್: smartcitytumakuru@gmail.com
ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/24,26,27,28/2021–22 ದಿನಾಂಕ: 15.03.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in–ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ:080–22340948 ಹಾಗೂ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು.
ಕಾಮಗಾರಿಯ ಹೆಸರು: 1. ತುಮಕೂರು ಮಹಾನಗರ ಪಾಲಿಕೆಗೆ ಮೆಕ್ಯಾನಿಕಲ್ ಸ್ವೀಪಿಂಗ್ ಮೆಷಿನ್‌ನ ಸರಬರಾಜು ಮತ್ತು 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ, ಕಾಮಗಾರಿಯ ಮೊತ್ತ ರೂ.98.40 ಲಕ್ಷಗಳು, ಇಎಂಡಿ ರೂ.1.97ಲಕ್ಷಗಳು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:23.03.2022, ಟೆಂಡರ್ ತೆರೆಯುವ ದಿನಾಂಕ: 24.03.2022. 2. ತುಮಕೂರು ಕ್ಯಾತ್ಸಂದ್ರದ ಸರ್ಕಾರಿ ಪ್ರಾಥಮಿಕ ಪಾಠಶಾಲೆಯ ಆವರಣದ ಪುನರಾಭಿವೃದ್ಧಿ. ಕಾಮಗಾರಿಯ ಮೊತ್ತ ರೂ.39.09 ಲಕ್ಷಗಳು, ಇಎಂಡಿ ರೂ.78180/– ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 23.03.2022 ಟೆಂಡರ್ ತೆರೆಯುವ ದಿನಾಂಕ: 24.03.2022, 3. ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗೋಡೆ ಬಣ್ಣ ಮತ್ತು ಚಿತ್ರಕಲೆ, ಕಾಮಗಾರಿಯ ಮೊತ್ತ ರೂ.44.07 ಲಕ್ಷಗಳು, ಇಎಂಡಿ ರೂ.88,140/– ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:23.03.2022, ಟೆಂಡರ್ ತೆರೆಯುವ ದಿನಾಂಕ: 24.03.2022 4. ತುಮಕೂರು ಎಸ್.ಪಿ.ಕಛೇರಿ ಆವರಣದಲ್ಲಿ ಬ್ಯಾಡ್‌ಮಿಂಟನ್ ಅಂಗಣದ ನಿರ್ಮಾಣ ಕಾಮಗಾರಿಯ ಮೊತ್ತ ರೂ.43.36ಲಕ್ಷಗಳು ಇಎಂಡಿ ರೂ.86,720/– ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 23.03.2022 ಟೆಂಡರ್ ತೆರೆಯುವ ದಿನಾಂಕ:24.03.2022. ಸೂಚನೆ: ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.
ಸಹಿ/–ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.
DIPR/TUM/735/MCA/2021-22

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.
ಸಂ: ಕಾನಿಅ/ಗ್ರಾಕುನೀ&ನೈ/ವಿ/ಬ/ಜೆಇ–1/JJM/2020-21/1964 ದಿನಾಂಕ:14.03.2022
ಇ–ಟೆಂಡರು ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ – 2000 ರಂತೆ)
ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ ಬಳ್ಳಾರಿ, ಬಳ್ಳಾರಿ ಜಿಲ್ಲೆಯ 2021–22 ಸಾಲಿನ ಜಲ್ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಸಿರುಗುಪ್ಪ ಮತ್ತು ಕಂಪ್ಲಿ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಜನವಸತಿಗಳ ಮನೆ ಮನೆಗೆ ಕಾರ್ಯಾತ್ಮಕ ನಳ ಸಂಪರ್ಕ ಒದಗಿಸುವ (Retrofitting) ಕಾಮಗಾರಿಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (www.eproc.karnataka.gov.in) ವೆಬ್ ಸೈಟ್‌ನ್ನು ಸಂಪರ್ಕಿಸಲು ಕೋರಿದೆ. ಹಾಗೂ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ:15.03.2022 ರಿಂದ Download ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:22.03.2022 ರಂದು ಸಂಜೆ 4.00 ರವರೆಗೆ. ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:23.03.2022 ಸಮಯ ಸಂಜೆ 5.00 ಗಂಟೆ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆಯನ್ನು ತಾಂತ್ರಿಕ ಬಿಡ್‌ಲ್ಲಿ ಅರ್ಹತೆ ಹೊಂದಿದವರಿಗೆ ತಿಳಿಸಲಾಗುವುದು ಹಾಗೂ ದಿನಾಂಕ 17.03.2022 ರಂದು ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂನ್ಟೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿ:21.03.2022 ರ ಸಂಜೆ 4.00 ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/857/ಎಂಸಿಎ/2021–22

ಬದ್ಧ ವೆಚ್ಚ ಶೇ 89 ಕ್ಕೆ ಇಳಿಕೆ • ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸುವ ಕಾಂಗ್ರೆಸ್ ನಾಯಕರು–ಸಿಎಂ

‘ಆರ್ಥಿಕ ಚೇತರಿಕೆ, ಅಭಿವೃದ್ಧಿಗೆ ವೇಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಬಳಿಕ ರಾಜ್ಯದಲ್ಲಿ ತ್ವರಿತಗತಿಯಲ್ಲಿ ಆರ್ಥಿಕ ಚೇತರಿಕೆ ಕಂಡಿದ್ದು, ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡಲಾಗಿದೆ. ಆರ್ಥಿಕ ಶಿಸ್ತು ಕಾಪಾಡುವುದರ ಜತೆಗೆ ರಾಜ್ಯದ ಬೆಳವಣಿಗೆ ದರವೂ ಶೇ 9.5ಕ್ಕೆ ತಲುಪಲಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ಬಜೆಟ್ ಮೇಲಿನ ಚರ್ಚೆಗೆ ವಿಧಾನಸಭೆಯಲ್ಲಿ ಬುಧವಾರ ಉತ್ತರ ನೀಡಿದ ಅವರು, ನಮ್ಮದು ಅಭಿವೃದ್ಧಿ ಮತ್ತು ಜನಪರವಾದ ಬಜೆಟ್. ಹಲವು ಸೂಕ್ಷ್ಮ ಚಿಂತನೆಗಳನ್ನೂ ಒಳಗೊಂಡಿದ್ದು, ಅದರ ಪ್ರಯೋಜನ ಮುಂದಿನ ದಿನಗಳಲ್ಲಿ ಕಾಣಬಹುದು ಎಂದು ಹೇಳಿದರು.

ಉತ್ತರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸದಸ್ಯರು,‘ಸರ್ಕಾರದ ಉತ್ತರ ತೃಪ್ತಿ ತಂದಿಲ್ಲ. ಯಾವುದೇ ಅಭಿವೃದ್ಧಿ ಆಗುತ್ತಿಲ್ಲ. ಜನ ವಿರೋಧಿ ಬಜೆಟ್’ ಎಂದು ಸಭಾತ್ಯಾಗ ನಡೆಸಿದರು.

ಕಳೆದ ಸಾಲಿನಲ್ಲಿ ಸಾಮಾಜಿಕ ಭದ್ರತಾ ಯೋಜನೆಯ ವೆಚ್ಚ ಸೇರಿ ಬದ್ಧ ವೆಚ್ಚ ಶೇ 98 ಆಗಿತ್ತು. ಈ ಸಾಲಿನಲ್ಲಿ ಅದನ್ನು ಶೇ 89ಕ್ಕೆ ಇಳಿಸಲಾಗುತ್ತಿದೆ. ಸಾಮಾಜಿಕ ಭದ್ರತಾ ಯೋಜನೆಯನ್ನು ಬದ್ಧ ವೆಚ್ಚ ವ್ಯಾಪ್ತಿಯಿಂದ ಹೊರಕ್ಕೆ ಇಡಲಾಗುತ್ತಿದೆ ಎಂದು ಬೊಮ್ಮಾಯಿ ತಮ್ಮ ಸುದೀರ್ಘ ಉತ್ತರದಲ್ಲಿ ವಿವರಿಸಿದರು.

‘ಕೋವಿಡ್ ಕಾರಣದಿಂದ ಕಳೆದ ಎರಡು ವರ್ಷಗಳಲ್ಲಿ ನಿರೀಕ್ಷಿತ ಸಂಪನ್ಮೂಲ ಸಂಗ್ರಹ ಆಗಿರಲಿಲ್ಲ. ಕೋವಿಡ್ ನಿರ್ವಹಣೆಗೆ ಸರ್ಕಾರ ₹8 ಸಾವಿರ ಕೋಟಿಯಷ್ಟೇ ಖರ್ಚು ಮಾಡಿದೆ ಎಂದು ಸಿದ್ದರಾಮಯ್ಯ ಹೇಳಿದ್ದರು. ಎರಡು ವರ್ಷಗಳಲ್ಲಿ ನಾವು ₹15 ಸಾವಿರ ಕೋಟಿ ಖರ್ಚು ಮಾಡಿದ್ದೇವೆ. ಈಗ ಆರ್ಥಿಕ ಸ್ಥಿತಿ ಚೇತರಿಸಿಕೊಂಡಿದೆ. ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡಲಾಗುತ್ತಿದೆ’ ಎಂದರು.

‘ಕಳೆದ ಸಾಲಿನಲ್ಲಿ ವಾಣಿಜ್ಯ ತೆರಿಗೆಯಲ್ಲಿ ₹11,444 ಕೋಟಿ, ಮೋಟಾರು ವಾಹನ ತೆರಿಗೆ ₹2,072 ಕೋಟಿ, ನೋಂದಣಿ ಹಾಗೂ ಮುದ್ರಾಂಕ ₹1,500 ಕೋಟಿ, ಇತರ ತೆರಿಗೆ ₹540 ಕೋಟಿ, ಕೇಂದ್ರ ತೆರಿಗೆ ಪಾಲಿನಲ್ಲಿ ₹6,892 ಕೋಟಿ ಕಡಿಮೆ ಆಗಿತ್ತು. ಒಟ್ಟು ₹21,835 ಕೋಟಿ ತೆರಿಗೆ ಸಂಗ್ರಹ ಕಡಿಮೆಯಾಗಿತ್ತು. ಅಬಕಾರಿಯಿಂದ ಮಾತ್ರ ₹632 ಕೋಟಿ ಹೆಚ್ಚುವರಿ ವರಮಾನ ಬಂದಿತ್ತು. ಹೀಗಾಗಿ, ಸಾಲ ತೆಗೆದುಕೊಳ್ಳುವುದು ಅನಿವಾರ್ಯ’ ಎಂದು ಹೇಳಿದರು.

‘2021–22ರಲ್ಲಿ ರಾಜ್ಯದಲ್ಲಿ ವಿತ್ತೀಯ ಕೊರತೆ ₹15,134 ಕೋಟಿ ಎಂದು ಅಂದಾಜಿಸಲಾಗಿತ್ತು. ಸರ್ಕಾರ ಕೈಗೊಂಡ ಉಪಕ್ರಮಗಳಿಂದಾಗಿ ವಿತ್ತೀಯ ಕೊರತೆ ₹6,235 ಕೋಟಿ ಆಗಿದೆ. 2022–23ನೇ ಸಾಲಿನಲ್ಲಿ ವಿತ್ತೀಯ ಕೊರತೆ ₹14,699 ಕೋಟಿ ಎಂದು ಅಂದಾಜಿಸಲಾಗಿದೆ. ಮುಂದಿನ ದಿನಗಳಲ್ಲಿ ಬಿಗಿ ಕ್ರಮಗಳನ್ನು ಕೈಗೊಂಡು ಅದನ್ನು ಕನಿಷ್ಠ ಮಟ್ಟಕ್ಕೆ ಇಳಿಸಲಿದ್ದೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಾಲ ಹೆಚ್ಚಿಸಿದ್ದ ಸಿದ್ದರಾಮಯ್ಯ: ‘ಒಟ್ಟು ಆಂತರಿಕ ಉತ್ಪನ್ನದ ಲೆಕ್ಕದ ಆಧಾರದಲ್ಲಿ 2020–21ನೇ ಸಾಲಿನಲ್ಲಿ ₹96,374 ಕೋಟಿ ಸಾಲ ಪಡೆಯಲು ಅವಕಾಶ ಇತ್ತು. ಆದರೆ, ₹72,121 ಕೋಟಿಯಷ್ಟೇ ಸಾಲ ಪಡೆಯಲಾಗಿದೆ. 21–22 ರಲ್ಲಿ ₹67,100 ಕೋಟಿ ಸಾಲ ಪಡೆಯಲು ಅವಕಾಶ ಇದ್ದರೂ ₹63,100 ಕೋಟಿಯಷ್ಟೇ ಪಡೆಯಲಾಗಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಗರಿಷ್ಠ ಸಾಲ ಪಡೆಯಲಾಗಿದೆ. ಅವರು ಅಧಿಕಾರ ಸ್ವೀಕರಿಸುವ ವೇಳೆಗೆ ರಾಜ್ಯದ ಸಾಲದ ಪ್ರಮಾಣ ₹1.38 ಲಕ್ಷ ಕೋಟಿ ಇತ್ತು. ಐದು ವರ್ಷಗಳಲ್ಲಿ ಅದನ್ನು ₹2.86 ಲಕ್ಷ ಕೋಟಿಗೆ ಏರಿತ್ತು. ಸಿದ್ದರಾಮಯ್ಯ ಅವರು ಸಾಲದ ಪ್ರಮಾಣವನ್ನು ಶೇ 107ರಷ್ಟು ಹೆಚ್ಚಿಸಿದರು. 60 ವರ್ಷಗಳಲ್ಲಿ ಮಾಡದ ಸಾಧನೆಯನ್ನು ಐದೇ ವರ್ಷಗಳಲ್ಲಿ ಮಾಡಿದರು’ ಎಂದು ವ್ಯಂಗ್ಯವಾಡಿದರು.

‘2019–20ರಲ್ಲಿ ಒಟ್ಟು ಸಾಲ ₹3.27 ಲಕ್ಷ ಕೋಟಿ ಇತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಸಾಲದ ಪ್ರಮಾಣ ಶೇ 58ರಷ್ಟೇ ಹೆಚ್ಚಾಗಿದೆ. ನಾವು ಇತಿಮಿತಿಯಲ್ಲಿ ಆರ್ಥಿಕ ನಿರ್ವಹಣೆ ಮಾಡಿದ್ದೇವೆ. ಆದರೆ, ಹಿಂದಿನ ಸರ್ಕಾರದ ಅವಧಿಯಲ್ಲಿ ಆರ್ಥಿಕ ಶಿಸ್ತು ಇರಲಿಲ್ಲ. ಸಾಲ ಪಡೆಯುವ ಅವಕಾಶವನ್ನು ಕಾಂಗ್ರೆಸ್‌ನವರು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡರು’ ಎಂದು ಬೊಮ್ಮಾಯಿ ಟೀಕಿಸಿದರು.

‘ಎನ್‌ಡಿಎ ಅವಧಿಯಲ್ಲಿ ಅನುದಾನ ಹೆಚ್ಚು’



ಬಸವರಾಜ ಬೊಮ್ಮಾಯಿ

‘ಯುಪಿಎ ಸರ್ಕಾರದ ಅವಧಿಗಿಂತ ಎನ್‌ಡಿಎ ಸರ್ಕಾರ ರಾಜ್ಯಕ್ಕೆ ಹೆಚ್ಚು ಅನುದಾನ ನೀಡಿದೆ. 2009–14ರ ಅವಧಿಯಲ್ಲಿ ಸಹಾಯ ಅನುದಾನದ ರೂಪದಲ್ಲಿ ಯುಪಿಎ ಸರ್ಕಾರ ರಾಜ್ಯಕ್ಕೆ ₹39,828 ಕೋಟಿ ನೀಡಿತ್ತು. 2014–19 ರ ಅವಧಿಯಲ್ಲಿ ಎನ್‌ಡಿಎ ಸರ್ಕಾರ ₹74,373 ಕೋಟಿ ನೀಡಿದೆ. ಕಳೆದ ಎರಡು ವರ್ಷಗಳಲ್ಲೇ ₹52,761 ಕೋಟಿ ನೀಡಿದೆ. 15ನೇ ಹಣಕಾಸು ಆಯೋಗದ ಮಧ್ಯವಾರ್ಷಿಕ ವರದಿಯಲ್ಲಿ ರಾಜ್ಯದ ಪಾಲಿನ ಮೊತ್ತವಾದ ₹5,495 ಕೋಟಿಯನ್ನು ಕೈಬಿಡಲಾಗಿದೆ ಎಂದು ವಿರೋಧ ಪಕ್ಷದ ನಾಯಕರು ಟೀಕಿಸಿದ್ದಾರೆ. ಅದರ ಬದಲು ಕೇಂದ್ರ ಸರ್ಕಾರ ಪೆರಿಫೆರಲ್ ವರ್ತುಲ ರಸ್ತೆಗೆ ₹6 ಸಾವಿರ ಕೋಟಿ ಅನುದಾನ ನೀಡಿದೆ’ ಎಂದು ಬೊಮ್ಮಾಯಿ ಹೇಳಿದರು.

‘ಜಿಎಸ್‌ಟಿ ಪರಿಹಾರ ರೂಪದಲ್ಲಿ ಒಟ್ಟು ₹97,688 ಕೋಟಿ ಬರಬೇಕಿದೆ. ಇದುವರೆಗೆ ₹54,264 ಕೋಟಿ ಬಂದಿದೆ. ₹30,514 ಕೋಟಿ ಸಾಲ ಪಡೆಯಲು ಕೇಂದ್ರ ಒಪ್ಪಿಗೆ ನೀಡಿದೆ. ಇನ್ನು ₹12,909 ಕೋಟಿ ಬರಬೇಕಿದೆ. ಅದು ಈ ವರ್ಷದಲ್ಲಿ ಬರುವ ವಿಶ್ವಾಸ ಇದೆ. ಆದರೆ, ತಪ್ಪು ಮಾಹಿತಿಗಳನ್ನು ನೀಡಿ ಕಾಂಗ್ರೆಸ್ ನಾಯಕರು ಜನರ ದಾರಿ ತಪ್ಪಿಸುತ್ತಿದ್ದಾರೆ’ ಎಂದು ಹೇಳಿದರು.

‘ಶಾಲಾ ಮೂಲಸೌಕರ್ಯಕ್ಕೆ ನರೇಗಾ ಹಣ’

‘ನರೇಗಾ ಅನುದಾನ ಬಳಸಿ ಶಾಲೆಗಳಲ್ಲಿ ಮೂಲಸೌಕರ್ಯ ಕಾಮಗಾರಿ ಕೈಗೆತ್ತಿಕೊಳ್ಳಲು ಅವಕಾಶ ಕೋರಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ’ ಎಂದು ಬೊಮ್ಮಾಯಿ ಹೇಳಿದರು.

‘ಈ ಸಾಲಿನ ಬಜೆಟ್‌ನಲ್ಲಿ ಶಾಲಾ ಮೂಲಸೌಕರ್ಯಕ್ಕೆ ₹500 ಕೋಟಿ ಮೀಸಲಿಡಲಾಗಿದೆ. ಅದು ಸಾಲದು. ಅದಕ್ಕಾಗಿ ನರೇಗಾ ಅನುದಾನ ಬಳಸಿಕೊಳ್ಳಲು ಯೋಜಿಸಲಾಗಿದೆ. ಈ ವರೆಗೆ ಅಂಗನವಾಡಿ ಕಟ್ಟಡ ನಿರ್ಮಾಣ, ಕಾಂಪೌಂಡ್ ನಿರ್ಮಾಣಕ್ಕಷ್ಟೇ ನರೇಗಾ ಹಣ ಬಳಸಿಕೊಳ್ಳಲಾಗುತ್ತಿತ್ತು’ ಎಂದು ಅವರು ಹೇಳಿದರು.

ಕೋವಿಡ್ ನಿರ್ವಹಣೆಗೆ ₹15 ಸಾವಿರ ಕೋಟಿ!

ಕಳೆದ ಎರಡು ವರ್ಷಗಳಲ್ಲಿ ಕೋವಿಡ್‌ಗಾಗಿ ಸುಮಾರು ₹15,000 ಕೋಟಿ ಖರ್ಚು ಮಾಡಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಕೋವಿಡ್ ಅವಧಿಯಲ್ಲಿ ಸತ್ತವರೆಲ್ಲ ಕೋವಿಡ್‌ನಿಂದ ಸತ್ತವರಲ್ಲ. ಬೇರೆ ಬೇರೆ ಕಾರಣಕ್ಕೆ ಸತ್ತಿದ್ದಾರೆ ಎಂದು ಹೇಳುವುದು ಸರಿಯಲ್ಲ. ಕೋವಿಡ್ ಸಾವಿನ ಬಗ್ಗೆ ಸಮಿತಿಯೊಂದನ್ನು ರಚಿಸಲಾಗುವುದು. ಕೋವಿಡ್‌ನಿಂದ ಸತ್ತವರಿಗೆಲ್ಲ ಸರ್ಕಾರದಿಂದ ಪರಿಹಾರ ಸಿಗಲಿದೆ ಎಂದರು.

ಜನಸಾಮಾನ್ಯನಿಂದ ಜನಸಾಮಾನ್ಯರಿಗಾಗಿ ಮಂಡಿಸಿದ ಅಭಿವೃದ್ಧಿ ಪರವಾದ ಆತ್ಮ ನಿರ್ಭರ್ ಬಜೆಟ್ ನಮ್ಮದು

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಮಹಾಲೇಖಪಾಲರ ವರದಿಯಲ್ಲಿ ಉಲ್ಲೇಖ

ಅಪಘಾತ: ರಸ್ತೆ ಸುರಕ್ಷತಾ ನೀತಿ ವಿಫಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಅಪಘಾತಗಳನ್ನು ಶೇ 25ರಷ್ಟು ಹಾಗೂ ರಸ್ತೆ ಅಪಘಾತದಿಂದ ಸಂಭವಿಸುವ ಸಾವುಗಳನ್ನು ಶೇ 30 ರಷ್ಟು ಕಡಿಮೆ ಮಾಡುವ ಗುರಿಯನ್ನು ಐದು ವರ್ಷಗಳಲ್ಲಿ ಸಾಧಿಸುವಲ್ಲಿ ‘ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ನೀತಿ 2015’ ವಿಫಲವಾಗಿದೆ ಎಂದು ಮಹಾಲೇಖಪಾಲರ ವರದಿ ಆಕ್ಷೇಪ ವ್ಯಕ್ತಪಡಿಸಿದೆ.

ಕರ್ನಾಟಕ ರಾಜ್ಯ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಕಾರ್ಯನಿರ್ವಹಣೆಯ ಕಾರ್ಯಕ್ಷಮತೆ ಕುರಿತ ಮಹಾಲೇಖಪಾಲರ ವರದಿಯನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

‘2015ಕ್ಕೆ ಹೋಲಿಸಿದರೆ ಅಪಘಾತಗಳ ಪ್ರಮಾಣವು 2020ರಲ್ಲಿ ಶೇ 22.34ರಷ್ಟು, ಗಾಯಾಳುಗಳ ಸಂಖ್ಯೆಯು ಶೇ 30.70ರಷ್ಟು ಹಾಗೂ ಅಪಘಾತದಿಂದಾಗುವ ಸಾವಿನ ಪ್ರಮಾಣ ಶೇ 10.1ರಷ್ಟು ಇಳಿಕೆಯಾಗಿದೆ’ ಎಂದು ಪ್ರಾಧಿಕಾರವು ಹೇಳಿಕೊಂಡಿದೆ. ಆದರೆ, 2019ರವರೆಗೆ ಅಪಘಾತಗಳ ಪ್ರಮಾಣದಲ್ಲಿ ಯಾವುದೇ ಗಮನಾರ್ಹ ಇಳಿಕೆಯಾಗಿರುವುದು ಕಂಡುಬಂದಿಲ್ಲ. ಆದರೆ, 2020ರಲ್ಲಿ ಲಾಕ್‌ಡೌನ್ ಜಾರಿಯಲ್ಲಿದ್ದ ಸಮಯದಲ್ಲಿ ಅಪಘಾತಗಳ ಪ್ರಮಾಣ ಶೇ 75ರಷ್ಟು ಕಡಿಮೆ ಆಗಿದೆ. ಲಾಕ್‌ಡೌನ್ ಸಡಿಲಗೊಳಿಸಿದ ಬಳಿಕ ಈ ಪ್ರಮಾಣವು ಮತ್ತೆ ಏರಿಕೆ ಕಂಡಿದೆ. ಹಾಗಾಗಿ ರಸ್ತೆ ಸುರಕ್ಷತೆಯನ್ನು ಖಾತರಿಪಡಿಸುವಲ್ಲಿ ಪ್ರಾಧಿಕಾರವು ವಿಫಲವಾಗಿದೆ. ರಸ್ತೆಗಳ ಕೆಟ್ಟ ಪರಿಸ್ಥಿತಿ ಹಾಗೂ ಅವು ಅಪಾಯಕಾರಿಯಾಗಿರುವುದರಿಂದ ಅಪಘಾತಗಳು ನಿಯಂತ್ರಣಕ್ಕೆ ಬರುತ್ತಿಲ್ಲ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ನೀತಿ ಹಾಗೂ ಅದರ ಅನುಷ್ಠಾನಕ್ಕೆ ಸಂಬಂಧಿಸಿ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ಜಿಲ್ಲಾ ಮಟ್ಟದ ಸಮಿತಿಗಳ ಕಾರ್ಯನಿರ್ವಹಣೆಯಲ್ಲಿ ಭಾರಿ ಅಂತರ ಇದೆ. 2017ರಲ್ಲಿ ರಸ್ತೆ ಸುರಕ್ಷತಾ ಪ್ರಾಧಿಕಾರ ಕಾಯ್ದೆ ಜಾರಿಯಾದ ಬಳಿಕವೂ ಪ್ರಾಧಿಕಾರವು ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಇನ್ನೂ ನಿಯಮಗಳನ್ನೇ ರೂಪಿಸಿಲ್ಲ. ಜಿಲ್ಲೆಗಳಲ್ಲಿ ಆರೈಕೆ ಕೇಂದ್ರಗಳನ್ನು (ಟಿಸಿಸಿ) ಸ್ಥಾಪಿಸಲು ಕ್ರಿಯಾಯೋಜನೆ ರೂಪಿಸಿಲ್ಲ. ಸ್ಥಾಪಿಸಲಾದ ಟಿಸಿಸಿಗಳಲ್ಲಿ ನರರೋಗ ತಜ್ಞರ ಸೇವೆ ಲಭ್ಯ ಇಲ್ಲ ಎಂಬುದನ್ನು ವರದಿಯಲ್ಲಿ ಬೊಟ್ಟು ಮಾಡಲಾಗಿದೆ.

‘ಬಳಕೆಯಾಗದ ₹ 470 ಕೋಟಿ’

ರಸ್ತೆ ಸುರಕ್ಷತಾ ನಿಧಿಯನ್ನು 2020ರ ಅ.27ರಂದು ಸ್ಥಾಪಿಸಲಾಗಿದೆ. 2017ರಿಂದ 2020ರ ನಡುವೆ ಸೆಸ್ ರೂಪದಲ್ಲಿ ಸಂಗ್ರಹವಾಗಿದ್ದ ₹ 480.50 ಕೋಟಿಯನ್ನು ಈ ನಿಧಿಗೆ ವರ್ಗಾಯಿಸಲಾಗಿದೆ. ಆದರೆ, ಪ್ರಾಧಿಕಾರವು ಇದರಲ್ಲಿ ₹10.92 ಕೋಟಿಯನ್ನು ಮಾತ್ರ ಬಳಸಿಕೊಂಡಿದೆ. ಈ ಮೊತ್ತವನ್ನೂ ಪೊಲೀಸ್ ಹಾಗೂ ಸಾರಿಗೆ ಇಲಾಖೆಗಳಿಗೆ ಮಾತ್ರ ಹಂಚಿಕೆ ಮಾಡಲಾಗಿದೆ. ಹೆದ್ದಾರಿಗಳಲ್ಲಿ ಸಂಚಾರ ದ್ವೀಪ, ರಸ್ತೆ ವಿಭಜಕ ನಿರ್ಮಾಣ, ತೀವ್ರ ತಿರುವುಗಳ ಸುಧಾರಣೆ, ಅಪಘಾತ ಸಂಭವಿಸುವ ಅಪಾಯಕಾರಿ ಸ್ಥಳಗಳಲ್ಲಿನ (ಹಾಟ್‌ಸ್ಪಾಟ್) ಲೋಪ ಗುರುತಿಸಿ ಸರಿಪಡಿಸುವ ಕಾರ್ಯಗಳಿಗೆ ಈ ನಿಧಿಯಿಂದ ಹಣವನ್ನೇ ಒದಗಿಸಿಲ್ಲ. ಹೆದ್ದಾರಿಗಳ ಬಳಿ ಆಘಾತ ಆರೈಕೆ ಕೇಂದ್ರ (ಟ್ರಾಮಾ ಸೆಂಟರ್) ಸ್ಥಾಪನೆಗೆ ಮತ್ತು ವೈದ್ಯಕೀಯ ಮೂಲಸೌಕರ್ಯ ವೃದ್ಧಿಗಾಗಿ ಆರೋಗ್ಯ ಇಲಾಖೆಗೂ ಹಣ ಒದಗಿಸಿಲ್ಲ ಎಂದು ಮಹಾಲೇಖಪಾಲರ ವರದಿ ಆಕ್ಷೇಪಿಸಿದೆ.

ಆಂಬುಲೆನ್ಸ್ ಕೊರತೆ

ಅಪಘಾತದ ಮಾಹಿತಿ ಬಂದ ಬಳಿಕ ಸ್ಥಳಕ್ಕೆ ಆಂಬುಲೆನ್ಸ್ ಧಾವಿಸಲು ತಲುಪುವ ವಿಳಂಬವು 30 ನಿಮಿಷಗಳಿಗಿಂತ ಹೆಚ್ಚು ಇದ್ದುದರಿಂದ ಸುಮಾರು 90 ಸಾವಿರ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಸಮಯೋಚಿತ ವೈದ್ಯಕೀಯ ಆರೈಕೆ ಒದಗಿಸಲು ಸಾಧ್ಯವಾಗಿಲ್ಲ. ಇದು ಆಂಬುಲೆನ್ಸ್‌ಗಳ ಸಂಖ್ಯಾ ಬಲದ ಕೊರತೆಯನ್ನು ಸೂಚಿಸುತ್ತದೆ ಎಂದು ಮಹಾಲೇಖಪಾಲರ ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಪ್ರಮುಖ ಶಿಫಾರಸುಗಳು

- ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಕಾಯ್ದೆ 2017ರ ಅಡಿ ನಿಯಮಗಳನ್ನು ಅಂತಿಮಗೊಳಿಸಬೇಕು
- ಸುರಕ್ಷಿತ ಚಾಲನೆ ಮಹತ್ವದ ಅರಿವು ಮೂಡಿಸಬೇಕು ಹಾಗೂ ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಕ್ರಿಯಾಯೋಜನೆ ರೂಪಿಸಬೇಕು
- ಪ್ರಾಧಿಕಾರವು ರಸ್ತೆ ನಿರ್ವಹಣಾ ಸಂಸ್ಥೆಗಳಿಗೆ ಗುರಿ ನಿಗದಿಪಡಿಸಿ, ನಿಖರ ಮೇಲ್ವಿಚಾರಣೆಗಾಗಿ ಅವುಗಳಿಂದ ಅನುಪಾಲನಾ ವರದಿ ಪಡೆಯಬೇಕು
- ಅಪಘಾತಕ್ಕೊಳಗಾದವರು 30 ನಿಮಿಷಗಳೊಳಗೆ (ಗೋಲ್ಡ್ ಹವರ್) ಚಿಕಿತ್ಸೆ ಪಡೆಯಲು ಅನುಕೂಲವಾಗುವಂತೆ ಎಲ್ಲ ಜಿಲ್ಲೆಗಳಲ್ಲಿ ವೈದ್ಯಕೀಯ ತಜ್ಞರನ್ನು ಒಳಗೊಂಡ ಟಿಸಿಸಿ ಸ್ಥಾಪಿಸಬೇಕು

ಕಲಾಪ ವೀಕ್ಷಣೆ ವಿಧಾನ ಪರಿಷತ್‌ನಲ್ಲಿ ಬುಧವಾರ ನಡೆದ ಕಲಾಪವನ್ನು ವೀಕ್ಷಿಸಿದ ಸಾರ್ವಜನಿಕರು – ಪ್ರಜಾವಾಣಿ ಚಿತ್ರ

ಪರಿಷತ್‌ನಲ್ಲಿ ಕಾಂಗ್ರೆಸ್‌ನ ಆರ್.ಬಿ. ತಿಮ್ಮಾಪುರ ಚಾಟಿ

‘ಕೋಮುವಾದದ ವಿಷ ಕುಡಿದವರು ಬದುಕುತ್ತಾರೆಯೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಭಿವೃದ್ಧಿ ಹಾಲು ಕುಡಿದವರು ಇಷ್ಟು ದಿನ ಬದುಕಿದ್ದೇವೆ. ಕೋಮುವಾದದ ವಿಷ ಕುಡಿದವರು ಎಷ್ಟು ದಿನ ಬದುಕುತ್ತಾರೆ ನೋಡೋಣ’ ಎಂದು ವಿಧಾನ ಪರಿಷತ್‌ನಲ್ಲಿ ಬುಧವಾರ ಕಾಂಗ್ರೆಸ್‌ನ ಆರ್.ಬಿ. ತಿಮ್ಮಾಪೂರ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಬಜೆಟ್ ಕುರಿತ ಚರ್ಚೆಯಲ್ಲಿ ಮಾತನಾಡಿದ ಅವರು, ‘ಒಂದೆಡೆ ಕೋಮುವಾದ, ಇನ್ನೊಂದೆಡೆ ಜಾತಿವಾದ. ರಾಯಚೂರು, ಕಲಾದಗಿ, ಬಸವನ ಬಾಗೇವಾಡಿ ಸೇರಿದಂತೆ ಹಲವು ಕಡೆಗಳಲ್ಲಿ ಪರಿಶಿಷ್ಟ ಸಮುದಾಯದವರ ಕೊಲೆಗಳು ನಡೆದು ಹೋಗಿವೆ. ಅವರ ಕುಟುಂಬಕ್ಕೆ ಸಾಂತ್ವನ ಹೇಳುವ ಕೆಲಸವನ್ನೂ ಯಾರೂ ಮಾಡಲಿಲ್ಲ’ ಎಂದು ಕಟುವಾಗಿ ಟೀಕಿಸಿದರು.

‘ಅಸ್ಪೃಶ್ಯತೆ ಇನ್ನೂ ಇದೆ. ನಿಮಗೆ ನಾಚಿಕೆಯಾಗಬೇಕು. ಪರಿಶಿಷ್ಟ ಜಾತಿಯವರಿಗೆ ಸಮಾನತೆ ಕೊಡುವುದಾದರೆ ನಮಗೆ ಸ್ವಾತಂತ್ರ್ಯವೇ ಬೇಡ ಎಂದು ಆರ್‌ಎಸ್‌ಎಸ್ ನಾಯಕ ಗೋಲ್ವಾಲ್ಕರ್ ಹೇಳಿದ್ದರು. ಈಗಲೂ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿಯವರನ್ನು ಅಸಮಾನತೆಯಿಂದ ಕಾಣುತ್ತಿದೆ. ಪರಿಶಿಷ್ಟರ ಯೋಜನೆಗಳಿಗೆ ಅನುದಾನ ಕಡಿಮೆ ಮಾಡಲಾಗಿದೆ’ ಎಂದು ಪಟ್ಟಿಯನ್ನು ಓದಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಆರ್.ಬಿ. ತಿಮ್ಮಾಪುರ ಅವರು ಬಿಜೆಪಿ ಚುನಾವಣಾ ಪ್ರಣಾಳಿಕೆಯ ಪ್ರತಿಯನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ತಮ್ಮ ಭಾಷಣದುದ್ದಕ್ಕೂ ಆಡಳಿತ ಪಕ್ಷದವರನ್ನು ಕೆಣಕಿ ಮಾತನಾಡಿದ್ದರಿಂದ, ಉಭಯ ಪಕ್ಷಗಳ ಸದಸ್ಯರ ನಡುವೆ ಪದೇ ಪದೇ ಮಾತಿನ ಚಕಮಕಿ ನಡೆಯಿತು. ಸಭಾಪತಿ ಪೀಠದಲ್ಲಿದ್ದ ಶ್ರೀಕಂಠೇಗೌಡ, ಗದ್ದಲವನ್ನು ನಿಭಾಯಿಸಲು ಸತತ ಪ್ರಯತ್ನ ಮಾಡಿದರು.

ಸಭಾನಾಯಕ ಕೋಟಾ ಶ್ರೀನಿವಾಸ್ ಪೂಜಾರಿ ಅವರು ಪ್ರತಿಕ್ರಿಯಿಸಿ, ‘ಅಸ್ಪೃಶ್ಯತೆಯನ್ನು ಅಪರಾಧ ಎಂದು ಪರಿಗಣಿಸದಿದ್ದರೆ ಜಗತ್ತಿನಲ್ಲಿ ಯಾವ ಅಪರಾಧಗಳು ಅಪರಾಧಗಳೇ ಅಲ್ಲ ಎಂದು ಸಂಘ ಪರಿವಾರದವರು ಬಲವಾಗಿ ಪ್ರತಿಪಾದಿಸಿದ್ದರು. ಈಗ ಅದನ್ನು ತಿರುಚಿ ಮಾತನಾಡಲಾಗುತ್ತಿದೆ. ಇಷ್ಟು ದಿನ ಆಡಳಿತ ನಡೆಸಿದವರೇ ನೀವು. ಈಗ ನಮ್ಮ ಬಗ್ಗೆ ಆರೋಪ ಮಾಡುತ್ತೀರಾ’ ಎಂದು ಪ್ರಶ್ನಿಸಿದರು.

ನಮ್ಮ ಹಗರಣಗಳನ್ನು ತೆಗೆಯಿರಿ. ಅದು ನಿಮ್ಮ ತಾಕತ್ತು. ನೀವು ಸುಳ್ಳು ಹೇಳುತ್ತೀರಿ ಎಂದು ನಿಮಗೆ ಒಮ್ಮೆಯೂ ಬಹುಮತ ಸಿಕ್ಕಿಲ್ಲ. ನಿಮ್ಮ ಅವಧಿಯಲ್ಲಿ ಶೇ 40 ಕಮಿಷನ್ ಪಡೆಯಲಾಗುತ್ತಿದೆ

ಆರ್.ಬಿ. ತಿಮ್ಮಾಪೂರ
ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ

ಡ್ರೋನ್ ಆಧಾರಿತ ಭೂಮಾಪನ ಕಾರ್ಯ ಮತ್ತೆ ಆರಂಭ

ಬೆಂಗಳೂರು: ‘ರಾಜ್ಯದಲ್ಲಿ ಡ್ರೋನ್ ಆಧಾರಿತ ಮರು ಭೂಮಾಪನ ಕಾರ್ಯವನ್ನು ಮತ್ತೆ ಆರಂಭಿಸಲಾಗುವುದು’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ‘ರಾಜ್ಯದಲ್ಲಿ 2017–18ರಲ್ಲಿ ರಾಮನಗರ, ತುಮಕೂರು, ಹಾಸನ, ಬೆಳಗಾವಿ, ಉತ್ತರ ಕನ್ನಡ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿನ ಒಟ್ಟು 51 ಸಾವಿರ ಚದರ ಕಿ.ಮೀ. ಪ್ರದೇಶವನ್ನು ಡ್ರೋನ್ ಆಧಾರಿತ ಭೂಮಾಪನ ಕಾರ್ಯವನ್ನು ಭಾರತೀಯ ಸರ್ವೇಕ್ಷಣಾ ಸಂಸ್ಥೆಯ ಸಹಯೋಗದೊಂದಿಗೆ ಕೈಗೊಳ್ಳಲಾಗಿತ್ತು. ಆದರೆ, ಕೋವಿಡ್‌ನಿಂದಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು’ ಎಂದರು.

‘2ನೇ ಹಂತದಲ್ಲಿ 26 ಜಿಲ್ಲೆಗಳಲ್ಲಿನ 1.40 ಲಕ್ಷ ಚದರ ಕಿ.ಮೀ. ಪ್ರದೇಶವನ್ನು ಸಹ ಡ್ರೋನ್ ಸರ್ವೆ ಕಾರ್ಯವನ್ನು ₹287 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ’ ಎಂದರು.

ಮೇಲ್ಮನೆಯಲ್ಲಿ ಶರಣಗೌಡ ಬಯ್ಯಾಪುರ ಪ್ರಶ್ನೆ

‘10–20 ಎಕರೆ ಇದ್ದರೆ ರೈತರಲ್ಲವೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಲ್ಯಾಣ ಕರ್ನಾಟಕ ಭಾಗದಲ್ಲಿ 40 ಸಾವಿರ ಶಿಕ್ಷಕರ ಹುದ್ದೆ ಖಾಲಿ ಇದೆ. ನಮ್ಮ ಭಾಗಕ್ಕೆ ನೀರು ಸಾಲುತ್ತಿಲ್ಲ. ಇದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಕಾಂಗ್ರೆಸ್ಸಿನ ಶರಣಗೌಡ ಬಯ್ಯಾಪುರ ಒತ್ತಾಯಿಸಿದರು.

ವಿಧಾನಪರಿಷತ್‌ನಲ್ಲಿ ಬಜೆಟ್ ಮೇಲೆ ಮಾತನಾಡಿದ ಅವರು, ‘ನಮ್ಮ ಕಷ್ಟ ಕೇಳುವವರು ಯಾರೂ ಇಲ್ಲ. 10-20 ಎಕರೆ ಇರುವವರು ರೈತರಲ್ಲವೇ? ರೈತ ಸಂಪರ್ಕ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ ಇದೆ’ ಎಂದರು.

ಬಿಜೆಪಿಯ ಮುನಿರಾಜುಗೌಡ ಮಾತನಾಡಿ, ‘ಬೆಂಗಳೂರು ನಗರದಲ್ಲಿ ವಸತಿ ಇಲಾಖೆ ನಿರ್ಮಿಸುತ್ತಿರುವ ವಸತಿ ಯೋಜನೆಗಳಲ್ಲಿ ಅಕ್ರಮ ನಡೆಯುತ್ತಿರುವ ಮಾಹಿತಿ ಇದೆ. ಅದರಲ್ಲಿ ಅಧಿಕಾರಿಗಳು ಭಾಗಿಯಾಗಿರುವ ಅನುಮಾನಗಳಿವೆ. ಇದಕ್ಕೆ ಕಡಿವಾಣ ಹಾಕಬೇಕು’ ಎಂದರು.

‘ಕೊಳೆಗೇರಿಗಳನ್ನು ತೆರವುಗೊಳಿಸಿ ಅಲ್ಲಿ ವಸತಿಸಂಕೀರ್ಣಗಳನ್ನು ನಿರ್ಮಿಸಿ, ವಾಸಕ್ಕೆ ಅವಕಾಶ ಮಾಡಿಕೊಡಬೇಕು. ಗುಡಿ ಕೈಗಾರಿಕೆಗೆ ಒತ್ತು ಕೊಡಬೇಕು. ದೇವಾಲಯಗಳಿಗೆ ಪಾದಯಾತ್ರೆಯಲ್ಲಿ ತೆರಳುವವರಿಗೆ ರಾತ್ರಿ ತಂಗಲು ಅವಕಾಶ ಮಾಡಿಕೊಡಬೇಕು. ಅಲ್ಲಲ್ಲಿ ಸಮುದಾಯ ಭವನ ಸ್ಥಾಪಿಸಬೇಕು’ ಎಂದು ಆಗ್ರಹಿಸಿದರು.

ಜೆಡಿಎಸ್‌ನ ಬಿ.ಎಂ. ಫಾರೂಕ್, ‘ಕರಾವಳಿ ಭಾಗಕ್ಕೂ ಬಜೆಟ್‌ಗೂ ಸಂಬಂಧ ಇಲ್ಲದಂತಾಗಿದೆ. ಬೃಹತ್ ಕೈಗಾರಿಕೆಗಳು ಮಂಗಳೂರು ಭಾಗದಲ್ಲಿವೆ. ಅಲ್ಲಿ ವಾಯು, ಜಲ ಮಾಲಿನ್ಯ ಹೆಚ್ಚುತ್ತಿದೆ. ಈ ಬಗ್ಗೆ ಸರ್ಕಾರ ಗಮನಹರಿಸಿಲ್ಲ. ಈ ಭಾಗದ ಸಮಸ್ಯೆ ಅಧ್ಯಯನಕ್ಕೆ ಸದನ ಸಮಿತಿ ರಚಿಸಬೇಕು’ ಎಂದು ಒತ್ತಾಯಿಸಿದರು.

‘ಗೋವಾ ಅತಿ ಸಣ್ಣ ತೀರ ಪ್ರದೇಶವನ್ನು ಹೊಂದಿದ್ದು, ಶೇ 23ರಷ್ಟು ಆದಾಯ ಹೊಂದಿದೆ. ಆದರೆ, ನಾವು 300 ಕಿ.ಮೀ. ಉದ್ದ ಸಮುದ್ರ ತೀರ ಹೊಂದಿದ್ದರೂ ಶೇ 2ರಿಂದ 3ರಷ್ಟು ಮಾತ್ರ ಆದಾಯ ಹೊಂದಿದ್ದೇವೆ. ಸಾಕಷ್ಟು ಆದಾಯಕ್ಕೆ ಅವಕಾಶ ಇದ್ದರೂ, ಒಂದೇ ಒಂದು ತಾರಾ ಹೋಟೆಲ್ ಕರಾವಳಿ ಪ್ರದೇಶದಲ್ಲಿ ಇಲ್ಲ’ ಎಂದೂ ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನ ಸಿ.ಎಂ. ಲಿಂಗಪ್ಪ ಮಾತನಾಡಿ, ‘ರಾಜ್ಯ ಸಾಲದ ಸುಳಿಯಲ್ಲಿದೆ. ರಾಜ್ಯವನ್ನು ಸಾಲ ಮುಕ್ತಗೊಳಿಸಲು ಸರ್ಕಾರ ಯೋಜನೆಗಳನ್ನು ರೂಪಿಸಬೇಕು. ಆ ಮೂಲಕ, ಕರ್ನಾಟಕ ಸಮೃದ್ಧಿ ರಾಜ್ಯ ಎಂದು ತೋರಿಸಿ ಕೊಡಬೇಕು’ ಎಂದು ಸಲಹೆ ನೀಡಿದರು.

‘ಮೇಕೆದಾಟು ಯೋಜನೆಗೆ ಹಣ ತೆಗೆದಿಟ್ಟರಷ್ಟೆ ಸಾಲದು. ಆದಷ್ಟು ಬೇಗ ಗುದ್ದಲಿ ಪೂಜೆ ನಡೆಸಿ, ಕಾಮಗಾರಿ ಆರಂಭಿಸಬೇಕು’ ಎಂದೂ ಆಗ್ರಹಿಸಿದರು.

ಉತ್ತರಕ್ಕೆ 2–4 ವಾರ ಸಮಯ ಕೇಳಿದ ಸಚಿವರು!

ಬೆಂಗಳೂರು: ‘ಇದೇ 7ರಿಂದ ಬುಧವಾರದವರೆಗೆ (ಮಾರ್ಚ್ 16) ನಡೆದ ವಿಧಾನ ಪರಿಷತ್ ಕಲಾಪದಲ್ಲಿ ಸದಸ್ಯರು ಕೇಳಿದ 51 ಪ್ರಶ್ನೆಗಳಿಗೆ ಉತ್ತರಿಸಬೇಕಾದ ಸಚಿವರು, ಎರಡರಿಂದ ನಾಲ್ಕು ವಾರಗಳ ಕಾಲಾವಕಾಶ ಕೇಳಿದ್ದಾರೆ.

ಈ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಭಾಪತಿ ಬಸವರಾಜ ಹೊರಟ್ಟಿ, ಕಾಲಾವಕಾಶ ಕೇಳಿದ ಸಚಿವರ ಪಟ್ಟಿ ಸಹಿತ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರಿಗೆ ಪತ್ರ ಬರೆದಿದ್ದಾರೆ. ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ಮತ್ತು ಉತ್ತರಿಸಬೇಕಾದ ಪ್ರಮುಖ ವೇದಿಕೆಯಾಗಿರುವ ಅಧಿವೇಶನದಲ್ಲಿ ಸಚಿವರು ಉತ್ತರ ನೀಡಿದಿರುವುದು ಸರಿಯಲ್ಲ. ಸದಸ್ಯರ ಪ್ರಶ್ನೆಗಳಿಗೆ ಕಲಾಪದ ಅವಧಿಯಲ್ಲೇ ಎಲ್ಲ ಸಚಿವರು ಉತ್ತರ ನೀಡುವಂತೆ ಕಟ್ಟುನಿಟ್ಟಾಗಿ ಸೂಚಿಸಬೇಕು ಎಂದೂ ಅವರಿಗೆ ತಿಳಿಸಿದ್ದಾರೆ.

ಬುಧವಾರ ಮಧ್ಯಾಹ್ನದ ನಂತರ ಕಲಾಪ ಆರಂಭವಾಗುತ್ತಿದ್ದಂತೆ, ‘ಸದ್ಯ ಸದನದಲ್ಲಿ ಆರು ಸಚಿವರು ಹಾಜರಿದ್ದಾರೆ’ ಎಂದು ಸಭಾಪತಿಗೆ ಕೋಟ ಅವರು ಮಾಹಿತಿ ನೀಡಿದರು. ಅದಕ್ಕೆ ಸಭಾಪತಿ, ‘ಈ ಕೆಲಸ ಮೊದಲು ಮಾಡಬೇಕಿತ್ತು. ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರ ಬಗ್ಗೆ ಸಭಾನಾಯಕರು ಮತ್ತು ಮುಖ್ಯ ಸಚೇತಕರು ನಿಗಾ ವಹಿಸಬೇಕು’ ಎಂದರು.

ಆಗ ಸಚಿವರಾದ ಸಿ.ಸಿ. ಪಾಟೀಲ ಮತ್ತು ಉಮೇಶ ಕತ್ತಿ, ‘ವಿಧಾನಸಭೆಯಲ್ಲಿ ತುರ್ತು ಹಾಜರಿ ಇರಬೇಕಾದ ಸಂದರ್ಭದಲ್ಲಿ ಪರಿಷತ್‌ನಲ್ಲಿ ಹಾಜರಾಗುವುದು ಕಷ್ಟ’ ಎಂದು ಸಮಜಾಯಿಷಿ ನೀಡಿದರು. ಪ್ರಶ್ನೋತ್ತರ ವೇಳೆ ಆಯಾ ಸಚಿವರು ಕಡ್ಡಾಯವಾಗಿ ಹಾಜರಿರುವಂತೆ ಮಾಡಿದರೆ ಅನುಕೂಲ ಎಂದೂ ಸಲಹೆ ನೀಡಿದರು. ‘ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ನಾನು ಈ ಬಗ್ಗೆ ಈಗಾಗಲೇ ತಿಳಿಸಿದ್ದೇನೆ’ ಎಂದು ಹೊರಟ್ಟಿ ಹೇಳಿದರು.

ಹದಗೆಟ್ಟ ಕಾನೂನು ಸುವ್ಯವಸ್ಥೆ: ನಿಲುವಳಿ ಸೂಚನೆ ತಿರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿ ಕಾಂಗ್ರೆಸ್ ವಿಧಾನಸಭೆಯಲ್ಲಿ ಬುಧವಾರ ಮಂಡಿಸಿದ ನಿಲುವಳಿ ಸೂಚನೆಯನ್ನು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿರಸ್ಕರಿಸಿದರು.

ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ವಿಷಯ ಪ್ರಸ್ತಾಪಿಸಿ, ‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದರಿಂದ ಅಭಿವೃದ್ಧಿಗೆ ಹೊಡೆತ ಬಿದ್ದಿದೆ. ಜನರು ಭಯದ ವಾತಾವರಣದಲ್ಲಿ ಇದ್ದಾರೆ’ ಎಂದರು. ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, ‘ಈ ವಿಚಾರದ ಬಗ್ಗೆ ಖಾದರ್ ಅವರು ಬಜೆಟ್ ಮೇಲಿನ ಚರ್ಚೆಯಲ್ಲೇ ಪ್ರಸ್ತಾಪಿಸಿದ್ದಾರೆ. ಇದು ನಿಲುವಳಿ ಸೂಚನೆ ವ್ಯಾಪ್ತಿಗೇ ಬರುವುದಿಲ್ಲ. ಸಭಾಧ್ಯಕ್ಷರು ಈ ಅರ್ಜಿಯನ್ನು ತಿರಸ್ಕರಿಸಬೇಕಿತ್ತು’ ಎಂದರು. ‘ಪ್ರತಿ ಸಲ ಬ್ರಹ್ಮಾಸ್ತ್ರವನ್ನೇ ಬಿಟ್ಟರೆ ಅದಕ್ಕೆ ಅರ್ಥ ಇರುತ್ತದೆಯೇ’ ಎಂದೂ ಅವರು ಪ್ರಶ್ನಿಸಿದರು.

ಇದು ಕಾನೂನು ಸುವ್ಯವಸ್ಥೆಯ ವಿಚಾರ ಎಂದು ಕಾಂಗ್ರೆಸ್ ಸದಸ್ಯರು ಪ್ರತಿಪಾದಿಸಿದರು. ವಿರೋಧ ಪಕ್ಷದ ಸದಸ್ಯರು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದು ಬಿಜೆಪಿ ಸದಸ್ಯರು ಕಿಡಿಕಾರಿದರು. ಈ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವೆ ವಾಕ್ಸಮರ ನಡೆಯಿತು.

‘ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದರಲ್ಲಿ ಸತ್ಯ ಇದೆ. ನಮಗೆ ಈಗ ಯಾವುದು ನಿಲುವಳಿ ಸೂಚನೆ, ಯಾವುದು ಪ್ರಶ್ನೋತ್ತರ, ಯಾವುದು ಶೂನ್ಯ ವೇಳೆ ವ್ಯಾಪ್ತಿಗೆ ಬರುತ್ತದೆ ಎಂಬುದೇ ಗೊತ್ತಿಲ್ಲ. ಈ ಬಗ್ಗೆ ತರಬೇತಿ ಕೊಟ್ಟರೆ ಸದಸ್ಯರೇ ಬರುವುದಿಲ್ಲ’ ಎಂದು ಬೇಸರದಿಂದ ಹೇಳಿದ ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, ‘ನಿಲುವಳಿ ಸೂಚನೆ ಎಂಬುದು ಪ್ರಬಲ ಅಸ್ತ್ರ. ನಮಗೆ ನಿಯಮ 60 ಹಾಗೂ ನಿಯಮ 69ರ ವ್ಯತ್ಯಾಸವೇ ಗೊತ್ತಿಲ್ಲ’ ಎಂದರು.

ಖಾದರ್ ಅವರಿಗೆ ವಿಚಾರ ಮಂಡನೆಗೆ ಸಭಾಧ್ಯಕ್ಷರು ಎರಡು ನಿಮಿಷಗಳ ಕಾಲಾವಕಾಶ ನೀಡಿದರು. ‘ತಳಮಟ್ಟದಲ್ಲಿ ಏನಾಗುತ್ತಿದೆ ಎಂಬುದು ಸರ್ಕಾರಕ್ಕೆ ಗೊತ್ತಿಲ್ಲ. ಭವಿಷ್ಯದಲ್ಲಿ ಅನಾಹುತ ಉಂಟಾಗಲಿದೆ. ಗಲಭೆ ನಡೆದ ಬಳಿಕ ಸೆಕ್ಷನ್ 144 ಹಾಕುವ ಬದಲು ಮೊದಲೇ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಖಾದರ್ ಸಲಹೆ ನೀಡಿದರು.

‘ಈ ರೀತಿ ಮಾತನಾಡುತ್ತಾ ಹೋದರೆ ಆಡಳಿತ ಪಕ್ಷದ ಸದಸ್ಯರೇ ಸಭಾತ್ಯಾಗ ಮಾಡಬೇಕಾಗುತ್ತದೆ’ ಎಂದು ಮಾಧುಸ್ವಾಮಿ ಎಚ್ಚರಿಸಿದರು. ‘ಇದು ನಿಲುವಳಿ ಸೂಚನೆ ವ್ಯಾಪ್ತಿಗೆ ಬರುವುದಿಲ್ಲ. ಈ ಸೂಚನೆಯನ್ನು ತಿರಸ್ಕರಿಸಲಾಗಿದೆ’ ಎಂದು ಸಭಾಧ್ಯಕ್ಷರು ರೂಲಿಂಗ್ ನೀಡಿದರು.

ರನೌಟ್ ಆಗಬಾರದಲ್ಲ: ಖಾದರ್ ಕಾಲೆಳೆದ ಮಾಧುಸ್ವಾಮಿ



ಯು.ಟಿ. ಖಾದರ್

‘ಮಾಧುಸ್ವಾಮಿ ಮೇಧಾವಿಗಳು. ಆದರೆ, ಅವರಿಗೆ ತಾಳ್ಮೆ ಕಡಿಮೆ. ಬಿ.ಎಸ್.ಯಡಿಯೂರಪ್ಪ ಅವರಿಗೆ ಸಾಕಷ್ಟು ತಾಳ್ಮೆ ಇದೆ. ತಾಳ್ಮೆಯನ್ನು ಮಾಧುಸ್ವಾಮಿ ಅಳವಡಿಸಿಕೊಳ್ಳಬೇಕು’ ಎಂದು ಯು.ಟಿ.ಖಾದರ್ ಹೇಳಿದರು.

ಆಗ ಮಾಧುಸ್ವಾಮಿ, ‘ಸಂಸದೀಯ ವ್ಯವಹಾರ ಸಚಿವನಾಗಿ ನಾನು ಇಲ್ಲಿದ್ದೇನೆ. ಮುಂದಿನ ಸಾಲಿನಲ್ಲಿದ್ದ ಕಾರಣ ಸಮರ್ಥಿಸಿಕೊಂಡಿದ್ದೇನೆ. ಹಿಂದಿನ ಸಾಲಿನಲ್ಲಿ ಇದ್ದಾಗ ಒಂದು ಮಾತನಾದರೂ ಆಡಿದ್ದೇನಾ’ ಎಂದು ನಗುತ್ತಲೇ ಹೇಳಿದರು. ‘ನನ್ನ ಸಹಾಯಕ್ಕೆ ಬನ್ನಿ ಎಂದಾಗಲೂ ನೀವು ಬರಲಿಲ್ಲ’ ಎಂದು ಕಾಗೇರಿ ಹೇಳಿದರು.

ಮಾಧುಸ್ವಾಮಿ, ‘ನಿರಂತರವಾಗಿ ರನ್ ಹೊಡೆಯಬೇಕು ಎಂದು ಪ್ರೇಕ್ಷಕರು ಬಯಸುತ್ತಾರೆ. ಅವರು ಬಯಸುತ್ತಾರೆ ಎಂಬ ಕಾರಣಕ್ಕೆ ನಾವು ರನ್‌ಗೆ ಓಡಲು ಆಗುವುದಿಲ್ಲ. ಖಾದರ್ ಅವರೇ, ರನ್ ಓಡುವ ಮೊದಲು ಎದುರಿನ ಆಟಗಾರನೊಂದಿಗೆ ಸಮಾಲೋಚಿಸಬೇಕು. ಇಲ್ಲದಿದ್ದರೆ ರನ್ ಔಟ್ ಆಗುತ್ತೀರಿ’ ಎಂದು ಕಾಲೆಳೆದರು.

ಒಕ್ಕಲಿಗರ ನಿಗಮ: ನೋಂದಣಿ ಬಳಿಕ ಅನುದಾನ

ಬೆಂಗಳೂರು: ಒಕ್ಕಲಿಗರ ಅಭಿವೃದ್ಧಿ ನಿಗಮದ ನೋಂದಣಿ ಪ್ರಕ್ರಿಯೆ ನಡೆದಿದೆ. ಆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅನುದಾನ ಬಿಡುಗಡೆ ಆಗಲಿದೆ ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ವಿಧಾನಸಭೆಯಲ್ಲಿ ಬುಧವಾರ ಗಮನ ಸೆಳೆಯುವ ಸೂಚನೆಯಡಿ ಕಾಂಗ್ರೆಸ್‌ನ ಕೃಷ್ಣಬೈರೇಗೌಡರ ಪ್ರಶ್ನೆಗೆ ಅವರು ಉತ್ತರಿಸಿದರು.

‘ನಿಗಮದ ನೋಂದಣಿ ಆಗದೇ ಹಣವನ್ನು ಖರ್ಚು ಮಾಡಲು ಬರುವುದಿಲ್ಲ. ನಿಗಮ ಸ್ಥಾಪನೆಗಾಗಿ ಅರ್ಜಿ ಮುಂದೆ ಬಂದಿದೆ. ಆದಷ್ಟು ಬೇಗ ನೋಂದಣಿ ಮುಗಿಸಿ ಹಣವನ್ನು ಖರ್ಚು ಮಾಡಲಿದ್ದೇವೆ’ ಎಂದು ಭರವಸೆ ನೀಡಿದರು. ವಿಷಯ ಪ್ರಸ್ತಾಪಿಸಿದ ಕೃಷ್ಣ ಬೈರೇಗೌಡ, ನಿಗಮ ರಚನೆ ಮಾಡಿ ₹500 ಕೋಟಿ ಅನುದಾನ ನೀಡುವುದಾಗಿ ಸರ್ಕಾರ ಕಳೆದ ವರ್ಷವೇ ಘೋಷಣೆ ಮಾಡಿತ್ತು. ಆದರೆ, ಇಲ್ಲಿಯವರೆಗೆ ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ. ಸರ್ಕಾರ ಬಡ ಒಕ್ಕಲಿಗರ ಹೆಸರಿನಲ್ಲಿ ಪ್ರಚಾರ ತೆಗೆದುಕೊಂಡಿತು ಎಂದು ಅವರು ತರಾಟೆಗೆ ತೆಗೆದುಕೊಂಡರು.

ಆಗ ಮಧ್ಯ ಪ್ರವೇಶಿಸಿ ಮಾತನಾಡಿದ ಬಿಜೆಪಿಯ ಕೆ.ಜಿ.ಬೋಪಯ್ಯ, ‘ಒಕ್ಕಲಿಗರ ನಿಗಮದ ವಿಚಾರ ಸ್ವಲ್ಪ ತಡವಾಗಿದೆ. ಆದರೆ, ಒಕ್ಕಲಿಗರ ಸಂಘದ ಆಸ್ತಿ ಏನಾಯ್ತು. ಎಲ್ಲಿ ಹೋಯ್ತು ಹೇಳಿ’ ಎಂದು ಕಾಲೆಳೆದರು.

ಕ್ರೌರ್ಯದ ವಿಜೃಂಭಣೆ, ವಿಷಾದದ ನಿಟ್ಟುಸಿರು

ಇತಿಹಾಸದ ದಾಖಲೆ ಆಧರಿತ ಸಾಕ್ಷ್ಯಚಿತ್ರದಂತೆ ಗೋಚರಿಸುವ ಸಿನಿಮಾ ವಿವೇಕ್ ಅಗ್ನಿಹೋತ್ರಿ ಅವರ ನಿರ್ದೇಶನದ ‘ದಿ ಕಾಶ್ಮೀರ್ ಫೈಲ್ಸ್’. ಮೂರು ದಶಕಗಳ ಹಿಂದೆ ಹೀಗಾಗಿತ್ತು ಎಂದು ಚಿತ್ರದುದ್ದಕ್ಕೂ ತೋರಿಸುವ ದೃಶ್ಯಾವಳಿಗಳು ಭೀಕರವಾಗಿದ್ದು, ಬಲವಾಗಿ ಕಾಡುತ್ತವೆ. ಹಿಂಸೆಯೇ ತೆರೆಯ ಮೇಲೆ ಮೆರವಣಿಗೆ ಹೊರಡುತ್ತದೆ.

1990ರ ಕಾಶ್ಮೀರಿ ಪಂಡಿತರ ನರಮೇಧಕ್ಕೆ ಕಾರಣರಾದ ಶಕ್ತಿಗಳನ್ನಷ್ಟೇ ನೇರವಾಗಿ ಅಪರಾಧಿಗಳು ಎಂದು ನೋಡಬೇಕೇ? ಅದಕ್ಕೆ ಮೌನ ಸಮ್ಮತಿ ನೀಡಿದ ನಮ್ಮ ವ್ಯವಸ್ಥೆಯೂ (ಪಕ್ಷಾತೀತವಾಗಿ) ಅಷ್ಟೇ ಹೊಣೆಗಾರ ಅಲ್ಲವೇ ಎಂಬ ಪ್ರಶ್ನೆಯನ್ನೂ ಈ ಸಿನಿಮಾ ಎತ್ತುತ್ತದೆ. ದೇಶದ ಬಗೆಹರಿಯದ ಹಲವಾರು ವಿವಾದಗಳಂತೆಯೇ ಇದನ್ನೂ ಜೀವಂತವಾಗಿಟ್ಟು ಲಾಭ ಪಡೆಯಲು ಎಲ್ಲರೂ ‘ಪ್ರಾಮಾಣಿಕ ಪ್ರಯತ್ನ’ ಮಾಡಿದವರಲ್ಲವೇ ಎಂಬ ಪ್ರಶ್ನೆಯೂ ಕಾಡದಿರದು. ಕೊನೆಗೆ ಒಂದು ವಿಷಾದದ ಮೌನದೊಂದಿಗೆ ಪ್ರೇಕ್ಷಕ ಚಿತ್ರಮಂದಿರದಿಂದ ಹೊರ ಬರುತ್ತಾನೆ.

ಯಾರ ಸಿದ್ಧಾಂತಗಳು ಏನೇ ಇರಲಿ, ಅವುಗಳಿಗೆ ಕೊನೆಗೂ ಬಲಿಯಾಗುವವರು ಸಾಮಾನ್ಯರಲ್ಲಿ ಸಾಮಾನ್ಯರು. ಈ ಚಿತ್ರದಲ್ಲಿ ಶ್ರೀಸಾಮಾನ್ಯರು ಅಂದರೆ ಪಂಡಿತ ಸಮುದಾಯದವರು. ಕ್ರೌರ್ಯಕ್ಕೆ ಬಲಿಯಾಗುವವರಲ್ಲಿ ಬಹುಸಂಖ್ಯಾತರು ಪಂಡಿತ ಸಮುದಾಯದವರೇ. ಆದರೆ ಕೃತಿಯ ತೀವ್ರತೆಯನ್ನು ಹೆಚ್ಚಿಸಲು ಬಲಿಯಾದವರು ಹಿಂದೂಗಳು ಎಂದು ಅಲ್ಲಲ್ಲಿ ವಿಶಾಲ ‘ಕ್ಯಾನ್ವಾಸ್’ನಲ್ಲಿ ಹೇಳಲಾಗಿದೆ.

‘ದಿ ಕಾಶ್ಮೀರ್ ಫೈಲ್ಸ್’ನಲ್ಲಿ ಅನುಪಮ್ ಖೇರ್

90ರ ಕಾಲಘಟ್ಟದ ಪತ್ರಿಕಾ ವರದಿಗಳು, ಸಾವುನೋವಿನ ಮೌಖಿಕ ಕಥನಗಳು, ಒಂದಿಷ್ಟು ಚರ್ಚೆಗಳ ಆಧಾರದಲ್ಲಿ ಈ ಫೈಲುಗಳು ಸಿದ್ಧವಾಗಿವೆ. ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಅವರ ಅಧ್ಯಯನ, ನಿರೂಪಣೆಯಲ್ಲಿ ನಿರ್ದಾಕ್ಷಿಣ್ಯ, ಧೈರ್ಯದ ಕೃತಿಯಾಗಿ ಈ ಚಿತ್ರ ಎದ್ದು ನಿಂತಿದೆ.

ಮತಾಂತರಗೊಳ್ಳಿ, ಸಾಯಿರಿ ಇಲ್ಲವೇ ಓಡಿಹೋಗಿ ಈ ಘೋಷವಾಕ್ಯವನ್ನೇ ಪದೇ ಪದೇ ಹೇಳುವ ಮೂಲಭೂತವಾದಿಗಳು ಕಾಶ್ಮೀರವನ್ನು ಧರ್ಮದ ನೆಲೆಯಲ್ಲೇ ಬದಲಾಯಿಸಲು ಹೊರಟ ಕ್ರೌರ್ಯ ತೆರೆಯ ಮೇಲೆ ವಿಜೃಂಭಿಸಿದೆ. ಹಿಂಸೆಯ ತೀವ್ರತೆಯನ್ನು ಕಡಿಮೆ ಮಾಡಬಹುದಿತ್ತೇನೋ ಎಂಬ ಪ್ರಶ್ನೆ ಮತ್ತೆ ಮತ್ತೆ ಕಾಡುತ್ತದೆ.

ಕೈಕಟ್ಟಿಕೊಳ್ಳಲೇಬೇಕಾದ ಸ್ಥಿತಿಯಲ್ಲಿ ಅಧಿಕಾರಿ ವರ್ಗ (ಪುನೀತ್ ಇಸ್ಸರ್, ಮಿಥುನ್ ಚಕ್ರವರ್ತಿ), ಬದುಕುವ ಅನಿವಾರ್ಯತೆಯಲ್ಲಿ ಸತ್ಯ ಹೇಳಲಾಗದ ಮಾಧ್ಯಮ (ಅತುಲ್ ಶ್ರೀವಾಸ್ತವ), ಅಧಿಕಾರ ದಾಹದಿಂದ ಹಿಂಸೆಗೆ ಮೌನ ಸಮ್ಮತಿ ನೀಡುವ ಕಾಶ್ಮೀರದ ರಾಜಕಾರಣ, ಉರಿಯುವ ಬೆಂಕಿಗೆ ತುಪ್ಪದಂತೆ ವಿದ್ಯಾರ್ಥಿಗಳ (ದರ್ಶನ್ ಕುಮಾರ್) ತಲೆಗೆ ಕಾಶ್ಮೀರದ ಕುರಿತು ತೀವ್ರ ಚಿಂತನೆ ತುರುಕುವ ವಿಶ್ವವಿದ್ಯಾಲಯದ ಪ್ರೊಫೆಸರ್ ರಾಧಿಕಾ ಮೆನನ್ (ಪಲ್ಲವಿ ಜೋಷಿ) ಹೀಗೆ ಒಂದು ಹಿಂಸೆ 30 ವರ್ಷಗಳ ಕಾಲ ಕಾವು ಉಳಿಸಿಕೊಂಡು ಹಾಗೇ ಉಳಿಯಲು ಇವೆಲ್ಲವೂ ಕಾರಣಗಳು ಎಂದೆನಿಸುತ್ತದೆ. ಕಾಶ್ಮೀರವನ್ನು ಇನ್ನೂ ಪ್ರತ್ಯೇಕವಾಗಿಯೇ ಉಳಿಸಿಕೊಳ್ಳುವ ಪ್ರಯತ್ನಗಳ ಗುಪ್ತಗಾಮಿನಿಯನ್ನು ಈ ಪಾತ್ರಗಳ ಮೂಲಕ ಢಾಳಾಗಿ ಕಾಣಿಸಿದ್ದಾರೆ ನಿರ್ದೇಶಕರು. ಪಂಡಿತರ ದನಿಯಾಗಿ ಚಿತ್ರದ ಕೊನೆಯವರೆಗೂ ಉಳಿಯುವ ಪುಷ್ಕರನಾಥ ಪಂಡಿತ್ (ಅನುಪಮ್ ಖೇರ್) ಇಡೀ ಘಟನೆಯ ಕಥನಕಾರರಾಗಿ ಕಾಡುತ್ತಾರೆ.

ಕಥೆ ಎರಡು ಪಥಗಳಲ್ಲಿ ಸಾಗುತ್ತದೆ. ಒಂದು 1990ರ ಆಸುಪಾಸಿನ ಕಾಲಘಟ್ಟ. ಇನ್ನೊಂದು 2016ರ ನಂತರದ ಕಾಲಘಟ್ಟ. ಸಂವಿಧಾನದ ಪರಿಚ್ಛೇದ 370ಅನ್ನು ತೆಗೆದುಹಾಕಿದ ಬಳಿಕವೂ ಅಲ್ಲಲ್ಲಿ ಪಂಡಿತರಿಗೆ ಹಾಗೇ ಉಳಿದಿರುವ ಭಯದ ಮನಃಸ್ಥಿತಿ... ಹೀಗೆ ಹಿನ್ನೆಲೆ ಮುನ್ನೆಲೆಯನ್ನು ಪ್ರತ್ಯೇಕ ಬ್ಲಾಕ್‌ಗಳಲ್ಲಿ ಎಲ್ಲಿಯೂ ಏಕತಾನತೆ ಅನಿಸದಂತೆ ಕೊಂಡೊಯ್ಯಲಾಗಿದೆ. ಅಬ್ಬರದ ಸಂಗೀತವಿಲ್ಲದ ಒಂಟಿ ದನಿಯ ಹಾಡುಗಳು ಕಾಡುತ್ತವೆ. ದೃಶ್ಯಗಳಂತೂ ದಯನೀಯತೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿವೆ.

ಶರತ್ ಹೆಗ್ಡೆ

ನಾವು ನೋಡಿದ ಸಿನಿಮಾ

ದಿ ಕಾಶ್ಮೀರ್ ಫೈಲ್ಸ್

- **ನಿರ್ಮಾಣ:** ಜೀ ಸ್ಟುಡಿಯೋಸ್, ಅಭಿಷೇಕ್ ಅಗರ್‌ವಾಲ್ ಆರ್ಟ್ಸ್
- **ನಿರ್ದೇಶನ:** ವಿವೇಕ್ ಅಗ್ನಿಹೋತ್ರಿ
- **ತಾರಾಗಣ:** ಅನುಪಮ್ ಖೇರ್, ಮಿಥುನ್ ಚಕ್ರವರ್ತಿ, ದರ್ಶನ್ ಕುಮಾರ್, ಪಲ್ಲವಿ ಜೋಷಿ, ಪ್ರಕಾಶ್ ಬೆಳವಾಡಿ

ದಿನದ ಬೆಳವಣಿಗೆಗಳು

- ಉಕ್ರೇನ್ ಮೇಲೆ ಯುದ್ಧ ನಡೆಸುತ್ತಿರುವುದಕ್ಕೆ ರಷ್ಯಾವನ್ನು ಮಾನವ ಹಕ್ಕುಗಳ ಸಂಸ್ಥೆಯಿಂದ 47 ರಾಷ್ಟ್ರಗಳಿರುವ ಯುರೋಪಿಯನ್ ಕೌನ್ಸಿಲ್ ವಜಾಗೊಳಿಸಿದೆ
- ಉಕ್ರೇನ್‌ನಲ್ಲಿ ಸೇನಾ ಕಾರ್ಯಾಚರಣೆ ಯಶಸ್ವಿಯಾಗಿದೆ. ರಷ್ಯಾ ಬೆದರಿಸಲು ಉಕ್ರೇನ್‌ನ್ನು 'ಚಿಮ್ಮು ಹಲಗೆ'ಯಾಗಿಸಲು ಆಸ್ಪದ ಕೊಡುವುದಿಲ್ಲ. ಜಾಗತಿಕ ಪ್ರಾಬಲ್ಯಕ್ಕೆ ಯತ್ನಿಸಿದ್ದ ಪಶ್ಚಿಮ ರಾಷ್ಟ್ರಗಳ ಪ್ರಯತ್ನ ವಿಫಲ. ಆರ್ಥಿಕ ನಿರ್ಬಂಧಗಳೂ ಫಲಿಸಿಲ್ಲ– ವ್ಲಾಡಿಮಿರ್ ಪುಟಿನ್
- ರಷ್ಯಾಷ ಫೆಡರಲ್ ಮೆಡಿಕಲ್-ಬಯೋಲಾಜಿಕಲ್ ಏಜೆನ್ಸಿಯ ಮುಖ್ಯಸ್ಥ ವೆರೋನಿಕಾ ಸ್ಕೊವ್ಟ್ರೋವಾ ಅವರೊಂದಿಗೆ ಪುಟಿನ್ ಮಹತ್ವದ ಸಭೆ ನಡೆಸಿದರು. ಆಂಪ್ಲಿಟೆಸ್ಟ್ ಸಿಸ್ಟಮ್ ಮತ್ತು ಮಿರ್-19 ಆಂಟಿವೈರಲ್ ಔಷಧಿ ಬಗ್ಗೆ ಚರ್ಚಿಸಿದರು
- ಉಕ್ರೇನಿನ 111 ವಿಮಾನಗಳು, 160 ಡ್ರೋನ್‌ಗಳು, 1,000ಕ್ಕೂ ಹೆಚ್ಚು ಟ್ಯಾಂಕ್‌ಗಳು, ಮಿಲಿಟರಿ ವಾಹನಗಳು ನಾಶ- ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರ ಐಗೋರ್ ಕೊನಾಶೆಂಕೋವ್
- ಕಳೆದ 24 ತಾಸುಗಳಲ್ಲಿ 90 ಸಾವಿರ ನಿರಾಶ್ರಿತರು ಉಕ್ರೇನ್ ತೊರೆದಿದ್ದಾರೆ. ಈವರೆಗೆ 40 ಲಕ್ಷ ನಿರಾಶ್ರಿತರು ದೇಶ ಬಿಟ್ಟಿದ್ದಾರೆ– ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿ
- ಯುದ್ಧ ಆರಂಭವಾದ ಮೇಲೆ ರಷ್ಯಾ– ಅಮೆರಿಕ ನಡುವೆ ಮೊದಲ ಬಾರಿಗೆ ಉನ್ನತಮಟ್ಟದ ಮಾತುಕತೆ ನಡೆದಿದೆ.
- 'ರಷ್ಯಾ ರಾಜತಾಂತ್ರಿಕತೆಯ ಬಗ್ಗೆ ಗಂಭೀರವಾಗಿದ್ದರೆ, ಉಕ್ರೇನ್ ಮೇಲೆ ದಾಳಿ ನಿಲ್ಲಿಸಬೇಕು' ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್, ರಷ್ಯಾದ ಜನರಲ್ ನಿಕೊಲಾಯ್ ಪತ್ರುಶೇವ್ ಅವರಿಗೆ ಸೂಚಿಸಿರುವುದಾಗಿ ಶ್ವೇತಭವನ ಹೇಳಿದೆ
- ರಷ್ಯಾದ ಮತ್ತೊಬ್ಬ ಮೇಜರ್ ಜನರಲ್ ಒಲೆಗ್ ಮಿತ್ಯೇವ್ ಹತ್ಯೆ- ಉಕ್ರೇನ್ ರಕ್ಷಣಾ ಸಚಿವಾಲಯ
- ಯುದ್ಧ ವರದಿಗೆ ಹೋಗಿದ್ದ 'ಫಾಕ್ಸ್ ಸುದ್ದಿ' ಟಿ.ವಿಯ ಇಬ್ಬರು ಪತ್ರಕರ್ತರು ಕೀವ್ ಬಳಿ ಗುಂಡಿನ ದಾಳಿಗೆ ಬಲಿಯಾಗಿದ್ದು, ಮತ್ತೊಬ್ಬ ವರದಿಗಾರ ಗಾಯಗೊಂಡಿದ್ದಾರೆ

ಉಕ್ರೇನ್‌ಗೆ 800 ಶತಕೋಟಿ ಡಾಲರ್ ಮೊತ್ತದ ಬೃಹತ್ ಮಿಲಿಟರಿ ನೆರವು

'ತಟಸ್ಥ ರಾಷ್ಟ್ರ' ಪ್ರಸ್ತಾವ ತಿರಸ್ಕಾರ

ವಾಷಿಂಗ್ಟನ್, ಕೀವ್, ಲುವಿವ್, (ರಾಯಿಟರ್ಸ್/ಎಪಿ/ಎಎಫ್‌ಪಿ): ಅಮೆರಿಕದಿಂದ ಮತ್ತೊಮ್ಮೆ ಭಾರಿ ಪ್ರಮಾಣದಲ್ಲಿ ಮಿಲಿಟರಿ ನೆರವು ಪಡೆಯುವಲ್ಲಿ ಯಶಸ್ವಿಯಾಗಿರುವ ಉಕ್ರೇನ್, ತಟಸ್ಥ ರಾಷ್ಟ್ರವಾಗಿ ಉಳಿಯುವಂತೆ ರಷ್ಯಾ ಮುಂದಿಟ್ಟಿದ್ದ ಪ್ರಸ್ತಾವವನ್ನು ಬುಧವಾರ ತಿರಸ್ಕರಿಸಿದೆ.

ಬುಧವಾರ ಅಮೆರಿಕದ ಸೆನೆಟ್ ಮತ್ತು ಜನಪ್ರತಿನಿಧಿಗಳ ಸಭೆ ಉದ್ದೇಶಿಸಿ ವರ್ಚುವಲ್ ಮೂಲಕ ಐತಿಹಾಸಿಕ ಭಾಷಣ ಮಾಡಿದ ಝೆಲೆನ್‌ಸ್ಕಿ, ರಷ್ಯಾ ವಿರುದ್ಧ ಹೋರಾಡಲು ಸಂಪೂರ್ಣ ನೆರವು ನೀಡುವಂತೆ ಕಾಂಗ್ರೆಸ್‌ಗೆ ಮನವಿ ಮಾಡಿದರು.

ಝೆಲೆನ್‌ಸ್ಕಿ ಅವರ ಐತಿಹಾಸಿಕ ಭಾಷಣದ ವೇಳೆಯೇ ಕಾಕತಾಳೀಯವಾಗಿ, 'ಬೈಡೆನ್ ಅವರು ಉಕ್ರೇನ್‌ಗೆ 800 ಶತಕೋಟಿ ಡಾಲರ್ ಮೊತ್ತದ ಬೃಹತ್ ಮಿಲಿಟರಿ ನೆರವಿನ ಮತ್ತೊಂದು ಪ್ಯಾಕೇಜ್‌ಗೆ ಸಹಿಹಾಕಿದ್ದಾರೆ. ಈ ಪ್ಯಾಕೇಜ್ ಹೆಚ್ಚು ಟ್ಯಾಂಕ್ ಪ್ರತಿರೋಧ ಮತ್ತು ವಿಮಾನ ಪ್ರತಿರೋಧ ಕ್ಷಿಪಣಿಗಳನ್ನು ಒಳಗೊಂಡಿದೆ' ಎಂದು ಶ್ವೇತಭವನದ ಅಧಿಕಾರಿಯೊಬ್ಬರು ತಿಳಿಸಿದರು.

ಮತ್ತಷ್ಟು ಕಠಿಣ ನಿರ್ಬಂಧಕ್ಕೆ ಮನವಿ: 'ರಷ್ಯಾ ಪಡೆಗಳು ಉಕ್ರೇನ್‌ನಲ್ಲಿ ಮಾರಣಹೋಮ ನಡೆಸಿ, ಸರ್ವನಾಶ ಮಾಡುತ್ತಿವೆ. ಜನರು ನಿರಾಶ್ರಿತರಾಗಿ ದೇಶ ತೊರೆದಿದ್ದಾರೆ. ರಷ್ಯಾ ಆಕ್ರಮಣ ತಡೆಯಲು ನಮಗೆ ಹೆಚ್ಚಿನ ನೆರವು ನೀಡಬೇಕು. ರಷ್ಯಾದ ಮೇಲೆ ಮತ್ತಷ್ಟು ಕಠಿಣ ನಿರ್ಬಂಧಗಳನ್ನು ಹೇರಬೇಕು' ಎಂದು ಝೆಲೆನ್‌ಸ್ಕಿ ಮನವಿ ಮಾಡಿದರು.

ಪರ್ಲ್‌ ಹಾರ್ಬರ್ ಮತ್ತು ಸೆಪ್ಟೆಂಬರ್ 11, 2001ರ ಭಯೋತ್ಪಾದಕ ದಾಳಿಗಳನ್ನು ಉಲ್ಲೇಖಿಸಿದ ಅವರು, 'ರಷ್ಯಾದ ವಿರುದ್ಧ ಉಕ್ರೇನ್‌ನ ಹೋರಾಟಕ್ಕೆ ನಿಮ್ಮ ಅಗತ್ಯವಿದೆ' ಎಂದು ವಿನಂತಿಸಿದರು.

ವಿಡಿಯೊ ಪರದೆಯ ಮೇಲೆ ಝೆಲೆನ್‌ಸ್ಕಿ ಕಾಣಿಸಿಕೊಂಡ ತಕ್ಷಣ ಎಲ್ಲ ಸಂಸದರು ಚಪ್ಪಾಳೆ ತಟ್ಟಿ ಸ್ವಾಗತಿಸಿದರು.

ಇಂತಹ ವಿಚಾರದಲ್ಲಿ ಅಮೆರಿಕದ ಕಾಂಗ್ರೆಸ್‌ನಲ್ಲಿ ನೇರ ಬೆಂಬಲ ವ್ಯಕ್ತವಾಗುವುದು ವಿರಳ. ಆದರೆ, ರಿಪಬ್ಲಿಕನ್ ಮತ್ತು ಡೆಮಾಕ್ರಟಿಕ್ ಪಕ್ಷಗಳ ಪ್ರತಿನಿಧಿಗಳು ಪಕ್ಷಭೇದ ಮರೆತು, ಉಕ್ರೇನ್‌ಗೆ ನೆರವು ನೀಡುವಂತೆ ಅಧ್ಯಕ್ಷ ಜೋ ಬೈಡನ್ ಅವರನ್ನು ಒತ್ತಾಯಿಸಿದರು.

ಮಂಗಳವಾರವಷ್ಟೇ ಕೆನಡಾದ ಸಂಸತ್ತು ಉದ್ದೇಶಿಸಿ, ರಷ್ಯಾದ ಮೇಲೆ ಪಾಶ್ಚಿಮಾತ್ಯ ರಾಷ್ಟ್ರಗಳು ಹೆಚ್ಚಿನ ನಿರ್ಬಂಧಗಳನ್ನು ಹೇರಬೇಕು ಮತ್ತು 'ಹಾರಾಟ ನಿಷೇಧ ವಲಯ' ಘೋಷಿಸಬೇಕು ಎಂದು ಝೆಲೆನ್‌ಸ್ಕಿ ಒತ್ತಾಯಿಸಿದ್ದರು.

ಯುರೋಪಿನ ಪಾರ್ಲಿಮೆಂಟ್ ಮತ್ತು ಬ್ರಿಟನ್ ಪಾರ್ಲಿಮೆಂಟ್ ಸೇರಿದಂತೆ ಹಲವು ಪಾಶ್ಚಾತ್ಯ ರಾಷ್ಟ್ರಗಳ ನಾಯಕರನ್ನು ಉದ್ದೇಶಿಸಿ ಭಾಷಣ ಮಾಡುವ ಮೂಲಕ ಝೆಲೆನ್‌ಸ್ಕಿ, ರಷ್ಯಾ ವಿರುದ್ಧ ಹೋರಾಡಲು ಬೆಂಬಲ ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದ್ದಾರೆ.

ರಷ್ಯಾಗೆ ತಿರುಗೇಟು: ರಷ್ಯಾ ಪಡೆಗಳಿಂದ ಬುಧವಾರ ಬೆಳಿಗ್ಗೆ ಕೀವ್, ಹಾರ್ಕಿವ್, ಕೆರ್ಸಾನ್, ಮರಿಯುಪೋಲ್, ಮೈಕೋಲೈವ್, ಬುಕಾ, ಜೈಟೊಮಿರ್, ಇವಾನ್ ಕಿವ್ ಸೇರಿ 12 ನಗರಗಳ ಮೇಲೆ ಕ್ಷಿಪಣಿ ಮತ್ತು ಶೆಲ್ ದಾಳಿ ನಡೆಯಿತು.

ಈವರೆಗೆ ಮಂದಗತಿಯಲ್ಲೇ ಪ್ರತಿರೋಧ ತೋರುತ್ತಿದ್ದ ಉಕ್ರೇನ್ ಪಡೆಗಳು, ಈಗ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ರಷ್ಯಾ ಪಡೆಗಳಿಗೆ ಪ್ರತ್ಯುತ್ತರ ಕೊಡಲಾರಂಭಿಸಿವೆ. ರಷ್ಯಾ ಪರ ಪ್ರತ್ಯೇಕವಾದಿಗಳು ಹೆಚ್ಚಿರುವ ಮತ್ತು ರಷ್ಯಾದ ನಿಯಂತ್ರಣದಲ್ಲಿರುವ ಕೆರ್ಸಾನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ವಾಯು ನೆಲೆಯ ಮೇಲೆ ಉಕ್ರೇನ್ ಬುಧವಾರ ಕ್ಷಿಪಣಿ ದಾಳಿ ನಡೆಸಿದೆ. ಇದರಿಂದ ಹಲವು ಹೆಲಿಕಾಪ್ಟರ್‌ಗಳು ಮತ್ತು ಯುದ್ಧ ವಾಹನಗಳು ಸುಟ್ಟು ಕರಕಲಾಗಿರುವುದನ್ನು ಪ್ಲಾನೆಟ್ ಲ್ಯಾಬ್ಸ್ ಪಿಬಿಸಿಯ ಉಪಗ್ರಹ ಸೆರೆ ಹಿಡಿದಿದ್ದು ಈ ಚಿತ್ರವನ್ನು ಅಸೋಸಿಯೇಟೆಡ್ ಪ್ರೆಸ್ ಬಿಡುಗಡೆ ಮಾಡಿದೆ.

'ಕೆರ್ಸಾನ್ ವಿಮಾನ ನಿಲ್ದಾಣದಲ್ಲಿ ಹೋರಾಟ ಮುಂದುವರಿದಿದೆ. ಮಂಗಳವಾರ ನಡೆದ ಪ್ರಬಲ ಸ್ಫೋಟಗಳು ಆ ಪ್ರದೇಶವನ್ನು ನಡುಗಿಸಿವೆ' ಎಂದು ಉಕ್ರೇನ್ ಅಧ್ಯಕ್ಷರ ಕಚೇರಿ ಹೇಳಿದೆ.

ಎರಡು ರಾಷ್ಟ್ರಗಳ ನಡುವೆ ಶಾಂತಿಮಾತುಕತೆ ಬಹುತೇಕ ಮುರಿದುಬಿದ್ದಿದ್ದು, ಸಂಘರ್ಷ ತೀವ್ರವಾಗುವ ಸನ್ನಿವೇಶ ನಿರ್ಮಾಣವಾಗಿದೆ.

ತುರ್ತು ಸಭೆಗೆ ಮಹತ್ವ: ಅಮೆರಿಕದ ಕಾಂಗ್ರೆಸ್ ಉದ್ದೇಶಿಸಿ ಝೆಲೆನ್‌ಸ್ಕಿ ಮಾಡಿದ ಐತಿಹಾಸಿಕ ಭಾಷಣ, ರಷ್ಯಾದ ಆಕ್ರಮಣ ತಡೆಯಲು ನ್ಯಾಟೊ ಮಿತ್ರರಾಷ್ಟ್ರಗಳು ಮಧ್ಯಪ್ರವೇಶಿಸುವಂತೆ ಬೈಡನ್ ತ್ವರಿತಗತಿಯಲ್ಲಿ ಮನವಿ ಮಾಡಲಿದ್ದಾರೆ ಎನ್ನುವ ನಿರೀಕ್ಷೆಯನ್ನೂ ಮೂಡಿಸಿದೆ.

ನ್ಯಾಟೊ ಮಿತ್ರರಾಷ್ಟ್ರಗಳ ತುರ್ತು ಶೃಂಗಸಭೆ ಮುಂದಿನ ವಾರ ಬ್ರಸೆಲ್ಸ್‌ನಲ್ಲಿ ನಡೆಯಲಿದ್ದು, ಅಮೆರಿಕ ಅಧ್ಯಕ್ಷ ಜೋ ಬೈಡನ್ ಇದರಲ್ಲಿ ಪಾಲ್ಗೊಳ್ಳುವುದರಿಂದ ಈ ತುರ್ತು ಸಭೆಗೆ ಮತ್ತಷ್ಟು ಮಹತ್ವ ಬಂದಿದೆ.

ರಷ್ಯಾ ಆಕ್ರಮಣ ತಡೆಯಲು ನೇರವಾಗಿ ಪಾಲ್ಗೊಳ್ಳುವಂತೆ ಝೆಲೆನ್‌ಸ್ಕಿ ಮಾಡಿದ್ದ ಮನವಿ ಪುರಸ್ಕರಿಸಿದರೆ ಮೂರನೇ ಮಹಾಯುದ್ಧಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ ಎಂದು ನ್ಯಾಟೊ ಸಂಘರ್ಷದಿಂದ ದೂರ ಉಳಿದು, ಪರೋಕ್ಷವಾಗಿ ಶಸ್ತ್ರಾಸ್ತ್ರಗಳ ನೆರವನ್ನು ಒದಗಿಸುತ್ತಾ ಬಂದಿದೆ.

ಮಾತುಕತೆಯ 'ರಾಜಿ' ಫಲಿತಾಂಶವು ಉಕ್ರೇನ್ ಅನ್ನು ಸ್ವೀಡನ್ ಮತ್ತು ಆಸ್ಟ್ರಿಯಾದಂತೆ ತಟಸ್ಥ ರಾಷ್ಟ್ರವಾಗಿ ಉಳಿಸಲಿದೆ ಎಂದು ರಷ್ಯಾದ ವಕ್ತಾರ ಡಿಮಿಟ್ರಿ ಪೆಸ್ಕೊವ್ ಕೂಡ ಹೇಳಿದ್ದರು. ಇದರಿಂದ ಯುದ್ಧ ಅಂತ್ಯಗೊಳ್ಳಲಿದೆ ಎಂಬ ನಿರೀಕ್ಷೆ ಇತ್ತು. ಆದರೆ, ಈಗ ಸಂಘರ್ಷ ತಾರಕ್ಕೆ ಏರಿರುವುದರಿಂದ ಶಾಂತಿ ಮಾತುಕತೆ ಮುರಿದುಬಿದ್ದಿದೆ.



ಹಾರ್ಕಿವ್‌ನ ಮಾರುಕಟ್ಟೆಯಲ್ಲಿ ಕಟ್ಟಡವೊಂದು ಶೆಲ್ ದಾಳಿಗೆ ತುತ್ತಾಗಿ ಹೊತ್ತಿಕೊಂಡ ಬೆಂಕಿಯನ್ನು ನಂದಿಸಿದ ಅಗ್ನಿಶಾಮಕ ಸಿಬ್ಬಂದಿ – ಎಎಫ್‌ಪಿ ಚಿತ್ರ

ರೈಲು ನಿಲ್ದಾಣಕ್ಕೆ ಅಪ್ಪಳಿಸಿದ ರಷ್ಯಾದ ರಾಕೆಟ್

ದಕ್ಷಿಣ ಉಕ್ರೇನ್‌ನ ರೈಲು ನಿಲ್ದಾಣ ಗುರಿಯಾಗಿಸಿ ರಷ್ಯಾ ಉಡಾಯಿಸಿದ ಕ್ಷಿಪಣಿ, ರೈಲು ನಿಲ್ದಾಣಕ್ಕೆ ಅಪ್ಪಳಿಸಿ ಬೆಂಕಿ ಹೊತ್ತಿ ಉರಿದಿದೆ. ಸಾವಿರಾರು ನಿರಾಶ್ರಿತರು ಸುರಕ್ಷಿತ ಸ್ಥಳಗಳಿಗೆ ತೆರಳಲು ಝಪ್ರೋಝಿಯಾದ ರೈಲು ನಿಲ್ದಾಣ ಬಳಸುತ್ತಿದ್ದರು. ಸದ್ಯ ರಾಜಧಾನಿ ಕೀವ್ ನಗರ ಮತ್ತು ಸುತ್ತಮುತ್ತ ನಿಷೇಧಾಜ್ಞೆ ಜಾರಿಯಲ್ಲಿದೆ.

ಇದೇ ವೇಳೆ ರಾಜಧಾನಿ ಕೀವ್ ನಗರದ ಕೇಂದ್ರ ಭಾಗದಲ್ಲಿರುವ 12 ಅಂತಸ್ತಿನ ವಸತಿ ಕಟ್ಟಡದ ಮೇಲೆ ಮಂಗಳವಾರ ತಡರಾತ್ರಿ ರಷ್ಯಾ ಪಡೆಗಳು ಬಾಂಬ್ ದಾಳಿ ನಡೆಸಿವೆ. ಬಾಂಬ್ ಸ್ಫೋಟದಿಂದ ಕಟ್ಟಡ ಹೊತ್ತಿ ಉರಿದು, ಬೆಂಕಿಯ ಜ್ವಾಲೆ ಮತ್ತು ಹೊಗೆ ಮುಗಿಲೆತ್ತರಕ್ಕೆ ಆವರಿಸಿತ್ತು. ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದು, 37 ಮಂದಿಯನ್ನು ತುರ್ತು ಸೇವಾ ಸಿಬ್ಬಂದಿ ರಕ್ಷಿಸಿದ್ದಾರೆ.

ತಕ್ಷಣ ಯುದ್ಧ ನಿಲ್ಲಿಸಿ: ರಷ್ಯಾಕ್ಕೆ ಅಂತರರಾಷ್ಟ್ರೀಯ ನ್ಯಾಯಾಲಯ ಆದೇಶ

ದಿ ಹೇಗ್ (ಎಪಿ): ಉಕ್ರೇನ್‌ನಲ್ಲಿ ನಡೆಸುತ್ತಿರುವ ಯುದ್ಧವನ್ನು ತಕ್ಷಣ ನಿಲ್ಲಿಸುವಂತೆ ಅಂತರರಾಷ್ಟ್ರೀಯ ನ್ಯಾಯಾಲಯ ಬುಧವಾರ ರಷ್ಯಾಕ್ಕೆ ಆದೇಶ ನೀಡಿದೆ.

ನ್ಯಾಯಾಲಯದ ಮುಖ್ಯಸ್ಥ, ಅಮೆರಿಕದ ನ್ಯಾಯಮೂರ್ತಿ ಜೋಹಾನ್ ಇ. ಡಾನ್ಹ್ಯು, 'ರಷ್ಯಾವು ವಿಶೇಷ ಮಿಲಿಟರಿ ಕಾರ್ಯಾಚರಣೆಗಳನ್ನು ತಕ್ಷಣವೇ ಸ್ಥಗಿತಗೊಳಿಸಬೇಕು' ಎಂದು ಸೂಚಿಸಿದರು.

ಅಂತರರಾಷ್ಟ್ರೀಯ ನ್ಯಾಯಾಲಯದ ಈ ಆದೇಶವನ್ನು ರಷ್ಯಾ ಪಾಲಿಸುವುದು ಅನುಮಾನವೆಂದು ಹಲವು ರಾಷ್ಟ್ರಗಳು ಸಂದೇಹ ವ್ಯಕ್ತಪಡಿಸಿವೆ.

ರಷ್ಯಾ ಎರಡು ವಾರಗಳ ಹಿಂದೆ ಆರಂಭಿಸಿದ ಆಕ್ರಮಣ ಸಂಬಂಧ ಉಕ್ರೇನ್, ತಕ್ಷಣ ಮಧ್ಯಪ್ರವೇಶಿಸಲು ಅಂತರರಾಷ್ಟ್ರೀಯ ನ್ಯಾಯಾಲಯದ ಮೊರೆ ಹೋಗಿತ್ತು. ನರಮೇಧ ವಿರುದ್ಧದ 1948ರ ಸಮಾವೇಶವನ್ನು ರಷ್ಯಾ ಉಲ್ಲಂಘಿಸಿದೆ. ಉಕ್ರೇನ್ ಮೇಲೆ ನರಮೇಧದ ಸುಳ್ಳು ಆರೋಪ ಹೊರಿಸಿ, ಇದನ್ನು ಆಕ್ರಮಣಕ್ಕೆ ನೆಪವಾಗಿಸಿಕೊಂಡಿದೆ ಎಂದು ಉಕ್ರೇನ್ ವಾದಿಸಿತ್ತು.

ಯುದ್ಧ ವಿರೋಧಿಸಿ ಸುದ್ದಿ ಪ್ರಸಾರಕ್ಕೆ ಅಡ್ಡಿ: ಉದ್ಯೋಗಿಗೆ ದಂಡ

ನ್ಯೂಯಾರ್ಕ್(ಎಪಿ): ರಷ್ಯಾದ ಸರ್ಕಾರಿ ಸ್ವಾಮ್ಯದ ಟಿವಿ ವಾಹಿನಿಯಲ್ಲಿ ಸುದ್ದಿ ನೇರ ಪ್ರಸಾರವಾಗುತ್ತಿದ್ದ ವೇಳೆ ಮಹಿಳಾ ಉದ್ಯೋಗಿಯೊಬ್ಬರು ಉಕ್ರೇನ್ ಮೇಲಿನ ದಾಳಿ ವಿರೋಧಿಸಿ ಫಲಕ ಪ್ರದರ್ಶಿಸಿದ ಸಂಬಂಧ ಆಕೆಗೆ ರಷ್ಯಾದ ನ್ಯಾಯಾಲಯ 30,000 ರೂಬಲ್ಸ್(₹21,270) ದಂಡ ವಿಧಿಸಿದೆ.

ರಷ್ಯಾದ ಸರ್ಕಾರಿ ಸ್ವಾಮ್ಯದ 'ಚಾನೆಲ್ ಒನ್' ಟಿವಿಯಲ್ಲಿ ಸೋಮವಾರ ಸಂಜೆ ಸುದ್ದಿ ನೇರ ಪ್ರಸಾರವಾಗುತ್ತಿತ್ತು. ಈ ವೇಳೆ ಟಿವಿ ಸ್ಟುಡಿಯೊಗೆ ನುಗ್ಗಿದ ಮರಿನಾ ಒವ್‌ಸ್ಯಾನ್ನಿಕೋವಾ 'ಯುದ್ಧ ಬೇಡ' ಮತ್ತು 'ರಷ್ಯಾ ನಾಗರಿಕರು ಯುದ್ಧದ ವಿರೋಧಿಸುತ್ತಾರೆ' ಎಂಬ ಭಿತ್ತಿಪತ್ರ ಪ್ರದರ್ಶಿಸಿದ್ದರು. ಇದರಿಂದ ಆ ಮಹಿಳೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

'ನನ್ನ ತಂದೆ ಉಕ್ರೇನ್ ಮೂಲದವರು. ತಾಯಿ ರಷ್ಯಾದವರು. ರಷ್ಯಾದ ಆಕ್ರಮಣಕಾರಿ ನೀತಿಗೆ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೇ ಕಾರಣ, ರಷ್ಯಾದ ಪ್ರಜೆಗಳು ಯುದ್ಧ ವಿರೋಧಿ ಪ್ರತಿಭಟನೆಗಳಲ್ಲಿ ಭಾಗವಹಿಸಬೇಕು' ಎಂದು ಮರಿನಾ ಕರೆ ನೀಡಿದ್ದರು.

ಈಕೆಯ ಧೈರ್ಯವನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಕೊಂಡಾಡಿದ್ದಾರೆ. ಆದರೆ, ಸುದ್ದಿ ಪ್ರಸಾರದ ವೇಳೆ ಅಡ್ಡಿಪಡಿಸುವುದು ಗಂಭೀರ ಸ್ವರೂಪದ ಅಪರಾಧ ಎಂದು ರಷ್ಯಾ ಕಿಡಿಕಾರಿದೆ.

ಉಕ್ರೇನ್‌ನ ಖರ್ಸನ್‌ನಲ್ಲಿರುವ ಖರ್ಸನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ವಾಯುನೆಲೆಯಲ್ಲಿ ಉಕ್ರೇನ್ ದಾಳಿಯಿಂದ ರಷ್ಯಾದ ಹೆಲಿಕಾಪ್ಟರ್‌ಗಳು ಮತ್ತು ವಾಹನಗಳಿಗೆ ಹಾನಿಯಾಗಿದೆ– ಎಪಿ ಚಿತ್ರ

ಕಿದ್ವಾಯಿ ಆಸ್ಪತ್ರೆಯಲ್ಲಿ ಪ್ರೋಟಾನ್ ಥೆರಪಿ ಸೌಲಭ್ಯ:

ಅನುದಾನ ಒದಗಿಸಲು ಕೇಂದ್ರಕ್ಕೆ ಮನವಿ

ನವದೆಹಲಿ: ಕ್ಯಾನ್ಸರ್ ರೋಗಿಗಳಿಗೆ ಪ್ರೋಟಾನ್ ಥೆರಪಿ ಸೌಲಭ್ಯ ಒದಗಿಸಲು ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಗೆ ವಿಶೇಷ ಅನುದಾನ ನೀಡಬೇಕು ಎಂದು ಕಾಂಗ್ರೆಸ್ ಸದಸ್ಯ ಡಾ.ಎಲ್. ಹನುಮಂತಯ್ಯ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯಸಭೆಯ ಶೂನ್ಯವೇಳೆಯಲ್ಲಿ ಬುಧವಾರ ಈ ವಿಷಯ ಪ್ರಸ್ತಾಪಿಸಿದ ಅವರು, ಸಂಸ್ಥೆಯಲ್ಲಿ ವಾರ್ಷಿಕ ಅಂದಾಜು 4.5 ಲಕ್ಷ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಈ ರೋಗಿಗಳ ಪೈಕಿ ಶೇ 20ರಷ್ಟು ರೋಗಿಗಳು ಹೊರ ರಾಜ್ಯದವರಾಗಿದ್ದಾರೆ. ಚಿಕಿತ್ಸೆಗೆ ದಾಖಲಾಗುವವರಲ್ಲಿ ಬಡವರೇ ಅಧಿಕ ಸಂಖ್ಯೆಯಲ್ಲಿದ್ದು, ದೂರದ ಊರುಗಳಿಂದ ಬರುತ್ತಾರೆ ಎಂದು ಹೇಳಿದರು.

ಬಡ ರೋಗಿಗಳಿಗೆ ಅಗತ್ಯ ಚಿಕಿತ್ಸೆ ಒದಗಿಸುವ ನಿಟ್ಟಿನಲ್ಲಿ ಸಂಸ್ಥೆಯನ್ನು ಮೇಲ್ದರ್ಜೆಗೆ ಏರಿಸಬೇಕಾಗಿದ್ದು, ಪ್ರೋಟಾನ್ ಥೆರಪಿ ಸೌಲಭ್ಯವನ್ನು ಒದಗಿಸಲು ಹಣಕಾಸಿನ ನೆರವು ಘೋಷಿಸಬೇಕಿದೆ ಎಂದರು.

ಈ ಆಸ್ಪತ್ರೆಯ ಶೇ 70ರಷ್ಟು ರೋಗಿಗಳಿಗೆ ರೇಡಿಯೊ ಥೆರಪಿಯನ್ನು ಹೈ ಎನರ್ಜಿ ಪ್ರೋಟಾನ್ ಮತ್ತು ಎಕ್ಸ್‌–ರೇ ಬಳಸುವ ಮೂಲಕ ನೀಡಲಾಗುತ್ತಿದೆ. ಪೂರ್ಣ ಪ್ರಮಾಣದ ಪ್ರೋಟಾನ್ ಥೆರಪಿ ಸೌಲಭ್ಯವನ್ನು ಒದಗಿಸಲು ₹ 550 ಕೋಟಿ ಅನುದಾನದ ಅಗತ್ಯವಿದೆ ಎಂದು ಅವರು ವಿವರಿಸಿದರು.

ಈ ಸಂಸ್ಥೆಯ ಕಲಬುರಗಿ ಮತ್ತು ತುಮಕೂರಿನ ಪ್ರಾದೇಶಿಕ ಘಟಕಗಳಿಗೆ ವಾರ್ಷಿಕ ₹ 45 ಕೋಟಿ ಒದಗಿಸಲಾಗುತ್ತಿದೆ ಎಂದ ಅವರು, ಆಸ್ಪತ್ರೆಯಲ್ಲಿ ಪೂರ್ಣ ಪ್ರಮಾಣದ ಸೌಲಭ್ಯವನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ವಿಶೇಷ ಅನುದಾನ ಒದಗಿಸಬೇಕು ಎಂದರು.

ಕ್ಯಾನ್ಸರ್ ಚಿಕಿತ್ಸೆ ಅತ್ಯಂತ ದುಬಾರಿ ಆಗಿರುವುದರಿಂದ ಈ ಸಂಸ್ಥೆಗೆ ಕೇಂದ್ರ ಸರ್ಕಾರವು ಅಗತ್ಯ ಅನುದಾನ ಒದಗಿಸಲು ಮುಂದಾಗಬೇಕು ಎಂದು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದರು.

'ರಾಜ್ಯಸಭೆಯ ಎಲ್ಲ ಸದಸ್ಯರು ಬೆಂಗಳೂರಿನ ಈ ಸಂಸ್ಥೆಗೆ ಮುಕ್ತವಾಗಿ ಆರ್ಥಿಕ ನೆರವು ನೀಡಬಹುದು. ನಾನೂ ಈ ಸಂಸ್ಥೆಗೆ ಆರ್ಥಿಕ ನೆರವು ನೀಡಿದ್ದೇನೆ. ಅನುದಾನ ಒದಗಿಸುವ ಕುರಿತು ಪರಿಗಣಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಲಾಗುವುದು' ಎಂದು ಸಭಾಪತಿ ಎಂ.ವೆಂಕಯ್ಯ ನಾಯ್ಡು ಹೇಳಿದರು.

'ಒಆರ್‌ಒಪಿ: ಕೋಶ್ಯಾರಿ ಸಮಿತಿ ವರದಿ ಸರ್ಕಾರದ ನೀತಿಯಾಗದು'

ನವದೆಹಲಿ (ಪಿಟಿಐ): 'ಒಂದು ಶ್ರೇಣಿ–ಒಂದು ಪಿಂಚಣಿ'ಗೆ (ಒಆರ್‌ಒಪಿ) ಸಂಬಂಧಿಸಿ ಭಗತ್ ಸಿಂಗ್ ಕೋಶ್ಯಾರಿ ಸಮಿತಿಯು ರಾಜ್ಯಸಭೆಗೆ ವರದಿಯನ್ನು ಸಲ್ಲಿಸಿದೆ. ಈ ವರದಿಯನ್ನೇ ಸರ್ಕಾರದ ನೀತಿ ಎಂಬುದಾಗಿ ಪರಿಗಣಿಸಿ, ಜಾರಿಗೊಳಿಸಲಾಗದು' ಎಂದು ಸುಪ್ರೀಂಕೋರ್ಟ್ ಬುಧವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯಕಾಂತ ಹಾಗೂ ವಿಕ್ರಮ್ ನಾಥ್ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ಒಆರ್‌ಒಪಿ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಸಂಬಂಧಿಸಿ ಕೋಶ್ಯಾರಿ ಸಮಿತಿಯು ರಾಜ್ಯಸಭೆಗೆ ತನ್ನ ವರದಿಯನ್ನು ಸಲ್ಲಿಸಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಈ ವರದಿಯನ್ನೇ ಸರ್ಕಾರದ ನೀತಿ ಎಂದು ಪರಿಭಾವಿಸಿ, ಜಾರಿಗೊಳಿಸಲಾಗದು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

'ಏಕರೂಪದ ಶ್ರೇಣಿಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಪಿಂಚಣಿದಾರರಿಗೆ ಏಕರೂಪದ ಪಿಂಚಣಿ ನೀಡಬೇಕು ಎಂಬುದಕ್ಕೆ ಯಾವುದೇ ಕಾನೂನು ಮಾನ್ಯತೆ ಇಲ್ಲ' ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ, ರಕ್ಷಣಾ ಪಡೆಗಳ ಸಿಬ್ಬಂದಿಗೆ ಒಆರ್‌ಒಪಿ ಜಾರಿಗೊಳಿಸುವ ಕೇಂದ್ರದ ನಿರ್ಧಾರವನ್ನು ಎತ್ತಿ ಹಿಡಿಯಿತು.

'ನಿರ್ದಿಷ್ಟ ಸಿಬ್ಬಂದಿಗೆ ನೀಡಲಾಗುವ ಕೆಲ ಪ್ರಯೋಜನಗಳು ಅವರ ಪಿಂಚಣಿ ಮೇಲೂ ಪರಿಣಾಮ ಬೀರುತ್ತವೆ. ಹೀಗಾಗಿ, ಇಂಥ ಪ್ರಯೋಜನಗಳನ್ನು ಇತರ ಸಿಬ್ಬಂದಿಗೆ ನೀಡಬೇಕಾಗಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಸೂಪರ್ ಸ್ಪೆಷಾಲಿಟಿ ಸೀಟು: ತಮಿಳುನಾಡು ಸರ್ಕಾರದ ನಿರ್ಧಾರಕ್ಕೆ 'ಸುಪ್ರೀಂ' ಬಲ

ಸೇವಾ ನಿರತರಿಗೆ ಶೇ 50 ಮೀಸಲು

ನವದೆಹಲಿ (ಪಿಟಿಐ): ತನ್ನ ಸರ್ಕಾರಿ ವೈದ್ಯಕೀಯ ಕಾಲೇಜುಗಳ 'ಸೂಪರ್ ಸ್ಪೆಷಾಲಿಟಿ' ಕೋರ್ಸ್‌ಗಳ ಸೀಟುಗಳಲ್ಲಿ ಶೇ 50ರಷ್ಟನ್ನು, ಸೇವೆಯಲ್ಲಿದ್ದು 'ನೀಟ್' ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಹಂಚಿಕೆ ಮಾಡುವ ತಮಿಳುನಾಡು ಸರ್ಕಾರದ ನಿರ್ಧಾರಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್, ಬಿ.ಆರ್. ಗವಾಯಿ ಅವರನ್ನೊಳಗೊಂಡ ಪೀಠ, ಈ ಕುರಿತ ಕೋಟಾವನ್ನು ಮುಂದುವರಿಸಲು ಸರ್ಕಾರಕ್ಕೆ ಅನುಮತಿ ನೀಡಿತು.

ತಮಿಳುನಾಡು ರಾಜ್ಯವು ಮೀಸಲಾತಿ ಅನ್ವಯ ಶೈಕ್ಷಣಿಕ ವರ್ಷಕ್ಕೆ ಕೌನ್ಸೆಲಿಂಗ್ ಮುಂದುವರಿಸಲು ಸ್ವತಂತ್ರವಾಗಿದೆ ಎಂದ ಪೀಠವು, ಈ ಕುರಿತ ಅರ್ಜಿಯ ಮುಂದಿನ ವಿಚಾರಣೆಯನ್ನು ಗುರುವಾರದಿಂದ ಆರಂಭವಾಗಲಿರುವ ಹೋಳಿ ರಜೆಯ ಬಳಿಕ ತೆಗೆದುಕೊಳ್ಳುವುದಾಗಿ ತಿಳಿಸಿತು.

ತಮಿಳುನಾಡು ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳಿಗೆ ಸಂಬಂಧಿಸಿದಂತೆ ಮಾರ್ಚ್ 14ರಂದು ಸುಪ್ರೀಂ ಕೋರ್ಟ್ ಆದೇಶವನ್ನು ಕಾಯ್ದಿರಿಸಿತ್ತು.

ತಮಿಳುನಾಡು ಸರ್ಕಾರದ ಪರವಾಗಿ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ (ಎಎಜಿ) ಅಮಿತ್ ಆನಂದ್ ತಿವಾರಿ, ನ್ಯಾಯಾಲಯ ಇಂತಹ ನಿರ್ಧಾರಕ್ಕೆ ತಡೆ ನೀಡಿದರೆ, ಬಡ ಮತ್ತು ಗ್ರಾಮೀಣ ಜನರಿಗೆ ಗುಣಮಟ್ಟದ ವೈದ್ಯಕೀಯ ಸೇವೆಯ ಲಭ್ಯತೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಅದರ ಜತೆಗೆ ಅರ್ಹ ಶಿಕ್ಷಕರ ಕೊರತೆಯಿಂದ ಕೋರ್ಸ್‌ಗಳನ್ನು ಮುಚ್ಚಬೇಕಾಗುತ್ತದೆ ಎಂದು ವಾದಿಸಿದರು.

ಅಲ್ಲದೆ, ಸೇವೆಯಲ್ಲಿ ಇಲ್ಲದ ಶೇ 70ರಷ್ಟು ಅಭ್ಯರ್ಥಿಗಳು ಕಡ್ಡಾಯ ಸೇವಾ ಬಾಂಡ್‌ನ ಷರತ್ತುಗಳನ್ನು ಇಲ್ಲಿಯವರೆಗೆ ಪೂರೈಸಿಲ್ಲ ಎಂಬುದನ್ನು ಎಎಜಿ ಅವರು ಸುಪ್ರೀಂ ಕೋರ್ಟ್ ಗಮನಕ್ಕೆ ತಂದರು.

ತಮಿಳುನಾಡು ಸರ್ಕಾರ 2020ರಲ್ಲಿ ಹೊರಡಿಸಿದ್ದ ಆದೇಶದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿನ ಸೂಪರ್ ಸ್ಪೆಷಾಲಿಟಿ ಸೀಟುಗಳಲ್ಲಿ (ಡಿ.ಎಂ/ಎಂ.ಸಿಎಚ್) ಶೇ 50ರಷ್ಟನ್ನು ಸೇವಾ ನಿರತ 'ನೀಟ್' ಅರ್ಹ ಅಭ್ಯರ್ಥಿಗಳಿಗೆ ಹಂಚಲು ನಿರ್ದೇಶಿಸಿದೆ. ಉಳಿದ ಶೇ 50ರಷ್ಟು ಸೀಟುಗಳನ್ನು ಕೇಂದ್ರ ಸರ್ಕಾರ/ಆರೋಗ್ಯ ಸೇವೆಗಳ ಮಹಾನಿರ್ದೇಶಕರು ಭರ್ತಿ ಮಾಡಲಿದ್ದಾರೆ ಎಂದು ಎಎಜಿ ಸಮರ್ಥಿಸಿಕೊಂಡರು.

'ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ ಸೀಟುಗಳ ಹಂಚಿಕೆಯು ಮೀಸಲಾತಿ ಸ್ವರೂಪದಲ್ಲಿಲ್ಲ. ಬದಲಿಗೆ ಅದು ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸುವ ಪ್ರತ್ಯೇಕ ಮೂಲವಾಗಿದೆ. ರಾಜ್ಯವು ಅಂತಹ ಪ್ರತ್ಯೇಕ ಪ್ರವೇಶದ ಮೂಲವನ್ನು ಒದಗಿಸುವ ಅಧಿಕಾರ ಹೊಂದಿದೆ' ಎಂದ ತಿವಾರಿ, ಇದು ಸಾರ್ವಜನಿಕರ ಹಿತ ಕಾಯುವ ಸರ್ಕಾರದ ನೀತಿ ನಿರ್ಧಾರವಾಗಿದೆ ಎಂದರು. ಅಲ್ಲದೆ ಇದು ಯಾವುದೇ ರೀತಿಯಲ್ಲೂ ಕೇಂದ್ರ ಸರ್ಕಾರ ಸೂಚಿಸಿರುವ ಕನಿಷ್ಠ ಮಾನದಂಡಗಳಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ತಿವಾರಿ ವಾದಿಸಿದರು.

ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ದುಷ್ಯಂತ್ ದವೆ, ಶ್ಯಾಮ್ ದಿವಾನ್ ಮತ್ತು ಗೋಪಾಲ್ ಶಂಕರನಾರಾಯಣನ್ ವಾದಿಸಿದ್ದರು.

ಸಾಮಾಜಿಕ ಮಾಧ್ಯಮಗಳಿಗೆ ಕಡಿವಾಣಕ್ಕೆ ಆಗ್ರಹ

ನವದೆಹಲಿ (ಪಿಟಿಐ): 'ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ದಾಳಿ ನಡೆಸುವ ಸಲುವಾಗಿ ಫೇಸ್‌ಬುಕ್ ಹಾಗೂ ಟ್ವಿಟರ್‌ನಂತಹ ಜಾಗತಿಕ ಮಟ್ಟದ ಸಾಮಾಜಿಕ ಮಾಧ್ಯಮಗಳನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ' ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಬುಧವಾರ ಹೇಳಿದರು.

ಲೋಕಸಭೆಯಲ್ಲಿ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 'ದೇಶದ ಚುನಾವಣಾ ರಾಜಕಾರಣದ ಮೇಲೆ ಈ ಮಾಧ್ಯಮಗಳಿಂದಾಗುತ್ತಿರುವ 'ವ್ಯವಸ್ಥಿತ ಪ್ರಭಾವ ಬೀರುವ ಯತ್ನ ಹಾಗೂ ಹಸ್ತಕ್ಷೇಪ' ಕೊನೆಗಾಣಿಸಬೇಕು ಎಂದರು.

'ಕೆಲ ರಾಜಕೀಯ ಪಕ್ಷಗಳು, ಮುಖಂಡರು, ಅವರ ಪರವಾಗಿರುವವರ ಬಗ್ಗೆ ಅಭಿಪ್ರಾಯ ರೂಪಿಸಲು, ಅವರನ್ನು ವೈಭವೀಕರಿಸುವ ಕಾರ್ಯಕ್ಕೆ ಈ ಮಾಧ್ಯಮಗಳ ಬಳಕೆ ಹೆಚ್ಚುತ್ತಿದೆ' ಎಂದರು.

Off. : 08353-230236

ನಗರ ಸಭೆ, ರಬಕವಿ – ಬನಹಟ್ಟಿ

ಜಿಲ್ಲಾ : ಬಾಗಲಕೋಟ) ಕಾರ್ಯಾಲಯ : ರಾಮಪೂರ (ಕರ್ನಾಟಕ ರಾಜ್ಯ

ಕ್ರ.ಸಂ.: ನಸರಬ/ನೀಸವಿಕಾಪೂ/ಕಾಕಂಆಪೂ/ವಾಟೆಂಪ್ರ/2021–22 ದಿನಾಂಕ : 11–03–2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸನ್ 2022–23 ನೇ ಸಾಲಿನ ನಗರಸಭೆ ನಿಧಿ ಅಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ತಿದ್ದುಪಡಿ ಅಧಿನಿಯಮ 2001 ರ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ **https://eproc.karnataka.gov.in** ನಿಂದ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ 25–03–2022 ರ ಮಧ್ಯಾಹ್ನ 4–00 ಗಂಟೆ ಒಳಗಾಗಿ ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸಬಹುದು. ಹಾಗೂ ಟೆಂಡರ್‌ಗಳನ್ನು ದಿನಾಂಕ 28–03–2022 ರಂದು ತೆರೆಯಲಾಗುವದು. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಈ ಕಛೇರಿಗೆ ಸಂಪರ್ಕಿಸಬಹುದಾಗಿದೆ.

ಅ ನಂ	ಇಂಡೆಂಟ್ ನಂಬರ್	ಸೇವೆಯ ವಿವರ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ. ಮೊತ್ತ	ಅವಧಿ
1	CMC-RBKBNT/ Watersupply/ Labour/2022-23/01	ಸನ್ 2022–23 ನೇ ಸಾಲಿಗೆ ನಗರಸಭೆ, ರಬಕವಿ–ಬನಹಟ್ಟಿಯ ಬನಹಟ್ಟಿ ವಿಭಾಗದ ಕುಡಿಯುವ ನೀರು ಸರಬರಾಜು ಸ್ಥಾವರಗಳ ನಿರ್ವಹಣೆ ಹಾಗೂ ದುರಸ್ಥಿ ಕೆಲಸಗಳಿಗೆ ಪರಿಣಿತ ಕಾರ್ಮಿಕರನ್ನು ಪೂರೈಸುವದು	40,24,692	80,494	12 ತಿಂಗಳು
2	CMC-RBKBNT/ Watersupply/ Labour/2022-23/02	ಸನ್ 2022–23 ನೇ ಸಾಲಿಗೆ ನಗರಸಭೆ, ರಬಕವಿ–ಬನಹಟ್ಟಿಯ ರಬಕವಿ, ರಾಮಪೂರ ಮತ್ತು ಹೊಸೂರ ವಿಭಾಗಗಳ ಕುಡಿಯುವ ನೀರು ಸರಬರಾಜು ಸ್ಥಾವರಗಳ ನಿರ್ವಹಣೆ ಹಾಗೂ ದುರಸ್ಥಿ ಕೆಲಸಗಳಿಗೆ ಪರಿಣಿತ ಕಾರ್ಮಿಕರನ್ನು ಹಾಗೂ ಕಾರ್ಯಾಲಯಕ್ಕೆ ಕಂಪ್ಯೂಟರ್ ಆಪರೇಟರ್/ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಪೂರೈಸುವದು	42,70,997	85,420	12 ತಿಂಗಳು

ಸಹಿ/– ಪೌರಾಯುಕ್ತರು, ನಗರಸಭೆ, ರಬಕವಿ–ಬನಹಟ್ಟಿ

ಸಹಿ/– ಅಧ್ಯಕ್ಷರು, ನಗರಸಭೆ, ರಬಕವಿ–ಬನಹಟ್ಟಿ

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಲಿ ಸಮುದಾಯದ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ–4/2021–22 ದಿನಾಂಕ: 14–03–2022

ಬೆಳಗಾವಿ ಜಿಲ್ಲೆ, ಗೋಕಾಕ್ 2ನೇ ಹಂತ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ಮನೆ /ನಿವೇಶನಗಳ ಹಂಚಿಕೆಗೆ ಲಾಟರಿ ವೇಳಾಪಟ್ಟಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಬೆಳಗಾವಿ ಜಿಲ್ಲೆ, ಗೋಕಾಕ್ 2ನೇ ಹಂತ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ಮನೆ/ನಿವೇಶನಗಳನ್ನು ಹಂಚಿಕೆ ಮಾಡುವ ಸಂಬಂಧ ಈ ಹಿಂದೆ ಗೋಕಾಕ್ ಬಡಾವಣೆಗೆ ಆರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರರು ದಿನಾಂಕ: 04–08–2021, 03–09–2021 ರ ಪ್ರಕಟಣೆಗಳಿಗೆ ಅನುಗುಣವಾಗಿ ವ್ಯತ್ಯಾಸದ ಆರಂಭಿಕ ಠೇವಣಿ ಪಾವತಿಸಿರುವ ಹಾಗೂ ಹೊಸದಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಆರಂಭಿಕ ಠೇವಣಿ ಪಾವತಿಸಿರುವ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ರೆಗ್ಯುಲೇಶನ್ಸ್–1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿಯಲ್ಲಿ ಲಾಟರಿ ಮುಖಾಂತರ ಹಂಚಿಕೆ ಮಾಡಲು ಈ ಕೆಳಕಂಡ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಬಡಾವಣೆ	ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸ್ಥಳ	ಅರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ	ಲಾಟರಿ ನಡೆಯುವ ದಿನಾಂಕ ಮತ್ತು ಸ್ಥಳ ಹಾಗೂ ಸಮಯ
ಬೆಳಗಾವಿ ಜಿಲ್ಲೆ ಗೋಕಾಕ್ 2ನೇ ಹಂತ	16–03–2022	21–03–2022	28–03–2022	ಲಾಟರಿ ದಿನಾಂಕ ಮತ್ತು ಸ್ಥಳ ಪ್ರತ್ಯೇಕವಾಗಿ ತಿಳಿಸಲಾಗುವುದು.
	ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಬೆಳಗಾವಿ. ಮತ್ತು ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ, ಕಾವೇರಿಭವನ, ಬೆಂಗಳೂರು			

ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ **https://www.khb.karnataka.gov.in** ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಳಗಾವಿ ಜಿಲ್ಲಾ ಯೋಜನಾ ಕಛೇರಿ ಇವರನ್ನು ಮೊಬೈಲ್ ನಂ.9742085271 ಅಥವಾ ಉಪ ಪ್ರಧಾನ ವ್ಯವಸ್ಥಾಪಕರು (ಗ್ರಾ.ಸೇ)/ ಕಂದಾಯ ಅಧಿಕಾರಿಗಳು, ಹಂಚಿಕೆ ಶಾಖೆ, ಕಛೇರಿ ದೂರವಾಣಿ ಸಂಖ್ಯೆ: 080–22273511 ext. 335/307 ಗೆ ಸಂಪರ್ಕಿಸುವುದು.

ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/DDU/Zen/RO- 3786/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ

ಜಿಲ್ಲಾ ಪಂಚಾಯತ್, ಗದಗ

ಕಾರ್ಯನಿರ್ವಾಹಕ ಇಂಜಿನೀಯರ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ–1/ಟೆಂಡರ/2021–22/7323 ದಿನಾಂಕ : 16–03–2022

ಇ–ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ

Standard Bid Document KW- 3 [ದ್ವಿಲಕೋಟೆ ಪದ್ಧತಿ]

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ **Standard Bid Document KW-3**ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್, ಮುಖಾಂತರ 03 ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: **2021–22 ನೇ ಸಾಲಿನ 5054–03–337–0–75 ಯೋಜನೆ ಅಡಿ** ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರಮೆಂಟ್ ಪೋರ್ಟಲ್, **https://eproc.karnataka.gov.in** ಮುಖಾಂತರ ಭಾಗವಹಿಸಬಹುದು. ವಿವರ ಈ ಕೆಳಗಿನಂತಿದೆ

ಅ. ನಂ.	ಕಾಮಗಾರಿಯ ಹೆಸರು / ವರ್ಕ ಇಂಡೆಂಟ್	ಟೆಂಡರಗಿಟ್ಟ ಮೊತ್ತ (ರೂ.ಗಳಲ್ಲಿ)	ಇ–ಪೋರ್ಟಲ್ ಮುಖಾಂತರ ಇ.ಎಂ.ಡಿ. ಸಲ್ಲಿಸಬೇಕಾದ ಮೊತ್ತ (ರೂ. ಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಮಿತಿ (ಮಳೆಗಾಲ ಅವಧಿ ಸೇರಿ)	ಗುತ್ತಿಗೆದಾರರ ದರ್ಜೆ
1	IMPROVEMENTS TO ROAD FROM BUDIHAL, NAREGAL JAKKALI CORSS KM 0.00 TO 1.48 (VR-79) IN RON TALUK UNDER 2021-22 5054 GRANT **WORK_INDENT89175**	**5628129.92**	**112565/-**	6 ತಿಂಗಳು	Valid PWD contractor can participate KW-3
2	IMPROVEMENTS TO ROAD FROM RON GAJNEDRAGAD SH-30 TO JIGALUR APPROACH ROAD KM 0.00 TO 1.40 (VR-86) IN RON TALUK UNDER 2021-22 5054 GRANT **WORK_INDENT89184**	**8478238.72**	**116565/-**	6 ತಿಂಗಳು	Valid PWD contractor can participate KW-3
3	IMPROVEMENT TO ROAD FROM DAMBAL-DONI MAIN ROAD TO SIDDESHWAR TEMPLE ROAD KM 0.00 TO 0.67 KM IN MUNDARAGI TALUK UNDER 2021-22 5054 GRANT **WORK_INDENT89191**	**5622753.94**	**112500/-**	6 ತಿಂಗಳು	Valid PWD contractor can participate KW-3

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ **17–03–2022** ರಿಂದ **28–03–2022** ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30–03–2022** ರಂದು 16.30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : **04–04–2022** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ

ವಾಸಾಸಂಇ/ಗದಗ/ಎಂ.ಸಿ.ಎ/601/2021–22

ಎಂದಿಗೂ ಮಾಸದ ರಾಜರತ್ನ



ನಿರ್ದೇಶಕರ ಕಲಾವಿದ ಅಪ್ಪು

ಚೇತನ್ ಕುಮಾರ್ ನಿರ್ದೇಶನದ ಸಿನಿಮಾ 'ಜೇಮ್ಸ್' ಇಂದು ತೆರೆಗೆ ಅಪ್ಪಳಿಸುತ್ತಿದೆ. ಅಪ್ಪು ಅವರ ಅಕಾಲಿಕ ನಿಧನದ ಬಳಿಕ ನಿರ್ಮಾಣವಾಗಿದ್ದ ಅನಿಶ್ಚಿತ ಪರಿಸ್ಥಿತಿಯನ್ನು ಹಳಿಗೆ ಮರಳಿಸಿದ ಚೇತನ್ ಕುಮಾರ್ ತಾವೆದುರಿಸಿದ ಸವಾಲು ಹಾಗೂ ಅಪ್ಪುವಿನ ನೆನಪನ್ನು ಇಲ್ಲಿ ಬಿಚ್ಚಿಟ್ಟದ್ದಾರೆ...

● ಅಭಿಲಾಷ್ ಪಿ.ಎಸ್.

● ಅಪ್ಪು ಅವರ ಅಕಾಲಿಕ ನಿಧನವಾದಾಗ 'ಜೇಮ್ಸ್' ಯಾವ ಹಂತದಲ್ಲಿತ್ತು?

ಚಿತ್ರದ ಆ್ಯಕ್ಷನ್ ಭಾಗ, ಟಾಕಿ ಭಾಗ ಪೂರ್ಣಗೊಂಡು ಒಂದು ಡ್ಯೂಯೆಟ್ ಹಾಡು, ಡಬ್ಬಿಂಗ್ ಹಾಗೂ ಸಣ್ಣಪುಟ್ಟ ಪ್ಯಾಚ್‌ವರ್ಕ್‌ಗಳು ಬಾಕಿ ಇದ್ದವು. ನಿಧನದ ಸುದ್ದಿ ತಿಳಿದು ಒಂದು ಕ್ಷಣ ಎಲ್ಲರೂ ಆಘಾತಗೊಂಡಿದ್ದೆವು. ಇದರಿಂದ ಹೊರಬರಲು ಚಿತ್ರೀಕರಣದ ಕೆಲಸದಿಂದ ಸುಮಾರು 15 ದಿನ ಬಿಡುವು ತೆಗೆದುಕೊಂಡೆವು. ಅಪ್ಪು ಅವರಿಗೆ ಮಾ.17ರಂದೇ ಸಿನಿಮಾ ಬಿಡುಗಡೆ ಮಾಡಬೇಕು ಎನ್ನುವ ಆಸೆ ಇತ್ತು. ಇದನ್ನು ನಡೆಸಿಕೊಡುವುದು ನಮ್ಮ ದೊಡ್ಡ ಜವಾಬ್ದಾರಿಯಾಗಿತ್ತು. ಫೆ.5ರೊಳಗೆ ಕನ್ನಡದಲ್ಲಿ ಡಬ್ಬಿಂಗ್ ಪೂರ್ಣಗೊಳಿಸಿದೆವು. ಇದಾದ ನಂತರ ಇತರೆ ಭಾಷೆಗಳಲ್ಲೂ ಏಕಕಾಲದಲ್ಲಿ ಬಿಡುಗಡೆಗೆ ಬೇಡಿಕೆ ಬಂತು. ಹೀಗಾಗಿ ತಕ್ಷಣದಲ್ಲೇ ಇತರೆ ಭಾಷೆಗಳಲ್ಲೂ ಡಬ್ಬಿಂಗ್ ಕಾರ್ಯ ಪ್ರಾರಂಭಿಸಿದ್ದೆವು. ಅಪ್ಪು ಅವರಿಗೆ ಆ ಡ್ಯೂಯೆಟ್ ಹಾಡು ಬಹಳ ಇಷ್ಟವಾಗಿತ್ತು. ಆದರೆ ಇದನ್ನು ಚಿತ್ರೀಕರಣ ಮಾಡಲಾಗಲಿಲ್ಲ ಎನ್ನುವ ಬೇಸರವಿದೆ.

● 'ಜೇಮ್ಸ್' ಪೂರ್ಣಗೊಳಿಸಿದ ಬಗೆಯ ಬಗ್ಗೆ...

ಪುನೀತ್ ಅವರನ್ನು ಕಳೆದುಕೊಂಡಿದ್ದೇವೆ ಎನ್ನುವುದನ್ನು ಇನ್ನೂ ಅರಗಿಸಿಕೊಳ್ಳಲು ನನ್ನ ಕೈಯಲ್ಲಿ ಆಗುತ್ತಿಲ್ಲ. ಒಂದು ರೀತಿ ಖಿನ್ನತೆಯೂ ನಮ್ಮನ್ನು ಕಾಡಿತ್ತು. ಆದರೆ, ನಂಬಿ ನಮ್ಮ ಕೈಗೆ ಕೊಟ್ಟಿರುವ ಸಿನಿಮಾವನ್ನು ನಾವು ಪ್ರೇಕ್ಷಕರ ಎದುರಿಗೆ ಇಡುವುದು ಮುಖ್ಯವಾಗಿತ್ತು. ಈ ಕಾರ್ಯಕ್ಕೆ ಅವರ ನೆನಪುಗಳು, ಮಾತುಗಳು ಪ್ರೇರಣೆ ಹಾಗೂ ಶಕ್ತಿ. ಒಂದು ರೀತಿಯಲ್ಲಿ ನಾವೇ ಪುಣ್ಯವಂತರು. ಅವರ ಜೊತೆ ಒಂದು ಫೋಟೊ ತೆಗೆಸಿಕೊಳ್ಳಲು ಕಾಯುತ್ತಿರುತ್ತಾರೆ. ಅಂಥದರಲ್ಲಿ ನನಗೆ ಅವರ ಜೊತೆ ಸಿನಿಮಾ ಮಾಡುವ ಭಾಗ್ಯ ಸಿಕ್ಕಿದೆ. ಸುಮಾರು ಒಂದು ವರ್ಷ ಅವರ ಜೊತೆ ಕಾಲ ಕಳೆಯುವ ಅವಕಾಶ ಸಿಕ್ಕಿರುವುದು ಆಶೀರ್ವಾದವೇ ಸರಿ.

> **● ಅಪ್ಪು ಅವರನ್ನು ಹತ್ತಿರದಿಂದ ಕಂಡ ನೆನಪುಗಳು...**
>
> ಹೊಸಪೇಟೆಯಲ್ಲಿ 'ಜೇಮ್ಸ್' ಚಿತ್ರೀಕರಣದ ಸಂದರ್ಭದಲ್ಲೇ ಸರ್ಕಾರಿ ಶಾಲೆಯೊಂದಕ್ಕೆ ಯಾರಿಗೂ ತಿಳಿಯದಂತೆ ₹1 ಲಕ್ಷ ದೇಣಿಗೆ ನೀಡಿದ್ದರು. ವ್ಯಕ್ತಿ ಶಕ್ತಿಯಾಗಿ ಬದಲಾಗುತ್ತಾರೆ ಎಂದರೆ ಅವರ ಹಿಂದಿನ ವ್ಯಕ್ತಿತ್ವ ಬಹಳ ದೊಡ್ಡದಾಗಿರುತ್ತದೆ. ನಿರ್ದೇಶಕರ ಕಲಾವಿದ ಪುನೀತ್ ರಾಜ್‌ಕುಮಾರ್. ಅವರಿಗೆ ಸಿನಿಮಾ, ತಂತ್ರಜ್ಞಾನದ ಎಲ್ಲ ಜ್ಞಾನ ಇದ್ದರೂ ಅದನ್ನು ನಿರ್ದೇಶಕರ ಮೇಲೆ ಹೇರುತ್ತಿರಲಿಲ್ಲ. ಅವರನ್ನು ಕಂಡು ಜೀವನ ಪಾಠವನ್ನು ಕಲಿತದ್ದು ಹಲವಿದೆ. ಪರಿಶುದ್ಧವಾಗಿ ಬದುಕಬೇಕು ಎನ್ನುವುದಕ್ಕೆ ಅವರು ಪ್ರೇರಣೆ. ನಿಷ್ಕಲ್ಮಶವಾದ ಮನಸ್ಸು, ತಾಳ್ಮೆಯ ಪ್ರತಿರೂಪ, ಸದಾ ಹಸನ್ಮುಖಿ.

● 'ಜೇಮ್ಸ್' ಮುಖಾಂತರ ಪುನೀತ್ ಅವರನ್ನು ಹೇಗೆ ತೋರಿಸಿದ್ದೀರಿ?

ನಾನು ಮಾಡಿರುವ ಹಾಗೂ ಅಪ್ಪು ಅವರು ಮಾಡಿರುವ ಸಿನಿಮಾಗಳನ್ನು ಹೊರತುಪಡಿಸಿ ಬೇರೆಯದನ್ನೇನು ಮಾಡಬಹುದು ಎಂದು ನಾನು ಕಥೆ ಬರೆಯುವ ವೇಳೆಯೇ ಯೋಚಿಸಿದ್ದೆ. ಯೋಧನ ಪಾತ್ರ, ಹೇರ್‌ಸ್ಟೈಲ್ ಎಲ್ಲವೂ ಹೊಸತು. ಅಪ್ಪು ಅವರ ಮುಖ್ಯ ಅಭಿಮಾನಿಗಳೇ ಫ್ಯಾಮಿಲಿ ಆಡಿಯನ್ಸ್. ಇದನ್ನು ಹೊರತುಪಡಿಸಿ ಸಿನಿಮಾ ಮಾಡಲು ಸಾಧ್ಯವೇ ಇಲ್ಲ. ಚಿತ್ರದಲ್ಲಿ ಅಪ್ಪು ಅವರ ಭಾವನಾತ್ಮಕ ದೃಶ್ಯಗಳನ್ನು ಖಂಡಿತವಾಗಿಯೂ ಪ್ರೇಕ್ಷಕರು ಇಷ್ಟಪಡುತ್ತಾರೆ ಎನ್ನುವ ಭರವಸೆ ಇದೆ.

ಅಪ್ಪು ಅವರನ್ನು ಯೋಧನ ಪಾತ್ರದಲ್ಲಿ ನೋಡಬೇಕು ಎನ್ನುವ ಕನಸು ನನಗಿತ್ತು. ಯೋಧನ ಸಮವಸ್ತ್ರ ಧರಿಸಿ ಬಂದಾಗ ಅಪ್ಪು ಅವರಿಗೆ ಆದಂತಹ ಖುಷಿ ವರ್ಣಿಸಲು ಸಾಧ್ಯವಿಲ್ಲ. ಕಾಶ್ಮೀರದಲ್ಲಿನ ಚಿತ್ರೀಕರಣವೂ ಅದ್ಭುತವಾದ ನೆನಪು. ಈ ಪಾತ್ರ ಕಥೆಯ ಭಾಗವೂ ಆಗಿದೆ. ಸೈನಿಕರಿಗೂ ಅಪ್ಪು ಅವರ ಕಡೆಯಿಂದ ಸಂದ ಗೌರವ ಇದಾಗಿದೆ.

● ಭಾವನಾತ್ಮಕ ಘಟನೆಗಳಿಗೆ ಪ್ರಿರಿಲೀಸ್ ಕಾರ್ಯಕ್ರಮ ಸಾಕ್ಷಿಯಾಯಿತು ಅಲ್ಲವೇ?

ನಾವಿನ್ನೂ ಆಘಾತದಲ್ಲೇ ಇದ್ದೇವೆ. ಮನಸ್ಸುಗಳಿನ್ನೂ ಈ ನೋವಿನಿಂದ ಹೊರಬಂದಿಲ್ಲ. ನಾವು ಕಳೆದುಕೊಂಡಿರುವ ನೋವು ಬಹಳ ದೊಡ್ಡದು. ಸಿನಿಮಾ ಎಂದ ಮೇಲೆ ಬಿಡುಗಡೆಪೂರ್ವ ಕಾರ್ಯಕ್ರಮ ಮಾಡಲೇಬೇಕಲ್ಲವೇ. ಅದೂ, ಜೇಮ್ಸ್‌ನಂಥ ಸಿನಿಮಾ. ದೊಡ್ಮನೆ ಕುಟುಂಬವೇ ಅಲ್ಲಿ ಹಾಜರಿತ್ತು. ಆದರೆ, ಈ ಕಾರ್ಯಕ್ರಮದ ಬಳಿಕ ನಾವು ಎಲ್ಲರನ್ನೂ ಕರೆಸಿ ನೋವು ಹಂಚಿದೆವೋ ಎನ್ನುವ ಭಾವನೆ ಹುಟ್ಟಿದೆ.

ನಾವು ಎಷ್ಟೇ ದೊಡ್ಡ ಕಾರ್ಯಕ್ರಮ ಆಯೋಜಿಸಿದರೂ ಸಂಭ್ರಮಿಸಲು ಸಾಧ್ಯವಿಲ್ಲ. ಅಭಿಮಾನಿಗಳನ್ನು ಸಂಭ್ರಮಿಸಲು ಕಾರ್ಯಕ್ರಮ ಆಯೋಜಿಸಬಹುದಷ್ಟೇ. ಅವರಲ್ಲೇ ನಾವು ಅಪ್ಪು ಅವರನ್ನು ನೋಡುತ್ತೇವೆ. ಅಪ್ಪು ಸರ್ ಅವರು ಆಸೆಪಟ್ಟ ದಿನದಂದೇ ಸಿನಿಮಾ ಬಿಡುಗಡೆಗೊಳಿಸುತ್ತಿದ್ದೇವೆ ಎನ್ನುವುದಷ್ಟೇ ನಮಗೆ ತೃಪ್ತಿಯ ವಿಷಯ.

ಚೇತನ್ ಕುಮಾರ್

● ಅಪ್ಪು ಅವರಿಲ್ಲದೇ ನೀವು ಎದುರಿಸಿದ ಸವಾಲುಗಳೇನು?

ಸಿನಿಮಾ ಬಿಡುಗಡೆ ಸಂದರ್ಭದಲ್ಲಿ ನಾಯಕ ನಟನೇ ಇಲ್ಲದಿರುವುದು ದೊಡ್ಡ ಸವಾಲು. ಅಪ್ಪು ಅವರು ಇಲ್ಲದೇ ಇರುವ ಜಾಗವನ್ನು ಯಾರೂ ಭರ್ತಿ ಮಾಡಲು ಸಾಧ್ಯವಿಲ್ಲ. ಪುನೀತ್ ಅವರ ಕೊನೆಯ ಕಮರ್ಷಿಯಲ್ ಸಿನಿಮಾ ಇದಾಗಿದ್ದ ಕಾರಣ, ದೊಡ್ಮನೆಯ ಶಿವರಾಜ್‌ಕುಮಾರ್ ಹಾಗೂ ರಾಘವೇಂದ್ರ ರಾಜ್‌ಕುಮಾರ್ ಅವರು ನಮಗೆ ಬೆನ್ನೆಲುಬಾಗಿ ನಿಂತರು. ನಟಿಸಿ, ಅಪ್ಪು ಅವರ ಪಾತ್ರಕ್ಕೆ ಧ್ವನಿ ನೀಡಿದ ಶಿವಣ್ಣ ಅವರ ಬೆಂಬಲವನ್ನು ಪದಗಳಲ್ಲಿ ಹೇಳಲು ನನಗೆ ಸಾಧ್ಯವಿಲ್ಲ. ಅಪ್ಪು, ಶಿವಣ್ಣ ಹಾಗೂ ರಾಘಣ್ಣನನ್ನು ಒಂದೇ ತೆರೆಯ ಮೇಲೆ ನೋಡಬೇಕು ಎನ್ನುವ ಅಭಿಮಾನಿಗಳ ಆಸೆ ಇಲ್ಲಿ ಈಡೇರಲಿದೆ.

● ಏಕಕಾಲದಲ್ಲಿ ಐದು ಭಾಷೆಗಳಲ್ಲಿ ಸಿನಿಮಾ ಬಿಡುಗಡೆಯಾಗುತ್ತಿದೆ. ಈ ಸವಾಲುಗಳ ಬಗ್ಗೆ..

ಫೆ.5ರಿಂದ ತಿಂಗಳೊಳಗೆ ಐದು ಭಾಷೆಗಳಲ್ಲಿ ಐದು ಹಾಡು ಹಾಗೂ ಇಡೀ ಸಿನಿಮಾವನ್ನೇ ಡಬ್ ಮಾಡುವುದು ಸವಾಲಿನದ್ದಾಗಿತ್ತು. ಇಡೀ ತಂಡವು ದಿನಕ್ಕೆ 19–20 ಗಂಟೆ ಕೆಲಸ ಮಾಡಿದೆ. ಕನ್ನಡದಲ್ಲಿ ಏಕಕಾಲದಲ್ಲಿ ಐದೂ ಭಾಷೆಗಳಲ್ಲಿ ಬಿಡುಗಡೆಯಾಗಿರುವ ಸಿನಿಮಾ ಎಂದರೆ ಕೆ.ಜಿ.ಎಫ್ ಒಂದೇ. ಇದು ಒಂದು ಗುರುತರವಾದ ಕೆಲಸ. ಒಂದು ರೀತಿ ಐದು ಸಿನಿಮಾ ಮಾಡಿದಂತೆಯೇ ಈ ಕೆಲಸವಿರುತ್ತದೆ. ❖

● 'ಜೇಮ್ಸ್' ಹಬ್ಬ ಹೇಗಿದೆ?

ರಾಜ್ಯದ 400ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ 'ಜೇಮ್ಸ್' ತೆರೆಕಾಣುತ್ತಿದೆ. ಈ ಸಂಖ್ಯೆ ಗುರುವಾರಕ್ಕೆ ಇನ್ನೂ ಅಧಿಕವಾಗಲಿದೆ. ಆಸ್ಟ್ರೇಲಿಯಾದಲ್ಲಿ ಚಿತ್ರವೊಂದು 100ಕ್ಕಿಂತ ಅಧಿಕ ಪ್ರದರ್ಶನಗೊಳ್ಳುವುದಿದ್ದರೆ ಸೆನ್ಸಾರ್ ಅಗತ್ಯ. ಇಲ್ಲಿ 'ಜೇಮ್ಸ್'ನ 150ಕ್ಕೂ ಅಧಿಕ ಪ್ರದರ್ಶನವಿದೆ. ಹೀಗಾಗಿ ಆಸ್ಟ್ರೇಲಿಯಾದಲ್ಲಿ ಸೆನ್ಸಾರ್‌ಗೊಂಡ ಕನ್ನಡದ ಮೊದಲ ಚಿತ್ರ ಎಂಬ ಹೆಗ್ಗಳಿಕೆಗೂ ನಮ್ಮ ಚಿತ್ರವು ಪಾತ್ರವಾಗಿದೆ. ಅಮೆರಿಕದ 72 ಕೇಂದ್ರಗಳು, ಕೆನಡಾದಲ್ಲಿ 40 ಕೇಂದ್ರಗಳು ಸೇರಿದಂತೆ 21 ದೇಶಗಳಲ್ಲಿ ಸಿನಿಮಾ ಬಿಡುಗಡೆಯಾಗುತ್ತಿದೆ.ಸಿನಿಮಾವೊಂದಕ್ಕೆ ಈ ರೀತಿಯ ಕ್ರೇಜ್ ಮೊದಲ ಬಾರಿ ನೋಡಿದ್ದೇನೆ. ಇದಕ್ಕೆ ಅಪ್ಪು ಅವರೇ ಕಾರಣ.

ಹೀಗಿದ್ದ ನಮ್ಮ 'ರಾಜಕುಮಾರ'

"'ಅಪ್ಪು' ಯುವ ಜನತೆಗೆ ಪ್ರೇರಣೆಯಾಗಿ, ಕಷ್ಟದಲ್ಲಿರುವವರಿಗೆ ನೆರವಾಗಿದ್ದರು. ಕನಿಷ್ಠ ಎರಡು ವರ್ಷ ಅವರ ಜೊತೆ ಪ್ರತಿನಿತ್ಯ ಎಂಬಂತೆ ಸಮಯ ಕಳೆದಿದ್ದೇನೆ. 'ಬಲಗೈ ಸಹಾಯ ಎಡಗೈಗೆ ಗೊತ್ತಾಗಬಾರದು' ಎಂದು ಮಾತಿನಲ್ಲಿ ಹೇಳುತ್ತೇವೆ. ಈ ಮಾತಿಗೆ ಅಪ್ಪು ಅವರು ರೂಪ. 'ರಣವಿಕ್ರಮ' ಚಿತ್ರೀಕರಣದ ಸಮಯದಲ್ಲಿ ಸುಮಾರು ₹1 ಕೋಟಿಯಷ್ಟು ದಾನವನ್ನು ನನ್ನ ಕಣ್ಣೆದುರಿಗೇ ಮಾಡಿದ್ದಾರೆ. ವರನಟ ಡಾ.ರಾಜ್‌ಕುಮಾರ್ ಅವರ ಮಗ ಎನ್ನುವುದಕ್ಕಿಂತ ಹೆಚ್ಚಾಗಿ ತಮ್ಮದೇ ವ್ಯಕ್ತಿತ್ವವನ್ನು ರೂಪಿಸಿಕೊಂಡವರು ಪುನೀತ್.

–**ಪವನ್ ಒಡೆಯರ್**, ನಿರ್ದೇಶಕ

ಅಪರೂಪದ 'ಯುವರತ್ನ'

"ದುರ್ದೈವ ಎಂದರೆ ನನಗೆ ಅವರಿಗೆ ನಿರ್ದೇಶನ ಮಾಡುವ ಭಾಗ್ಯ ಸಿಗಲಿಲ್ಲ. 'ಪೃಥ್ವಿ' ಸಿನಿಮಾದಲ್ಲಿ ನಾನು ಸಹ ನಿರ್ದೇಶಕನಾಗಿ ಕಾರ್ಯನಿರ್ವಹಿಸಿದ್ದೆ. ಪಿಆರ್‌ಕೆ ವೇದಿಕೆಯಡಿ ನಿರ್ಮಾಪಕರಾಗಿ ಪೂರ್ಣವಾದ ಸ್ವಾತಂತ್ರ್ಯವನ್ನು ಅವರು ನಿರ್ದೇಶಕರಿಗೆ ನೀಡುತ್ತಿದ್ದರು. ನಿರ್ದೇಶಕರೇ ಆಯ್ಕೆ ಮಾಡಿದ ತಂಡಕ್ಕೆ, ತಂತ್ರಜ್ಞಾನಕ್ಕೆ ಸಂಪೂರ್ಣ ಬೆಂಬಲವಿತ್ತು. ನಿರ್ಮಾಪಕರು ಈ ರೀತಿ ಇರಬೇಕು. ಅವರ ಮಾನವೀಯತೆ, ಸಿನಿಮಾ ಮೇಲಿದ್ದ ಪ್ರೀತಿ, ಹೊಸ ವಿಷಯವನ್ನು ಕಲಿಯುವ ಕುತೂಹಲವನ್ನು ಬಹಳ ಹತ್ತಿರದಿಂದ ಕಂಡಿದ್ದೇನೆ. ಈ ಎತ್ತರಕ್ಕೆ ಬೆಳೆದಾಗ ಇಂಥ ಗುಣ ಉಳಿಯುವುದು ಅಪರೂಪ.

–**ಹೇಮಂತ್ ಎಂ.ರಾವ್**, ನಿರ್ದೇಶಕ

ಬದುಕು ಕಟ್ಟಿಕೊಟ್ಟ 'ಅರಸು'

ಅದು 2021ರ ಅಕ್ಟೋಬರ್ 31. ಸೂರ್ಯ ಇನ್ನೂ ಕಣ್ಣುಬಿಟ್ಟಿರಲಿಲ್ಲ. ಕಂಠೀರವ ಸ್ಟುಡಿಯೊ ಆವರಣದಲ್ಲಿ ನೋವು, ಅಳು, ಆಘಾತದ ಕಾರ್ಮೋಡ ಕವಿದಿತ್ತು. ಅಪ್ಪ–ಅಮ್ಮನ ಮಡಿಲಲ್ಲಿ ಪ್ರೀತಿಯ ಪುತ್ರ, ಅಭಿಮಾನಿಗಳ ನೆಚ್ಚಿನ 'ಅಪ್ಪು' ಮಣ್ಣಾಗಿದ್ದರು. ಇದೆಲ್ಲ ಮುಗಿಯುವ ಹೊತ್ತಿಗೆ ಬೆಳಕಾದರೂ ಅಲ್ಲಿ ಕತ್ತಲೆಯೇ ಆವರಿಸಿತ್ತು. ಆದರೆ, ಇಂದು ಈ ಜಾಗ ಹಲವರ ಬಾಳಿಗೆ ಬೆಳಕಾಗಿದೆ. ಅಪ್ಪುವನ್ನು ಕಣ್ತುಂಬಿಕೊಳ್ಳುವ ಸ್ಥಳವಾಗಿದೆ.

ನಟ ಪುನೀತ್ ರಾಜ್‌ಕುಮಾರ್ ಅಗಲಿ ಐದು ತಿಂಗಳು ಕಳೆದಿದೆ. ಆದರೆ, 'ಅಪ್ಪು' ನೆನಪು ಪ್ರತಿಯೊಬ್ಬರ ಮನಸ್ಸಿನಲ್ಲಿ ಇನ್ನೂ ಹಸಿರಾಗಿದೆ. ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ಅವರ ಸಮಾಧಿಯನ್ನು ನೋಡಲು ಪ್ರತಿನಿತ್ಯವು ಆಗಮಿಸುತ್ತಿರುವ ಜನರ ಸಂಖ್ಯೆಯೇ ಇದಕ್ಕೆ ಸಾಕ್ಷ್ಯ. ನವೆಂಬರ್ ಮೊದಲೆರಡು ವಾರದಲ್ಲಿ ಪ್ರತಿನಿತ್ಯ ಲಕ್ಷಕ್ಕೂ ಅಧಿಕ ಜನರು ಸಮಾಧಿಗೆ ಭೇಟಿ ನೀಡಿ ಅಪ್ಪುವನ್ನು ಕಣ್ತುಂಬಿಕೊಂಡಿದ್ದಾರೆ. ಇದಾದ ಬಳಿಕ ಪ್ರತಿನಿತ್ಯವೂ ಕನಿಷ್ಠ ಐದರಿಂದ ಹತ್ತು ಸಾವಿರ ಜನರು ಅಪ್ಪು ಸಮಾಧಿಗೆ ಭೇಟಿ ನೀಡುತ್ತಿದ್ದಾರೆ. ವಾರಾಂತ್ಯದಲ್ಲಂತೂ ಈ ಸಂಖ್ಯೆ ದುಪ್ಪಟ್ಟಾಗುತ್ತಿದೆ.

ಹಲವರ ಬಾಳಿಗೆ ಬೆಳಕು: 'ಇಲ್ಲಿ ವ್ಯಾಪಾರ ಆರಂಭಿಸಿ ಎರಡು ತಿಂಗಳಾಗುತ್ತಾ ಬಂತು. ಈ ಜಾಗ ನನ್ನಂತಹ ನೂರಾರು ಜನರಿಗೆ ಜೀವನ ನೀಡಿದೆ. ಪ್ರತಿನಿತ್ಯ ಕನಿಷ್ಠ 200–300 ಟಿ–ಶರ್ಟ್‌ಗಳನ್ನು ಮಾರಾಟ ಮಾಡುತ್ತಿದ್ದೇನೆ. ನನ್ನಂತ ವ್ಯಾಪಾರಿಯಿಂದ ಟಿ–ಶರ್ಟ್ ಪ್ರಿಂಟಿಂಗ್ ಕಾರ್ಖಾನೆಯಲ್ಲಿ ನೂರು ಜನರಿಗೆ ಕೆಲಸ ಸಿಕ್ಕಿದೆ. ಒಟ್ಟಿನಲ್ಲಿ ಅಪ್ಪು ನಮಗೆ ಅನ್ನ ನೀಡುತ್ತಿದ್ದಾರೆ' –ಇದು ಪುನೀತ್ ಅಭಿಮಾನಿ, ವ್ಯಾಪಾರಿ ಚಂದ್ರು ಅವರ ಮಾತು.

ಕಂಠೀರವ ಸ್ಟುಡಿಯೊ ಹೊರಭಾಗದಲ್ಲಿ ಚಂದ್ರು ಅವರಂಥ ನೂರಾರು ವ್ಯಾಪಾರಿಗಳು ಇಂದು ಬದುಕು ಕಟ್ಟಿಕೊಂಡಿದ್ದಾರೆ. ಇವರಲ್ಲಿ ಕನಿಷ್ಠ 60–70 ಜನರು ಮೊಬೈಲ್ ಕವರ್ ವ್ಯಾಪಾರಿಗಳು. ಪುನೀತ್ ಅವರ ಭಾವಚಿತ್ರವನ್ನು ಕ್ಷಣಮಾತ್ರದಲ್ಲಿ ಮೊಬೈಲ್ ಹಿಂಭಾಗದಲ್ಲಿ ಅಂಟಿಸಿ, ಅಭಿಮಾನಿಗಳನ್ನು ಖುಷಿ ಪಡಿಸುತ್ತಾ ನಿತ್ಯವೂ ಜೀವನ ಸಾಗಿಸುತ್ತಿರುವವರು. ಮಕ್ಕಳ ಆಟಿಕೆ ಮಾರುವವರು ಒಂದಿಷ್ಟು ಜನ. ನೆಚ್ಚಿನ ಅಪ್ಪುವನ್ನು ನೋಡಲು ಬರುವ ಅಭಿಮಾನಿಗಳ ಕೈಗೆ ಗುಲಾಬಿಯನ್ನಿತ್ತು, ಅಪ್ಪು ಫೋಟೊಗಳನ್ನು ಮಾರಿ ಜೀವನ ನಡೆಸುವವರು ಮತ್ತೊಂದಿಷ್ಟು ಜನ. ಹೀಗೆ ಕಂಠೀರವ ಸ್ಟುಡಿಯೊ ಹೊರಭಾಗದ ಸರ್ವೀಸ್ ರಸ್ತೆ ಹಲವರ ಬದುಕಿನ ದಾರಿಯಾಗಿದೆ.

ಕಂಠೀರವ ಸ್ಟುಡಿಯೊ ಹೊರಗಡೆ ಟಿ–ಶರ್ಟ್‌ಗಳನ್ನು ಮಾರುತ್ತಾ ಜೀವನ ಕಟ್ಟಿಕೊಂಡಿರುವ ವ್ಯಾಪಾರಿಗಳು ಪ್ರಜಾವಾಣಿ ಚಿತ್ರ/ರಂಜು ಪಿ.



ನವಜೋತ್ ಸಿಂಗ್ ಸಿಧು ರಾಜೀನಾಮೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಸೂಚನೆಯಂತೆ ಪಂಜಾಬ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ನವಜೋತ್ ಸಿಂಗ್ ಸಿಧು ಅವರು ಬುಧವಾರ ಹೇಳಿದ್ದಾರೆ. ಅವರು ಕಳೆದ ಜುಲೈನಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದರು.

ಸಿಧು ಅವರು ಒಂದು ಸಾಲಿನ ರಾಜೀನಾಮೆ ಪತ್ರವನ್ನು ಬರೆದಿದ್ದಾರೆ. 'ನಾನು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ' ಎಂದು ಸೋನಿಯಾ ಅವರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. 'ಸೋನಿಯಾ ಅವರ ಬಯಕೆಯಂತೆ ರಾಜೀನಾಮೆ ನೀಡುತ್ತಿದ್ದೇನೆ' ಎಂದು ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

ಸಿಧು ಅವರಂತೆ, ಉತ್ತರ ಪ್ರದೇಶ ರಾಜ್ಯ ಘಟಕದ ಅಧ್ಯಕ್ಷ ಅಜಯ್‌ಕುಮಾರ್ ಲಲ್ಲು, ಉತ್ತರಾಖಂಡದ ಗಣೇಶ್ ಗೋಡಿಯಾಲ್, ಗೋವಾದ ಗಿರೀಶ್ ಚೋಡನಕರ್ ಹಾಗೂ ಮಣಿಪುರದ ಲೋಕನ ಸಿಂಗ್ ಅವರೂ ರಾಜೀನಾಮೆ ಸಲ್ಲಿಸಿದ್ದಾರೆ. ರಾಜೀನಾಮೆ ನೀಡುವಂತೆ ಐದೂ ರಾಜ್ಯ ಘಟಕಗಳ ಅಧ್ಯಕ್ಷರಿಗೆ ಸೋನಿಯಾ ಗಾಂಧಿ ಸೂಚಿಸಿದ್ದರು.

ಜನತಂತ್ರದ ಹಬ್ಬ 2022

ಪಂಜಾಬ್: ನಿರುದ್ಯೋಗ, ಭ್ರಷ್ಟಾಚಾರದ ವಿರುದ್ಧ ಹೋರಾಡುವ ಪ್ರತಿಜ್ಞೆ

ಮುಖ್ಯಮಂತ್ರಿಯಾಗಿ ಮಾನ್ ಪ್ರಮಾಣ

ಎಸ್‌ಬಿಎಸ್ ನಗರ (ಪಂಜಾಬ್) (ಪಿಟಿಐ): ಪಂಜಾಬ್‌ನ ನೂತನ ಮುಖ್ಯಮಂತ್ರಿಯಾಗಿ ಭಗವಂತ ಮಾನ್ ಅವರು ಜನಸಾಗರದ ಸಮ್ಮುಖದಲ್ಲಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು. ಪಂಜಾಬ್ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರು ಪ್ರತಿಜ್ಞಾವಿಧಿ ಬೋಧಿಸಿದರು.

ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಪೂರ್ವಜರ ಊರು ಖಟಕಡ್ ಕಲಂನಲ್ಲಿ ನಡೆದ ಸಮಾರಂಭದಲ್ಲಿ ಅಧಿಕಾರ ವಹಿಸಿಕೊಂಡ ಮಾನ್, ನಿರುದ್ಯೋಗ ಹಾಗೂ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಪ್ರತಿಜ್ಞೆ ಮಾಡಿದರು.

'ಇಂದಿನಿಂದ ನಮ್ಮ ಕೆಲಸ ಶುರುವಾಗಿದೆ. ಒಂದು ದಿನವನ್ನೂ ನಾವು ವ್ಯರ್ಥ ಮಾಡುವುದಿಲ್ಲ. ಈಗಾಗಲೇ 70 ವರ್ಷ ತಡವಾಗಿದೆ' ಎಂದು ಮಾನ್ ಅವರು ಸಾರ್ವಜನಿಕರನ್ನು ಉದ್ದೇಶಿಸಿ ಹೇಳಿದರು.

ಸಮಾರಂಭದಲ್ಲಿ ಮಾನ್ ಅವರೊಬ್ಬರೇ ಪ್ರಮಾಣವಚನ ಸ್ವೀಕರಿಸಿದರು. ವೇದಿಕೆ ಮೇಲಿದ್ದ

> **ರಾಜ್ಯದ ಶಾಲೆಗಳು ಹಾಗೂ ಆಸ್ಪತ್ರೆಗಳ ಸ್ಥಿತಿ ಸುಧಾರಣೆ ಮಾಡಲಾಗುವುದು. ಇದಕ್ಕಾಗಿ ದೆಹಲಿ ಸರ್ಕಾರದ ಮಾದರಿ ಅನುಸರಿಸಲಾಗುತ್ತದೆ**
> **ಭಗವಂತ ಮಾನ್**
> ಪಂಜಾಬ್ ಮುಖ್ಯಮಂತ್ರಿ

ಹಾಗೂ ಸಮಾವೇಶದಲ್ಲಿ ಸೇರಿದ್ದ ಬಹುತೇಕರು ಹಳದಿ ಟರ್ಬನ್ ಧರಿಸಿ ಗಮನ ಸೆಳೆದರು. ಭಗಂತ್ ಸಿಂಗ್ ಅವರ ತ್ಯಾಗವನ್ನು ಸ್ಮರಿಸುವ 'ರಂಗ್ ದೇ ಬಸಂತಿ' ಸಾಂಪ್ರದಾಯಿಕ ಗೀತೆಯನ್ನು ಪ್ರಸಾರ ಮಾಡಲಾಯಿತು. ಇಂಕ್ವಿಲಾಬ್ ಜಿಂದಾಬಾದ್, ಭಾರತ್ ಮಾತಾಕಿ ಜೈ ಎಂಬ ಘೋಷಣೆಗಳು ಮೊಳಗಿದವು.

ದೆಹಲಿ ಮುಖ್ಯಮಮಂತ್ರಿ ಅರವಿಂದ ಕೇಜ್ರಿವಾಲ್, ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ, ಪಂಜಾಬ್ ವಿಧಾನಸಭೆಗೆ ಹೊಸದಾಗಿ ಆಯ್ಕೆಯಾಗಿರುವ ಶಾಸಕರು ಹಾಜರಿದ್ದರು.

ಕಾಂಗ್ರೆಸ್ ಮುಖಂಡ ಮನೀಶ್ ತಿವಾರಿ ಅವರು ತಮ್ಮ ಪಕ್ಷದ ವಿರುದ್ಧವೇ ಕಿಡಿಕಾರಿದ್ದಾರೆ. 'ಮಾನ್ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ನನಗೆ ಆಹ್ವಾನ ಬಂದಿದೆ. ಆದರೆ, ನನ್ನ ಪಕ್ಷದ ಚನ್ನಿ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ನನಗೆ ಆಹ್ವಾನ ಇರಲಿಲ್ಲ' ಎಂದು ಅವರು ಟ್ವೀಟ್ ಮಾಡಿದ್ದಾರೆ. ಸಂಸತ್ ಅಧಿವೇಶದಲ್ಲಿ ಭಾಗಿಯಾಗಿದ್ದ ಕಾರಣ ಸಮಾರಂಭಕ್ಕೆ ತಿವಾರಿ ಗೈರಾಗಿದ್ದರು.

ಶುಭಾಶಯ: ಮಾನ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಮೊದಲಾದವರು ಶುಭಾಶಯ ಕೋರಿದರು.



ಪಂಜಾಬ್‌ನ ನೂತನ ಮುಖ್ಯಮಂತ್ರಿ ಭಗವಂತ ಮಾನ್ ಅವರಿಗೆ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರು ಪ್ರತಿಜ್ಞಾವಿಧಿ ಬೋಧಿಸಿದರು–ಪಿಟಿಐ ಚಿತ್ರ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 70

ರುದ್ರಾಕ್ಷ ಧಾರಣಾ ಮಂತ್ರಗಳು

'ಯಾವ ರುದ್ರಾಕ್ಷ ಧರಿಸುವಾಗ ಯಾವ ಯಾವ ಮಂತ್ರಗಳನ್ನು ಜಪಿಸಬೇಕು' ಎಂಬ ಕ್ರಮಗಳನ್ನು ಈಗ ಸೂತಮುನಿಯು ಪ್ರಯಾಗದ ಋಷಿಗಳಿಗೆ ತಿಳಿಸುತ್ತಾನೆ.

ಏಕಮುಖ ರುದ್ರಾಕ್ಷಕ್ಕೆ 'ಓಂ ಹ್ರೀಂ ನಮಃ', ದ್ವಿಮುಖ ರುದ್ರಾಕ್ಷಕ್ಕೆ 'ಓಂ ನಮಃ', ತ್ರಿಮುಖ ರುದ್ರಾಕ್ಷಕ್ಕೆ 'ಓಂ ಕ್ಲೀಂ ನಮಃ', ಚತುರ್ಮುಖ ರುದ್ರಾಕ್ಷಕ್ಕೆ 'ಓಂ ಹ್ರೀಂ ನಮಃ', ಪಂಚಮುಖ ರುದ್ರಾಕ್ಷಕ್ಕೆ 'ಓಂ ಹ್ರೀಂ ನಮಃ', ಷಡ್‌ಮುಖ ರುದ್ರಾಕ್ಷಕ್ಕೆ 'ಓಂ ಹ್ರೀಂ ಹುಂ ನಮಃ', ಸಪ್ತಮುಖ ರುದ್ರಾಕ್ಷಕ್ಕೆ 'ಓಂ ಹುಂ ನಮಃ', ಅಷ್ಟಮುಖ ರುದ್ರಾಕ್ಷಕ್ಕೆ 'ಓಂ ಹುಂ ನಮಃ', ನವಮುಖ ರುದ್ರಾಕ್ಷಕ್ಕೆ 'ಓಂ ಹ್ರೀಂ ಹುಂ ನಮಃ', ದಶಮುಖ ರುದ್ರಾಕ್ಷಕ್ಕೆ 'ಓಂ ಹ್ರೀಂ ನಮಃ', ಏಕದಶ ರುದ್ರಾಕ್ಷಕ್ಕೆ 'ಓಂ ಹ್ರೀಂ ಹುಂ ನಮಃ', ದ್ವಾದಶಮುಖ ರುದ್ರಾಕ್ಷಕ್ಕೆ 'ಓಂ ಕ್ರೋಂ ಕ್ಷೌಂ ರೌಂ ನಮಃ', ತ್ರಯೋದಶಮುಖ ರುದ್ರಾಕ್ಷಕ್ಕೆ 'ಓಂ ಹ್ರೀಂ ನಮಃ', ಮತ್ತು ಚತುರ್ದಶಮುಖ ರುದ್ರಾಕ್ಷಕ್ಕೆ 'ಓಂ ನಮಃ.'

ಹೀಗೆ ಸರ್ವ ಇಷ್ಟಾರ್ಥಗಳ ಸಿದ್ಧಿಗಾಗಿ ಭಕ್ತಿ ಮತ್ತು ಶ್ರದ್ಧೆಯಿಂದ ಮೇಲೆ ಹೇಳಿದ ಮಂತ್ರಗಳಿಂದ ಕ್ರಮವಾಗಿ ಆಯಾಯ ರುದ್ರಾಕ್ಷಗಳ ಧಾರಣೆಯಂತೆ ಮಂತ್ರ ಜಪಿಸಬೇಕು. ಮಂತ್ರಗಳಿಲ್ಲದೆ ರುದ್ರಾಕ್ಷಗಳನ್ನು ಧರಿಸುವ ಮಾನವನು ಹದಿನಾಲ್ಕು ಇಂದ್ರರ ಆಯುಸ್ಸಿನ ಪರ್ಯಂತವಾಗಿ ಘೋರವಾದ ನರಕವನ್ನು ಅನುಭವಿಸುತ್ತಾನೆ. ಆದ್ದರಿಂದ ರುದ್ರಾಕ್ಷ ಧರಿಸುವಾಗ ಆಯಾಯ ರುದ್ರಾಕ್ಷಗಳಿಗೆ ತಕ್ಕಂತೆ ಮಂತ್ರೋಚ್ಚಾರ ಮಾಡಿ ಧರಿಸಬೇಕು.

ಇಂಥ ಮಂತ್ರೋಕ್ತ ರುದ್ರಾಕ್ಷಮಾಲೆಯನ್ನು ಧರಿಸಿದವರನ್ನು ನೋಡಿದ ಭೂತ ಪ್ರೇತ ಪಿಶಾಚಿಗಳೂ, ಡಾಕಿನೀ-ಶಾಕೀನೀ ಮುಂತಾದ ಅನಿಷ್ಟವನ್ನು ಉಂಟುಮಾಡುವ ಗ್ರಹಗಳೂ, ಮಾಟ ಮುಂತಾದ ಕೃತಿಮ ಕರ್ಮಗಳೂ ದೂರವಾಗಿ ಓಡಿ ಹೋಗುವುದು. ರುದ್ರಾಕ್ಷಧಾರಿಯನ್ನು ನೋಡಿದರೆ ಶಿವ, ವಿಷ್ಣು ದೇವಿ, ಗಣಪತಿ, ಸೂರ್ಯ, ಮಿಕ್ಕ ದೇವತೆಗಳೂ ಪ್ರಸನ್ನರಾಗುವರು. ರುದ್ರಾಕ್ಷ ಮಹಿಮೆಯನ್ನು ತಿಳಿದು, ಅವುಗಳನ್ನು ಮಂತ್ರಪೂರ್ವಕವಾಗಿ ಧರಿಸಬೇಕು. ಅದರಿಂದ ಧರ್ಮವೃದ್ಧಿಯಾಗುವುದು ಎಂದು ಶಿವನು ಪಾರ್ವತಿಗೆ ಹೇಳಿದ್ದನ್ನು ಸೂತಮುನಿ ಪ್ರಯಾಗದ ಋಷಿಗಳಿಗೆ ತಿಳಿಸುತ್ತಾನೆ.

ನಂತರ ಸೂತನು 'ಎಲೈ ಮುನಿಗಳೇ! ಶಿವನು ಗಿರಿಜೆಯ ಎದುರಿಗೆ ಭೋಗ ಮತ್ತು ಮೋಕ್ಷಗಳನ್ನು ಉಂಟುಮಾಡುವ ಭಸ್ಮ ಮತ್ತು ರುದ್ರಾಕ್ಷಗಳ ಮಹಿಮೆಯನ್ನು ಹೇಳಿದ್ದಾನೆ. ಆದುದರಿಂದ ಭಸ್ಮ ಮತ್ತು ರುದ್ರಾಕ್ಷಗಳನ್ನು ಧರಿಸುವವರು ಶಿವನಿಗೆ ತುಂಬಾ ಪ್ರಿಯರಾಗುವರು. ಆ ಭಸ್ಮ–ರುದ್ರಾಕ್ಷಗಳನ್ನು ಧರಿಸುವುದರ ಮಹಿಮೆಯಿಂದ ಭೋಗವೂ ಮುಕ್ತಿಯೂ ಲಭಿಸುವುದು. ಭಸ್ಮ–ರುದ್ರಾಕ್ಷಗಳನ್ನು ಧರಿಸುವವರು ಶಿವಪಂಚಾಕ್ಷರಜಪವನ್ನು ಮಾಡುವವರೂ ಸಹ ಶಿವಭಕ್ತರೆನಿಸುವರು. ಭಸ್ಮತ್ರಿಪುಂಡ್ರವನ್ನು ಹಚ್ಚದೆ, ರುದ್ರಾಕ್ಷ ಮಾಲೆಯನ್ನು ಧರಿಸದೆ, ಶಿವನನ್ನು ಪೂಜಿಸಿದರೆ ಮಹಾದೇವನು ಇಷ್ಟಾರ್ಥವನ್ನು ಕೊಡುವುದಿಲ್ಲ. ಬದಲಿಗೆ ಘನಘೋರ ಪಾಪ ಸುತ್ತಿಕೊಳ್ಳುವುದು' ಎಂದು ಎಚ್ಚರಿಸುತ್ತಾನೆ.

'ಎಲೈ ಮುನಿಶ್ರೇಷ್ಠರೇ! ನೀವು ಕೇಳಿದಂತಹ ಭಸ್ಮ ಮತ್ತು ರುದ್ರಾಕ್ಷ ಮಹಾತ್ಮೆಗಳನ್ನು ಸಂಪೂರ್ಣವಾಗಿ ಈಗ ಹೇಳಿರುವೆ. ಇದು ಸಕಲ ಇಷ್ಟಾರ್ಥಗಳ ಸಮೃದ್ಧಿಯನ್ನು ಉಂಟುಮಾಡುವಂತಹುದು. ಈ ರುದ್ರಾಕ್ಷ ಮತ್ತು ಭಸ್ಮಗಳ ಪರಮಶುಭವಾದ ಮಹಿಮೆಯನ್ನು ಯಾರು ನಿತ್ಯವೂ ಭಕ್ತಿಯಿಂದ ಕೇಳುವರೋ, ಅಥವಾ ಹೇಳುವರೋ ಅವರು ಸರ್ವಾಭೀಷ್ಟಗಳನ್ನೂ ಪಡೆಯುವರು. ಅವರು ಇಹಲೋಕದಲ್ಲಿ ಪುತ್ರಪೌತ್ರರಿಂದೊಡಗೂಡಿ ಸರ್ವ ಸುಖಗಳನ್ನೂ ಅನುಭವಿಸಿ, ಪರಲೋಕದಲ್ಲಿ ಶಿವನಿಗೆ ಪ್ರಿಯರಾಗಿ ಮೋಕ್ಷವನ್ನು ಪಡೆಯುವರು' ಎಂದು ಸೂತಮುನಿ ಹೇಳುವುದರೊಂದಿಗೆ ಶಿವಮಹಾಪುರಾಣದ ಮೊದಲನೆ ಸಂಹಿತೆಯಾದ ವಿದ್ಯೇಶ್ವರ ಸಂಹಿತೆಯ 'ಸಾಧ್ಯಸಾಧನ ಖಂಡದಲ್ಲಿ ರುದ್ರಾಕ್ಷ ಮಹಾತ್ಮೆ ವರ್ಣನ' ಎಂಬ ಇಪ್ಪತ್ತೈದನೆಯ ಅಧ್ಯಾಯ ಮುಗಿಯುತ್ತದೆ.

ಇಲ್ಲಿಗೆ ವೇದವ್ಯಾಸರ ಶಿವಮಹಾಪುರಾಣದ ಏಳು ಸಂಹಿತೆಗಳಲ್ಲಿ ಮೊದಲನೆಯದಾದ ವಿದ್ಯೇಶ್ವರಸಂಹಿತೆಯ ಸಂಪೂರ್ಣಭಾಗಗಳು ಸಮಾಪ್ತವಾಗುತ್ತವೆ. ಮುಂದೆ ಶಿವಮಹಾಪುರಾಣದ ಎರಡನೇ ಸಂಹಿತೆಯಾದ ರುದ್ರಸಂಹಿತೆಯ ವಿವರಗಳನ್ನು ಸೂತಮುನಿಯು ಪ್ರಯಾಗದ ಋಷಿಸಮೂಹಕ್ಕೆ ತಿಳಿಸಲು ಪ್ರಾರಂಭಿಸುತ್ತಾನೆ.

ಪ್ರಧಾನಿ ಭೇಟಿಯಾದ ಸಾವಂತ್, ಬಿರೆನ್

ನವದೆಹಲಿ (ಪಿಟಿಐ): ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಮಣಿಪುರ ಮುಖ್ಯಮಂತ್ರಿ ಎನ್. ಬಿರೆನ್ ಸಿಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬುಧವಾರ ಭೇಟಿಯಾದರು.

ಗೋವಾ ಮತ್ತು ಮಣಿಪುರದಲ್ಲಿ ಬಿಜೆಪಿಯನ್ನು ಗೆಲುವಿನ ದಡ ಮುಟ್ಟಿಸಿರುವ ಇಬ್ಬರೂ ಮುಖ್ಯಮಂತ್ರಿಗಳ ಮೇಲೆ ಪಕ್ಷದ ನಾಯಕತ್ವ ವಿಶ್ವಾಸ ಇರಿಸಿದ್ದು, ಮತ್ತೊಂದು ಅವಧಿಗೆ ಅವರನ್ನೇ ಮುಖ್ಯಮಂತ್ರಿಗಳನ್ನಾಗಿ ನೇಮಿಸಲಿದೆ ಎಂಬ ಸೂಚನೆಯಿದೆ. ಇದಕ್ಕೆ ಪುಷ್ಟಿ ನೀಡುವಂತೆ ಸಾವಂತ್ ಮತ್ತು ಬಿರೆನ್ ಅವರು ಪ್ರಧಾನಿಯನ್ನು ಭೇಟಿ ಮಾಡಿದರು.

ಬಿರೆನ್ ಅವರನ್ನು ಅಭಿನಂದಿಸಿದ ಬಳಿಕ ಮೋದಿ ಅವರು ಟ್ವೀಟ್ ಮಾಡಿದ್ದಾರೆ. 'ಮಣಿಪುರ ಜನರ ಆಶೋತ್ತರಗಳನ್ನು ಈಡೇರಿಸಲು ಮತ್ತಷ್ಟು ಶ್ರಮವಹಿಸಿ ಕೆಲಸ ಮಾಡಲು ಬಿಜೆಪಿ ಬದ್ಧವಾಗಿದೆ' ಎಂದು ಅವರು ಹೇಳಿದ್ದಾರೆ. ಪ್ರಮೋದ್ ಸಾವಂತ್ ಭೇಟಿ ನಂತರ ಟ್ವೀಟ್ ಮಾಡಿರುವ ಮೋದಿ, 'ಗೋವಾಕ್ಕೆ ಸೇವೆ ಸಲ್ಲಿಸಲು ನಮ್ಮ ಪಕ್ಷಕ್ಕೆ ಮತ್ತೊಮ್ಮೆ ಜನಾದೇಶ ನೀಡುವ ಮೂಲಕ ನಮ್ಮನ್ನು ಆಶೀರ್ವದಿಸಿರುವ ರಾಜ್ಯದ ಜನತೆಗೆ ಧನ್ಯವಾದಗಳು. ಗೋವಾ ಅಭಿವೃದ್ಧಿಗಾಗಿ ನಾವು ಮುಂದಿನ ದಿನಗಳಲ್ಲಿ ಮತ್ತಷ್ಟು ಕೆಲಸ ಮಾಡುತ್ತೇವೆ' ಎಂದಿದ್ದಾರೆ.

ಬಿಜೆಪಿ ಗೆದ್ದಿರುವ ನಾಲ್ಕು ರಾಜ್ಯಗಳಲ್ಲಿ ಸರ್ಕಾರ ರಚಿಸುವ ಕುರಿತು ಪ್ರಧಾನಿ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್ ಮತ್ತು ಪಕ್ಷದ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಅವರು ಕೆಲ ದಿನಗಳಿಂದ ಸಭೆಗಳನ್ನು ನಡೆಸುತ್ತಿದ್ದಾರೆ.

ಉತ್ತರಾಖಂಡದಲ್ಲಿ ಬಿಜೆಪಿ ಬಹುಮತ ಗಳಿಸಿದ್ದರೂ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಚುನಾವಣೆಯಲ್ಲಿ ಸೋತಿರುವ ಕಾರಣ ಅವರನ್ನು ಈ ಅವಧಿಗೂ ಮುಖ್ಯಮಂತ್ರಿಯನ್ನಾಗಿ ಮುಂದುವರಿಸುವ ಸಾಧ್ಯತೆಗಳಿವೆ.

ಹೊಸದಾಗಿ ರಚನೆ ಆಗಲಿರುವ ರಾಜ್ಯ ಸರ್ಕಾರಗಳು ತಮ್ಮ ಆಡಳಿತದ ಕಾರ್ಯಸೂಚಿ ಮತ್ತು ಸಾಮಾಜಿಕ ಪ್ರಾತಿನಿಧ್ಯ ಕುರಿತು ಧನಾತ್ಮಕ ಸಂದೇಶ ನೀಡಬೇಕು ಎಂಬ ನಿಟ್ಟಿನಲ್ಲಿ ಪಕ್ಷ ಕೆಲಸ ಮಾಡುತ್ತಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ನೇತೃತ್ವದ ನಿಯೋಗವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬುಧವಾರ ನವದೆಹಲಿಯಲ್ಲಿ ಭೇಟಿ ಮಾಡಿತು –ಪಿಟಿಐ ಚಿತ್ರ

ಇಂಫಾಲ್‌ಗೆ ಕಾನ್ರಾಡ್ ಸಂಗ್ಮಾ

ಶಿಲ್ಲಾಂಗ್ ವರದಿ: ಸರ್ಕಾರ ರಚಿಸುವ ಸಂಬಂಧ ಮಣಿಪುರದ ಬಿಜೆಪಿ ನಾಯಕರು ದೆಹಲಿಗೆ ತೆರಳಿರುವ ವೇಳೆಯೇ ನ್ಯಾಷನಲ್ಸ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) ನಾಯಕ ಕಾನ್ರಾಡ್ ಕೆ. ಸಂಗ್ಮಾ ಅವರು ಇಂಫಾಲ್‌ಗೆ ತೆರಳಿದ್ದಾರೆ.

ರಾಜ್ಯದಲ್ಲಿ ಹೊಸದಾಗಿ ರಚನೆ ಆಗಲಿರುವ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ತಮ್ಮ ಪಕ್ಷಕ್ಕೆ ಸ್ಥಾನ ಕೇಳುವ ಸಲುವಾಗಿ ಅವರು ಇಂಫಾಲ್‌ಗೆ ತೆರಳಿದ್ದಾರೆ ಎನ್ನಲಾಗಿದೆ.

'ಸರ್ಕಾರ ರಚಿಸಲು ನಮ್ಮ ಪಕ್ಷವನ್ನು ಆಮಂತ್ರಿಸಿದರೆ ಸಂತೋಷ. ಆಮಂತ್ರಣ ನೀಡದಿದ್ದರೆ ಪರಿಸ್ಥಿತಿಯನ್ನು ಪರಿಶೀಲಿಸಲಾಗುವುದು' ಎಂದು ಸಂಗ್ಮಾ ಹೇಳಿದ್ದಾರೆ.

ಜಿ–23 ನಾಯಕರಿಂದ ಪಕ್ಷ ಒಡೆಯಲು ಯತ್ನ: ಖರ್ಗೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಮತ್ತೊಬ್ಬ ಹಿರಿಯ ನಾಯಕ ಕಪಿಲ್ ಸಿಬಲ್ ವಿರುದ್ಧ ಬುಧವಾರ ಹರಿಹಾಯ್ದಿದ್ದಾರೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ (ಸಿಡಬ್ಲ್ಯುಸಿ) ಬಳಿಕವೂ ಮೇಲಿಂದ ಮೇಲೆ ಸಭೆಗಳನ್ನು ನಡೆಸುವ ಮೂಲಕ ಜಿ–23 (ಕಾಂಗ್ರೆಸ್ ಭಿನ್ನಮತೀಯರು) ನಾಯಕರು ಕಾಂಗ್ರೆಸ್ ಅನ್ನು ಒಡೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಗುಲಾಮ್ ನಬಿ ಆಜಾದ್ ಅವರ ನಿವಾಸದಲ್ಲಿ ಸಭೆ ಆಯೋಜಿಸಿದ್ದ ಹಿನ್ನೆಲೆಯಲ್ಲಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಅವರು 100 ಸಭೆಗಳನ್ನು ಆಯೋಜಿಸಿದರೂ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ದುರ್ಬಲಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ. ಬೀದಿಗಳಿಂದ ರಾಷ್ಟ್ರ ರಾಜಧಾನಿವರೆಗೆ ಕಾಂಗ್ರೆಸ್ ಅವರ ಜೊತೆ ಇದೆ' ಎಂದು ಅವರು ಹೇಳಿದ್ದಾರೆ. 'ಕಪಿಲ್ ಸಿಬಲ್ ಅವರು ಯಾವ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದಾರೆ?' ಎಂದು ಸಲ್ಮಾನ್ ಖುರ್ಷಿದ್ ಪ್ರಶ್ನಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ

ಐವರು ಮುಖಂಡರ ನೇಮಕ

ಪಕ್ಷ ಸೋಲುಂಡಿರುವ ಐದು ರಾಜ್ಯಗಳಲ್ಲಿ ಚುನಾವಣೋತ್ತರ ಪರಿಸ್ಥಿತಿಯನ್ನು ಅವಲೋಕಿಸಿ, ಸಂಘಟನೆ ದೃಷ್ಟಿಯಿಂದ ಮಾಡಬೇಕಿರುವ ಬದಲಾವಣೆಗಳ ಬಗ್ಗೆ ಸಲಹೆ ನೀಡಲು ಐವರು ಮುಖಂಡರನ್ನು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಬುಧವಾರ ನೇಮಿಸಿದ್ದಾರೆ.

ಗೋವಾಕ್ಕೆ ರಜನಿ ಪಾಟೀಲ್, ಮಣಿಪುರಕ್ಕೆ ಜೈರಾಂ ರಮೇಶ್, ಪಂಜಾಬ್‌ಗೆ ಅಜಯ್ ಮಾಕೆನ್, ಉತ್ತರ ಪ್ರದೇಶಕ್ಕೆ ಜಿತೇಂದ್ರ ಸಿಂಗ್ ಹಾಗೂ ಉತ್ತರಾಖಂಡಕ್ಕೆ ಅವಿನಾಶ್ ಪಾಂಡೆ ಅವರನ್ನು ನಿಯೋಜಿಸಲಾಗಿದೆ.

ರಾಜ್ಯದ ವಿವಿಧೆಡೆ ಕಾಲೇಜುಗಳಿಗೆ ಗೈರಾದ ಮುಸ್ಲಿಂ ವಿದ್ಯಾರ್ಥಿನಿಯರು

ಹಿಜಾಬ್ ತೆಗೆಯಲು ನಿರಾಕರಣೆ: ಪರೀಕ್ಷೆ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕಾಲೇಜಿನ ಕೊಠಡಿಯೊಳಗೂ ಹಿಜಾಬ್ ತೆಗೆಯಲು ನಿರಾಕರಿಸಿ ಕೆಲವು ವಿದ್ಯಾರ್ಥಿನಿಯರು ಬುಧವಾರ ಪರೀಕ್ಷೆಯನ್ನೇ ಬಹಿಷ್ಕರಿಸಿ ಮನೆಗೆ ಮರಳಿದರು.

ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನ 12 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ನಿರಾಕರಿಸಿ ಆಂತರಿಕ ಪರೀಕ್ಷೆಗೆ ಬುಧವಾರ ಹಾಜರಾಗದೆ ಕಾಲೇಜು ಗೇಟಿನ ಬಳಿ ರಸ್ತೆಯಲ್ಲಿ ನಿಂತು ಪ್ರತಿರೋಧ ವ್ಯಕ್ತಪಡಿಸಿದರು. 'ಹಿಜಾಬ್ ನಮ್ಮ ಹಕ್ಕು, ಹೆಮ್ಮೆ', 'ಹಿಜಾಬ್– ಹೋರಾಟ ಮುಂದುವರಿಸುತ್ತೇವೆ' ಎಂಬ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

'ಹಿಜಾಬ್ ಪ್ರಕರಣ ಕುರಿತು ಹೈಕೋರ್ಟ್ ನೀಡಿರುವ ಆದೇಶವನ್ನು ಉಲ್ಲಂಘನೆ ಮಾಡಿದರೆ ನ್ಯಾಯಾಂಗ ನಿಂದನೆಯಾಗುತ್ತದೆ' ಎಂದು ಪೊಲೀಸರು ಎಚ್ಚರಿಕೆ ನೀಡಿದರು.

'ಹೈಕೋರ್ಟ್ ತೀರ್ಪು ಸಮಾಧಾನ ತಂದಿಲ್ಲ, ನ್ಯಾಯ ಸಿಕ್ಕಿಲ್ಲ. ಸುಪ್ರೀಂಕೋರ್ಟ್ ಮೆಟ್ಟಿಲು ಏರುತ್ತೇವೆ. ನಾವು ಆಂತರಿಕ ಪರೀಕ್ಷೆಗೆ ಹಾಜರಾಗಲ್ಲ' ಎಂದು ಪ್ರತಿಭಟನಾನಿರತ ವಿದ್ಯಾರ್ಥಿನಿಯರು ಹೇಳಿದರು.

40 ವಿದ್ಯಾರ್ಥಿಗಳು ಗೈರು: ಹಿಜಾಬ್ ವಿವಾದದ ಮೂಲವಾಗಿದ್ದ ಉಡುಪಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಅನೇಕ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಬಿಚ್ಚಿಟ್ಟು ತರಗತಿಗೆ ಹೋದರು. ಆದರೆ, ಕಾನೂನು ಹೋರಾಟ ನಡೆಸುತ್ತಿರುವ 6 ವಿದ್ಯಾರ್ಥಿನಿಯರು ಸೇರಿದಂತೆ, ಒಟ್ಟು 40 ಮುಸ್ಲಿಂ ವಿದ್ಯಾರ್ಥಿನಿಯರು ಗೈರಾಗಿದ್ದರು.

ಉಡುಪಿ ಜಿಲ್ಲೆಯ ಕಾಪು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಒಂಬತ್ತು ವಿದ್ಯಾರ್ಥಿನಿಯರು ಆಂತರಿಕ ಪರೀಕ್ಷೆ ಬಹಿಷ್ಕರಿಸಿದರು.

ಕುಂದಾಪುರ ಹಾಗೂ ಬೈಂದೂರು ತಾಲ್ಲೂಕಿನ ಹಲವು ಶಾಲಾ-ಕಾಲೇಜುಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಗೈರಾಗಿದ್ದರು. ಕುಂದಾಪುರದ ಸರ್ಕಾರಿ ಪದವಿ ಪೂರ್ವ ಕಾಲೇಜು, ಆರ್.ಎನ್. ಶೆಟ್ಟಿ ಪದವಿ ಪೂರ್ವ ಕಾಲೇಜುಗಳಲ್ಲಿ ಬೆರಳೆಣಿಕೆ ಸಂಖ್ಯೆಯ ಮುಸ್ಲಿಂ ವಿದ್ಯಾರ್ಥಿನಿಯರು ಹಾಜರಾಗಿದ್ದರು.

ಬಸ್ರೂರು ಕಾಲೇಜಿಗೆ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಲಾಯಿತು. ವಿಶ್ರಾಂತಿ ಕೊಠಡಿಯಲ್ಲಿ ಸ್ವಲ್ಪ ಸಮಯ ಇದ್ದು, ನಂತರ ಮನೆಗೆ ಹಿಂತಿರುಗಿದರು.

ಗಂಗೊಳ್ಳಿಯಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರನ್ನು ಬೆಂಬಲಿಸಿ ಇತರ ಕೆಲವು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿದರು. ಬೈಂದೂರು, ನಾವುಂದ, ಡಖಂಬದಕೋಣೆ, ಉಪ್ಪುಂದದಲ್ಲೂ ಮುಸ್ಲಿಂ ವಿದ್ಯಾರ್ಥಿನಿಯರ ಹಾಜರಾತಿ ಕಡಿಮೆ ಇತ್ತು.

ಮಂಗಳೂರು ಸಮೀಪದ ಕಾವೂರಿನಲ್ಲಿರುವ ಸರ್ಕಾರಿ ಪದವಿ ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ತಮಗೆ ವರ್ಗಾವಣೆ ಪತ್ರ ನೀಡುವಂತೆ ಮನವಿ ಸಲ್ಲಿಸಿದ್ದಾರೆ.

ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜಿನ ಮುಂಭಾಗದಲ್ಲಿ ಕೆಲ ಮುಸ್ಲಿಂ ವಿದ್ಯಾರ್ಥಿನಿಯರು 'ಹಿಜಾಬ್ ನಮ್ಮ ಹಕ್ಕು' ಭಿತ್ತಿಪತ್ರ ಪ್ರದರ್ಶಿಸಿದರು

ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರು ಮನೆಗೆ ವಾಪಸ್

ಕಲಬುರಗಿ: ಸರ್ಕಾರ ಹಾಗೂ ಶಾಲಾ ಅಭಿವೃದ್ಧಿ ಸಮಿತಿಗಳು ನಿಗದಿಪಡಿಸಿದ ಸಮವಸ್ತ್ರದ ಬದಲು ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರನ್ನು ಹೈಕೋರ್ಟ್ ಆದೇಶದ ಕಾರಣ ನಗರದ ಎರಡು ಸರ್ಕಾರಿ ಪಿಯು ಕಾಲೇಜಿಗೆ ಅವಕಾಶ ನಿರಾಕರಿಸಲಾಯಿತು. ಹೀಗಾಗಿ ಅವರು ತರಗತಿಗೆ ಹಾಜರಗದೇ, ಮನೆಗೆ ಮರಳಿದರು.

ನಗರದ ಜೇವರ್ಗಿ ಕಾಲೊನಿಯಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜು ಮತ್ತು ಹಳೆಯ ಎಸ್ಪಿ ಕಚೇರಿ ಸಮೀಪದ ಸರ್ಕಾರಿ ಪಿಯು ಕಾಲೇಜಿಗೆ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಹೈಕೋರ್ಟ್ ಆದೇಶ ಮನವರಿಕೆ ಮಾಡಿಕೊಡಲಾಯಿತು. ಗುರುವಾರದಿಂದ ಸಮವಸ್ತ್ರ ಧರಿಸಿ ಬರುವುದಾಗಿ ಹೇಳಿ ವಾಪಸ್ ತೆರಳಿದರು ಎಂದು ಕಾಲೇಜಿನ ಪ್ರಾಚಾರ್ಯರು ತಿಳಿಸಿದರು.

'ಜಿಲ್ಲೆಯಾದ್ಯಂತ ಶಾಂತಿಯುತವಾಗಿ ತರಗತಿಗಳು ನಡೆದಿವೆ. ಹಿಜಾಬ್ ವಿವಾದದ ಬಗ್ಗೆ ಕೆಲ ಕಾಲೇಜಿನ ಪ್ರಾಚಾರ್ಯರು ಕರೆ ಮಾಡಿದ್ದರು. ಸಮವಸ್ತ್ರ ನಿಗದಿ ಮಾಡಿದ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ಇಲ್ಲ ಎಂಬುದನ್ನು ತಿಳಿಸಲಾಗಿದೆ' ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಶಿವಶರಣಪ್ಪ ಮೂಳೆಗಾಂವ 'ಪ್ರಜಾವಾಣಿ'ಗೆ ತಿಳಿಸಿದರು.

ಕಾಲೇಜುಗಳಿಗೆ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರನ್ನು ಹೊರತುಪಡಿಸಿ ಬೇರೆಯವರಿಗೆ ಪ್ರವೇಶ ನಿಷೇಧಿಸಲಾಗಿತ್ತು.

'ಹೈಕೋರ್ಟ್ ಆದೇಶಕ್ಕೆ ಪ್ರತಿರೋಧ ತೋರಿದರೆ ಕ್ರಮ'

ಚಿಕ್ಕಮಗಳೂರು: 'ಹಿಜಾಬ್ ಪ್ರಕರಣ ಕುರಿತು ಹೈಕೋರ್ಟ್ ನೀಡಿರುವ ಆದೇಶಕ್ಕೆ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದೇಶ ಉಲ್ಲಂಘಿಸಿದವರ ವಿರುದ್ಧ ಗೃಹ ಇಲಾಖೆ ಕ್ರಮ ವಹಿಸಲಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಪ್ರತಿಕ್ರಿಯಿಸಿದರು.

ಬಾಳೆಹೊನ್ನೂರಿನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ನಿಷೇಧಾಜ್ಞೆ ಇದ್ದರೂ ಕೆಲವರು ಪ್ರತಿರೋಧ ತೋರಿದ್ದಾರೆ. ಎಲ್ಲವನ್ನೂ ಸರ್ಕಾರ ಗಮನಿಸುತ್ತಿದೆ, ಕ್ರಮ ಕೈಗೊಳ್ಳುತ್ತೇವೆ' ಎಂದು ಉತ್ತರಿಸಿದರು.

'ಕೋರ್ಟ್ ಆದೇಶದ ವಿರುದ್ಧ ಪ್ರತಿಭಟನೆ ಮಾಡುವುದು ಕಾನೂನಿನ ಉಲ್ಲಂಘನೆ, ನ್ಯಾಯಾಂಗ ನಿಂದನೆಯಾಗುತ್ತದೆ. ಆದೇಶ ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲು ಏರಲು ಅವಕಾಶ ಇದೆ' ಎಂದರು.

'ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ತಂಡದವರು ಭ್ರಷ್ಟಾಚಾರಿಗಳ ಮುಖವಾಡ ಕಳಚುವ ಕೆಲಸದಲ್ಲಿ ತೊಡಗಿದ್ದಾರೆ. ಅದು ಮುಂದುವರಿಯಲಿದೆ' ಎಂದು ಹೇಳಿದರು.

'ಮೊಂಡು ವಾದಕ್ಕೆ ಮಣಿಯಲ್ಲ'

ಪ್ರಜಾವಾಣಿ ವಾರ್ತೆ

ರಾಮನಗರ: 'ಹಿಜಾಬ್ ವಿಚಾರದಲ್ಲಿ ನ್ಯಾಯಾಲಯವು ತಮಗೆ ಬೇಕಾದಂತೆ ತೀರ್ಪು ಕೊಡಬೇಕಿತ್ತು ಎನ್ನುವ ಮೊಂಡು ವಾದ ಸರಿಯಲ್ಲ. ಇಂತಹ ಬೆದರಿಕೆಗಳಿಗೆಲ್ಲ ಸರ್ಕಾರ ಮಣಿಯುವುದಿಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಬುಧವಾರ ಮಾಗಡಿಯಲ್ಲಿ ಹೇಳಿದರು.

'ಭಯೋತ್ಪಾದಕ ಸಂಘಟನೆಯ ಸದಸ್ಯರು'

ಉಡುಪಿ: 'ಹಿಜಾಬ್ ಪ್ರಕರಣದಲ್ಲಿ ಹೈಕೋರ್ಟ್ ತೀರ್ಪಿಗೆ ಅಗೌರವ ತೋರಿರುವ ಉಡುಪಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಆರು ವಿದ್ಯಾರ್ಥಿನಿಯರು ಭಯೋತ್ಪಾದಕ ಸಂಘಟನೆಯ ಸದಸ್ಯರು' ಎಂದು ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಯಶ್‌ಪಾಲ್ ಸುವರ್ಣ ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ತೀರ್ಪು ಬಂದ ಬಳಿಕ ನ್ಯಾಯಾಂಗಕ್ಕೆ ಅಗೌರವ ತೋರಿದ ವಿದ್ಯಾರ್ಥಿನಿಯರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ವಾಗ್ದಾಳಿ ನಡೆಸಿದರು.

'ಹೈಕೋರ್ಟ್ ತೀರ್ಪು ಪಾಲಿಸಬೇಕು'

ಬೆಳಗಾವಿ: 'ಹಿಜಾಬ್ ವಿಷಯದಲ್ಲಿ ಹೈಕೋರ್ಟ್ ನೀಡಿರುವ ತೀರ್ಪನ್ನು ಎಲ್ಲರೂ ಪಾಲಿಸಬೇಕು' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಆರ್. ಪ್ರಮೀಳಾ ನಾಯ್ಡು ತಿಳಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, 'ಹಿಜಾಬ್ ನಿರ್ಬಂಧಿಸಿದ್ದಕ್ಕೆ ಕೆಲವು ವಿದ್ಯಾರ್ಥಿನಿಯರು ತಕರಾರು ತೆಗೆಯುತ್ತಿದ್ದಾರೆ. ಸಾಧ್ಯವಾದರೆ ಉಡುಪಿಗೆ ತೆರಳಿ ಅವರನ್ನು ಭೇಟಿಯಾಗಿ ಮನವೊಲಿಸಲು ಪ್ರಯತ್ನಿಸುತ್ತೇನೆ' ಎಂದು ಹೇಳಿದರು.

ಆರ್‌ಎಫ್‌ಒ ಮನೆಯಲ್ಲಿ ಶ್ರೀಗಂಧ

ಎಸಿಎಫ್ ಹುದ್ದೆಗೆ ಬಡ್ತಿ ನಿರಾಕರಿಸಿದ್ದ ಬಾದಾಮಿ ವಲಯ ಅರಣ್ಯಾಧಿಕಾರಿ ಖೇಡಗಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ/ಹಾವೇರಿ/ಗದಗ: ಬಾದಾಮಿ ವಲಯ ಅರಣ್ಯಾಧಿಕಾರಿ ಶಿವಾನಂದ ಖೇಡಗಿ ಅವರ ಬಾಗಲಕೋಟೆಯ ನವನಗರದ ಸೆಕ್ಟರ್ ನಂ 15ರಲ್ಲಿರುವ ಅವರ ನಿವಾಸಕ್ಕೆ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಬುಧವಾರ ದಾಳಿ ಮಾಡಿದ ವೇಳೆ ನೋಟು ಎಣಿಸುವ ಯಂತ್ರ ಹಾಗೂ 3 ಕೆ.ಜಿ ಶ್ರೀಗಂಧದ ತುಂಡುಗಳು ದೊರೆತಿವೆ.

ಶಿವಾನಂದ ಖೇಡಗಿ

ಖೇಡಗಿ ಮೂಲತಃ ವಿಜಯಪುರ ಜಿಲ್ಲೆ ಸಿಂದಗಿಯವರು. ಎರಡು ವರ್ಷಗಳಿಂದ ಬಾದಾಮಿ ವಲಯ ಅರಣ್ಯ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಅದಕ್ಕೂ ಮುನ್ನ ವಿಜಯಪುರ ಹಾಗೂ ಬಾಗಲಕೋಟೆ ಅರಣ್ಯ ವಲಯಗಳಲ್ಲಿ ಕೆಲಸ ಮಾಡಿದ್ದಾರೆ. ಇಬ್ಬರು ಅಳಿಯಂದಿರ ಮನೆ, ಅಂಗಡಿ, ಬಾದಾಮಿಯ ಕಚೇರಿ ಮೇಲೆ ಏಕಕಾಲದಲ್ಲಿ ಎಸಿಬಿ ದಾಳಿ ನಡೆಸಿತು.

ವರ್ಗಾವಣೆಗಾಗಿ ಎಸಿಎಫ್ ಹುದ್ದೆ ನಿರಾಕರಣೆ: ಸಹಾಯಕ ವಲಯ ಅರಣ್ಯಾಧಿಕಾರಿ (ಎಆರ್‌ಎಫ್‌ಒ) ಆಗಿ ಇಲಾಖೆಯಲ್ಲಿ ಕೆಲಸ ಆರಂಭಿಸಿದ್ದ ಶಿವಾನಂದ ಖೇಡಗಿ ಇದೇ ಜೂನ್ 31ಕ್ಕೆ ನಿವೃತ್ತಿಯಾಗಲಿದ್ದರು. ವರ್ಷದ ಹಿಂದೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಹುದ್ದೆಗೆ ಬಡ್ತಿ ದೊರಕಿತ್ತು. ಬಹುತೇಕ ಸೇವೆ ಅವಿಭಜಿತ ವಿಜಯಪುರ ಜಿಲ್ಲೆಯಲ್ಲಿ ಮಾಡಿರುವ ಅವರು, ಎಸಿಎಫ್ ಆದಲ್ಲಿ ಬೇರೆ ಕಡೆಗೆ ತೆರಳಬೇಕಾಗುತ್ತದೆ ಎಂದು ಬಡ್ತಿ ನಿರಾಕರಿಸಿ ಬರೆದುಕೊಟ್ಟಿದ್ದರು ಎಂದು ತಿಳಿದುಬಂದಿದೆ.

ಹಾವೇರಿ ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸಹಾಯಕ ಎಂಜಿನಿಯರ್ ಕೃಷ್ಣ ಕೇಶಪ್ಪ ಆರೇರ ಅವರ ಬಸವೇಶ್ವರ ನಗರ ಬಿ ಬ್ಲಾಕ್‌ನ 16ನೇ ಕ್ರಾಸ್‌ನಲ್ಲಿರುವ ಸ್ವಂತ ಮನೆ ಅಂದಾಜು ಒಂದೂವರೆ ಕೋಟಿ ಮೌಲ್ಯದ್ದಾಗಿದೆ. ಈ ಮನೆಯಲ್ಲಿ 476 ಗ್ರಾಂ ಚಿನ್ನಾಭರಣ, ಎರಡು ಮುಕ್ಕಾಲು ಕೆ.ಜಿ. ಬೆಳ್ಳಿ, ₹2.29 ಲಕ್ಷ ನಗದು ಸಿಕ್ಕಿದೆ. ಹಾವೇರಿ ನಗರದಲ್ಲಿ 1 ನಿವೇಶನ, ಸ್ವಗ್ರಾಮ ಡೊಳ್ಳೇಶ್ವರದಲ್ಲಿ 12 ಎಕರೆ ಹೊಲ ಮತ್ತು ತೋಟವನ್ನು ಕೃಷ್ಣ ಹೊಂದಿದ್ದಾರೆ. ಸ್ವಗ್ರಾಮದಲ್ಲಿರುವ ಸಹೋದರರ ಮನೆಗಳ ಮೇಲೂ ದಾಳಿ ನಡೆದಿದ್ದು, ₹6 ಲಕ್ಷ ನಗದು, 180 ಗ್ರಾಂ ಚಿನ್ನಾಭರಣ ಪತ್ತೆಯಾಗಿದೆ ಎಂದು ಎಸಿಬಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಗದಗ ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೇದಾರ್ ಬಿ.ಎಸ್.ಅಣ್ಣಿಗೇರಿ ಅವರ ಪಂಚಾಕ್ಷರಿ ಬಡಾವಣೆಯಲ್ಲಿರುವ ಅವರ ಮನೆ ಮೇಲೆ ದಾಳಿ ನಡೆಸಿದ ಅಧಿಕಾರಿಗಳಿಗೆ ಅರ್ಧ ಕೆ.ಜಿ. ಚಿನ್ನ, ನಾಲ್ಕು ಕೆ.ಜಿ. ಬೆಳ್ಳಿ ಹಾಗೂ 20 ಎಕರೆ ಜಮೀನಿನ ಪತ್ರಗಳು ಸಿಕ್ಕಿವೆ. ಉಳಿತಾಯ ಖಾತೆಯಲ್ಲಿ ₹32 ಲಕ್ಷ ಹಣ ಇರುವುದು ಪತ್ತೆಯಾಗಿದೆ. ಅದೇರೀತಿ, ಟಾಂಗಾಕೂಟ್ ಬಳಿ ಇರುವ ಅವರ ಅಳಿಯ ರಾಕೇಶ್ ಅವರ ಕಚೇರಿ ಮೇಲೆ ದಾಳಿ ನಡೆಸಿದ ತಂಡಕ್ಕೆ ಎರಡು ಕೆ.ಜಿ. ಬೆಳ್ಳಿ ಹಾಗೂ ₹59 ಸಾವಿರ ನಗದು ಸಿಕ್ಕಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ರಾಯಚೂರಿನ ಬಸವೇಶ್ವರ ನಗರದಲ್ಲಿರುವ ಆಶೋಕರೆಡ್ಡಿ ಅವರ ಮನೆಯ ಕಸದ ಡಬ್ಬಿಯನ್ನು ಪರಿಶೀಲಿಸಿದ ಎಸಿಬಿ ಸಿಬ್ಬಂದಿ

ಸ್ಟೀಮ್ ಬಾತ್‌ರೂಂ, ಅಪಾರ ಆಭರಣ ಪತ್ತೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಗೋಪಿನಾಥ ಸಾ ಮಲಜಿ ಅವರ ನಗರದ ಸೋಲಾಪುರ ರಸ್ತೆಯಲ್ಲಿರುವ ಮನೆ, ದರ್ಗಾ ಪ್ರದೇಶದಲ್ಲಿರುವ ಕಚೇರಿ ಮೇಲೆ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಬುಧವಾರ ದಾಳಿ ನಡೆಸಿದೆ.

ಗೋಪಿನಾಥ ಸಾ ಮಲಜಿ ಅವರ ನಿವಾಸದಲ್ಲಿ ಐಷಾರಾಮಿ 'ಸ್ಟೀಮ್ ಬಾತ್ ರೂಂ' ಅಳವಡಿಕೆ ಮಾಡಿಕೊಂಡಿರುವುದು ದಾಳಿ ವೇಳೆ ಬೆಳಕಿಗೆ ಬಂದಿದೆ. ₹ 2 ಲಕ್ಷದಿಂದ ₹ 3 ಲಕ್ಷ ಬೆಲೆ ಬಾಳುವ ವಿದೇಶಿ ಬಾತ್ ಟಬ್ ಸಹ ಇರುವುದು ಖಚಿತವಾಗಿದೆ. ಐಷಾರಾಮಿ ವಸ್ತುಗಳು, ಬೆಲೆ ಬಾಳುವ ಪೀಠೋಪಕರಣಗಳು, ಚಿನ್ನಾಭರಣಗಳು, 10ಕ್ಕೂ ಅಧಿಕ ಬ್ಯಾಂಕ್ ಪಾಸ್‌ಬುಕ್‌ಗಳು ಹಾಗೂ ಇತರೆ ದಾಖಲಾತಿ ವಶಕ್ಕೆ ಪಡೆದು ಪರಿಶೀಲನೆ ನಡೆಸಿದ್ದಾರೆ.

ಗೋಪಿನಾಥ ಅವರ ಪತ್ನಿ, ಪುತ್ರಿಯ ಬ್ಯಾಂಕ್ ದಾಖಲಾತಿಗಳನ್ನು ಸಹ ವಶಕ್ಕೆ ಪಡೆದು ಪರಿಶೀಲನೆ ನಡೆಸಿದ್ದಾರೆ. ಬಾಗಲಕೋಟೆಯಲ್ಲಿ ಇರುವ ಗೋಪಿನಾಥರ ಸಂಬಂಧಿಗಳ ಎರಡು ಮನೆಗಳ ಮೇಲೆಯೂ ದಾಳಿ ನಡೆದಿದೆ.

ನಿರ್ಮಿತಿ ಕೇದ್ರದ ಅಕೌಂಟೆಂಟ್ ಮಲ್ಲಮ್ಮ ಅವರ ರಾಮದೇವ ನಗರದಲ್ಲಿರುವ ನಿವಾಸದ ಮೇಲೂ ಎಸಿಬಿ ದಾಳಿ ನಡೆದಿದ್ದು, ದಾಖಲಾತಿಗಳ ಪರಿಶೀಲನೆ ನಡೆದಿದೆ. ಎಸಿಬಿ ಡಿವೈಎಸ್ಪಿ ಮಂಜುನಾಥ ಗಂಗಲ್ ಹಾಗೂ ತಂಡ ಸಂಜೆವರೆಗೂ ದಾಖಲೆಗಳ ಪರಿಶೀಲನೆ ನಡೆಸಿದರು. ಅಕ್ರಮ ಆಸ್ತಿ ಬಗ್ಗೆ ನಿಖರ ಮಾಹಿತಿ ತಿಳಿದುಬಂದಿಲ್ಲ.

ವಿಜಯಪುರ ನಗರದ ಸೋಲಾಪುರ ರಸ್ತೆಯಲ್ಲಿರುವ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಗೋಪಿನಾಥಸಾ ಮಲಜಿ ಅವರ ನಿವಾಸದಲ್ಲಿ ಇರುವ ಐಷಾರಾಮಿ ಸ್ಟೀಮ್ ಬಾತ್ ರೂಂ ಪ್ರಜಾವಾಣಿ ಚಿತ್ರ

ಇನ್‌ಸ್ಪೆಕ್ಟರ್ ಆಸ್ತಿ ದಾಖಲೆ ವಶಕ್ಕೆ

- ಮೈಸೂರಿನ ವಿಜಯನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಎಚ್.ಎನ್. ಬಾಲಕೃಷ್ಣ ಗೌಡ ಎರಡು ಮನೆ, ಒಂದು ನಿವೇಶನ ಹೊಂದಿದ್ದಾರೆ. ಗುಂಡ್ಲುಪೇಟೆಯ ಅಬಕಾರಿ ಇನ್‌ಸ್ಪೆಕ್ಟರ್ ಚಲುವರಾಜು ಬಳಿ ಮೂರು ಮನೆ, ಎರಡು ನಿವೇಶನ ಇದೆ. ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಎ. ಶ್ರೀನಿವಾಸ ಬೆಂಗಳೂರಿನಲ್ಲಿ ಒಂದು ಮನೆ, ತುಮಕೂರಿನಲ್ಲಿ ಪಾಲಿಹೌಸ್ ಹೊಂದಿದ್ದಾರೆ.
- ಕಾರ್ಯನಿರ್ವಾಹಕ ಎಂಜಿನಿಯರ್ ಬಿ.ಎಚ್. ಗವಿರಂಗಪ್ಪ ಮನೆಯಲ್ಲಿ ಐಷಾರಾಮಿ ಹೋಂ ಥಿಯೇಟರ್ ನಿರ್ಮಿಸಿಕೊಂಡಿದ್ದಾರೆ.
- ಮಂಗಳೂರಿನ ಮೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ದಯಾಳು ಸುಂದರ್ ರಾಜ್ ಎರಡು ಮನೆ, ಮೂರು ನಿವೇಶನ, ಒಂದು ಫ್ಲ್ಯಾಟ್, 1 ಎಕರೆ 20 ಗುಂಟೆ ಕೃಷಿ ಜಮೀನು ಹೊಂದಿದ್ದಾರೆ. ಯಲಬುರ್ಗ ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗದ ಸಹಾಯಕ ಎಂಜಿನಿಯರ್ ಗಿರೀಶ್ ಬಳಿ ಒಂದು ಮನೆ, ಒಂದು ವಾಣಿಜ್ಯ ಸಂಕೀರ್ಣ ಇದೆ.

ಎಸಿಬಿ ದಾಳಿ

ರಾಮನಗರ: ಇಲ್ಲಿನ ಉಪ ವಿಭಾಗಾಧಿಕಾರಿ ಮಂಜುನಾಥ್ ಅವರ ಕಚೇರಿ ಹಾಗೂ ನಿವಾಸದ ಮೇಲೆ ಬುಧವಾರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ದಾಳಿ ನಡೆಸಿದ್ದು, ದಾಖಲೆಗಳನ್ನು ಪರಿಶೀಲಿಸಿದರು.

ಬೆಳಿಗ್ಗೆ 7 ಗಂಟೆಗೆ ನಗರದ ಮಿನಿ ವಿಧಾನಸೌಧದಲ್ಲಿ ಇರುವ ಉಪ ವಿಭಾಗಾಧಿಕಾರಿ ಕಚೇರಿಗೆ ಐವರು ಅಧಿಕಾರಿಗಳ ತಂಡ ಧಾವಿಸಿತು. ಆದರೆ ಕಚೇರಿಗೆ ಬೀಗ ಹಾಕಿತ್ತು. 9.30ರ ಸುಮಾರಿಗೆ ತಾ.ಪಂ. ಸಿಬ್ಬಂದಿ ಕಚೇರಿ ಬಾಗಿಲು ತೆರೆದರು. 6 ಗಂಟೆ ಕಾಲ ದಾಖಲೆಗಳ ಪರಿಶೀಲನೆ ನಡೆಸಿತು.

ಐದು ತಾಸು ಕಾಯ್ದ ಅಧಿಕಾರಿಗಳು (ಕೊಡಿಗೇನಹಳ್ಳಿ ವರದಿ): ಮಧುಗಿರಿ ತಾಲ್ಲೂಕಿನ ಪುರವರ ಹೋಬಳಿಯ ಗಾಳಿಹಳ್ಳಿ ಗ್ರಾಮದಲ್ಲಿರುವ ಬೆಂಗಳೂರಿನ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಶ್ರೀನಿವಾಸ್ ಅವರ ತೋಟದ ಮನೆ ಪರಿಶೀಲನೆಗೆ ಬಂದ ಎಸಿಬಿ ಅಧಿಕಾರಿಗಳ ಐದು ತಾಸು ಕಾಯಬೇಕಾಯಿತು.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ–ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ಸಿವಿಲ್ ಸರ್ವೀಸಸ್ ಪರೀಕ್ಷೆಯ ಪ್ರಾಥಮಿಕ ಪಾಠಗಳು

ಸಿವಿಲ್ ಸರ್ವೀಸಸ್ ಹುದ್ದೆಗಳಿಗಾಗಿ ನಡೆಯುವ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳ ಪ್ರಾಥಮಿಕ ವಿವರ, ಪ್ರಶ್ನೆ ಪತ್ರಿಕೆಗಳು, ಅಂಕಗಳು ಹಾಗೂ ಮೌಲ್ಯಮಾಪನ ಕುರಿತ ಪೂರ್ಣ ಮಾಹಿತಿ ಇಲ್ಲಿದೆ.

ಗುರುರಾಜ್ ಎಸ್. ದಾವಣಗೆರೆ

ಸಿವಿಲ್ ಸರ್ವೀಸಸ್ (ಯುಪಿಎಸ್‌ಸಿ) ಪರೀಕ್ಷೆ ಪಾಸ್ ಮಾಡುವುದು ಎಂಜಿನಿಯರಿಂಗ್, ಮೆಡಿಕಲ್ ಪರೀಕ್ಷೆಗಳನ್ನು ಪಾಸು ಮಾಡಿದಂತಲ್ಲ. ಇದು ಡಿಗ್ರಿ ಪಡೆದ ಯಾರು ಬೇಕಾದರೂ ಬರೆಯಬಹುದಾದ ಪರೀಕ್ಷೆಯಾಗಿದ್ದರೂ, ಪಾಸಾಗುವುದು ಕಠಿಣಾತಿ ಕಠಿಣ. ತೇರ್ಗಡೆ ಎಂದರೆ ಮೊದಲ ಸಾವಿರದಲ್ಲಿ ಸ್ಥಾನಗಳಿಸುವುದು.

ಶೆಡ್ಯೂಲ್ 8 ರಲ್ಲಿರುವ ಭಾಷೆಗಳು

ಅಸ್ಸಾಮಿ, ಬೆಂಗಾಲಿ, ಗುಜರಾತಿ, ಕನ್ನಡ, ಮಲಯಾಳಂ, ಹಿಂದಿ, ಕೊಂಕಣಿ, ಮಣಿಪುರಿ, ಮರಾಠಿ, ನೇಪಾಳಿ, ಒಡಿಯ, ಪಂಜಾಬಿ, ಸಂಸ್ಕೃತ, ಸಿಂಧಿ, ತಮಿಳು, ತೆಲುಗು, ಉರ್ದು, ಬೋಡೊ, ಡೋಗ್ರಿ, ಮೈಥಿಲಿ, ಸಂಥಲಿ, ಕಾಶ್ಮೀರಿ ಮತ್ತು ಇಂಗ್ಲಿಷ್.

ನೋಡಿ, ಪ್ರತಿ ವರ್ಷ ಸುಮಾರು 11 ಲಕ್ಷ ಮಂದಿ ಬರೆಯುವ ಈ ಪರೀಕ್ಷೆಯಲ್ಲಿ ಅಂತಿಮ ರ‍್ಯಾಂಕ್ ಪಟ್ಟಿಯಲ್ಲಿ ಸ್ಥಾನ ಪಡೆಯುವವರು ಕೇವಲ 1000 ಮಂದಿ. ನಂತರ ಐಎಎಸ್, ಐಪಿಎಸ್ ಹುದ್ದೆಗಳಿಗೆ ಆಯ್ಕೆಯಾಗುವವರು ಕೇವಲ 200 ರಿಂದ 300 ಮಂದಿ. ಇಂಥವರಲ್ಲಿ ಅತ್ಯುನ್ನತ ರ‍್ಯಾಂಕ್ ಗಳಿಸುವವರ ತಾಕತ್ತು – ಛಲ ಎಂಥದ್ದಿರಬಹುದು ನೀವೇ ಅಂದಾಜಿಸಿ.

ಯಾರು ಪರೀಕ್ಷೆ ಬರೆಯಬಹುದು?

ಪದವಿ ಶಿಕ್ಷಣ ಪಡೆಯುತ್ತಿರುವ ಅಥವಾ ಪದವಿ ಮುಗಿಸಿದ 21 ವರ್ಷ ವಯಸ್ಸು ಮತ್ತು ನಂತರದ ವಯೋಮಾನದ ಭಾರತೀಯ, ನೇಪಾಳ, ಭೂತಾನ್, ಜನವರಿ 1, 1962 ಕ್ಕೂ ಮುಂಚೆ ಭಾರತಕ್ಕೆ ಬಂದು ಇಲ್ಲಿಯೇ ಶಾಶ್ವತವಾಗಿ ನೆಲೆಸಿರುವ ಟಿಬೆಟಿಯನ್ ನಿರಾಶ್ರಿತರು, ಭಾರತ ಮೂಲದವರಾಗಿದ್ದು ಇಥಿಯೋಪಿಯ, ಕೀನ್ಯಾ, ಮಲಾವಿ, ಮಯನ್ಮಾರ್, ಪಾಕಿಸ್ತಾನ, ಶ್ರೀಲಂಕ, ತಾಂಜೇನಿಯ, ಉಗಾಂಡ, ವಿಯೆಟ್ನಾಂ, ಜಾಯ್ರೆ, ಜಾಂಬಿಯಗಳಿಂದ ವಲಸೆ ಬಂದು ಇಲ್ಲಿಯೇ ಶಾಶ್ವತವಾಗಿ ನೆಲಸುವ ಉದ್ದೇಶ ಹೊಂದಿರುವ ಪ್ರಜೆಗಳು ಈ ಪರೀಕ್ಷೆ ತೆಗೆದುಕೊಳ್ಳಲು ಅರ್ಹರು. ಆದರೆ ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್(ಇಂಡಿಯನ್ ಫಾರಿನ್ ಸರ್ವೀಸ್) ಹುದ್ದೆಗಳು ಭಾರತದ ಪ್ರಜೆಗಳಿಗೆ ಮಾತ್ರ ಮೀಸಲು.

ಜನರಲ್ ಮೆರಿಟ್‌ನ ವಿದ್ಯಾರ್ಥಿಗಳು ತಮ್ಮ 32ನೇ ವಯಸ್ಸಿನವರೆಗೆ ಒಟ್ಟು ಆರು ಬಾರಿ ಈ ಸಿವಿಲ್ ಸರ್ವೀಸ್ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಬಹುದು. ಇತರೆ ಹಿಂದುಳಿದ ವರ್ಗದವರು 35 ನೇ ವಯಸ್ಸಿನವರೆಗೆ 9 ಅಟೆಂಪ್ಟ್ ಮಾಡಬಹುದು. ಪರಿಶಿಷ್ಟಜಾತಿ / ಪಂಗಡದವರಿಗೆ ಅಟೆಂಪ್ಟ್‌ಗಳ ಮಿತಿ ಇಲ್ಲ. ಆದರೆ 37 ನೇ ವಯಸ್ಸಿನ ನಂತರ ಪರೀಕ್ಷೆ ಬರೆಯುವಂತಿಲ್ಲ.

ಪೂರ್ವ ಭಾವಿ ಪರೀಕ್ಷೆ(ಮೊದಲ ಹಂತ - ಪ್ರಿಲಿಮ್ಸ್) ಇದನ್ನು ಫಸ್ಟ್ ಫಿಲ್ಟರ್ ಅಥವಾ ಸ್ಕ್ರೀನಿಂಗ್ ಟೆಸ್ಟ್ ಎನ್ನುತ್ತಾರೆ. ಇದರಲ್ಲಿ ತಲಾ ಎರಡು ತಾಸಿನ ವಸ್ತುನಿಷ್ಠ (objective) ಮಾದರಿಯ ಎರೆಡು ಪತ್ರಿಕೆಗಳಿರುತ್ತವೆ. ಇಲ್ಲಿ ಪಡೆಯುವ ಅಂಕಗಳನ್ನು ಮುಂದಿನ ಹಂತದ ಪರೀಕ್ಷೆಯ ರ‍್ಯಾಂಕಿಂಗ್‌ಗೆ ಪರಿಗಣಿಸುವುದಿಲ್ಲ. ಆದರೂ ಎರಡೂ ಪತ್ರಿಕೆಗಳನ್ನು ಕಡ್ಡಾಯವಾಗಿ ಪಾಸ್ ಮಾಡಲೇಬೇಕು. ಮುಖ್ಯ ಪರೀಕ್ಷೆ(ಮೇನ್ ಎಕ್ಸಾಮ್), ವಿಸ್ತೃತದ ಉತ್ತರ ಬರೆಯುವ (ಡಿಸ್ಕ್ರಿಪ್ಟಿವ್) ಮಾದರಿಯದಾಗಿದ್ದು ಒಟ್ಟು 9 ಪತ್ರಿಕೆಗಳಿಗೆ ಉತ್ತರಿಸಬೇಕು.

ಪಾಠ–1

ಪ್ರಿಲಿಮ್ಸ್‌ನ ಮೊದಲ ಪತ್ರಿಕೆ ಜನರಲ್ ಸ್ಟಡೀಸ್ ಅಥವಾ ಸಾಮಾನ್ಯ ಅಧ್ಯಯನ. ಎರಡನೆಯದನ್ನು ಸಿಎಸ್‌ಎಟಿ (ಸಿವಿಲ್ ಸರ್ವಿಸಸ್ ಆಪ್ಟಿಟ್ಯೂಡ್ ಟೆಸ್ಟ್) ಎನ್ನುತ್ತಾರೆ. ಎರಡೂ ಪ್ರಶ್ನೆ ಪತ್ರಿಕೆಗಳು ವಸ್ತುನಿಷ್ಠ ಮಾದರಿಯಲ್ಲಿ ರುತ್ತವೆ. ಒಂದೊಂದೂ ಪತ್ರಿಕೆಯೂ 200 ಅಂಕಗಳದ್ದಾಗಿದ್ದು 2 ಗಂಟೆಯ ಅವಧಿಯಲ್ಲಿ ಉತ್ತರಿಸಬೇಕು. ಜನರಲ್ ಸ್ಟಡೀಸ್‌ನಲ್ಲಿ 2 ಅಂಕಗಳ ನೂರು ಪ್ರಶ್ನೆಗಳಿರುತ್ತವೆ. ಸಿಎಸ್‌ಎಟಿ ಪತ್ರಿಕೆಯಲ್ಲಿ 2.5 ಅಂಕದ 80 ಪ್ರಶ್ನೆಗಳಿರುತ್ತವೆ. ದೃಷ್ಟಿದೋಷವುಳ್ಳ ಅಭ್ಯರ್ಥಿಗಳಿಗೆ 20 ನಿಮಿಷಗಳ ಹೆಚ್ಚಿನ ಕಾಲಾವಕಾಶವಿರುತ್ತದೆ. ಪ್ರಶ್ನೆಗಳು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿರುತ್ತವೆ.

ಜನರಲ್ ಸ್ಟಡೀಸ್ ಪತ್ರಿಕೆಗೆ ಕನಿಷ್ಠ ಇಂತಿಷ್ಟು ಅಂಕ ಬರಬೇಕು ಎಂಬುದನ್ನು ಕೇಂದ್ರ ಲೋಕಸೇವಾ ಆಯೋಗ(ಯುಪಿಎಸ್‌ಸಿ) ಆಯಾ ವರ್ಷ ನಿರ್ಧರಿಸುತ್ತದೆ. ಸಿಎಸ್‌ಎಟಿಯಲ್ಲಿ ಕನಿಷ್ಠ 66 (ಶೇ 33) ಅಂಕಗಳನ್ನು ಗಳಿಸಿದವರು ಮಾತ್ರ ಮುಖ್ಯ ಪರೀಕ್ಷೆಗೆ ಹಾಜರಾಗುವ ಅರ್ಹತೆ ಪಡೆಯುತ್ತಾರೆ. ಆಂಗ್ಲ ಭಾಷೆಯ ಕಾಂಪ್ರೆಹೆನ್ಶನ್‌ಗೆ ಸಂಬಂಧಿಸಿದ ಪ್ರಶ್ನೆಯನ್ನು ಇಂಗ್ಲಿಷ್‌ನಲ್ಲೇ ಉತ್ತರಿಸಬೇಕು. ಪ್ರತಿ ಪತ್ರಿಕೆಗೂ ಋಣಾತ್ಮಕ (Negetive) ಮೌಲ್ಯಮಾಪನವಿರುತ್ತದೆ. ಪ್ರತಿ ಮೂರು ತಪ್ಪು ಉತ್ತರಗಳಿಗೆ 1 ಅಂಕ ಕಡಿಮೆಯಾಗುತ್ತದೆ ಅಥವಾ ಒಂದು ತಪ್ಪು ಉತ್ತರಕ್ಕೆ 1/3 ಅಂಕ ಕಡಿತಗೊಳ್ಳುತ್ತದೆ. ಸಿಎಸ್‌ಎಟಿ ಪತ್ರಿಕೆಯಲ್ಲಿ ಪ್ರತಿ ತಪ್ಪು ಉತ್ತರಕ್ಕೆ 0.83 ಅಂಕ ಕಡಿತಗೊಳ್ಳುತ್ತದೆ. ಆದರೆ ಈ ಪ್ರಶ್ನೆಪತ್ರಿಕೆಯ ಪ್ರಶ್ನೆ ಸಂಖ್ಯೆ 74 ರಿಂದ 80 ರ ವರೆಗಿನ 8 ಪ್ರಶ್ನೆಗಳು ತೀರ್ಮಾನ ಕೈಗೊಳ್ಳುವಿಕೆ (Decision Making) ಗೆ ಸಂಬಂಧಿಸಿರುವುದರಿಂದ ನೆಗೆಟಿವ್ ಮಾರ್ಕಿಂಗ್ ಇರುವುದಿಲ್ಲ.

ಮುಖ್ಯ ಪರೀಕ್ಷೆಯ ಕಡ್ಡಾಯ ಪತ್ರಿಕೆಗಳು ಹೀಗಿವೆ

ಪತ್ರಿಕೆ	ಪತ್ರಿಕೆಯ ಶೀರ್ಷಿಕೆ	ವಿಷಯಗಳು	ಅಂಕಗಳು
ಪತ್ರಿಕೆ – 1	ಎರಡು ಪ್ರಬಂಧಗಳ ರಚನೆ	ಪ್ರಶ್ನೆಪತ್ರಿಕೆಯಲ್ಲಿ ಕೇಳಲಾಗುವ ವಿಷಯಗಳ ಮೇಲೆ	2 X 125 = 250
ಪತ್ರಿಕೆ – 2	ಸಾಮಾನ್ಯ ಅಧ್ಯಯನ - 1	ಭಾರತೀಯ ಇತಿಹಾಸ, ಸಂಸ್ಕೃತಿ, ಪರಂಪರೆ ಮತ್ತು ವಿಶ್ವದ ಭೂಗೋಳಶಾಸ್ತ್ರ ಮತ್ತು ಸಾಮಾಜಿಕ ವ್ಯವಸ್ಥೆ	250
ಪತ್ರಿಕೆ – 3	ಸಾಮಾನ್ಯ ಅಧ್ಯಯನ - 2	ಆಡಳಿತ, ಸಂವಿಧಾನ, ರಾಜಕೀಯ, ಸಾಮಾಜಿಕ ನ್ಯಾಯ ಮತ್ತು ಅಂತರ ರಾಷ್ಟ್ರೀಯ ಸಂಬಂಧಗಳು	250
ಪತ್ರಿಕೆ – 4	ಸಾಮಾನ್ಯ ಅಧ್ಯಯನ – 3	ತಂತ್ರಜ್ಞಾನ, ಆರ್ಥಿಕ ಅಭಿವೃದ್ಧಿ, ಜೀವಿವೈವಿಧ್ಯ, ಪರಿಸರ, ಭದ್ರತೆ ಮತ್ತು ಪ್ರಾಕೃತಿಕ ವಿಕೋಪ	250
ಪತ್ರಿಕೆ – 5	ಸಾಮಾನ್ಯ ಅಧ್ಯಯನ – 4	ನೀತಿತತ್ವ, ಸಮಗ್ರತೆ ಮತ್ತು ಗ್ರಾಹ್ಯ ಶಕ್ತಿ	250
ಪತ್ರಿಕೆ – 6 ಮತ್ತು ಪತ್ರಿಕೆ – 7	ಐಚ್ಛಿಕ ವಿಷಯ – 1 ಐಚ್ಛಿಕ ವಿಷಯ – 2	ವ್ಯವಸಾಯ, ಪಶುಸಂಗೋಪನೆ, ಮಾನವಶಾಸ್ತ್ರ, ಸಸ್ಯವಿಜ್ಞಾನ, ರಸಾಯನ ವಿಜ್ಞಾನ, ಭೌತ ವಿಜ್ಞಾನ, ಭೂಗರ್ಭ ವಿಜ್ಞಾನ, ಭಾರತದ ಇತಿಹಾಸ, ತತ್ವ ಶಾಸ್ತ್ರ, ಮಾನಸಿಕ ವಿಜ್ಞಾನ, ಸಂಖ್ಯಾ ವಿಜ್ಞಾನ, ಗಣಿತ, ಕಾನೂನು, ವೈದ್ಯ ವಿಜ್ಞಾನ, ರಾಜಕೀಯ ವಿಜ್ಞಾನ ಮತ್ತು ಅಂತರರಾಷ್ಟ್ರೀಯ ಸಂಬಂಧಗಳು, ಅರ್ಥಶಾಸ್ತ್ರ, ಅಕೌಂಟೆನ್ಸಿ, ಕಾಮರ್ಸ್, ಎಲೆಕ್ಟ್ರಿಕಲ್, ಮೆಕ್ಯಾನಿಕಲ್ , ಸಿವಿಲ್ ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಸಾರ್ವಜನಿಕ ಆಡಳಿತ ಮತ್ತು ಪಟ್ಟಿಮಾಡಿರುವ 23 ಭಾಷೆಗಳ ಸಾಹಿತ್ಯ ಅಧ್ಯಯನ.	250 250
ಲಿಖಿತ ಪರೀಕ್ಷೆಯ ಒಟ್ಟು ಅಂಕಗಳು			1750
ಸಂದರ್ಶನ			275
ಒಟ್ಟು (ರ‍್ಯಾಂಕ್ ನಿರ್ಧರಿಕೆಗೆ)			2025

ಮುಖ್ಯ ಪರೀಕ್ಷೆ ಹೇಗಿರುತ್ತದೆ?

ಇದು ಆಫ್‌ಲೈನ್ ಪರೀಕ್ಷೆಯಾಗಿದ್ದು ಒಟ್ಟು 9 ಪತ್ರಿಕೆಗಳಿಗೆ ಉತ್ತರ ಬರೆಯಬೇಕು. ಪ್ರತೀ ಪತ್ರಿಕೆಯೂ 3 ಗಂಟೆಯ ಅವಧಿಯದಾಗಿದ್ದು ದೃಷ್ಟಿ ದೋಷದವರಿಗೆ 30 ನಿಮಿಷದ ಹೆಚ್ಚು ಕಾಲಾವಕಾಶ ಕಲ್ಪಿಸಲಾಗುತ್ತದೆ. ಇಂಗ್ಲಿಷ್ ಭಾಷೆಯ ಪತ್ರಿಕೆ ಮತ್ತು ಸಂವಿಧಾನದ ಎಂಟನೇ ಶೆಡ್ಯೂಲ್‌ನಲ್ಲಿರುವ (ಭಾಷೆಗಳ ವಿವರಕ್ಕೆ ಬಾಕ್ಸ್ ನೋಡಿ) ಯಾವುದಾ ದರೊಂದು ಭಾಷೆಯ ತಲಾ 300 ಅಂಕಗಳ ಪ್ರಶ್ನೆಪತ್ರಿಕೆಗಳನ್ನು ಅಭ್ಯರ್ಥಿಗಳು ಉತ್ತರಿಸಬೇಕಾಗುತ್ತದೆ. ಇಲ್ಲಿ ವಿದ್ಯಾರ್ಥಿಯ ಭಾಷಾ ಪ್ರೌಢಿಮೆ ಮತ್ತು ವಿಶ್ಲೇಷಣಾ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತದೆ. ಇದರಲ್ಲಿ ಗಳಿಸುವ ಅಂಕಗಳನ್ನು ರ‍್ಯಾಂಕಿಂಗ್‌ಗೆ ಪರಿಗಣಿಸಲಾಗು ವುದಿಲ್ಲ. ಆದರೆ ಇವೆರಡೂ ಪತ್ರಿಕೆಗಳನ್ನು ನಿಗದಿ ಪಡಿಸಿದ ಕನಿಷ್ಠ ಅಂಕಗಳೊಂದಿಗೆ ಪಾಸ್ ಮಾಡಬೇಕು.

ಹೆಚ್ಚಿನ ವಿವರಗಳಿಗಾಗಿ: https://upsc.gov.in

(ಮುಂದಿನ ವಾರ ದ ಪಾಠ–2 : ಪ್ರಿಲಿಮ್ಸ್ ಪ್ರಶ್ನೆ ಪತ್ರಿಕೆಗಳನ್ನು ಎದುರಿಸಲು ಬೇಕಾದ ತಯಾರಿ)

'ಪಾಠ'ಗಳ ಸರಣಿ : ಹೊಸದಾಗಿ ಐಎಎಸ್, ಐಪಿಎಸ್‌ನಂತಹ ಸಿವಿಲ್ ಸರ್ವೀಸ್ ಪರೀಕ್ಷೆ ಬರೆಯುವವರಿಗೆ ಪೂರಕ ಮಾಹಿತಿ ನೀಡುವುದಕ್ಕಾಗಿ ಸಿವಿಲ್ ಸರ್ವೀಸಸ್ ಪರೀಕ್ಷೆಯ 'ಪ್ರಾಥಮಿಕ ಪಾಠ'ಗಳ ಸರಣಿ ಆರಂಭಿಸಲಾಗಿದೆ. ಈ ಸರಣಿಯಲ್ಲಿ ಪರೀಕ್ಷಾ ಸಿದ್ಧತೆ, ಅಧ್ಯಯನ ವಿಷಯಗಳ ಪರಿಚಯ ಸೇರಿದಂತೆ ಹಲವು ಮಾಹಿತಿಗಳನ್ನು ನೀಡಲಾಗುತ್ತದೆ.

ಮಾದರಿ ಪ್ರಶ್ನೋತ್ತರ

ಸಾಮಾನ್ಯ ಜ್ಞಾನ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಎರಡೂ ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಭಾಗ – 13

1) ಈ ಕೆಳಗೆ ಉಲ್ಲೇಖಿಸಿರುವ ಉಕ್ರೇನ್ ದೇಶದ ಯಾವ ನಗರಗಳಲ್ಲಿ ಅಣು ರಿಯಾಕ್ಟರ್‌ಗಳಿವೆ?

1) ರಿವ್ನೆ
2) ಖ್ಮೆಲ್ನಿಟೇಸ್ಕಿ
3) ಜಿಪೋರೆಝಿಯಾ
4)ಕೀವ್

ಉತ್ತರ ಸಂಕೇತಗಳು

ಎ) 1, 2, 3
ಬಿ) 1, 2, 3, ಮತ್ತು 4
ಸಿ) 1, 2, 4.
ಡಿ) 2, 3 4

ಉತ್ತರ: ಎ

2) ಪಾಕಿಸ್ತಾನದಲ್ಲಿನ ಪಂಜಾಬ್ ಪ್ರಾಂತ್ಯದ 'ಮಿಯಾನ್ ಚುನ್ನು' ಯಾಕೆ ಸುದ್ದಿಯಲ್ಲಿತ್ತು?

ಎ) ಭಾರತೀಯ ಸೇನೆಯ ಕ್ಷಿಪಣಿಯು ಪಾಕಿಸ್ತಾನದ ಗಡಿಯೊಳಗೆ 124 ಕಿ.ಮೀ. ದೂರದಲ್ಲಿರುವ ಈ ಪ್ರದೇಶದಲ್ಲಿ ಬಿದ್ದಿದೆ
ಬಿ) ಪ್ರಾಚೀನ ಕಾಲದ ಹರಪ್ಪಾ ಸಂಸ್ಕೃತಿಯ ನಿವೇಶನವೊಂದು ಪತ್ತೆಯಾಗಿದೆ.
ಸಿ) ಅಮೆರಿಕದ ಬಾಂಬ್ ಒಂದು ಪತ್ತೆಯಾಗಿದೆ
ಡಿ) ಅಲ್‌ಖೈದಾ ಭಯೋತ್ಪಾದಕನೊಬ್ಬನನ್ನು ಸ್ಥಳೀಯ ಜನರೇ ಸೇರಿ ಹತ್ಯೆ ಮಾಡಿದ್ದಾರೆ.

ಉತ್ತರ: ಎ

3) ಈಜಿಪ್ಟ್‌ನ ಲಕ್ಸರ್ ನಗರದ ಪಶ್ಚಿಮ ದಂಡೆಯಲ್ಲಿ 3 ಸಾವಿರ ವರ್ಷಗಳಷ್ಟು ಹಳೆಯದಾದ ನಗರವೊಂದು ಪತ್ತೆಯಾಗಿದೆ. ಅದರ ಹೆಸರೇನು?

ಎ)ಫೆರೊ
ಬಿ)ಎಟನ್ (ATEN)
ಸಿ) ಕೈರೊ
ಡಿ)ಮೈಫರ್

ಉತ್ತರ:ಎ

4) ಈ ಕೆಳಗಿನ ಯಾವ ದೇಶದಲ್ಲಿ ಕೈದಿಗಳ ಶಿಕ್ಷೆಯ ಅವಧಿ ಪೂರ್ಣಗೊಂಡ ನಂತರ ಅವರು ತಮ್ಮ ಜೀವನವನ್ನು ಮುನ್ನಡೆಸಲು ಹಾಗೂ ಭವಿಷ್ಯದಲ್ಲಿ ಅಪರಾಧಗಳಲ್ಲಿ ಪಾಲ್ಗೊಳ್ಳಬಾರದು ಎಂಬ ಉದ್ದೇಶಕ್ಕಾಗಿ ಇತ್ತೀಚೆಗೆ ಸ್ಮಾರ್ಟ್ ಜೈಲನ್ನು ನಿರ್ಮಾಣ ಮಾಡಲಾಗಿದೆ?

ಎ) ಯೆಮನ್ ಬಿ) ಈಜಿಪ್ಟ್
ಸಿ) ಬ್ರಿಟನ್ ಡಿ) ಭಾರತ

ಉತ್ತರ: ಸಿ

5) ವಿತ್ತೀಯ ಹೊಣೆಗಾರಿಕೆ ನಿಯಮಗಳನ್ನು ಅಳವಡಿಸಿಕೊಂಡ ದೇಶದ ಮೊದಲ ಸ್ಥಳೀಯ ಆಡಳಿತ ಸಂಸ್ಥೆ ಯಾವುದು?

ಎ) ಕಲಬುರ್ಗಿ ಮಹಾನಗರ ಪಾಲಿಕೆ
ಬಿ) ಮುಂಬೈ ಮಹಾನಗರ ಪಾಲಿಕೆ
ಸಿ) ಅಹಮದಾಬಾದ್ ಮಹಾನಗರ ಪಾಲಿಕೆ
ಡಿ) ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ

ಉತ್ತರ: ಡಿ

6) ಯೂನ್ ಸುಕ್-ಯೋಲ್ ಯಾವ ದೇಶದ ಅಧ್ಯಕ್ಷರು?

ಎ) ಉತ್ತರ ಕೊರಿಯಾ
ಬಿ) ಥಾಯ್ಲೆಂಡ್
ಸಿ) ಜಪಾನ್
ಡಿ) ದಕ್ಷಿಣ ಕೊರಿಯಾ

ಉತ್ತರ: ಡಿ

7) ಭಗವಾನ್ ಬುದ್ಧ ಒರಗಿದ ಭಂಗಿಯಲ್ಲಿರುವ ಅತಿದೊಡ್ಡ ಪ್ರತಿಮೆಯನ್ನು ಎಲ್ಲಿ ನಿರ್ಮಿಸಲಾಗುತ್ತಿದೆ?

ಎ) ಬೋಧ್‌ಗಯಾ
ಬಿ) ವಾರಾಣಸಿ
ಸಿ) ಜೈಪುರ
ಡಿ) ಮಾಥೇರ

ಉತ್ತರ: ಎ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಪ್ರಜಾವಾಣಿ ನೋಡಿಯೊ — 'ನಿಮಗಿದು ಗೊತ್ತೇ' ಹಾಗೂ ಮತ್ತಷ್ಟು 'ಸಾಮಾನ್ಯಜ್ಞಾನ'ದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಬಹು ಆಯ್ಕೆ ಪ್ರಶ್ನೆಗಳು

ಗಣಿತಶಾಸ್ತ್ರ — **ಎಸ್ಸೆಸ್ಸೆಲ್ಸಿ**

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.

1. ಎರಡು ಸರಳರೇಖೆಗಳು ಒಂದು ಬಿಂದುವಿನಲ್ಲಿ ಛೇದಿಸಬಹುದಾದ ಸಮೀಕರಣಗಳ ಜೋಡಿಗೆ ಇರಬಹುದಾದ ಪರಿಹಾರ
ಎ. ಪರಿಹಾರವಿಲ್ಲ ಬಿ. ಅಪರಿಮಿತ ಪರಿಹಾರಗಳಿರುತ್ತವೆ
ಸಿ. ಅನನ್ಯ ಪರಿಹಾರವಿರುತ್ತದೆ ಡಿ. ಹೇಳಲಾಗುವುದಿಲ್ಲ

2. $x+2y-4=0$ ಮತ್ತು $2x+4y-12=0$ ಸಮೀಕರಣವನ್ನು ಪ್ರತಿನಿಧಿಸುವ ರೇಖೆಗಳು
ಎ. ಛೇದಿಸುವ ರೇಖೆಗಳು ಬಿ. ಸಮಾಂತರ ರೇಖೆಗಳು
ಸಿ. ಐಕ್ಯವಾಗುವ ರೇಖೆಗಳು ಡಿ. ಪರಸ್ಪರ ಲಂಬರೇಖೆಗಳು

3. 1, –1, –3, –5, ... ಈ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸವು
ಎ. 1 ಬಿ. –2 ಸಿ. 2 ಡಿ. 4

4. ಒಂದು ಸಮಾಂತರ ಶ್ರೇಢಿಯ n ನೇ ಪದ $a_n=2n+1$ ಆದಾಗ, ಆ ಶ್ರೇಢಿಯ 5ನೇ ಪದವು
ಎ. 11 ಬಿ. 10 ಸಿ. 13 ಡಿ. 3

5. $ax^2+bx+c=0$ ವರ್ಗ ಸಮೀಕರಣವು ಎರಡು ಸಮನಾದ ವಾಸ್ತವ ಮೂಲಗಳನ್ನು ಹೊಂದಿದ್ದರೆ, ಅದರ ಶೋಧಕವು
ಎ. $b^2-4ac>0$ ಬಿ. $b^2-4ac<0$
ಸಿ. $b^2-4ac=0$ ಡಿ. ಯಾವುದೂ ಅಲ್ಲ

6. ಮೊದಲ n ಸಮ ಸ್ವಾಭಾವಿಕ ಸಂಖ್ಯೆಗಳ ಮೊತ್ತವು
ಎ. $n(n+1)$ ಬಿ. $n(n+2)$ ಸಿ. n^2 ಡಿ. $2n^2$

7. $\cos 60^\circ+\sin 60^\circ$ ಯ ಬೆಲೆಯು
ಎ. $\frac{\sqrt{3}}{2}$ ಬಿ. $\frac{1}{2}$ ಸಿ. 1 ಡಿ. $\frac{\sqrt{3}+1}{2}$

8. θ ಒಂದು ಲಘುಕೋನವಾದಾಗ $\frac{\sin(90^\circ-\theta)}{\cos(90^\circ-\theta)}$ ಕ್ಕೆ ಸಮನಾದುದು
ಎ. $\sec\theta$ ಬಿ. $\cot\theta$ ಸಿ. $\tan\theta$ ಡಿ. $\cos ec\theta$

9. $P(a_1,b_1)$ ಮತ್ತು $Q(a_2,b_2)$ ಬಿಂದುಗಳ ನಡುವಿನ ದೂರವು
ಎ. $PQ=\sqrt{(a_1-b_1)^2+(a_2-b_2)^2}$
ಬಿ. $PQ=\sqrt{(a_2-b_1)^2+(a_1-b_2)^2}$
ಸಿ. $PQ=\sqrt{(a_2-a_1)^2+(b_2-b_1)^2}$
ಡಿ. $PQ=\sqrt{(a_2-a_1)^2-(b_2-b_1)^2}$

10. $(4,\ -3)$ ಮತ್ತು $(8,\ 5)$ ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು ಆಂತರಿಕವಾಗಿ 1:1 ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳು
ಎ. (6, 1) ಬಿ. (1, 6) ಸಿ. (–6, 1) ಡಿ. (–6, –1)

11. ಒಂದು ಕಿರುಪರೀಕ್ಷೆಯಲ್ಲಿ 20 ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಈ ಕೆಳಗೆ ನೀಡಿದೆ. 4, 6, 5, 9, 3, 2, 7, 7, 6, 5, 4, 9, 10, 10, 3, 4, 7, 6, 9, 9. ಇವುಗಳ ಬಹುಲಕ
ಎ. 7 ಬಿ. 6 ಸಿ. 4 ಡಿ. 9

12. ವರ್ಗಾಂತರದ ಸಂಚಿತ ಆವೃತ್ತಿಯನ್ನು ಹೀಗೆ ಪಡೆಯುತ್ತೇವೆ
ಎ. ಒಂದು ವರ್ಗಾಂತರದ ಆವೃತ್ತಿ ಮತ್ತು ಅದರ ಹಿಂದಿನ ವರ್ಗಾಂತರಗಳ ಆವೃತ್ತಿಗಳನ್ನು ಕೂಡಿಸುವುದರಿಂದ
ಬಿ. ಒಂದು ವರ್ಗಾಂತರದ ಆವೃತ್ತಿ ಮತ್ತು ಅದರ ಹಿಂದಿನ ವರ್ಗಾಂತರಗಳ ಆವೃತ್ತಿಗಳನ್ನು ಕಳೆಯುವುದರಿಂದ
ಸಿ. ಒಂದು ವರ್ಗಾಂತರದ ಆವೃತ್ತಿ ಮತ್ತು ಅದರ ಹಿಂದಿನ ವರ್ಗಾಂತರಗಳ ಆವೃತ್ತಿಗಳನ್ನು ಗುಣಿಸುವುದರಿಂದ
ಡಿ. ಒಂದು ವರ್ಗಾಂತರದ ಆವೃತ್ತಿ ಮತ್ತು ಅದರ ಹಿಂದಿನ ವರ್ಗಾಂತರಗಳ ಆವೃತ್ತಿಗಳನ್ನು ಭಾಗಿಸುವುದರಿಂದ

13. ಎರಡು ತ್ರಿಭುಜಗಳು ಸಮರೂಪವಾಗಬೇಕಾದರೆ
ಎ. ಅವುಗಳ ಅನುರೂಪ ಕೋನಗಳು ಮಾತ್ರ ಸಮವಾಗಿರಬೇಕು
ಬಿ. ಅವುಗಳ ಅನುರೂಪ ಬಾಹುಗಳ ಅನುಪಾತ ಮಾತ್ರ ಸಮವಾಗಿರಬೇಕು
ಸಿ. ಅವುಗಳ ಅನುರೂಪ ಕೋನಗಳು ಮತ್ತು ಅನುರೂಪ ಬಾಹುಗಳ ಅನುಪಾತ ಸಮವಾಗಿರಬೇಕು
ಡಿ. ಅವುಗಳ ಅನುರೂಪ ಕೋನಗಳು ಸಮವಾಗಿರಬೇಕು ಅಥವಾ ಅನುರೂಪ ಬಾಹುಗಳ ಅನುಪಾತ ಸಮವಾಗಿರಬೇಕು

14. ಒಂದು ವಸ್ತುವನ್ನು ಕರಗಿಸಿ ಅದರ ಆಕಾರವನ್ನು ಬದಲಾಯಿಸಿದಾಗ ಅದರ ಘನಫಲವು
ಎ. ಹೆಚ್ಚುತ್ತದೆ ಬಿ. ಕಡಿಮೆಯಾಗುತ್ತದೆ
ಸಿ. ಬದಲಾಗುವುದಿಲ್ಲ ಡಿ. ದ್ವಿಗುಣವಾಗುತ್ತದೆ

15. ಶಂಕುವಿನ ಭಿನ್ನಕದ ಎರಡೂ ವೃತ್ತ ಪಾದ ತ್ರಿಜ್ಯಗಳು ಸಮವಾದರೆ ಉಂಟಾಗುವ ಘನಾಕೃತಿ
ಎ. ಶಂಕು ಬಿ. ಸಿಲಿಂಡರ್ ಸಿ. ಅರ್ಧಗೋಳ ಡಿ. ಗೋಳ

ಶ್ರೀನಿವಾಸ ಡಿ. ಶೆಟ್ಟಿ, ಶಿಕ್ಷಣ ಸಂಯೋಜಕರು, ಬಿಇಒ ಕಚೇರಿ, ಅರಕಲಗೂಡು

ಮಾದರಿ ಪ್ರಶ್ನೆಗಳು

ಸಮೀಕರಣ

ಗಣಿತಶಾಸ್ತ್ರ — **ಪಿಯುಸಿ**

ಒಂದು ತೊಟ್ಟಿಯಲ್ಲಿ 1000ಲೀ ಉಪ್ಪಿನ ದ್ರಾವಣವಿದ್ದು ಅದರಲ್ಲಿರುವ ಉಪ್ಪಿನ ಅಂಶ 250ಗ್ರಾಂ ಪ್ರತಿ ಲೀಟರ್ ನಷ್ಟಿರುತ್ತವೆ ಪ್ರತಿ ನಿಮಿಷಕ್ಕೆ 25ಲೀ/ಮೀಟರ್‌ನಂತೆ 200ಗ್ರಾಂ/ಲೀ ಉಪ್ಪಿನ ಸಾಂದ್ರತೆ ಇರುವ ಉಪ್ಪಿನ ದ್ರಾವಣವು ತೊಟ್ಟಿಗೆ ಹರಿಯುತ್ತಿದೆ ಹಾಗೆಯೇ ಅಷ್ಟೇ ಪ್ರಮಾಣದ ಹೊರ ಹರಿವು ಇರುತ್ತದೆ. ದ್ರಾವಣವನ್ನು ಕಲಕುತ್ತಾ ಸಮರೂಪಿಯಾಗಿಟ್ಟರೆ 't' ಸಮಯದಲ್ಲಿ ತೊಟ್ಟಿಯಲ್ಲಿರುವ ಉಪ್ಪಿನ ಪ್ರಮಾಣವೆಷ್ಟು?

ಪರಿಹಾರ:

ಹಂತ 1: ಸಂದರ್ಭ, ಪರಿಸ್ಥಿತಿಯನ್ನು ಸುಲಭವಾಗಿ ಗುರುತಿಸಬಹುದು.

ಹಂತ 2: ಒಳ ಹರಿವು ಮತ್ತು ಹೊರ ಹರಿವು ಆರಂಭವಾದ ನಂತರ 't' ನಿಮಿಷಗಳಲ್ಲಿ $y=y(t)$ ಎನ್ನುವುದು ತೊಟ್ಟಿಯಲ್ಲಿರುವ ಉಪ್ಪಿನ ದ್ರಾವಣದಲ್ಲಿರುವ ಉಪ್ಪನ್ನು (ಕಿ.ಗ್ರಾಂಗಳಲ್ಲಿ) ಸೂಚಿಸಲಿ. 'y' ಉತ್ಪನ್ನವು ಒಂದು ನಿಷ್ಪನ್ನ ಉತ್ಪನ್ನವಾಗಿರಲಿ $t=0$ ಆದಾಗ, ಅಂದರೆ ಒಳ ಮತ್ತು ಹೊರ ಹರಿವಿನ ಆರಂಭಕ್ಕೆ ಮುನ್ನ

$y=250$ ಗ್ರಾಂ $\times 1000=250$ ಕಿ.ಗ್ರಾಂ

ಒಳ ಮತ್ತು ಹೊರ ಹರಿವಿನಿಂದ y ನಲ್ಲಿ ವ್ಯತ್ಯಾಸ ಕಂಡುಬರುವುದು. ಉಪ್ಪಿನ ದ್ರಾವಣದ ಒಳ ಹರಿವಿನಿಂದ ತೊಟ್ಟಿಗೆ ಪ್ರತಿನಿಮಿಷಕ್ಕೆ 5 ಕಿ.ಗ್ರಾಂನಂತೆ ಉಪ್ಪು ಬರುತ್ತಿರುತ್ತದೆ. (25x200 ಗ್ರಾಂ = 5 ಕಿ.ಗ್ರಾಂ) ಮತ್ತು ಹೊರ ಹರಿವಿನಿಂದ ಪ್ರತಿ ನಿಮಿಷಕ್ಕೆ $25\left(\frac{y}{100}\right)=\frac{y}{40}$ ಕ್ರಿ.ಗ್ರಾಂನಂತೆ ಉಪ್ಪು ಹೊರಹೋಗುತ್ತಿರುತ್ತದೆ.

('t' ಸಮಯದಲ್ಲಿ ತೊಟ್ಟಿಯಲ್ಲಿರುವ ಉಪ್ಪಿನ ಪ್ರಮಾಣ $\frac{y}{1000}$ ಕ್ರಿ.ಗ್ರಾಂ ಆಗಿರುತ್ತದೆ.)

't' ಗೆ ಅನುಗುಣವಾಗಿ ಉಪ್ಪಿನ ವ್ಯತ್ಯಾಸದ ದರ

$$\frac{dy}{dt}=5-\frac{y}{40} \text{ ಅಥವಾ } \frac{dy}{dt}+\frac{1}{40}y=5 \quad \ldots\ldots(1)$$

ಇದು ದತ್ತ ಸಮಸ್ಯೆಗೆ ಗಣಿತೀಯ ಮಾದರಿಯಾಗುತ್ತದೆ.

ಹಂತ 3: ಸಮೀಕರಣ (1) ಸರಳ ರೇಖಾತ್ಮಕ ಸಮೀಕರಣವಾಗಿದ್ದು ಇದನ್ನು ಸುಲಭವಾಗಿ ಬಿಡಿಸಬಹುದು. (1)ರ ಪರಿಹಾರ ಕೆಳಗಿನಂತಿದೆ.

$$ye^{\frac{t}{40}}=200e^{\frac{t}{40}}+C \text{ ಅಥವಾ } y(t)=200+Ce^{\frac{t}{40}} \quad \ldots(2)$$

C ಎನ್ನುವುದು ಅವಕಲನದ ನಿಯತಾಂಕ, $t=0$ ಆದಾಗ $y=250$ ಎನ್ನುವುದನ್ನು ಗಮನಿಸಿ. ಆದ್ದರಿಂದ, 250 = 200 + C ಅಥವಾ C = 50

ಸಮೀಕರಣ (2) $$y=200+50e^{-\frac{t}{40}} \quad \ldots(3)$$

$$\frac{y-200}{50}=e^{-\frac{t}{40}} \text{ ಅಥವಾ } e^{\frac{t}{40}}=\frac{50}{y-200}$$

ಆಗುವುದು ಅಥವಾ

ಆದ್ದರಿಂದ $t=40\log_e\left(\frac{50}{y-200}\right)$ ಆಗುವುದು........... (4)

ಸಮೀಕರಣ (3) 't' ಸಮಯದಲ್ಲಿ ತೊಟ್ಟಿಯಲ್ಲಿರುವ 'y' ಉಪ್ಪಿನ ಅಂಶವನ್ನು ಕೊಡುತ್ತದೆ.

ಹಂತ 4: $e^{-\frac{t}{40}}$ ಯಾವಾಗಲು ಧನಾತ್ಮಕವಾಗಿರುವುದದರಿಂದ ಸಮೀಕರಣ (3)ರಂತೆ ಯಾವುದೇ ಸಮಯ 't'ನಲ್ಲಿ $y>200$ ಆಗಿರುತ್ತದೆ. ಹಾಗಾಗಿ ತೊಟ್ಟಿಯಲ್ಲಿನ ದ್ರಾವಣದಲ್ಲಿನ ಕನಿಷ್ಠ ಉಪ್ಪಿನ ಪ್ರಮಾಣ 200ಕಿ.ಗ್ರಾಂ ಆಗಿರುವುದು.

ಸಮೀಕರಣ (4)ರಂತೆ, $t>0$, $0<y-200<50$ ಅಂದರೆ $0<y-200<50$ ಆಗಿದ್ದರೆ, ಆಗ ಬೇಕಾಗಿದ್ದರೆ ಒಳ ಮತ್ತು ಹೊರ ಹರಿವಿನ ನಂತರ ದ್ರಾವಣದಲ್ಲಿರುವ ಉಪ್ಪಿನ ಅಂಶ 200 ರಿಂದ 250 ಕಿ.ಗ್ರಾಂ ಒಳಗಿರುತ್ತದೆ

25) $\frac{x^2}{a^2}+\frac{y^2}{b^2}=1$ ದೀರ್ಘವೃತ್ತ, $x=0$ ಮತ್ತು $x=ae$ ಗಳಲ್ಲಿ X–ಅಕ್ಷಕ್ಕೆ ಎಳೆದಿರುವ ಲಂಬಗಳ ನಡುವಣ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ. $[b^2=a^2(1-e2)$ ಮತ್ತು $e<1$ ಆದಾಗ]

ಪರಿಹಾರ: ಬೇಕಾದ BOB'RFSB ಪ್ರದೇಶವು ದೀರ್ಘವೃತ್ತ, $x=0$ ಮತ್ತು $x=ae$ ಸರಳ ರೇಖೆಗಳಿಂದ ಆವೃತವಾಗಿದೆ.

BOB'RFSB ಪ್ರದೇಶದ ಕ್ಷೇತ್ರಫಲ



$$=2.\int_0^{ae} y\,dx$$
$$=2\frac{b}{a}\int_0^{ae}\sqrt{a^2-x^2}\,dx$$
$$=\frac{2b}{a}\cdot\left[\frac{x}{2}\sqrt{a^2-x^2}+\frac{a^2}{2}\cdot\sin^{-1}\frac{x}{a}\right]_0^{ae}$$
$$=\frac{2b}{2a}\cdot\left[ae\sqrt{a^2-a^2e^2}+a^2\cdot\sin^{-1}e\right]$$
$$=ab\left[e\sqrt{1-e^2}+\sin^{-1}e\right]$$

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ಭೌತಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



JOCKEY

FACTORY SECONDS

UPTO 50% OFF*

INNERWEAR | LEISUREWEAR | ACTIVEWEAR
KIDSWEAR | SOCKS

• 10 am to 8 pm • Open All Days • Master/Visa Card Accepted

* T & C apply

Venues in Bangalore

• West Of Chord Road: Sri Vidyaranya Prarthana Mandira, (Sri Avani Sringeri Shankar Mutt) Mahalaxmipuram, Next To Anupama English School - 560 086
• Kundalahalli Gate: S K R Convention Hall, #68, Thubarahalli, Varthur Main Road - 560 066
• Malleswaram: The Canara Union, No.42, 8th Main, Canara Union Road - 560 003
• Jayanagar: Premachandra Kalyana Mahal, T.Mariyappa Road, 2nd Block, (Near Ashoka Pillar) - 560 011
• Rajarajeswari Nagar: Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
• Vijay Nagar: Five O Gallery, No.50, 17th Cross, M.C. Road, Near Vijay Nagar Bus Stop - 560 040
• Infantry Road: Safina Plaza, No.84/85 - 560 001
• Bannerghatta Road: Santhome Parish Church Hall, Hulimavu, Near Meenakshi Mall - 560 076
• Banashankari: Sri Hari Kalyana Mantap, 30th Main, Banshankari, B.S.K. 3rd Stage, Near K.I.M.S. - 560 085
• Koramangala: Apoorva International, #35A, Raheja Arcade, Opp Star Box - 560 095
• Basavanagudi: Amolak Apparels, #104, Bull Temple Road, Near Ramakrishna Ashram - 560 019

Org. by: Surya Agency Pvt. Ltd.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಸುವರ್ಣಯುಗವು ನಮ್ಮ ಮುಂದೆ ಇದೆಯೇ ವಿನಾ ಹಿಂದೆಯಲ್ಲ.

–ವಿಲಿಯಂ ಶೇಕ್ಸ್‌ಪಿಯರ್

ಹಿಜಾಬ್ ಮೇಲೆ ಸಕಾರಣದ ನಿರ್ಬಂಧ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗದಿರಲಿ

ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಹಿಜಾಬ್ ಧರಿಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ನೀಡಿರುವ ಆದೇಶವು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಆದೇಶವು ನಿರಾಶಾದಾಯಕವಾಗಿದೆ. ‘ಸಕಾರಣವಾದ ಅವಕಾಶ’ಗಳು ಹಾಗೂ ‘ಸಕಾರಣವಾದ ನಿರ್ಬಂಧ’ಗಳ ನಡುವೆ ಹೈಕೋರ್ಟ್, ತನ್ನ ಅರಿವನ್ನು ಬಳಸಿ ಎರಡನೆಯದನ್ನು ಆಯ್ಕೆ ಮಾಡಿಕೊಂಡಿದೆ. ದೇಶದ ಸಂವಿಧಾನ ರೂಪಿಸಿದವರು ವೈಯಕ್ತಿಕ ಹಕ್ಕುಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡುವ ಮನಸ್ಸು ಹೊಂದಿದ್ದರು. ಅವುಗಳನ್ನು ಹತ್ತಿಕ್ಕುವುದಕ್ಕೆ ಪ್ರಭುತ್ವಕ್ಕೆ ನೀಡುವ ಹಕ್ಕುಗಳಿಗಿಂತ ಹೆಚ್ಚಿನ ಪ್ರಾಧಾನ್ಯ ಕೊಡಲು ಅವರ ಒಲವು ಇತ್ತು. ಹಿಜಾಬ್ ಧರಿಸುವುದು ಅತ್ಯಗತ್ಯವಾದ ಧಾರ್ಮಿಕ ಆಚರಣೆ ಅಲ್ಲ ಎಂದು ಹೈಕೋರ್ಟ್ ತೀರ್ಮಾನ ಮಾಡುವುದಕ್ಕೆ ಅಗತ್ಯ ಆಧಾರಗಳು ಇದ್ದಿರಬಹುದು. ಹೀಗಿದ್ದರೂ, ಆ ಆಧಾರಗಳನ್ನು ಸಾಂವಿಧಾನಿಕತೆಯ ಒರೆಗಲ್ಲಿಗೆ ಹಾಕಿ ನೋಡಬೇಕಿತ್ತು. ಸಾಂಸ್ಥಿಕ ಸಮವಸ್ತ್ರದಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಲು ಏನೆಲ್ಲ ಅಗತ್ಯವಿದೆಯೋ ಅವೆಲ್ಲವನ್ನೂ ದೇಶದ ಸಂವಿಧಾನವು ನೀಡಿದೆ– ಧಾರ್ಮಿಕ ಆಚರಣೆಗಳ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ, ಖಾಸಗಿತನದ ಹಕ್ಕು, ಶಿಕ್ಷಣದ ಹಕ್ಕು... ಇವೆಲ್ಲ ಸಂವಿಧಾನದ ಭಾಗ. ಈ ಹಕ್ಕುಗಳನ್ನು ಸೀಮಿತ ದೃಷ್ಟಿಕೋನದಿಂದ ಅರ್ಥೈಸಿದಾಗ ಮಾತ್ರ ‘ಸಕಾರಣವಾದ ಅವಕಾಶ’ಗಳನ್ನು ನಿರಾಕರಿಸಲು ಸಾಧ್ಯ. ಹೀಗೆ ನಿರಾಕರಿಸುವ ಮೂಲಕ, ನ್ಯಾಯಾಲಯವು ಇತರ ಧರ್ಮಗಳಿಗೆ ಸೇರಿದ ಸಂಕೇತಗಳನ್ನು ಹಾಗೂ ಗುರುತುಗಳನ್ನು ನಿರ್ಲಕ್ಷಿಸಿದಂತಿದೆ. ಇವೆಲ್ಲವನ್ನೂ ಈಗ ತರಗತಿಗಳಿಂದ ನಿರ್ಬಂಧಿಸಲಾಗುತ್ತದೆಯೇ? ನಿರ್ಬಂಧಿಸದೇ ಇದ್ದರೆ ಅದು ತಾರತಮ್ಯ ಆಗುತ್ತದೆ, ಸಂವಿಧಾನಕ್ಕೆ ವಿರುದ್ಧವಾಗುತ್ತದೆ. ನಿರ್ಬಂಧ ಹೇರಿದರೆ ಪ್ರತಿಯೊಬ್ಬರೂ ಒಂದೇ ರೀತಿಯಲ್ಲಿ ಕಾಣಿಸಿಕೊಳ್ಳಬೇಕು ಎನ್ನುವತ್ತ ಹೊರಳಿಕೊಂಡಂತೆ ಆಗುತ್ತದೆ. ವೈವಿಧ್ಯದಲ್ಲಿ ಏಕತೆ, ನಾವೆಲ್ಲರೂ ಭಿನ್ನರಾಗಿದ್ದರೂ ಒಂದಾಗಿ ಇರಬಹುದು ಎಂಬ ಆದರ್ಶ, ಭ್ರಾತೃತ್ವದ ಮೂಲ ಆಶಯ ಮರೆಯಾಗುತ್ತವೆ.

ಸರ್ಕಾರವು ಈಗ ಈ ಆದೇಶದ ಪರಿಣಾಮದ ಬಗ್ಗೆ ಗಮನಹರಿಸಬೇಕು

ಸಮವಸ್ತ್ರ ಕಡ್ಡಾಯಗೊಳಿಸುವ, ಹಿಜಾಬ್ ನಿರ್ಬಂಧಿಸುವ, ಕಾನೂನು ರೂಪಿಸುವ ಅವಕಾಶ ಸರ್ಕಾರಕ್ಕೆ ಇದೆ ಎಂದು ನ್ಯಾಯಾಲಯ ಹೇಳಿರುವುದು ಸರಿ ಇರಬಹುದು. ಆದರೆ, ಇಂತಹ ಕಾನೂನುಗಳನ್ನು ರೂಪಿಸಲು ಸಾಧ್ಯವಿರುವುದು ಒಂದು ವಿಚಾರವಾದರೆ, ಅಂತಹ ಕಾನೂನುಗಳನ್ನು ಸಂಕುಚಿತ ದೃಷ್ಟಿಯಿಂದ, ರಾಜಕೀಯಪ್ರೇರಿತವಾಗಿ ರೂಪಿಸುವುದು ಬೇರೆಯದೇ ವಿಚಾರ. ಕರ್ನಾಟಕ ಶಿಕ್ಷಣ ಕಾಯ್ದೆ – 1983ರ ಅಡಿಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಸಮವಸ್ತ್ರ ನಿಗದಿ ಮಾಡಿಲ್ಲ. ಸಂಸ್ಥೆಗಳಿಗೆ ತಮ್ಮ ವ್ಯಾಪ್ತಿಯಲ್ಲಿ ದಿರಿಸುಗಳ ಮೇಲೆ ಹಾಗೂ ವಿದ್ಯಾರ್ಥಿಗಳ ನಡವಳಿಕೆಗಳ ಮೇಲೆ ಸಕಾರಣದ ನಿರ್ಬಂಧ ಹೇರುವ ಅಧಿಕಾರ ಇರಬೇಕು. ಧಾರ್ಮಿಕ ಹಕ್ಕುಗಳ ಮೇಲೆ ಸಾರ್ವಜನಿಕ ಸುವ್ಯವಸ್ಥೆ, ಸಾರ್ವಜನಿಕ ನೈತಿಕತೆಯಂತಹ ಕಾರಣಗಳ ಅಡಿಯಲ್ಲಿ ನಿರ್ಬಂಧ ವಿಧಿಸಬಹುದು. ಆದರೆ ಹಿಜಾಬ್ ಧರಿಸುವುದರಿಂದ ಸಾರ್ವಜನಿಕ ಸುವ್ಯವಸ್ಥೆಗೆ, ನೈತಿಕತೆಗೆ ಧಕ್ಕೆ ಹೇಗೆ ಎದುರಾಗುತ್ತದೆ? ಸಮವಸ್ತ್ರವನ್ನು ಕಡ್ಡಾಯಗೊಳಿಸುವ ವಿಚಾರದಲ್ಲಿ ಸಂಸ್ಥೆಗಳು ಹೊಂದಿರುವ ಹಕ್ಕನ್ನು, ಸಂವಿಧಾನದ ಅಡಿಯಲ್ಲಿ ವ್ಯಕ್ತಿಯ ಪಾಲಿಗೆ ಅದಕ್ಕಿಂತ ಹೆಚ್ಚು ಮೂಲಭೂತವಾಗಿರುವ ಶಿಕ್ಷಣದಂತಹ ಹಕ್ಕುಗಳಿಗೆ ಎದುರಾಗಿ ನಿಲ್ಲಿಸಬಾರದು. ಮುಸ್ಲಿಂ ವಿದ್ಯಾರ್ಥಿನಿಯರ ಮನವಿಯು ಬಹಳ ಸರಳವಾಗಿತ್ತು. ಸಮವಸ್ತ್ರದ ಭಾಗವಾಗಿ ದುಪಟ್ಟಾವನ್ನು ಧರಿಸಲಾಗುತ್ತಿದೆ, ತಮಗೆ ಹಿಜಾಬ್ ಧರಿಸುವುದಕ್ಕೆ ಅವಕಾಶ ಕೊಡಬೇಕು ಎಂಬುದು ಅವರ ಮನವಿಯಾಗಿತ್ತು. ಅಷ್ಟಕ್ಕೆ ಅವಕಾಶ ಕೊಡಬಹುದಿತ್ತು. ಈ ವಿಚಾರವನ್ನು ವಿದ್ಯಾರ್ಥಿಗಳು ಹಾಗೂ ಅವರ ಪಾಲಕರು ಮತ್ತು ಕಾಲೇಜು ಆಡಳಿತ ಮಂಡಳಿಗಳ ನಡುವೆ ಇತ್ಯರ್ಥಪಡಿಸಬಹುದಿತ್ತು. ಈ ವಿಚಾರವಾಗಿ ಹುಟ್ಟಿಕೊಂಡ ರಾಜಕೀಯ ವಿವಾದದ ಬೆಂಕಿಗೆ ಉದ್ದೇಶಪೂರ್ವಕವಾಗಿ ತುಪ್ಪ ಸುರಿಯಲಾಯಿತು. ಹೀಗೆ ಮಾಡಿರುವುದರ ಹಿಂದೆ ‘ಕಾಣದ ಕೈಗಳು’ ಇವೆ ಎಂದು ನ್ಯಾಯಾಲಯವು ಬೇಸರ ವ್ಯಕ್ತಪಡಿಸಿದೆ. ಸರ್ಕಾರ, ಆಡಳಿತ ಪಕ್ಷ ಮತ್ತು ಕೆಲವು ಮೂಲಭೂತವಾದಿ ಸಂಘಟನೆಗಳ ಗೋಚರಿಸುವ ಕೈಗಳು ಈ ವಿವಾದಕ್ಕೆ ಹೆಚ್ಚಿನ ಹೊಣೆ ಹೊರಬೇಕು. ಸಹಸ್ರಾರು ವಿದ್ಯಾರ್ಥಿಗಳಿಗೆ ಕೇಸರಿ ಶಾಲು ವಿತರಣೆ ಮಾಡುವ ಮೂಲಕ ಆ ವಿದ್ಯಾರ್ಥಿಗಳನ್ನು ದೊಡ್ಡ ರಾಜಕೀಯ ಆಟದ ಭಾಗವಾಗಿಸಲಾಯಿತು.

ನ್ಯಾಯಾಲಯವು ಎರಡೂ ಬಗೆಯ– ಹಿಜಾಬ್ ಮತ್ತು ಕೇಸರಿ ಶಾಲು – ಧಾರ್ಮಿಕ ಗುರುತುಗಳನ್ನು ನಿರ್ಬಂಧಿಸಿದೆ. ಇದು ಧರ್ಮನಿರಪೇಕ್ಷ ಪ್ರಭುತ್ವಕ್ಕೆ ತಕ್ಕುದಾದ ಆದೇಶದಂತೆ ಇದೆ ಎಂಬ ರೀತಿಯಲ್ಲಿ ಕಾಣಿಸುವಂತಿದೆ. ಆದರೆ, ಹಣೆಯ ಮೇಲೆ ಹಚ್ಚಿಕೊಳ್ಳುವ ಭಸ್ಮ, ನಾಮ, ಇರಿಸಿಕೊಳ್ಳುವ ಕುಂಕುಮ ಅಥವಾ ಬಿಂದಿ, ಧರಿಸುವ ಮಂಗಳಸೂತ್ರ, ಸಿಖ್ಖರು ಧರಿಸುವ ಪೇಟಾ ವಿಚಾರದಲ್ಲಿ ಯಾವ ತೀರ್ಮಾನ ಕೈಗೊಳ್ಳಬೇಕು? ಇಂತಹ ಪ್ರಶ್ನೆಗಳಿಗೆ ನ್ಯಾಯಾಲಯ ಉತ್ತರಿಸಿಲ್ಲ. ಇತರ ಹೈಕೋರ್ಟ್‌ಗಳು ಈ ವಿಚಾರವಾಗಿ ನೀಡಿರುವ ಬೇರೆ ರೀತಿಯ ಆದೇಶಗಳು ತನ್ನೆದುರಿನ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದು ಹೇಳಿದ ಕರ್ನಾಟಕ ಹೈಕೋರ್ಟ್, ಅವುಗಳನ್ನು ಪರಿಗಣಿಸಿಲ್ಲ. ಕೇಂದ್ರ ಸರ್ಕಾರ ರೂಪಿಸಿರುವ ನಿಯಮಗಳ ಅನ್ವಯ ಕೇಂದ್ರೀಯ ವಿದ್ಯಾಲಯಗಳಲ್ಲಿ ಹಿಜಾಬ್ ಧರಿಸಲು ಅವಕಾಶ ಇದೆ. ಇದನ್ನು ಕರ್ನಾಟಕದಲ್ಲಿಯೂ ಅಳವಡಿಸಿಕೊಳ್ಳಬಹುದು ಎಂಬ ವಾದವನ್ನೂ ಹೈಕೋರ್ಟ್ ಒಪ್ಪಿಲ್ಲ. ಈಗ ಹಿಜಾಬ್ ವಿವಾದವು ಸುಪ್ರೀಂ ಕೋರ್ಟ್ ಅಂಗಳ ತಲುಪಿದೆ. ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದರೂ, ಅದು ನಿಗದಿತ ವಸ್ತ್ರಸಂಹಿತೆಯನ್ನು ಹೊಂದಿರುವ ಸರ್ಕಾರಿ ಕಾಲೇಜುಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಆದೇಶದ ವ್ಯಾಪ್ತಿ ಬಹಳ ಸೀಮಿತ. ಹೀಗಿರುವಾಗ, ಈ ಪ್ರಕರಣದಲ್ಲಿ ಸರ್ಕಾರದ ಮಧ್ಯಪ್ರವೇಶ ಅಗತ್ಯವಿತ್ತೇ? ಸರ್ಕಾರವು ಈಗ ಈ ಆದೇಶದ ಪರಿಣಾಮದ ಬಗ್ಗೆ ಚಿಂತಿಸಬೇಕು. ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣದ ಮೇಲೆ ಆಗುವ ಪರಿಣಾಮಗಳು ಏನಿರುತ್ತವೆ ಎಂಬುದನ್ನು ಅವಲೋಕಿಸಬೇಕು.

ದಿನದ ಟ್ವೀಟ್

ಅನಗತ್ಯ ಉಪದೇಶವೇಕೆ?

ಭಾರತಕ್ಕೆ ಉಪದೇಶ ಮಾಡಲು ಬರಬೇಡಿ. ರಷ್ಯಾ-ಉಕ್ರೇನ್ ಯುದ್ಧ ಆರಂಭಕ್ಕೆ ಕೆಲವೇ ದಿನಗಳ ಹಿಂದಿನವರೆಗೂ ಅಮೆರಿಕವು ರಷ್ಯಾದಿಂದ ತೈಲವನ್ನು ಖರೀದಿಸುತ್ತಿತ್ತು. ನ್ಯಾಟೊದ ಕೆಲವು ರಾಷ್ಟ್ರಗಳು ಈಗಲೂ ರಷ್ಯಾದಿಂದ ತೈಲ ಮತ್ತು ಅನಿಲವನ್ನು ಖರೀದಿಸುತ್ತಿವೆ. ಜರ್ಮನಿಯು ತನ್ನ ಅಗತ್ಯದ ಅರ್ಧದಷ್ಟು ಇಂಧನವನ್ನು ರಷ್ಯಾದಿಂದಲೇ ಪಡೆಯುತ್ತಿದೆ. ರಿಯಾಯಿತಿ ದರದಲ್ಲಿ ರಷ್ಯಾದಿಂದ ತೈಲ ಖರೀದಿಸುವುದನ್ನು ಭಾರತ ಮಾತ್ರ ಏಕೆ ಪರಿಗಣಿಸಬಾರದು?

ಅನ್ಷುಲ್ ಸಕ್ಸೇನಾ, ಸುದ್ದಿ ವಿಶ್ಲೇಷಕ

ಕಿಡಿನುಡಿ

ರಾಜ್ಯದ ಅನೇಕ ಕಡೆ ಪರಿಶಿಷ್ಟ ಜಾತಿಯವರ ಕೊಲೆಗಳು ನಡೆದಿವೆ. ಈ ಪ್ರಕರಣಗಳು ಬಿಜೆಪಿ ಸರ್ಕಾರಕ್ಕೆ ಕಾಣಲಿಲ್ಲವೇ? ಹಿಂದೂ ಧರ್ಮದಲ್ಲಿ ನಾವು ಪಾಲುದಾರರಲ್ಲವೇ? ಸತ್ತವರು ಹಿಂದೂಗಳಲ್ಲವೇ? ಆಗ ಯಾರೂ ಹೋಗಿ ಸಾಂತ್ವನ ಹೇಳಲಿಲ್ಲ ಏಕೆ?

ಆರ್.ಬಿ.ತಿಮ್ಮಾಪೂರ, ವಿಧಾನಪರಿಷತ್ತಿನ ಕಾಂಗ್ರೆಸ್ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 17-3-1997

- **ಬೆಳಗಾವಿ ರೈಲು ನಿಲ್ದಾಣದಲ್ಲಿ ಕಮಾಂಡೊಗಳ ದಾಂದಲೆ**

ಬೆಳಗಾವಿ, ಮಾ. 16– ನಗರದ ರೈಲು ನಿಲ್ದಾಣದಲ್ಲಿ ಇಂದು ಬೆಳಗಿನ ಜಾವ ಮೇಜರ್ ದರ್ಜೆ ಅಧಿಕಾರಿಯೊಬ್ಬರ ಸಮ್ಮುಖದಲ್ಲಿ 25– 30 ಜನ ಕಮಾಂಡೊಗಳು ಭಾರಿ ದಾಂದಲೆ ಮಾಡಿ ಒಬ್ಬ ಹೆಡ್‌ಕಾನ್‌ಸ್ಟೆಬಲ್‌ನ ಕೈಕಾಲು ಮುರಿದು ಹಾಕಿದ್ದಲ್ಲದೇ ಹಲವರನ್ನು ಗಾಯಗೊಳಿಸಿದ್ದಾರೆ.

ನಗರದ ಮರಾಠಾ ಲಘು ಪದಾತಿದಳದ ಆಶ್ರಯದಲ್ಲಿಯೇ ಕಮಾಂಡೊ ತರಬೇತಿಯೂ ನಡೆಯುತ್ತಿದ್ದು, ಶನಿವಾರ ಮಧ್ಯರಾತ್ರಿ ನಂತರ ಪ್ರಾರಂಭವಾದ ಘಟನಾವಳಿಗಳು ಬೆಳಗಿನ ಎರಡು ಗಂಟೆಯವರೆಗೆ ನಡೆದಿದ್ದವು ಎಂದು ಪ್ರತ್ಯಕ್ಷದರ್ಶಿಗಳು ಮತ್ತು ಪೊಲೀಸರು ತಿಳಿಸಿದ್ದಾರೆ. ಸೇನೆಯವರು ಹೋಗಲಿ ಸಾಮಾನ್ಯರೂ ಮಾಡದಂಥ ಒಂದು ಪಕ್ಕಾ ಅಶಿಸ್ತಿನ ಘಟನೆಯ ಪರಿಣಾಮವಾಗಿ ಈ ದಾಂದಲೆ ನಡೆಯಿತು ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಶುಕ್ರವಾರ, 17-3-1972

- **ಸೀಮೆಎಣ್ಣೆ, ಸಿಗರೇಟು, ಕೃತಕ ರೇಷ್ಮೆ, ಸಿಮೆಂಟ್ ಮತ್ತಷ್ಟು ತುಟ್ಟಿ**

ನವದೆಹಲಿ, ಮಾ. 16– ನೀವು ಬಳಸುವ ಸೀಮೆಎಣ್ಣೆ, ಸಿಗರೇಟಿಗೆ ಇನ್ನು ಮುಂದೆ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ.

ಟ್ರ್ಯಾಕ್ಟರ್‌ಗಳು, ಅಲ್ಯುಮಿನಿಯಂ, ಸಿಮೆಂಟು, ಉಕ್ಕು ಮತ್ತು ಉಕ್ಕಿನ ಉತ್ಪನ್ನಗಳು, ಕೃತಕ ರೇಷ್ಮೆ, ಮೋಟರ್ ಟೈರ್‌ಗಳು, ರಾಸಾಯನಿಕ ಗೊಬ್ಬರ, ಸೆಣಬು ಮತ್ತು ವಿದ್ಯುತ್‌ಚಾಲಿತ ಪಂಪ್‌ಸೆಟ್‌ಗಳೂ ಮತ್ತಷ್ಟು ತುಟ್ಟಿಯಾಗಲಿವೆ. ಕೇಂದ್ರ ಅರ್ಥ ಸಚಿವ ಶ್ರೀ ವೈ.ಬಿ.ಚವಾಣರು ಇಂದು ಲೋಕಸಭೆಯಲ್ಲಿ ಪ್ರಕಟಿಸಿದ ಹೊಸ ತೆರಿಗೆ ಸಲಹೆಗಳ ಪರಿಣಾಮವಿದು.

- **ಕಪ್ಪುಹಣ ಶೋಧನೆ, ತೆರಿಗೆ ಕಳ್ಳತನ ತಪ್ಪಿಸಲು ಕ್ರಮ: ಚವಾಣ್ ಆಶ್ವಾಸನೆ**

ನವದೆಹಲಿ, ಮಾ. 16– ಕಪ್ಪುಹಣ ತೊಡೆದುಹಾಕುವುದಕ್ಕೆ ಹಾಗೂ ತೆರಿಗೆ ತಪ್ಪಿಸಿಕೊಳ್ಳುವುದನ್ನು ಮತ್ತು ತೆರಿಗೆ ಬಾಕಿ ಕಡಿಮೆ ಮಾಡುವುದಕ್ಕೆ ವಾಂಛೂ ಸಮಿತಿ ಮಾಡಿದ್ದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲು ತೆರಿಗೆ ನಿಯಮಗಳಲ್ಲಿ ಬದಲಾವಣೆಗಳನ್ನು ಮಾಡುವುದಾಗಿ ಹಣಕಾಸು ಸಚಿವ ವೈ.ಬಿ. ಚವಾಣ್ ಇಂದು ಆಶ್ವಾಸನೆ ನೀಡಿದರು.

ಉ.ಪ್ರ: ಬಿಎಸ್‌ಪಿಯ ರಾಜಕೀಯ ‘ಹತ್ಯೆ’ ಮಾಡಿ ಬಿಜೆಪಿಯನ್ನು ಮಾಯಾವತಿ ಗೆಲ್ಲಿಸಿದರೇ?

ಬಿಜೆಪಿ ಗೆಲುವಲ್ಲಿ ‘ಮಾಯಾ ಕೈವಾಡ’

ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಭಾರತದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಗೌರವಾರ್ಥ ನಿರ್ಮಾಣಗೊಂಡ ಅಸಂಖ್ಯ ಸ್ಮಾರಕಗಳಿವೆ. ಆದರೆ ಉತ್ತರಪ್ರದೇಶದ ರಾಜಧಾನಿ ಲಖನೌದಲ್ಲಿ ಮಾಜಿ ಮುಖ್ಯಮಂತ್ರಿ ಮಾಯಾವತಿ ಅವರು ಕಟ್ಟಿಸಿದಷ್ಟು ಭವ್ಯ ಸ್ಮಾರಕ ಇನ್ನೆಲ್ಲಿಯೂ ಇಲ್ಲ. ಗೋಮತಿ ನದಿ ದಂಡೆಯ 108 ಎಕರೆ ಪ್ರದೇಶದಲ್ಲಿ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿ ನಿರ್ಮಿಸಲಾದ ಉದ್ಯಾನದಲ್ಲಿ ಅಂಬೇಡ್ಕರ್ ಮತ್ತು ದಲಿತ ನೇತಾರ ಕಾನ್ಶಿರಾಂ ಅವರ ಪ್ರತಿಮೆ ಹೊರತಾಗಿ ಮಾಯಾವತಿ ಅವರ ಬೃಹತ್ ಪ್ರತಿಮೆಯೂ ಇದೆ.

ಇದು, 1990ರ ದಶಕದ ನಂತರ ದೇಶದಲ್ಲಿ ಉದಯಿಸಿದ ದಲಿತ ಜಾಗೃತಿಯ ಪ್ರತೀಕ ಎಂದು ಗುರುತಿಸಿದರೆ, ಈ ತರಹದ ಸ್ವವೈಭವೀಕರಣವನ್ನು ಆಕ್ಷೇಪಿಸಲು ಕಾರಣವಿಲ್ಲ. ಆದರೆ ಇತ್ತೀಚೆಗೆ ನಡೆದ ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ದೊರೆತ ವಿಜಯದಲ್ಲಿ ಮಾಯಾವತಿ ಅವರ ಕೈವಾಡವನ್ನು ನೋಡಿದರೆ, ಅವರ ದಲಿತ ರಾಜಕಾರಣದ ಭವಿಷ್ಯದ ಬಗ್ಗೆ ದೊಡ್ಡ ಸಂಶಯ ಹುಟ್ಟಿಕೊಳ್ಳುತ್ತದೆ.

ಚುನಾವಣಾ ಸಮಯದಲ್ಲಿ ನಾನು ಹದಿನೈದು ದಿನ ಉತ್ತರಪ್ರದೇಶದ ಅನೇಕ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿದೆ. ಬಿಜೆಪಿ ಮತ್ತು ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷದ ನಡುವೆ ತೀವ್ರವಾದ ಪೈಪೋಟಿ ಇದ್ದುದು ಎಲ್ಲೆಡೆಯೂ ಗೋಚರಿಸುತ್ತಿತ್ತು. ಆದರೆ ಕೊನೆಯಲ್ಲಿ ಬಿಜೆಪಿಗೆ ಭಾರಿ ಬಹುಮತ ದೊರೆತಿದೆ. ಯೋಗಿ ಆದಿತ್ಯನಾಥ ಮತ್ತೊಮ್ಮೆ ಮುಖ್ಯಮಂತ್ರಿಯಾಗಲಿದ್ದಾರೆ. ಸಮಾಜವಾದಿ ಪಕ್ಷದ ಸೋಲಿನ ಹಿಂದೆ ಆ ಪಕ್ಷದ ತಪ್ಪುಗಳೂ ಇದ್ದೇ ಇವೆ. ಆದರೆ ಮಾಯಾವತಿ ಅವರು ತಾವೇ ಕಟ್ಟಿ ಬೆಳೆಸಿದ ಬಿಎಸ್‌ಪಿಯ ರಾಜಕೀಯ ‘ಹತ್ಯೆ’ ಮಾಡಿ ಬಿಜೆಪಿಯವರನ್ನು ಗೆಲ್ಲಿಸಿದ್ದಾರೆ ಎಂಬುದು ರಾಜ್ಯದಲ್ಲಿ ಅನೇಕ ವಿಶ್ಲೇಷಕರ ಸ್ಪಷ್ಟ ಅಭಿಮತವಾಗಿದೆ. ಇದಕ್ಕೆ ಕಾರಣಗಳೇನು ಎಂಬುದನ್ನು ನೋಡೋಣ.

ಮಾಯಾವತಿ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿದ್ದರು. 2007ರಲ್ಲಿಯಂತೂ ಅವರ ಪಕ್ಷ ಪೂರ್ಣ ಬಹುಮತ ಗಳಿಸಿ ಐದು ವರ್ಷ ಆಡಳಿತ ನಡೆಸಿತು. ಆದರೆ ಕೇವಲ ಒಂದು ದಶಕದ ಹಿಂದೆ, 403 ಸದಸ್ಯಬಲದ ವಿಧಾನಸಭೆಯಲ್ಲಿ 206 ಪ್ರತಿನಿಧಿಗಳನ್ನು ಹೊಂದಿದ್ದ ಈ ಪಕ್ಷ 2022ರಲ್ಲಿ ಒಂದು ಸೀಟು ಮಾತ್ರ ಉಳಿಸಿಕೊಂಡು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವಷ್ಟು ಕೆಳಗೆ ಜಾರಿದೆ. ಇದರ ಹಿಂದಿನ ಗುಟ್ಟೇನು? ತಮ್ಮ ಬೆಂಬಲಿಗರ ಸಿಟ್ಟಿನಿಂದಾಗಿ ಮಾಯಾವತಿ ಅವರು ಇಷ್ಟು ದಯನೀಯ ಸೋಲನ್ನುಂಡರೋ ಅಥವಾ ಇಂಥ ದುಃಸ್ಥಿತಿಯನ್ನು ಮುದ್ದಾಮಾಗಿ ಸ್ವಾಗತಿಸಿಕೊಂಡರೋ? ನಿಜವಾಗಿ ನೋಡಿದರೆ ಮೊದಲಿನ ಪ್ರಶ್ನೆಗೆ ಆಧಾರವಿಲ್ಲ. ಏಕೆಂದರೆ ಜಾಟವ ಜಾತಿಗೆ ಸೇರಿದ ಅವರ ಮುಖ್ಯ ಬೆಂಬಲಿಗರು 2022ರಲ್ಲೂ ಅವರೊಂದಿಗೇ ಇದ್ದರು. ಇತರ ದಲಿತ ಹಾಗೂ ಬಹುಜನ ಸಮುದಾಯಗಳಲ್ಲೂ ಅವರಿಗೆ ಬಹಳಷ್ಟು ಬೆಂಬಲವಿದೆ. ಈ ಜನರಲ್ಲಿ ಮಾಯಾವತಿ ಅವರ ವಿರುದ್ಧ ಆಕ್ರೋಶವೇನೂ ಇರಲಿಲ್ಲ. ಹಾಗಿದ್ದರೆ ಈ ಬೆಂಬಲಿಗ ವರ್ಗ ಬಿಎಸ್‌ಪಿಗೆ ಏಕೆ ಮತ ನೀಡಲಿಲ್ಲ?

ಇದರ ಹಿಂದಿನ ತರ್ಕವನ್ನು ಶೋಧಿಸಲು ನಾವು ಎರಡು ವರ್ಷಗಳ ಹಿಂದೆ ನಡೆದ ಕೆಲವು ಘಟನೆಗಳನ್ನು ನೋಡಬೇಕಾಗುತ್ತದೆ. 2019ರ ಜುಲೈನಲ್ಲಿ ಆದಾಯ ತೆರಿಗೆ ಇಲಾಖೆಯವರು ಮಾಯಾವತಿ ಅವರ ಸಹೋದರ ಆನಂದ ಕುಮಾರ್ ಅವರ ಮನೆಯ ಮೇಲೆ ದಾಳಿ ಮಾಡಿ, ದೆಹಲಿ ಬಳಿಯ ನೋಯಿಡಾದಲ್ಲಿ ₹ 400 ಕೋಟಿ ಮೌಲ್ಯದ ಅವರ ಬೇನಾಮಿ ಆಸ್ತಿಯನ್ನು ಜಪ್ತಿ ಮಾಡಿದರು. ಮಾಯಾವತಿ ಅವರ ಕಾರ್ಯದರ್ಶಿಯೂ ಮಾಜಿ ಐಎಎಸ್ ಅಧಿಕಾರಿಯೂ ಆಗಿದ್ದ ನೇತ್ ರಾಮ ಅವರ ಮನೆಯ ಮೇಲೆ ಸೆಪ್ಟೆಂಬರ್‌ನಲ್ಲಿ ದಾಳಿ ಮಾಡಿ, ₹ 230 ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಿದರು.

‘ದಲಿತರು ಶ್ರೀಮಂತರಾಗುವುದು ಬಿಜೆಪಿಗೆ ಬೇಕಿಲ್ಲ’ ಎಂದು ಮಾಯಾವತಿ ಆಗ ಗುಡುಗಿದ್ದರು. ಇನ್ನೇನು ಅವರನ್ನೂ ಆದಾಯ ತೆರಿಗೆ ಇಲಾಖೆಯವರು ತನಿಖೆಗೆ ಕರೆಯುತ್ತಾರೆ ಎಂಬ ಊಹಾಪೋಹ ಉತ್ತರಪ್ರದೇಶದಲ್ಲಿ ದಟ್ಟವಾಗಿತ್ತು. ಪಕ್ಕದ ಬಿಹಾರ ರಾಜ್ಯದ ಬಿಜೆಪಿ ವಿರೋಧಿ ಮುಖಂಡ, ಭ್ರಷ್ಟಾಚಾರದ ಹಗರಣದಿಂದಾಗಿ ಈಗ ಜೈಲಿನಲ್ಲಿರುವ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಅವರಿಗೊದಗಿದ ಗತಿ ತಮ್ಮದೂ ಆಗಬಹುದೇನೊ ಎಂಬ ಭೀತಿ ಅವರಲ್ಲಿಯೂ ಮೂಡಿದ್ದರೆ ಅದು ಸ್ವಾಭಾವಿಕ. ಏನೇ ಇರಲಿ, ಆನಂತರ ಬಿಜೆಪಿ ವಿರುದ್ಧ ಅವರ ಆಪಾದನೆಯ ದನಿಯೂ ಬಂದಾಯಿತು ಹಾಗೂ ಆನಂದ ಕುಮಾರ್, ನೇತ್ ರಾಮ ಅವರ ವಿರುದ್ಧ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಕಾನೂನಿನ ಕ್ರಮವೂ ನಿಂತುಹೋಯಿತು. ಒಂದು ತಿಂಗಳು ಕಳೆದ ಮೇಲೆ ಮಾಯಾವತಿ ಅವರು ‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸಮಾಜವಾದಿ ಪಾರ್ಟಿಯನ್ನು ಸೋಲಿಸಲು ನನ್ನ ಬಹುಜನ ಸಮಾಜ ಪಾರ್ಟಿಯು ಬಿಜೆಪಿಯನ್ನು ಬೆಂಬಲಿಸಲು ತಯಾರು’ ಎಂದು ಬಹಿರಂಗವಾಗಿ ಘೋಷಿಸಿದರು. 2022ರ ಚುನಾವಣೆಯ ಮಧ್ಯದಲ್ಲಿಯೇ ಅವರು ಬಿಜೆಪಿಯನ್ನು ಪ್ರಶಂಸಿಸಿ ತಮ್ಮ ನಿಲುವನ್ನು ಮತ್ತಷ್ಟು ಸ್ಪಷ್ಟಪಡಿಸಿದರಲ್ಲದೆ ತಮ್ಮ ಬೆಂಬಲಿಗರ ಮತಗಳನ್ನೂ ಬಿಜೆಪಿಗೆ ವರ್ಗಾವಣೆ ಮಾಡುವ ಕೆಲಸ ಮಾಡಿದರು.



ಇಷ್ಟೇ ಅಲ್ಲ, ಬಿಜೆಪಿಯವರು ಗುರುತಿಸಿದ, ಅಖಿಲೇಶ್ ಪರವಾಗಿದ್ದ 112 ವಿಧಾನಸಭಾ ಕ್ಷೇತ್ರಗಳಲ್ಲಿ ಸಮಾಜವಾದಿ ಪಕ್ಷದ ಉಮೇದುವಾರರ ವಿರುದ್ಧ ಹಾಗೂ ಬಿಜೆಪಿಯವರೇ ಹೇಳಿಕೊಟ್ಟ, ಯಾದವ ಇಲ್ಲವೇ ಮುಸ್ಲಿಂ ಅಭ್ಯರ್ಥಿಗಳನ್ನು ಬಿಎಸ್‌ಪಿ ನಿಲ್ಲಿಸಿತು. ಈ ಎಲ್ಲ ಕ್ಷೇತ್ರಗಳಲ್ಲಿ ಬಿಎಸ್‌ಪಿ ಉಮೇದುವಾರರು ಸುಮಾರು 15- 20 ಸಾವಿರ ಮತಗಳನ್ನು ಪಡೆದಿದ್ದರಿಂದ ಸಮಾಜವಾದಿ ಪಕ್ಷ ಸೋತಿತು. ಅರ್ಥಾತ್ ಸಮಾಜವಾದಿ ಪಕ್ಷದ ಸೋಲಷ್ಟೇ ಮಾಯಾವತಿ ಅವರ ಗುರಿಯಾಗಿತ್ತು, ತಮ್ಮ ಪಕ್ಷದ ಅಧಿಕಾಧಿಕ ಅಭ್ಯರ್ಥಿಗಳ ಗೆಲುವು ಅವರ ಉದ್ದೇಶವಾಗಿರಲಿಲ್ಲ. ಅವರ ಪಕ್ಷ 2017ರಲ್ಲಿ ಒಟ್ಟು ಮತಗಳಲ್ಲಿ ಶೇ 22.23ರಷ್ಟು ಗಳಿಸಿತ್ತು. 2022ರಲ್ಲಿ ಅದು ಸುಮಾರು ಶೇ 10ರಷ್ಟು ಕೆಳಗಿಳಿದು ಶೇ 12.88 ಆಯಿತು. ಇದರ ನೇರ ಲಾಭ ಬಿಜೆಪಿಗೆ ಪ್ರಾಪ್ತವಾಯಿತು. 2017ರಲ್ಲಿ ಬಿಜೆಪಿಗೆ 312 ಸೀಟುಗಳು ದೊರೆತಿದ್ದವು. 2022ರಲ್ಲಿ ಈ ಸಂಖ್ಯೆ 57 ಸೀಟುಗಳಷ್ಟು ಕಡಿಮೆಯಾಯಿತು. ಮಾಯಾವತಿ ಅವರ ಅನುಗ್ರಹ ಪ್ರಾಪ್ತವಾಗಿರದಿದ್ದರೆ ಚುನಾವಣೆಯ ಪರಿಣಾಮ ಏನಾಗುತ್ತಿತ್ತೋ ಗೊತ್ತಿಲ್ಲ.

ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯನ್ನು ಸೋಲಿಸಲು ಡಮ್ಮಿ ಅಭ್ಯರ್ಥಿಯನ್ನು ನಿಲ್ಲಿಸುವ ಸಂಚು ಸುಮಾರಾಗಿ ಎಲ್ಲೆಡೆಯೂ ನಡೆಯುತ್ತಲೇ ಇರುತ್ತದೆ. ಈ ತರಹದ ಕಪಟನೀತಿ ನಮ್ಮ ಪ್ರಜಾಪ್ರಭುತ್ವಕ್ಕೆ ಅಂಟಿದ ಒಂದು ಕಳಂಕ. ಆದರೆ ಇದಕ್ಕೂ ದೊಡ್ಡ ಕಳಂಕವೆಂದರೆ ಆದಾಯ ತೆರಿಗೆ ಇಲಾಖೆ, ಸಿಬಿಐ, ಜಾರಿ ನಿರ್ದೇಶನಾಲಯ ದಂಥ (ಇ.ಡಿ) ಸರ್ಕಾರಿ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಂಡು, ರಾಜಕೀಯ ವಿರೋಧಿಗಳನ್ನು ಹೆದರಿಸಿ ಬೆದರಿಸಿ, ಬಿಎಸ್‌ಪಿಯಂಥ ಒಂದು ದೊಡ್ಡ ಪಕ್ಷವನ್ನೇ ಡಮ್ಮಿ ಪಕ್ಷವನ್ನಾಗಿ ಪರಿವರ್ತಿಸಿ ಅಧಿಕಾರಕ್ಕೆ ಬರುವ ಸಂಚು. ರಾಜಕೀಯ ನೈತಿಕತೆಗೆ ತಿಲಾಂಜಲಿ ಕೊಟ್ಟು ಅಧಿಕಾರ ಕಾಪಾಡಿಕೊಳ್ಳುವ ಈ ಕೃತ್ಯವೂ ಭ್ರಷ್ಟಾಚಾರವಲ್ಲವೇ?

ಮಾಯಾವತಿ ಅವರ ರಾಜಕೀಯ ಯಾತ್ರೆ ‘ತಿಲಕ್ ತರಾಜು ಔರ್ ತಲ್ವಾರ್, ಇನಕೋ ಮಾರೋ ಜೂತೆ ಚಾರ್’ (ಸವರ್ಣ ಜಾತಿಗಳ ಸಂಕೇತಗಳಾದ ತಿಲಕ, ತಕ್ಕಡಿ ಮತ್ತು ತಲವಾರು, ಇವರುಗಳಿಗೆ ಚಪ್ಪಲಿಯಿಂದ ಹೊಡೆಯಿರಿ) ಎಂಬ ಯುದ್ಧಘೋಷದಿಂದ ಪ್ರಾರಂಭವಾಯಿತು. ಈ ಯಾತ್ರೆ ಈಗ ಶರಣಾಗತಿಯ ಹಂತಕ್ಕೆ ಬಂದು ಕೊನೆಗೊಳ್ಳಲಿದೆ. ಲಖನೌನ ಅಂಬೇಡ್ಕರ್ ಪಾರ್ಕಿನಲ್ಲಿ ಮಾಯಾವತಿ ಅವರ ಪ್ರತಿಮೆಯನ್ನು ನೋಡುತ್ತಾ ನಿಂತಾಗ, ಒಬ್ಬ ಬಲಶಾಲಿ ದಲಿತ- ಮಹಿಳಾ ನೇತಾರೆಗೆ ಹೀಗೇಕೆ ದುರ್ಗತಿ ಬಂದಿತು ಎಂಬ ಪ್ರಶ್ನೆ ನನ್ನಲ್ಲಿ ಮರುಕ ಹುಟ್ಟಿಸಿತಲ್ಲದೆ ಮೂರು ಸತ್ಯಗಳನ್ನು ಸ್ಪಷ್ಟಪಡಿಸಿತು.

ಒಂದು, ಇನ್ನು ಮುಂದೆ ಯಾವುದೇ ಸ್ವತಂತ್ರ ದಲಿತ ರಾಜಕಾರಣಕ್ಕೆ ಭಾರತದಲ್ಲಿ ಅವಕಾಶವಿಲ್ಲ. ಎರಡು, ಸ್ವಜನಲಾಭ ಮತ್ತು ಸ್ವಪ್ರತಿಷ್ಠೆಗಾಗಿ ಮಾತ್ರ ರಾಜಕಾರಣ ಮಾಡುವವರು ಕೊನೆಗೆ ಸ್ವಸಂರಕ್ಷಣೆಗಾಗಿ ಅಧಿಕಾರಸ್ಥರ ಕೈಗೊಂಬೆಗಳಾಗುತ್ತಾರೆ. ಮೂರು, ದಲಿತ- ಶೋಷಿತ ಸಮಾಜದ ಆರ್ಥಿಕ- ಸಾಮಾಜಿಕ ಉತ್ಥಾನ ಕೇವಲ ಭಾವನಾತ್ಮಕ ಹಾಗೂ ಸಾಂಕೇತಿಕ ರಾಜಕೀಯದಿಂದ ಸಾಧ್ಯವಿಲ್ಲ. ಅದಕ್ಕೆ ಮೌಲ್ಯಾಧಾರಿತ ವಿಚಾರ, ಆಚಾರಗಳ ಅಡಿಪಾಯವೂ ಬೇಕು.

ಚುರುಮುರಿ



ಕೇಜ್ರಿ ಕಿಯಾರೇ...

• ತುರುವೇಕೆರೆ ಪ್ರಸಾದ್

‘ಎಲ್ಲೆಲ್ಲೂ ಹುಲ್ಲಿನ ಮಹಿಮೆಯೇ! ತೃಣಮಪಿ ನ ಚಲತಿ ನನ್ನ ವಿನಾ’ ಅಂತ ಟಿಎಂಸಿ ಮೇಡಂ ಅಂದ್ಕೊಂಡಿದ್ರು. ಅದು ಸುಳ್ಳಾಗೋಯ್ತು. ಎಎಪಿ ಸಾಧನೆ ನೋಡ್ಲಿಲ್ವಾ?’ ಎಂದ ಪರ್ಮೇಶಿ.

‘ ಅದ್ಸರಿ, ಎಎಪಿಗೂ ಈ ಹುಲ್ಲಿಗೂ ಏನು ಸಂಬಂಧ?’ ಕೇಳಿದ ಕೊಟ್ರ.

‘ದಡ್ಡ ನೀನು, ಎಎಪಿಯ (ಆಪ್) ಚಿಹ್ನೆ ಏನು?- ಪೊರಕೆ! ಅದೂ ಒಂಥರಾ ಹುಲ್ಲಿನ ಕಟ್ಟೇ ತಾನೆ? ಈ ಆಪ್, ಸಿಂಗಗಳನ್ನ ಇಂಗು ತಿಂದ ಏಪ್ ಮಾಡ್ಬಿಟ್ಟು’.

‘ಒಟ್ನಲ್ಲಿ ಕ್ರೇಜಿ ಕಿಯರೇ ಹೋಗಿ ಕೇಜ್ರಿ ಕಿಯಾರೇ... ಆಗಿದೆ’.

‘ಚೀನಾದ ನೂರಾರು ಆ್ಯಪ್ ಬ್ಯಾನ್ ಮಾಡುದ್ರು. ನಮ್ ಇಂಡಿಯಾದ ಒಂದು ‘ಆಪ್’ನ ಡೌನ್ ಮಾಡಕ್ಕಾಗ್ಲಿಲ್ಲ’.

‘ಆದ್ರೂ ಯುಪಿ ನೋಡಿ ‘ಹುಲ್ಲಾಗು ಬೆಟ್ಟದಡಿ, ಮನೆಗೆ ತಾವರೆಯಾಗು’ ಅಂತ ಹೇಳ್ಕೊಬಹುದು’.

‘ಮುಂದಕ್ಕೆ ಸೈ- ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ಅಂತ ಮುಂದುವರಿಸ್ಬಹುದು’.

‘ಹುಲ್ಲಿನ ಮಧ್ಯೆ ಸೈಕಲ್ ಎಲ್ಲಿಂದ ಬಂತು?’

‘ಸೈಕಲ್‌ನೋರೂ ಕೃಷ್ಣ ಪರಮಾತ್ಮನ ಕಾಲದಲ್ಲಿ ಹುಲ್ಲು ಮೇಯಿಸಿದೋರೇ! ಪಾಪ! ಹೋದ್ಸಾರಿನೂ ರಾಹುಲ್ ಹೊತ್ತು ಪಂಕ್ಚರಾಗೋಯ್ತು’.

‘ಮೇಯಿಸೋದು ಬಿಟ್ಟು ತಾವೇ ಹುಲ್ಲು ಮೇದೋರು ಜೈಲಲ್ಲಿ ಇಲ್ದಿದ್ರೆ ಸೈಕಲ್‌ಗೆ ಬ್ಲೋ ಹೊಡೀತಿದ್ರೇನೋ?’

‘ಆನೆ ಮೇದಿದ್ರೆ ಇಷ್ಟೆಲ್ಲಾ ಸಮಸ್ಯೆ ಇರ್ಲಿಲ್ಲ, ಅದು ಯಾಕೋ ಜೊಂಡು ತಿಂದ್ಕೊಂಡು ಹುಲ್ ಮೇಯ್ಲಿಲ್ಲ, ಕಾಂಗ್ರೆಸ್ ಕಳೆ ಜಾಸ್ತಿಯಾಗಿ ಕೊಳೆತು ಕಮಲ ಕೆಸರಲ್ಲೇ ಅರಳಿಬಿಡ್ತು’.

‘ಆದ್ರೂ ಕಾಂಗ್ರೆಸ್‌ಗೂ ಹುಲ್ಲಿಗೂ ಎಲ್ಲಿಗೆಲ್ಲಿಯ ಸಂಬಂಧ?’

‘ರಾ-ಹುಲ್‌ನಲ್ಲೇ ಹುಲ್ಲು ಇದ್ಯಲ್ಲ. ಅದು ರಾ ಅಂದ್ರೆ ಒಣಗಿ ಹೋಯ್ತು ಅಷ್ಟೇ’.

‘ಒಟ್ನಲ್ಲಿ ಅಣುರೇಣು ತೃಣಕಾಷ್ಠ ಪರಿಪೂರ್ಣ ಗೋವಿಂದ’.

‘ಹೂವ ತರುವವರ ಮನೆಗೆ ಹುಲ್ಲ ತರುವ’ ಅನ್ನೋದು ಅರ್ಥ ಆಗಿದ್ರೆ ಮಿಕ್ಕೋರು ಗೋವಿಂದನೇ ಎಂದು ಪರ್ಮೇಶಿ ಪಂಚೆ ಕೊಡವಿ ಮೇಲೆದ್ದ.

ಸಂಗತ

ನೆಲೆಯಿಲ್ಲದೆ ಹೊರಟಿದೆ ಜೀವಸೌಂದರ್ಯ

ಸೋಲುತ್ತ ನರಳಾಡುತ್ತಿರುವ ಉಕ್ರೇನಿಯನ್ನರ ಸಂತಾಪ ಕೇಳುವವರು ಯಾರೂ ಇಲ್ಲದಿರುವುದು ಈ ವಿಶ್ವದ ದುರಂತ

• ಡಾ. ಜಿ.ಕೃಷ್ಣಪ್ಪ

ಕುವೆಂಪು ಅವರು ‘ಶ್ಮಶಾನ ಕುರುಕ್ಷೇತ್ರಂ’ (1931) ನಾಟಕದ ಪ್ರಾರಂಭದ ಟಿಪ್ಪಣಿಯಲ್ಲಿ, ‘ಒಂದೊಂದು ಯುದ್ಧವೂ ಪ್ರಾರಂಭವಾಗುವಾಗ ಅದು ಯುದ್ಧವನ್ನೆ ಕೊನೆಗಾಣಿಸುವ ಜಗತ್ತಿನ ಕೊನೆಯ ಅನಿವಾರ್ಯ ಸಂಕಟವೆಂದು ಸಾರುತ್ತೇವೆ’ ಎಂದು ಬರೆದಿದ್ದಾರೆ. ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಉಕ್ರೇನ್ ಮೇಲೆ ನಡೆಸುತ್ತಿರುವ ಭೀಕರ ಯುದ್ಧವೂ ಇದೇ ಅರ್ಥವನ್ನು ಹೊಮ್ಮಿಸುತ್ತಿದೆ.

ತಮ್ಮದು ವಿಶೇಷ ಬಗೆಯ ಸ್ವರಕ್ಷಣೆ ಎಂದು ಹೇಳಿಕೊಂಡು ಇಡೀ ವಿಶ್ವವನ್ನೇ ಎದುರು ಹಾಕಿಕೊಂಡಿರುವ ರಷ್ಯಾ ಮಾಡುತ್ತಿರುವುದನ್ನು ನೋಡಿದರೆ, ವಿಶ್ವಮಾನವ ಚಿಂತಕ ಕುವೆಂಪು ಅವರು ಹೇಳಿರುವಂತೆ, ‘ವಿಶೇಷತೆಗಾಗಿ ಸಾಮಾನ್ಯರ ಆಹುತಿ. ಸಂಸ್ಕೃತಿ ನಾಗರಿಕತೆ ಪ್ರಗತಿ ಎಲ್ಲ ಶ್ಮಶಾನ ರುದ್ರನ ಮೆಯ್ಗೆ ಭಸ್ಮ ಲೇಪನವಾಗುತ್ತದೆ’ ಎನ್ನುವುದು ನಮ್ಮ ಕಣ್ಮುಂದೆ ಟಿ.ವಿ. ಪರದೆಯ ಮೇಲೆ ಕಾಣುತ್ತಿದೆ.

ಮಹಾಭಾರತ ಯುದ್ಧ ಸಂಗ್ರಾಮ ಪೂರ್ಣವಾಗಿ ಕೊನೆಗೊಂಡ ದಿನದ ಘೋರ ವಿಷಣ್ಣ ರಾತ್ರಿಯಲ್ಲಿ ನಿಂತು ನೊಂದು ದ್ವಾಪರ ನುಡಿಯುತ್ತಾನೆ:

‘ಕಾಳೆಗದ ನೆಲಗಳೆನೆ ಬಿತ್ತರದ ಮಸಣಗಳ್!
ಕಾಳೆಗವೊ ಬಿತ್ತರದ ಕೊಲೆಗೆಯ್ಮೆ! ಗೆಲವೆಂದರೇನ್?
ಸೋಲ್ವರ ಸಂತಾಪಂ; ವಿಜಯಿಗಳ ಪೆರ್ಮೆ!’

ರಷ್ಯಾ- ಉಕ್ರೇನ್ ಯುದ್ಧ ಅಂತಹ ಅತಿ ಭೀಕರ ಭಯಾನಕ ಕೊಲೆಗಡುಕತನವಾಗಿದೆ. ರಷ್ಯಾವು ಉಕ್ರೇನ್ ನಗರದ ಗಗನಚುಂಬಿ ಅಪಾರ್ಟ್‌ಮೆಂಟ್‌ಗಳು, ಸುಂದರ ಕಟ್ಟಡಗಳು, ಶಾಲೆ, ಆಸ್ಪತ್ರೆ, ಶಿಶುವಿಹಾರ, ಜನವಸತಿ, ಸೇನಾ ಶಿಬಿರಗಳ ಮೇಲೆ ಬಾಂಬ್, ಕ್ಷಿಪಣಿ, ಶೆಲ್ ದಾಳಿ ನಡೆಸುತ್ತಿದೆ. ವಿಮಾನಗಳು ಬಾಂಬ್ ದಾಳಿ ನಡೆಸುತ್ತಿವೆ. ಯುದ್ಧದ ಬೆಂಕಿಯ ಕೆನ್ನಾಲಿಗೆಯಲ್ಲಿ ಉಕ್ರೇನ್‌ನ ಪ್ರಮುಖ ನಗರಗಳಾದ ಕೀವ್, ಸುಮಿ, ಮರಿಯುಪೋಲ್, ಹಾರ್ಕಿವ್, ಒಡೆಸ್ಸಾ, ಕ್ರಿಮಿಯಾ, ಉಪನಗರಗಳಾದ ಇರ್ಪಿನ್, ಬುಕಾ ಹೊತ್ತಿ ಉರಿಯುತ್ತಿವೆ. ಲಕ್ಷಾಂತರ ನಾಗರಿಕರು ಆ ಬೆಂಕಿಯ ಝಳದಲ್ಲಿ ಸಿಲುಕಿ ಬೇಯುತ್ತಿದ್ದಾರೆ. ಜೀವ ಉಳಿಸಿಕೊಳ್ಳಲು ಹರಸಾಹಸ ಪಡುತ್ತಿದ್ದಾರೆ. ಹೀಗೆ ಸೋಲುತ್ತ ನರಳಾಡುತ್ತಿರುವವರ ಸಂತಾಪ ಕೇಳುವವರು ಯಾರೂ ಇಲ್ಲದಿರುವುದು ಈ ವಿಶ್ವದ ದುರಂತ.

ದಾಳಿ, ಪ್ರತಿದಾಳಿಯ ಕಾರಣ ರಸ್ತೆ ರಸ್ತೆಯಲ್ಲಿ ಹೆಣಗಳ ರಾಶಿ, ಸಾಮೂಹಿಕ ಅಂತ್ಯಕ್ರಿಯೆಗೆ ದೊಡ್ಡ ಗುಂಡಿಗಳು, ಅವಕ್ಕೆ ಹೆಣಗಳನ್ನು ತಳ್ಳುವ ರೀತಿ ಕಂಡಾಗ, ‘ಮನುಷ್ಯ ಜನ್ಮದ ಬೆಲೆ ಇಷ್ಟೆಯೇ’ ಎನಿಸಿ ಘೋರ ಭಯ ಆವರಿಸುತ್ತದೆ. ಅಲ್ಲಿ ಕುವೆಂಪು ಹೇಳಿರುವಂತೆ ನಾಶವೇ ವಿಕಟಾಟ್ಟಹಾಸದಿಂದ ನಗುತ್ತಿದೆ.

‘ಏನ್ ರೌದ್ರಮೇನ್ ಕ್ರೂರಮೇನ್ ದುಃಖಮಯ ದೃಶ್ಯಂ! ದಿಟ್ಟಿಪರಿವನ್ನೆವರಂ ಎತ್ತ ನೋಡಿದೊಡತ್ತ ನಾಶಮೇ ನಗುತಿಹುದು ವಿಕಟಾಟ್ಟಹಾಸದಿಂ!’

20 ಲಕ್ಷಕ್ಕಿಂತ ಹೆಚ್ಚು ಜನ ಉಕ್ರೇನಿಯನ್ನರು ತಮ್ಮ ಜೀವನದ ಸುಖಸಂಪತ್ತು, ಸಮಾಧಾನದ ಸ್ವರ್ಗ ನೆಲೆಯನ್ನು ಬಿಟ್ಟು ನಿರಾಶ್ರಿತರಾಗಿ ಸಾಲು ಸಾಲಾಗಿ ಸಾಗುತ್ತಿದ್ದಾರೆ. ಅವರಲ್ಲಿ ಹಸಿಬಾಣಂತಿ ಹಸುಗೂಸಿನೊಂದಿಗೆ, ನಡೆಯಲಾಗದ ವೃದ್ಧರು ಗಾಲಿ ಕುರ್ಚಿಗಳಲ್ಲಿ ಬೇರೆ ದೇಶದ ಆಸರೆ ಅರಸಿ ಹೋಗುತ್ತಿದ್ದಾರೆ. ಎರಡನೇ ಮಹಾಯುದ್ಧದ ನಂತರ ಯುರೋಪ್ ರಾಷ್ಟ್ರಗಳಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ನಿರಾಶ್ರಿತರಾಗಿರುವುದು ಇದೇ ಮೊದಲು.

ನಿರಾಶೆಯಿಂದ ಹೋಗುತ್ತಿರುವವರನ್ನು ನೋಡಿದರೆ ಉಕ್ರೇನ್‌ನ ಜೀವಸೌಂದರ್ಯವೇ ದೇಶಬಿಟ್ಟು ಹೋಗುತ್ತಿರುವಂತೆ ಕಾಣುತ್ತದೆ. ಹಾಗೆ ದೇಶ ಬಿಟ್ಟು ಹೋದವರಲ್ಲಿ ಮಾಜಿ ‘ಮಿಸ್ ಉಕ್ರೇನ್’ ವೆರೊನಿಕಾ ದಿಡುಸೆಂಕೊ ಒಬ್ಬರಾಗಿದ್ದಾರೆ. ಅವರೆಲ್ಲ ಧುತ್ತನೆ ಎದುರಾದ ಯುದ್ಧದ ಭೀಕರತೆಗೆ ನಡುಗಿ ಮೂಕರಾಗಿ ಹೋಗಿದ್ದಾರೆ. ಅವರು ಹಿಂತಿರುಗಿ ತಮ್ಮ ನಾಡನ್ನು ನೋಡುವಾಗ ಈ ಭಯಂಕರ ಘೋರ ಸರ್ವನಾಶಕ ಯುದ್ಧದಿಂದ–

‘ಎನಿತೆನಿತೊ ಬರಿಸಗಳ ಗೆಯ್ಮೆಯಿಂ ಗಳಿಸಿರ್ದ ಸಂಸ್ಕೃತಿಯ ಚೆಲ್ವಿಕೆ ತುತ್ತತುದಿಯಲಿ ಪುಚ್ಚಳಿದು ಪೋಯ್ತೆ?’

ಎಂದು ನಿಟ್ಟುಸಿರು ಬಿಡುತ್ತಿದ್ದಾರೆ. ತಮ್ಮ ಪೂರ್ವಜರ ದುಡಿಮೆಯ, ಪರಿಣತಿಯ, ಸಂಸ್ಕೃತಿ ಬೀರುವ ವಿಶಾಲ ರಸ್ತೆಗಳು, ಭವ್ಯ ಕಟ್ಟಡಗಳು, ಮನೋಹರ ಉದ್ಯಾನಗಳು, ಚೌಕಗಳು– ರೆಕ್ಕೆಗಳು- ಉದುರಿದ ಪಕ್ಷಿಯಂತೆ ಅಳಿದು ಹೋಗುತ್ತಿರುವುದಕ್ಕೆ ದುಃಖಿತರಾಗಿದ್ದಾರೆ. ಅವರಿಗೆ ತಮ್ಮ ಹುಟ್ಟೂರು ‘ಪಾಳ್ಗೊಲೆಗಳ ನೆಲೆ’ಯಂತೆ ಆಗಿರುವುದಕ್ಕೆ ನಿಟ್ಟುಸಿರು ಹೊಮ್ಮಿ ಬರುತ್ತಿದೆ.

ತಮ್ಮ ತಮ್ಮ ದೇಶದ ಹಿತ ಕಾಯ್ದುಕೊಳ್ಳುತ್ತ ಯುದ್ಧದ ಬಿಸಿಯಲ್ಲಿ ಮೈಕಾಯಿಸಿಕೊಳ್ಳುವ ಅಮೆರಿಕ, ಬ್ರಿಟನ್, ಜರ್ಮನಿ ಮುಂತಾದ ನ್ಯಾಟೊ ದೇಶಗಳು ಸುರಕ್ಷಿತವಾಗಿವೆ. ಇದನ್ನು ನೋಡಿದಾಗ ಕುವೆಂಪು ಹೇಳಿದಂತೆ ‘ಮೆಲ್ಪತೆಯ ಎದೆಯಲ್ಲಿ ಎಷ್ಟೊಂದು ಒಳಗತೆಗಳು ಆಡುತ್ತಿವೆ’ ಎಂದು ಆಶ್ಚರ್ಯವಾಗುತ್ತದೆ!

ಕಾಣಲಾಗದ ಕ್ರೂರ ಕೊರೊನಾ ವೈರಸ್‌ಗೆ ವಿಶ್ವ ನಲುಗಿ ಹೋಗಿ ಆರ್ಥಿಕ ವ್ಯವಸ್ಥೆ ಕುಸಿಯಿತು. ಅದರಿಂದ ಅಂದಂದು ದುಡಿದು ತಿನ್ನುವ ಜನಸಾಮಾನ್ಯರ ಬದುಕು-ಬಾಂಧವರ ಸಾವಿನಿಂದ, ಕೆಲಸವಿಲ್ಲದ ಕಾರಣದಿಂದ ಮೂರಾಬಟ್ಟೆಯಾಯಿತು. ಆದರೆ ಈಗ ಉರಿವ ಒಡಲ ಹಸಿವಿನ ಬೆಂಕಿಗೆ ತುಪ್ಪ ಸುರಿದಂತೆ ರಷ್ಯಾದ ಮುಖ್ಯಸ್ಥ ಅಧಿಕಾರ ಸ್ವಾಮ್ಯದ ದಾಹದಿಂದ ಯುದ್ಧ ಹೂಡಿದ್ದಾನೆ. ಅದರಿಂದ ವಿಶ್ವದಲ್ಲಿ ಹಣದುಬ್ಬರದಿಂದ ಆರ್ಥಿಕ ಬಿಕ್ಕಟ್ಟು ಉಂಟಾಗುತ್ತಿದೆ. ಅದು ಈ ಜಗದ ಶ್ರೀಸಾಮಾನ್ಯರನ್ನು ನೆಲಕಚ್ಚುವಂತೆ ಮಾಡುತ್ತಿದೆ. ಈ ಯುದ್ಧ ರಕ್ತದಾಹ ಅವರನ್ನು ಬೆಚ್ಚಿ ಬೀಳಿಸುತ್ತಿದೆ.

ವಾಚಕರ ವಾಣಿ

ಎಲ್ಲರೂ ಕಾರಣರಾದಾಗ ಕೆಸರೆರಚಾಟವೇಕೆ?

ಇದೀಗ ದೇಶದಾದ್ಯಂತ ಸುದ್ದಿ ಮಾಡಿರುವ ‘ದಿ ಕಾಶ್ಮೀರ್ ಫೈಲ್ಸ್’ ಚಲನಚಿತ್ರದ ಪ್ರಮುಖ ವಿಷಯವಾದ ಪಂಡಿತರ ಮಾರಣಹೋಮ ಅಥವಾ ಸಾಮೂಹಿಕ ಪಲಾಯನದ ಬಗ್ಗೆ ಪ್ರಮುಖ ರಾಜಕೀಯ ಪಕ್ಷಗಳು ಕೆಸರೆರಚಾಟ ಮಾಡುತ್ತಿವೆ. ವಾಸ್ತವದಲ್ಲಿ ಇಂತಹ ದುರದೃಷ್ಟಕರ ಬೆಳವಣಿಗೆಯನ್ನು ತಡೆಯುವಲ್ಲಿ ದೇಶದ ಎಲ್ಲ ರಾಜಕೀಯ ಪಕ್ಷಗಳೂ ವಿಫಲವಾದ ಸಂಗತಿಯನ್ನು ಮರೆಯುವಂತಿಲ್ಲ.

ಈ ಘಟನೆ ನಡೆದದ್ದು 1990ರ ಜನವರಿಯಲ್ಲಿ. ಆಗ ದೇಶದ ಪ್ರಧಾನಿ ವಿ.ಪಿ.ಸಿಂಗ್, ಸಮ್ಮಿಶ್ರ ಸರ್ಕಾರದ ಆಡಳಿತ. ಈ ಸರ್ಕಾರಕ್ಕೆ ಬಿಜೆಪಿ ಹಾಗೂ ಎಡಪಕ್ಷಗಳು ಬಾಹ್ಯ ಬೆಂಬಲ ನೀಡಿದ್ದವು. ಜಮ್ಮು ಕಾಶ್ಮೀರದಲ್ಲಿ ಫಾರೂಕ್ ಅಬ್ದುಲ್ಲಾ ರಾಜೀನಾಮೆ ನೀಡಿದ್ದರು. ಜಗನ್ಮೋಹನ್ ಅವರು ರಾಜ್ಯಪಾಲರಾಗಿದ್ದರು. ಮುಫ್ತಿ ಮೊಹಮ್ಮದ್ ಅವರು ಗೃಹಮಂತ್ರಿ. ಆದರೆ ಈ ಘಟನೆ ಏಕಾಏಕಿ ನಡೆಯಲು ಸಾಧ್ಯವೇ? ಇಂತಹ ದೊಡ್ಡ ಮಟ್ಟದ ಘಟನೆಗೆ ಪೂರ್ವಸಿದ್ಧತೆ ನಡೆಯುತ್ತಿದ್ದಾಗ ಪ್ರಧಾನಿಯಾಗಿದ್ದವರು ರಾಜೀವ್ ಗಾಂಧಿ. ಫಾರೂಕ್ ಅಬ್ದುಲ್ಲಾ ಅವರು ಜಮ್ಮು ಕಾಶ್ಮೀರದ ಮುಖ್ಯಮಂತ್ರಿ. ಈ ಹಿನ್ನೆಲೆಯಲ್ಲಿ ನೋಡಿದಾಗ, ಈ ಮಾರಣಹೋಮದ ಹೊಣೆಗಾರಿಕೆಯನ್ನು ಎಲ್ಲ ರಾಜಕೀಯ ಪಕ್ಷಗಳೂ ವಹಿಸಬೇಕು. ಬೈಬಲ್‌ನಲ್ಲಿ, ವೇಶ್ಯೆಯೊಬ್ಬಳನ್ನು ಕಲ್ಲುಗಳಿಂದ ಹೊಡೆಯಲು ಬಂದ ಜನರಿಗೆ ‘ನಿಮ್ಮಲ್ಲಿ ಒಂದೂ ಪಾಪ ಮಾಡದವರು ಕಲ್ಲು ಕೈಗೆತ್ತಿಕೊಳ್ಳಿ’ ಎಂದು ಏಸು ಹೇಳಿದಾಗ, ಅಲ್ಲಿ ಸೇರಿದ್ದ ಎಲ್ಲ ಜನರ ಕೈಗಳಿಂದ ಕಲ್ಲುಗಳು ಕೆಳಗೆ ಬೀಳುತ್ತವೆ. ಅದೇ ರೀತಿ ಈ ಮಾರಣಹೋಮ ತಡೆಯುವಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ವಿಫಲವಾದ ಕಾರಣ, ಈ ವಿಚಾರವಾಗಿ ಕೆಸರೆರಚಾಟ ಮಾಡುತ್ತಿರುವುದು ಅರ್ಥಹೀನ. ಅಸಹಾಯಕ ಸ್ಥಿತಿಯಲ್ಲಿ ತಮ್ಮ ಊರು, ಮನೆ ಮಠ ತೊರೆದು ಬಂದ ಕಾಶ್ಮೀರಿ ಪಂಡಿತರ ಪುನರ್ವಸತಿಯ ಬಗ್ಗೆ ಆಗಿರುವ ಬೆಳವಣಿಗೆ, ಅವರ ಸದ್ಯದ ಸ್ಥಿತಿಗತಿಗಳ ಬಗ್ಗೆ ನಾವೆಲ್ಲ ಸರ್ಕಾರವನ್ನು ಪ್ರಶ್ನಿಸಬೇಕಾಗಿರುವುದು ಈಗ ಮಾಡಬೇಕಾದ ಕೆಲಸ.

ಡಾ. ಟಿ.ಜಯರಾಂ, ಕೋಲಾರ

ತೆಲಂಗಾಣ ಸರ್ಕಾರದ ಶ್ಲಾಘನೀಯ ನಡೆ

ಉಕ್ರೇನ್‌ನಿಂದ ಮರಳಿರುವ ತಮ್ಮ ರಾಜ್ಯದ ವೈದ್ಯಕೀಯ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ, ಅವರೆಲ್ಲರ ವಿದ್ಯಾಭ್ಯಾಸದ ವೆಚ್ಚವನ್ನು ಸರ್ಕಾರವೇ ಭರಿಸುವುದರ ಜೊತೆಗೆ ಇಲ್ಲೇ ವೈದ್ಯಕೀಯ ಅಧ್ಯಯನಕ್ಕೆ ಅವಕಾಶ ಮಾಡಿಕೊಡುವುದಾಗಿ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರು ಘೋಷಣೆ ಮಾಡಿರುವುದು ಶ್ಲಾಘನೀಯ. ದೇಶದ ಇತರ ರಾಜ್ಯಗಳೂ ತಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಇದೇ ರೀತಿಯ ಸೌಲಭ್ಯ ಕಲ್ಪಿಸಿ ಅವರ ಭವಿಷ್ಯವನ್ನು ಉತ್ತಮವಾಗಿ ರೂಪಿಸಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಪ್ರಮಾಣಪತ್ರಕ್ಕೆ ಬೆಲೆ ಇಲ್ಲವೇ?

ಕೋವಿಡ್ ಲಸಿಕೆ ಪಡೆಯುವುದನ್ನು ಕಡ್ಡಾಯಗೊಳಿಸಿಲ್ಲವೆಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸುತ್ತದೆ. ಆದರೆ ಸರ್ಕಾರ ಹೊರಡಿಸುವ ಅನೇಕ ಆದೇಶಗಳಲ್ಲಿ, ಕೋವಿಡ್ ಲಸಿಕೆ ಪಡೆಯದಿದ್ದರೆ ವಿವಿಧ ಸ್ಥಳಗಳಿಗೆ ಪ್ರವೇಶವನ್ನು ನಿಷೇಧಿಸಲಾಗಿರುತ್ತದೆ. ಬಹುತೇಕ ಕಡೆ ಇಂತಹ ದ್ವಂದ್ವ ನಿಲುವುಗಳನ್ನು ಕಾಣುತ್ತೇವೆ. ನುಡಿದಂತೆ ನಡೆದಲ್ಲಿ ಗೊಂದಲಗಳಿಗೆ ಎಡೆ ಇರುವುದಿಲ್ಲ.

ಚನ್ನು ಹಿರೇಮಠ, ರಾಣೆಬೆನ್ನೂರು

ನೇಮಕಾತಿ ಪರೀಕ್ಷೆ: ಪಾಠ ಕಲಿಯುವರೇ?

ಗಂಭೀರವಾಗಿ ಪರಿಗಣಿಸಿ ರಾಜ್ಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಆರು ವರ್ಷಗಳ ನಂತರ ನೇಮಕಾತಿ ನಡೆಯುತ್ತಿದೆ. ಅದಕ್ಕಾಗಿ ಅಭ್ಯರ್ಥಿಗಳು ಬಹುನಿರೀಕ್ಷೆಯಿಂದ ಕಾಯುತ್ತಿದ್ದರು. ಆದರೆ ಸರ್ಕಾರ ಮಾತ್ರ ನೇಮಕಾತಿಯನ್ನು ತರಾತುರಿಯಲ್ಲಿ ನಡೆಸುತ್ತಿರುವುದು ಅಭ್ಯರ್ಥಿಗಳಲ್ಲಿ ಆತಂಕ ಉಂಟುಮಾಡಿದೆ. ಇಂತಹ ಉನ್ನತ ಮಟ್ಟದ ಹುದ್ದೆಯ ಪರೀಕ್ಷೆಗಳಿಗೆ ಅದನ್ನು ನಡೆಸುವ ಪ್ರಾಧಿಕಾರ ಸಂಸ್ಥೆಗಳು ಸಹ ಸರಿಯಾಗಿ ಸಿದ್ಧಗೊಂಡಿದ್ದರೆ ಮಾತ್ರ ಉತ್ತಮ ಗುಣಮಟ್ಟದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಾಧ್ಯ. ಆದರೆ ಈಗ ಪಠ್ಯಕ್ರಮಕ್ಕೆ ತಕ್ಕಂತೆ ಪ್ರಶ್ನೆಪತ್ರಿಕೆಯನ್ನು ಸಿದ್ಧ ಮಾಡುವುದಿರಲಿ, ಕನಿಷ್ಠ ಅಕ್ಷರ ದೋಷಗಳಿರದ ಪ್ರಶ್ನೆಪತ್ರಿಕೆಗಳನ್ನು ನೀಡುವಲ್ಲಿಯೂ ಎಡವಿರುವುದು ವಿಪರ್ಯಾಸ. ಇದರಿಂದ ಇಂತಹ ಉನ್ನತ ಹುದ್ದೆಯ ನೇಮಕಾತಿ ಪರೀಕ್ಷೆಯನ್ನು ಪರೀಕ್ಷಾ ಪ್ರಾಧಿಕಾರ ಎಷ್ಟು ಗಂಭೀರವಾಗಿ ಪರಿಗಣಿಸಿದೆ ಎಂಬುದು ತಿಳಿಯುತ್ತದೆ. ಈಗಲಾದರೂ ಪಾಠ ಕಲಿತು, ಮುಂಬರುವ ಸಾಲುಸಾಲು ಪರೀಕ್ಷೆಗಳನ್ನು ಪ್ರಾಧಿಕಾರವು ಹೊಣೆಯರಿತು ನಡೆಸುವಂತಾಗಲಿ. ಭವಿಷ್ಯದ ಬಗ್ಗೆ ಅಸ್ಥಿರತೆಯನ್ನು ಎದುರಿಸುತ್ತಿರುವ ಉದ್ಯೋಗಾಕಾಂಕ್ಷಿಗಳಿಗೆ ನ್ಯಾಯ ದೊರಕುವಂತಾಗಲಿ.

ಡಾ. ಅರ್ಚನಾ ಆರ್., ಬೆಂಗಳೂರು

‘ಶಾಪಗ್ರಸ್ತ ಗಂಧರ್ವ’ ಮೇಲ್ದರ್ಜೆಗೇರಲಿ

ಬೆಂಗಳೂರು, ಮಾಗಡಿ ದೊರೆ ಕೆಂಪೇಗೌಡರ ಕನಸಿನ ಕೂಸಾಗಿತ್ತು ಎಂಬುದು ಗೊತ್ತಿರುವ ಸಂಗತಿ. ‘ಬೆಂದಕಾಳೂರು’ ಈ ಮಟ್ಟಕ್ಕೆ ಬೆಳೆದು ನಿಲ್ಲಲು ಕೆಂಪೇಗೌಡರ ದೂರದೃಷ್ಟಿ ಎಷ್ಟಿತ್ತು ಎಂಬುದು ಬಹುಶಃ ಇಂದಿನ ಯುವಜನರಿಗೆ ಗೊತ್ತಿರಲಿಕ್ಕಿಲ್ಲ. ಆದರೆ, ಇಡೀ ರಾಜ್ಯಕ್ಕೇ ಮಾದರಿ ಪಟ್ಟಣವಾಗಿ ರೂಪುಗೊಳ್ಳಬೇಕಿದ್ದ ರಾಮನಗರ ಜಿಲ್ಲೆಯ ಈ ಪ್ರಮುಖ ತಾಲ್ಲೂಕು ಕೇಂದ್ರವು ರಾಜಧಾನಿಗೆ ಸನಿಹದಲ್ಲಿದ್ದರೂ ಉತ್ತಮ ರಸ್ತೆ, ಒಳಚರಂಡಿ, ಪಾದಚಾರಿ ಮಾರ್ಗಗಳಿಲ್ಲದೆ ಹೋಬಳಿ ಕೇಂದ್ರಕ್ಕಿಂತಲೂ ಕಡೆಯಾಗಿದೆ.

ಹೇಳಿ ಕೇಳಿ ರಾಮನಗರ ಜಿಲ್ಲೆಯು ಜೆಡಿಎಸ್ ನಾಯಕರಾದ ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ, ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಂಥವರಿಗೆ ಅನೇಕ ಬಾರಿ ಮರುಹುಟ್ಟು ನೀಡಿದೆ. ಇಂಥ ಜಿಲ್ಲೆಯ ಈ ಐತಿಹಾಸಿಕ ಪ್ರದೇಶವನ್ನು ಅತ್ಯದ್ಭುತ ಪ್ರವಾಸಿ ತಾಣವಾಗಿ ಮಾರ್ಪಡಿಸುವ ಎಲ್ಲ ಅವಕಾಶಗಳಿದ್ದರೂ ಇದೊಂದು ‘ಶಾಪಗ್ರಸ್ತ ಗಂಧರ್ವ’ನಂತೆ ಗೋಚರಿಸುತ್ತದೆ. ಶಿಥಿಲಾವಸ್ಥೆಯಲ್ಲಿರುವ ಕೆಂಪೇಗೌಡರ ಕೋಟೆ, ಜೊಂಡು ಬೆಳೆದು ನಿಂತಿರುವ ಕೆರೆ ಕಟ್ಟೆಗಳು, ಸ್ವಚ್ಛತೆ ಇಲ್ಲದ ಬೀದಿಗಳು ಬೇಸರ ತರಿಸುತ್ತವೆ. ಜನಪ್ರತಿನಿಧಿಗಳು ಈಗಲಾದರೂ ಈ ಬಗ್ಗೆ ಗಮನಹರಿಸಿ ಕೆಂಪೇಗೌಡರ ಹುಟ್ಟೂರನ್ನು ಮೇಲ್ದರ್ಜೆಗೇರಿಸಲು ಮುಂದಾಗಲಿ.

ನಂದೀಶ್ ದುಗಡಿಹಳ್ಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎಂದಿಗೂ ಮಾಸದ ರಾಜರತ್ನ

ಅವರ ಪಥದಲ್ಲಿ ನಮ್ಮ ಹೆಜ್ಜೆ

• ಅಶ್ವಿನಿ ಪುನೀತ್ ರಾಜ್‌ಕುಮಾರ್

ಅಪ್ಪು ಅವರ ಅಗಲಿಕೆಯ ನೋವು ನಮ್ಮ ಕುಟುಂಬದ ಪಾಲಿಗೆ ಅನಂತವಾದುದು. ಅದಕ್ಕೆ ಎಂದಿಗೂ ಕೊನೆಯಿಲ್ಲ. ಹೌದು, ಅವರ ಆಲೋಚನೆಗಳೇ ಭಿನ್ನ. ತುಂಬಾ ತಾಳ್ಮೆಯ, ವಿನಮ್ರವಾದ ವ್ಯಕ್ತಿತ್ವ ಅವರದ್ದು. ಅವರ ಬದುಕಿನಿಂದ ಕಲಿಯುವುದು ತುಂಬಾ ಇದೆ. ವೈಯಕ್ತಿಕ ಹಾಗೂ ಸಾರ್ವಜನಿಕ ಬದುಕು ಎರಡರಿಂದಲೂ ನಾವು ಸಾಕಷ್ಟು ತಿಳಿಯಬೇಕು, ಕಲಿಯಬೇಕು. ಇನ್ನೂ ಎಷ್ಟೋ ವಿಚಾರಗಳು ಇವೆ. ಅವೆಲ್ಲವನ್ನೂ ನನ್ನೊಳಗೆ ಇಟ್ಟುಕೊಂಡಿದ್ದೇನೆ.

ಅಪ್ಪು ಮೇಲಿನ ಅಭಿಮಾನವನ್ನು ನೋಡುವಾಗ ಮನಸ್ಸು, ಹೃದಯ ತುಂಬಿ ಬರುತ್ತದೆ. ನಮ್ಮ ದುಃಖದಲ್ಲಿ ನಾಡೂ ಭಾಗಿಯಾಯಿತು. ಮುಂದೆ ಅಭಿಮಾನಿಗಳದ್ದು ತೆರೆ ಮೀರಿದ, ಮೇರೆ ಮೀರಿದ ಅಭಿಮಾನ. ಅಪ್ಪು ಅವರ ಆದರ್ಶವನ್ನು ಅವರೂ ಆಚರಿಸಿದರು. ನೀವೆಲ್ಲ ನೋಡಿದ್ದೀರಲ್ಲ, ರಕ್ತದಾನ, ನೇತ್ರದಾನ, ಅನ್ನದಾನ ಒಂದಾ ಎರಡಾ... ನನಗೆ ಮಾತೇ ಹೊರಡುತ್ತಿಲ್ಲ. ಮನಸ್ಸು ಅಷ್ಟು ಆರ್ದ್ರವಾಗಿಬಿಟ್ಟಿದೆ. ಅವರಿಗೆಲ್ಲ ಕೃತಜ್ಞಳಾಗಿದ್ದೇನೆ.

ಆದರೇನು ಮಾಡಲಿ, ನಾವಿನ್ನೂ ಅವರ ಅಗಲಿಕೆಯ ದುಃಖದಿಂದ ಹೊರಬಂದಿಲ್ಲ. ಹಾಗಾಗಿ ಯಾವುದೇ ಸಂಭ್ರಮವನ್ನು ಸ್ವೀಕರಿಸಲಾಗುತ್ತಿಲ್ಲ.

ಹೊಸಬರಿಗೆ ಅವಕಾಶ ಕೊಡಬೇಕು, ಬೇರೆ ಬೇರೆ ಸಿನಿಮಾ ಮಾಡಬೇಕು. ಸಿನಿಮಾ ಕ್ಷೇತ್ರದ ಎಲ್ಲ ವಿಭಾಗಗಳಲ್ಲಿಯೂ ಹೊಸಬರಿಗೆ ಅವಕಾಶ ಕೊಡಬೇಕು ಎಂಬುದು ಅಪ್ಪು ಅವರ ಕನಸಾಗಿತ್ತು. ಅದರಂತೆ ಪಿಆರ್‌ಕೆ ಸ್ಟುಡಿಯೋಸ್ ನಡೆದುಕೊಂಡು ಬಂದಿದೆ. ಆ ಗುರಿಯತ್ತ ಮುಂದೆಯೂ ದಾಪುಗಾಲು ಹಾಕಿ ನಡೆಯುತ್ತೇವೆ. ಮುಂದಿನ ಏಪ್ರಿಲ್‌ನಲ್ಲಿ ಮಹಿಳಾ ಯುವ ನಿರ್ದೇಶಕರೊಬ್ಬರ ನೇತೃತ್ವದಲ್ಲಿ 'ಆಚಾರ್ ಎನ್‌ಕೋ' ಎಂಬ ಹೊಸ ಚಿತ್ರವೊಂದು ನಿರ್ಮಾಣವಾಗಲಿದೆ. ಮಾತ್ರವಲ್ಲ, ಇನ್ನೂ ಹೊಸ ಕಥೆಗಳನ್ನು ಕೇಳುತ್ತಿದ್ದೇವೆ. ಸರಿಯೆನಿಸಿದ್ದನ್ನು ನಿರ್ಮಿಸುತ್ತೇವೆ.

ನನಗೆ ಚಿತ್ರರಂಗ ಹೊಸದಲ್ಲ. ಆದರೆ ನಾನು ಮುನ್ನೆಲೆಗೆ ಬಂದವಳಲ್ಲ ಅಷ್ಟೇ. ತೆರೆಮರೆಯಲ್ಲೇ ಇದ್ದೆ. 2016ರಲ್ಲಿ ಪಿಆರ್‌ಕೆ ಆಡಿಯೊ, 2017ರಲ್ಲಿ ಪಿಆರ್‌ಕೆ ಪ್ರೊಡಕ್ಷನ್ಸ್ ಆರಂಭವಾಯಿತು. ಈ ಸಂಸ್ಥೆಯಲ್ಲಿ ಮೊದಲ ದಿನದಿಂದಲೇ ಸಕ್ರಿಯಳಾಗಿದ್ದೆ. ಅಂದಿನಿಂದಲೂ ಕಲಿಯುತ್ತಲೇ ಬಂದಿದ್ದೇನೆ. ಹಾಗಾಗಿ ಈ ಕ್ಷೇತ್ರದ ಒಳಹೊರಗುಗಳು ಗೊತ್ತಿವೆ. ಮುಖ್ಯವಾಗಿ ಹೊಸ ಪ್ರತಿಭೆಗಳನ್ನು ಗುರುತಿಸಿ ಹೊರತರಬೇಕು ಎಂಬ ಉದ್ದೇಶವೇ ನಮ್ಮ ಸಂಸ್ಥೆಯದು. ಅದು ಮುಂದುವರಿಯುತ್ತಲೇ ಇರುತ್ತದೆ. ಅಪ್ಪು ಅವರ ಸ್ಫೂರ್ತಿಯೂ ನಮ್ಮ ಜೊತೆಗಿರುತ್ತದೆ. ನಮ್ಮ ತಂಡ ಸದೃಢವಾಗಿದೆ.

ಮಕ್ಕಳನ್ನು ಚಿತ್ರರಂಗಕ್ಕೆ ತರುವ ಉದ್ದೇಶ ಇಲ್ಲ. ದೊಡ್ಡ ಮಗಳು ಕಲಾ ಶಿಕ್ಷಣ ಪಡೆಯುತ್ತಿದ್ದಾಳೆ. ಚಿಕ್ಕವಳು ಇನ್ನೂ ಶಾಲೆಗೆ ಹೋಗುತ್ತಿದ್ದಾಳೆ. ಇದುವರೆಗೆ ಕಂಡಂತೆ ಮಕ್ಕಳಿಗೆ ಈ ಕ್ಷೇತ್ರದತ್ತ ಆಸಕ್ತಿಯೂ ಇಲ್ಲ. ಮುಂದೇನೋ ಗೊತ್ತಿಲ್ಲ. ಅವರಿಗೇನು ಇಷ್ಟವೋ ಅದನ್ನು ಮಾಡುತ್ತಾರೆ.

'ಜೇಮ್ಸ್' ಬಿಡುಗಡೆಯ ಸಂಭ್ರಮ ಇದೆ ನಿಜ. ಚಿತ್ರ ಚೆನ್ನಾಗಿ ಮೂಡಿಬಂದಿದೆ ಎಂದು ತಂಡದವರು, ನೋಡಿದವರು ಹೇಳುತ್ತಿದ್ದಾರೆ. ಆದರೆ, ನನಗೆ ನೋಡಲು ಸಾಧ್ಯವೇ ಇಲ್ಲ. ಆದರೆ, ನಮ್ಮ ಕುಟುಂಬದವರೆಲ್ಲ ಚಿತ್ರ ನೋಡಲು ಹೋಗುತ್ತಿದ್ದಾರೆ.

ಅಭಿಮಾನಿಗಳಿಗೂ ಒಳ್ಳೆಯದಾಗಲಿ. ಅಭಿಮಾನಿಗಳ ಆಶೀರ್ವಾದ, ಹಾರೈಕೆ ಅಪ್ಪು ಚೇತನ ಹಾಗೂ ನಮ್ಮ ಮೇಲಿರಲಿ.

ನಿರೂಪಣೆ: ಎಸ್.ಎಚ್.

ಜನ್ಮದಿನದ ನೆಪದಲ್ಲಿ ಅಪ್ಪು ಟ್ರೆಂಡ್

• ಶರತ್ ಹೆಗ್ಡೆ

ಹಾದಿ-ಬೀದಿಯಲ್ಲಿ ರಾರಾಜಿಸುವ ಅಪ್ಪು ನೆನಪಿನ ಬ್ಯಾನರ್-ಭಾವಚಿತ್ರ, ವೃತ್ತ ವೃತ್ತಗಳಿಗೂ ಅವರ ಹೆಸರಿನದೇ ನಾಮಕರಣ, ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲೂ ಅವರ ಚಿತ್ರದ 'ಬೊಂಬೆ ಹೇಳುತೈತೆ...' ಹಾಡು!

ದಿವಂಗತ ಪುನೀತ್ ರಾಜ್‌ಕುಮಾರ್ ಅವರು ಜನರ ಮಧ್ಯೆ ಈಗಲೂ ಬದುಕಿರುವ ರೀತಿ ಇದು. ನಟನೊಬ್ಬ ಭೌತಿಕವಾಗಿ ಇಲ್ಲವಾದ ಮೇಲೂ ಸಿಕ್ಕ ಗೌರವ ಇದು. ನಗರ ಪ್ರದೇಶಗಳಲ್ಲಿ ಅಪ್ಪು ಈ ರೀತಿಯ ಟ್ರೆಂಡ್ ಸೃಷ್ಟಿಸಿದರು. ಟಿ-ಶರ್ಟ್, ಡೈರಿ, ನೋಟ್‌ಬುಕ್ ಕವರ್, ಮೊಬೈಲ್ ಕವರ್‌ಗಳಲ್ಲೂ ಪುನೀತ್ ಅಚ್ಚಾದರು.

ಗ್ರಾಮೀಣ ಪ್ರದೇಶಗಳಲ್ಲಿ ಬೀದಿ, ವೃತ್ತಕ್ಕೆ ಅಪ್ಪು ಹೆಸರಿಟ್ಟಿದ್ದೂ ಆಯಿತು. ಪುನೀತ್ ನೆನಪಿನ ಆಡಿಯೊ, ವಿಡಿಯೊಗಳಿಗಂತೂ ಲೆಕ್ಕವೇ ಇಲ್ಲ.

ಕತ್ತಲಾವರಿಸುವ ಚಿತ್ರಮಂದಿರದ ಪರದೆಗಳಲ್ಲಿ ಕನ್ನಡ ಚಿತ್ರ ಆರಂಭಕ್ಕೂ ಮುನ್ನ ಅಪ್ಪು ಬಿಂಬದ ಬೆಳಕು ಸಿಗ್ನೇಚರ್ ಎಂಬಂತೆ ಬಂದು ಹಾದು ಹೋಗುತ್ತದೆ. ಪ್ರತೀ ಕನ್ನಡ ಚಿತ್ರದ ಟ್ರೇಲರ್, ಟೀಸರ್, ಟೈಟಲ್ ಕಾರ್ಡ್‌ಗಳಲ್ಲಿ ಅಪ್ಪು ಇದ್ದಾರೆ.

ಜನ್ಮದಿನದ ಸಂದರ್ಭದಲ್ಲಿ ಅಪ್ಪು ನೆನಪನ್ನು ಇನ್ನಷ್ಟು ವರ್ಣಮಯವಾಗಿಸುವ ಪ್ರಯತ್ನ ಸಾಗಿದೆ. ಅದಕ್ಕಾಗಿ ಅಭಿಮಾನಿಗಳು ಮತ್ತೆ ಸಿದ್ಧರಾಗಿದ್ದಾರೆ. ಅವರ ಅಭಿನಯದ 'ಜೇಮ್ಸ್'ಗೆ ಭರ್ಜರಿ ಸ್ವಾಗತ ನೀಡುತ್ತಿದ್ದಾರೆ. ಅವರ ನೆನಪಲ್ಲಿ ದಾಸೋಹಗಳು ಸಹ ನಡೆಯುತ್ತಿವೆ.

ವೃತ್ತಿಗಿಂತಲೂ ವ್ಯಕ್ತಿತ್ವ ಮೇಲು. ಬದುಕಿದ ರೀತಿ ಮಹತ್ವದ್ದು ಎಂಬುದನ್ನು ಡಾ.ರಾಜ್‌ಕುಮಾರ್ ಅವರ ಬಳಿಕ ಪುನೀತ್ ರಾಜ್‌ಕುಮಾರ್ ನಿರೂಪಿಸಿದರು.

ಬದಲಾವಣೆಗೊಂದು ಸ್ಫೂರ್ತಿ: ಹೌದಲ್ವಾ, ನಾವೂ ಈ ರೀತಿ ಬದುಕಿ ತೋರಿಸಬಹುದಲ್ವಾ ಎಂದು ಅದೆಷ್ಟೋ ಮನಸ್ಸುಗಳು ಪುನೀತ್ ಹಾದಿಯನ್ನು ತಮ್ಮ ಬದುಕಿನಲ್ಲಿ ಅವರವರ ಮಟ್ಟದಲ್ಲಿ ಅನುಸರಿಸಲು ಯತ್ನಿಸಿದ್ದೂ ಇದೆ. ದಾನದ ಮಹತ್ವವನ್ನು ಹಿರಿಮನಸ್ಸುಗಳು ಅರ್ಥೈಸಿ ಪುನೀತ್ ಉದಾಹರಣೆಯನ್ನು ಕಿರಿಯರಿಗೆ ಕೊಟ್ಟದ್ದೂ ಇದೆ.

ಈ ಬೆಳವಣಿಗೆ ನೋಡಿದ ದಕ್ಷಿಣ ಭಾರತದ ಚಿತ್ರರಂಗದ ಖ್ಯಾತನಾಮರು ಅಪ್ಪು ಕಾರ್ಯಗಳನ್ನು ಮುಂದುವರಿಸಲು ಕೈಜೋಡಿಸಲು ಮುಂದಾದದ್ದು ಮಹತ್ತರ ಬದಲಾವಣೆಯೇ. ಪುನೀತ್ ಬದುಕಿನ ಸರಳತೆಯೂ ಇತರರಿಗೆ ಮಾದರಿಯಾಯಿತು. ಉದಾಹರಣೆಗೆ ಹೆದ್ದಾರಿ ಬದಿಗಳ ಅದೆಷ್ಟೋ ಹೋಟೆಲ್, ಡಾಬಾಗಳು ಪುನೀತ್ ಅವರ ಹೆಸರಿಟ್ಟು-ಕೊಂಡಿವೆ. ಅದು ಪುಟ್ಟ ಚಹದಂಗಡಿಯೇ ಇರಲಿ, ಹಳ್ಳಿಯೊಂದರ ಮಿಲ್ಟ್ರಿ ಹೋಟೆಲೇ ಆಗಿರಲಿ. ಅಪ್ಪು ಅಲ್ಲಿಗೆ ಹೋಗಿ ರುಚಿ ಸವಿದಿದ್ದಾರೆ. ಆ ಬಳಿಕ ಆ ಹೋಟೆಲ್ ಮಾಲೀಕರ ಅದೃಷ್ಟ ಖುಲಾಯಿಸಿದ್ದೂ ಇದೆ. ಪುಟ್ಟ ಹೋಟೆಲ್ ಮಾಲೀಕನಿಗೆ ದೊಡ್ಡ ನಟರನ್ನು ಕರೆಸಿ ಫೋಟೊ ತೆಗೆಸಿಕೊಳ್ಳುವುದು ಸರಳ ಸಂಗತಿ ಅಲ್ಲ. ಆದರೆ ಪುನೀತ್ ಅದನ್ನು ಸಾಧ್ಯವಾಗಿಸಿಕೊಟ್ಟರು.

ಅಪ್ಪು ಅಗಲಿಕೆಯ ನಂತರ ಇಂಥ ಹೋಟೆಲ್‌ಗಳಿಗೆ ಅಸಂಖ್ಯ ಯುಟ್ಯೂಬರ್‌ಗಳು ಭೇಟಿ ನೀಡಿ ಆಯಾ ಹೋಟೆಲ್‌ನ (ಅದರಲ್ಲೂ ಬಾಡೂಟ) ಖಾದ್ಯಗಳ ಕುರಿತು ವಿಡಿಯೊ ಮಾಡಿದರು. ಮತ್ತೆ ಅಪ್ಪು- ಹೋಟೆಲ್‌ಗಳು ಟ್ರೆಂಡ್ ಆದವು.

ಜಿಮ್‌ಗಳಲ್ಲೂ ಪುನೀತ್ ಮೈಕಟ್ಟು, ಬ್ಯಾಕ್‌ಫ್ಲಿಪ್ ಭಂಗಿಗಳು ಪೋಸ್ಟರ್ ರೂಪ ಪಡೆದು ರಾರಾಜಿಸಿದವು. ಹೀಗೆ ಅಲ್ಲಿಯೂ ಒಂದಿಷ್ಟು ಆರೋಗ್ಯ ಕಾಳಜಿಯ ಬದಲಾವಣೆಗಳು ನಡೆದವು. ಕ್ರೀಡಾಳುಗಳು ಮ್ಯಾರಾಥಾನ್ ನಡೆಸಿದ್ದು, ಕಾಲ್ನಡಿಗೆ-ಯಲ್ಲಿ ಬಂದದ್ದು ಅಪ್ಪು ಮೇಲಿನ ಎಲ್ಲೆ ಮೀರಿದ ಅಭಿಮಾನಕ್ಕೆ ಸಾಕ್ಷಿ.

ಕನ್ನಡದ ಕೋಟ್ಯಧಿಪತಿಯಂತಹ ಕಾರ್ಯಕ್ರಮ ಒಂದು ರಿಯಾಲಿಟಿ ಷೋ ಆಗಿಯಷ್ಟೇ ಸೀಮಿತವಾಗಲಿಲ್ಲ. ಬದಲಾಗಿ ಅದನ್ನು ನಡೆಸಿಕೊಡುತ್ತಿದ್ದ ಅಪ್ಪು ಅವರು ಅರ್ಹರಿಗೆ ಕಾರ್ಯಕ್ರಮದ ಪ್ರತಿಫಲ ಸಿಗುವಂತೆ ನೋಡಿಕೊಂಡರು. ಒಬ್ಬ ನಿರೂಪಕನನ್ನು ಮೀರಿದ ವ್ಯಕ್ತಿಯಾದರು.

ಸಂಚಾರ ಸುರಕ್ಷತೆಯ ಜಾಗೃತಿ ಮೂಡಿಸಿದ್ದ ಅಪ್ಪು ಅವರ ಹೇಳಿಕೆ ಅವರ ಜನ್ಮದಿನದ ಸಂದರ್ಭ ಮತ್ತೆ ಮುನ್ನೆಲೆಗೆ ಬಂದಿದೆ. 'ದ್ವಿಚಕ್ರ ವಾಹನ ಸವಾರರು ಗುಣಮಟ್ಟದ ಹೆಲ್ಮೆಟ್ ಬಳಸಿ' ಎಂದು ಹೇಳಿರುವುದನ್ನು ಪುನೀತ್ ಅವರ ವಿಡಿಯೋ ಸಹಿತ ಪೊಲೀಸರು ಮತ್ತು ಬಿಡುಗಡೆ ಮಾಡಿದ್ದಾರೆ.

ಅಚ್ಚಾದ ಅಪ್ಪು: 'ಅನವರತ ಅಪ್ಪು' ಕೃತಿ (ಲೇ: ರಾಘವೇಂದ್ರ ಅಡಿಗ ಎಚ್. ಎನ್.) ಈಗಾಗಲೇ ಬಿಡುಗಡೆಯಾಗಿದೆ. ಇತ್ತೀಚೆಗಷ್ಟೇ ಶರಣ್ ಹುಲ್ಲೂರು ಅವರು ಬರೆದ 'ನೀನೇ ರಾಜಕುಮಾರ' ಆತ್ಮಚರಿತ್ರೆಯನ್ನು ನಟ ಕಿಚ್ಚ ಸುದೀಪ್ ಬಿಡುಗಡೆಗೊಳಿಸಿದ್ದಾರೆ. ಜನ್ಮದಿನದ ಹೊತ್ತಿನ ಪುಟ್ಟ ನೆಪದಲ್ಲಿ ಬಗೆದಷ್ಟೂ ಇದೆ ಅಪ್ಪು ಅವರ ನೆನಪು.

ತೆರೆಯ ಮೇಲೆ ಅಪ್ಪು-ಶಿವಣ್ಣ ಜೋಡಿ!

'ತಮ್ಮನಿಗಾಗಿ ಆಂಧ್ರದ ನಿರ್ದೇಶಕರೊಬ್ಬರ ಒಂದು ಕಥೆ ಕೇಳಿದ್ದೇನೆ. ಆ ಕಥೆಯಲ್ಲಿ ನನ್ನನ್ನೂ ಅಪ್ಪುವನ್ನೂ ನೋಡುತ್ತೀರಿ'- ಹೀಗೆಂದು ಅಭಿಮಾನಿಗಳ ಕುತೂಹಲ ಹೆಚ್ಚಿಸಿದವರು ನಟ ಶಿವರಾಜ್‌ಕುಮಾರ್.

ಕೆಲ ದಿನಗಳ ಹಿಂದಷ್ಟೇ ನಡೆದ 'ಜೇಮ್ಸ್' ಚಿತ್ರದ ಬಿಡುಗಡೆ ಪೂರ್ವ ಕಾರ್ಯಕ್ರಮದಲ್ಲಿ ಮಾತನಾಡಿದ ಶಿವರಾಜ್‌ಕುಮಾರ್ ಅವರು, 'ನಾನು, ಅಪ್ಪು ಇಬ್ಬರೂ ಒಟ್ಟಿಗೆ ಸಿನಿಮಾ ಮಾಡಬೇಕು ಎಂದು ನಾಲ್ಕೈದು ವರ್ಷದಿಂದ ಯೋಚಿಸುತ್ತಿದ್ದೆವು. ಆದರೆ ಅದು ಆಗಲೇ ಇಲ್ಲ. ಆದರೆ ಈಗ ಕೇಳಿರುವ ಕಥೆಯಲ್ಲಿ ನನ್ನನ್ನೂ ಅಪ್ಪುವನ್ನೂ ನೋಡುತ್ತೀರಿ. ಭಾವನಾತ್ಮಕವಾದ ಕಥೆ ಅದು. ಇದು ನಾನು ಅಪ್ಪುಗೆ ನೀಡುತ್ತಿರುವ ಕೊಡುಗೆ. ಈ ರೀತಿಯ ತಮ್ಮನನ್ನು ಪಡೆಯಲು ಪುಣ್ಯ ಮಾಡಿದ್ದೆವು' ಎಂದು ಹೇಳಿದ್ದಾರೆ.

ನೊಂದವರ ಪಾಲಿನ ಪುನೀತ ಶಕ್ತಿ

• ಕೆ.ಓಂಕಾರ ಮೂರ್ತಿ

ಮೈಸೂರು: 'ಅಪ್ಪು ಅಣ್ಣ ಒಮ್ಮೆ ಬಂದು ಹೋಗುವಿರಾ? ಒಂದು ಸಾರಿ ನಮ್ಮೊಂದಿಗೆ ಮಾತನಾಡುವಿರಾ? ನಿಮ್ಮ ಬರ್ತ್‌ಡೇ ನಮ್ಮೊಂದಿಗೆ ಆಚರಿಸಿಕೊಳ್ಳು-ವಿರಾ? ನಿಮ್ಮೊಂದಿಗೆ ಆಟವಾಡಬೇಕು, ನಿಮ್ಮ ನಗುವಿನಲ್ಲಿ ಬೆರೆಯಬೇಕು, ನಿಮ್ಮ ತಬ್ಬಿಕೊಂಡು ನೋವು ಮರೆಯಬೇಕು, ಪ್ಲೀಸ್...'

ಇದು ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರ 'ಶಕ್ತಿಧಾಮ'ದ ಹೆಣ್ಣುಮಕ್ಕಳ ಧ್ವನಿ. ಅಪ್ಪು ವಿಧಿವಶರಾದ ದಿನದಿಂದ ಈ ಮಕ್ಕಳಿಗೆ ಅಕ್ಷರಶಃ ಅನಾಥ ಪ್ರಜ್ಞೆ ಕಾಡುತ್ತಿದೆ.

'ಅಪ್ಪು ಅಣ್ಣ ಎಂದೆಂದೂ ಮನದಲ್ಲಿ-ರುವವರು. ಅವರು ಕೊಟ್ಟ ಪ್ರೀತಿಯನ್ನು ಮರೆಯಲಾರದು...' ಎಂದು ಹಾಡುತ್ತಲೇ ಶಕ್ತಿಧಾಮದಲ್ಲಿ ಅರಳುತ್ತಿರುವ ಈ 'ಹೂವು'ಗಳ ಬದುಕು ಸಾಗುತ್ತಿದೆ.

ನಿರ್ಗತಿಕ ಮಹಿಳೆಯರು ಹಾಗೂ ಅವಕಾಶ ವಂಚಿತ ಹೆಣ್ಣು ಮಕ್ಕಳಿಗೆ ಊಟ, ವಸತಿ, ವಿದ್ಯಾಭ್ಯಾಸ ಕಲ್ಪಿಸಲು ಡಾ.ರಾಜ್‌ಕುಮಾರ್ ಹಾಗೂ ಪಾರ್ವತಮ್ಮ ರಾಜ್‌ಕುಮಾರ್ ಅವರು 1998ರಲ್ಲಿ ಮೈಸೂರಿನಲ್ಲಿ ಸ್ಥಾಪಿಸಿದ ಸಂಸ್ಥೆಯೇ ಶಕ್ತಿಧಾಮ. ಪಾರ್ವತಮ್ಮ ವಿಧಿವಶರಾದ ನಂತರ ಗೀತಾ ಶಿವರಾಜ್‌ಕುಮಾರ್ ಜವಾಬ್ದಾರಿ ವಹಿಸಿಕೊಂಡರು. ಪುನೀತ್ ಕೂಡ ಈ ಮಕ್ಕಳಿಗೆ ಸಹಾಯ ಮಾಡುತ್ತಾ ಅವರ ಪಾಲಿಗೆ ಎಲ್ಲವೂ ಆಗಿದ್ದರು. ಕನ್ನಡದ ಕೋಟ್ಯಧಿಪತಿ ಕಾರ್ಯಕ್ರಮದ ಸಂಭಾವನೆಯ ಒಂದಷ್ಟು ಭಾಗವನ್ನು ಆಶ್ರಮಕ್ಕೆ ನೀಡುತ್ತಿದ್ದರು. ಒಮ್ಮೆ ₹ 18 ಲಕ್ಷ ನೀಡಿದ್ದರು. ಮೈಸೂರಿಗೆ ಬಂದಾಗಲೆಲ್ಲಾ ಶಕ್ತಿಧಾಮಕ್ಕೆ ಬರುತ್ತಿದ್ದರು. ತಮ್ಮ ಡಾ.ರಾಜ್ ಹಾಗೂ ಪಾರ್ವತಮ್ಮ ಅವರ ಜನ್ಮದಂದು ಬಟ್ಟೆ, ಸಿಹಿ ವಿತರಿಸುತ್ತಿದ್ದರು.

'ಮಕ್ಕಳು ಇನ್ನೂ ಬೇಸರದಲ್ಲೇ ಇದ್ದಾರೆ. ಶಾಲೆ ಆರಂಭಿಸಲು ಅನುಮತಿ ಲಭಿಸಿದ್ದರೂ ಖುಷಿಪಡಲು ಸಾಧ್ಯವಾ-ಗುತ್ತಿಲ್ಲ. ಪುನೀತ್ ನಸುಕಿನಲ್ಲೇ ಬಂದು ಈ ಮಕ್ಕಳಿಗೆ ಉಡುಗೊರೆ ಕೊಟ್ಟು ಹೋಗುತ್ತಿದ್ದರು. ಮಕ್ಕಳ ಜೊತೆ ಕುಳಿತು ಉಪಾಹಾರ ಸೇವಿಸಿ ಹೋಗುತ್ತಿದ್ದರು' ಎಂದು ನೆನಪಿಸಿಕೊಳ್ಳುತ್ತಾರೆ ಶಕ್ತಿಧಾಮದ ಟ್ರಸ್ಟಿ ಸುಮನಾ.

'ಗೀತಾ ಶಿವರಾಜ್‌ಕುಮಾರ್ ಸಂಸ್ಥೆ ಅಧ್ಯಕ್ಷರಾಗಿದ್ದು, ಪ್ರೀತಿಯಿಂದ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾರೆ. ಶಿವರಾಜ್‌ಕುಮಾರ್ ಸರ್ ಕೂಡ ಮಕ್ಕಳ ಮೇಲೆ ಹೆಚ್ಚಿನ ಕಾಳಜಿ ತೋರುತ್ತಿದ್ದು, ಬೇಸರವಾಗದಂತೆ ನೋಡಿ ಕೊಳ್ಳುತ್ತಿದ್ದಾರೆ' ಎನ್ನುತ್ತಾರೆ ಅವರು.

2019ರ ಡಿಸೆಂಬರ್‌ನಲ್ಲಿ ಶಕ್ತಿಧಾಮಕ್ಕೆ ಬಂದಿದ್ದೇ ಪುನೀತ್ ಅವರ ಕೊನೆಯ ಭೇಟಿ. ಆಗ ಮಕ್ಕಳು ಫೋಟೊ ತೆಗೆಸಿಕೊಂಡು ಸಂಭ್ರಮಿಸಿದ್ದರು.

2016–17ರಿಂದ ಅವಕಾಶ ವಂಚಿತ ಮಕ್ಕಳಿಗೂ ಶಿಕ್ಷಣ ನೀಡಲಾಗುತ್ತಿದೆ. ಸದ್ಯ 150 ಮಕ್ಕಳು ಹೆಣ್ಣು ಮಕ್ಕಳು ಓದುತ್ತಿದ್ದಾರೆ. ಐವರು ನರ್ಸಿಂಗ್, ಒಬ್ಬರು ಎಂಜಿನಿಯರ್, ಇನ್ನುಳಿದವರು ಪದವಿ, ಪಿಯುಸಿ, ಪ್ರೌಢಶಾಲೆ, ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾರೆ. ಸುಮಾರು 4 ಸಾವಿರ ಮಹಿಳೆಯರು ಸುಧಾರಿತ ಬದುಕು ಕಟ್ಟಿಕೊಂಡಿದ್ದಾರೆ.

ನಗುಮೊಗದ ಒಡೆಯ... ಪುನೀತ್ ರಾಜ್‌ಕುಮಾರ್ ಅವರು ಶಕ್ತಿಧಾಮಕ್ಕೆ ಬಂದಿದ್ದಾಗ ಹೆಣ್ಣು ಮಕ್ಕಳೊಂದಿಗೆ ಬೆರೆತ ಕ್ಷಣ –ಪ್ರಜಾವಾಣಿ ಸಂಗ್ರಹ ಚಿತ್ರ

ನಿಧನದ ದಿನವೇ ಅನುಮತಿ!

'ಶಕ್ತಿಧಾಮದ ಹೆಣ್ಣು ಮಕ್ಕಳಿಗಾಗಿ ವಿದ್ಯಾಶಾಲೆ ಆರಂಭಿಸಬೇಕೆಂಬುದು ಪುನೀತ್ ರಾಜ್‌ಕುಮಾರ್ ಅವರ ಕನಸಾಗಿತ್ತು. ಅಪ್ಪು ವಿಧಿವಶರಾದ ದಿನವೇ ಈ ಶಾಲೆ ಆರಂಭಿಸಲು ಅನುಮತಿ ಲಭಿಸಿತು. ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಅಂದು ಪರಿಶೀಲನೆ ನಡೆಸಿದರು' ಎಂದು ಶಕ್ತಿಧಾಮದ ಟ್ರಸ್ಟಿ ಸುಮನಾ ಹೇಳುತ್ತಾರೆ.

'ಬದುಕಿದ್ದಾಗಲೇ ಅನುಮತಿ ಲಭಿಸಿದ್ದರೆ ಎಷ್ಟೊಂದು ಖುಷಿ ಪಡುತ್ತಿದ್ದರೋ ಏನೋ? ಅವರ ಜನ್ಮದಿನಕ್ಕೇ ಇದೇ ನಮ್ಮ ಉಡುಗೊರೆ' ಎನ್ನುತ್ತಾರೆ. 'ಸದ್ಯ 1ರಿಂದ 8ನೇ ತರಗತಿ ಆರಂಭಿಸಲು ಅನುಮತಿ ಲಭಿಸಿದೆ. ಈಗಿನ ಕಟ್ಟಡದಲ್ಲೇ ಜೂನ್‌ನಲ್ಲಿ ತರಗತಿ ಆರಂಭಿಸಲಿದ್ದೇವೆ' ಎಂದು ಹೇಳುತ್ತಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಬದುಕು ಭಂಡ ಬಾಳೇ?

ಕೆಂಡಮುಸುಡಿಯ ದೈವವೆಲ್ಲವನು ದಹಿಸುತಿರೆ |
ದಂಡಧರನತ್ತಲೆಲ್ಲವನು ಕೆಡಹುತಿರೆ ||
ಮೊಂಡುಘಾಸಿಯ ಲಾಭ ಪಿಂಡಮಾತ್ರವು ತಾನೆ? |
ಭಂಡಬಾಳಲೆ ನಮದು? – ಮಂಕುತಿಮ್ಮ

|| 586 ||

ಪದ-ಅರ್ಥ: ಕೆಂಡಮುಸುಡಿಯ = ಕೆಂಪುಮೋರೆಯ, ದಂಡಧರನತ್ತಲೆಲ್ಲವನು = ದಂಡಧರನು (ಯಮ) + ಅತ್ತಲು + ಎಲ್ಲವನು, ಮೊಂಡುಘಾಸಿಯ (ಮೊಂಡುತನ ಮಾಡಿ ಪೆಟ್ಟು ತಿಂದು ಗಾಸಿಯ), ಭಂಡಬಾಳಲೆ = ಭಂಡ + ಬಾಳು + ಎಲೆ.

ವಾಚ್ಯಾರ್ಥ: ಅಗ್ನಿಯಂತೆ ಮುಖ ಮಾಡಿದ ದೈವ ಎಲ್ಲವನ್ನೂ ಸುಡುತ್ತಿರಲು, ಅತ್ತ ಯಮಧರ್ಮ ಎಲ್ಲವನ್ನೂ ಹೊಡೆದು ಕೆಡಹುತ್ತಿದ್ದಾಗ, ನಮಗಾದ ಲಾಭವೇನು? ಮೊಂಡುತನದಿಂದ ಹೋರಾಡಿ, ಗಾಸಿಯಾಗಿ ಪಡೆದದ್ದು ಮುಷ್ಟಿ ಅನ್ನ ತಾನೇ? ನಮ್ಮದು ಭಂಡಬಾಳೇ?

ವಿವರಣೆ: ಮತ್ತೆ ಮತ್ತೆ ನಾನೊಂದು ಮಾತನ್ನು ಒತ್ತಿ ಹೇಳಬೇಕು. ಈ ಕಗ್ಗ ಮತ್ತೆ ನಿರಾಸೆಯನ್ನು, ಹತಾಶೆಯನ್ನು ಹೇಳುತ್ತಿಲ್ಲ. ಕೊನೆಯ ಸಾಲಿನಲ್ಲಿ, ನಮ್ಮದು ಭಂಡಬಾಳೇ? ಎಂದು ಪ್ರಶ್ನೆ ಕೇಳುತ್ತದೆ. ಅದು ಮೊದಲಿನ ಮೂರು ಸಾಲಿನಲ್ಲಿ ಕಂಡು ಬರುವ ಸಮಸ್ಯೆಗಳನ್ನು ನಿರಾಕರಿಸುತ್ತಿಲ್ಲ. ಅವುಗಳನ್ನು ಒಪ್ಪುತ್ತಲೇ ನಮ್ಮದು ಭಂಡ ಬಾಳಾಗಬೇಕೇ ಎಂದು ಪ್ರಶ್ನಿಸುತ್ತದೆ. ಉತ್ತರ ನಮ್ಮ ಕೈಯಲ್ಲಿದೆ. ನಿರಾಸೆಯಿಂದ ಕೈ ಚೆಲ್ಲಿ ಕುಳಿತರೆ ಅದು ಭಂಡಬಾಳೇ. ಆದರೆ ಇರುವ ಶಕ್ತಿಯನ್ನು ಪೂರ್ಣವಾಗಿ ಬಳಸಿಕೊಂಡು, ಸಾಧ್ಯವಿದ್ದಷ್ಟು ಹೋರಾಡಿದರೆ ಅದು ಭಂಡ ಬಾಳಾಗದೆ ಸಾಧನೆಯ ಬದುಕಾಗುತ್ತದೆ.

ದೈವದ ಪರೀಕ್ಷೆಯನ್ನು, ಸಾವಿನ ತಲ್ಲಣತೆಯನ್ನು, ಕಷ್ಟದ ಪರಿಯನ್ನು ಯಾರು ಕಂಡಿಲ್ಲ? ಅದಕ್ಕೆ ಹೆದರಿ ಶರಣಾದವರು ಹೆಸರಿಲ್ಲದೆ ಮಾಯವಾದರು. ಎದೆಗಟ್ಟಿ ಮಾಡಿಕೊಂಡು ಪ್ರಯತ್ನಿಸಿದವರು ನಾಯಕರಾದರು, ಲೋಕಕ್ಕೆ ಮಾದರಿಗಳಾದರು. ರಾಮನ ಬದುಕೇನು ಹೂವಿನ ಹಾಸಿಗೆಯಾಗಿತ್ತೇ? ರಾಜಕುಮಾರ, ತನ್ನ ತರುಣಿ ಹೆಂಡತಿ, ಮತ್ತು ತಮ್ಮನನ್ನು ಕಟ್ಟಿಕೊಂಡು ಕಾಡು-ಕಾಡು ಅಲೆದದ್ದು, ರಾಕ್ಷಸರೊಡನೆ ಸದಾ ಹೋರಾಟ, ಪತ್ನಿಯ ಅಪಹರಣ, ಅವಳ ಶೋಧಕ್ಕಾಗಿ ಅಲೆತ, ಮತ್ತೆ ಪ್ರಬಲ ಹೋರಾಟ. ಆಮೇಲಾದರೂ ಎಲ್ಲವೂ ಶಾಂತಿಯಾಯಿತೆ? ಕೊನೆಗೂ ಹೆಂಡತಿಯಿಂದ ದೂರಾಗಿ ಕೊನೆಯವರೆಗೂ ಅರಮನೆಯಲ್ಲಿ ಸನ್ಯಾಸಿ ಜೀವನ. ಇಷ್ಟಾದರೂ ಇಂದು ರಾಮ ದೇವರಾದದ್ದೇಕೆ? ಅವನು ದೈವವನ್ನು, ಸಮಸ್ಯೆಗಳನ್ನು ಎದುರಿಸಿದ ರೀತಿ, ಯಾವ ಕ್ಷಣದಲ್ಲೂ ಅಪಮೌಲ್ಯಗಳೊಂದಿಗೆ ರಾಜಿಮಾಡಿಕೊಳ್ಳದ ಛಲ ಅವನನ್ನು ಮರ್ಯಾದಾ ಪುರುಷೋತ್ತಮನನ್ನಾಗಿಸಿದವು.

ಕೃಷ್ಣ ಎದುರಿಸಿದ ಸಮಸ್ಯೆಗಳು ಸಣ್ಣವೆ? ಹುಟ್ಟಿದಾಕ್ಷಣ ತಾಯಿಯಿಂದ ಬೇರ್ಪಟ್ಟು, ಗೋಪಗೋಪಿಯರ ನಡುವೆ ಬೆಳೆದ ರಾಜಕುಮಾರ. ಯುದ್ಧಕಲೆ, ರಾಜನೀತಿಯನ್ನು ಕಲಿಯಲು ಗುರುಕುಲಕ್ಕೆ ಮೊದಲು ಹೋಗಲೇ ಇಲ್ಲ. ಸೋದರಮಾವನೇ ಅವನನ್ನು ಕೊಲ್ಲಲು ಏನೇನು ಹವಣಿಕೆ ಮಾಡಲಿಲ್ಲ? ಸದಾ ಸಾವಿನ ನೆರಳಲ್ಲೇ ಬದುಕಿದವನು. ಅವನನ್ನು ಕೊಲ್ಲಲು ಕಂಸ, ಜರಾಸಂಧ, ಕಾಲಯವನ, ನರಕಾಸುರ, ಶಿಶುಪಾಲ ಇವರೆಲ್ಲರ ದಂಡೇ ಕಾದಿತ್ತು. ಕೊನೆಗೆ ಕೂಡ ಮಾನವ ಇತಿಹಾಸ ಕಂಡರಿಯದ ಮಹಾಭೀಷಣ ದಾಯಾದಿ ಯುದ್ಧಕ್ಕೆ ಆತ ದೀಕ್ಷಿತನಾಗಬೇಕಾಯಿತು. ಇವೆಲ್ಲ ಬವಣೆಗಳು ಎಂದು ಆತ ಹೆದರಿದನೆ? ಕರ್ತವ್ಯ ವಿಮುಖನಾದನೆ? ಇಲ್ಲ. ಬದಲಾಗಿ ಭೀಕರ ಯುದ್ಧದ ನಡುವೆ ನಿಂತು ಭಗವದ್ಗೀತೆಯನ್ನು ಬೋಧಿಸಿದ. ದೇವರಾದ.

ದೇಹವಿದ್ದವರಿಗೆಲ್ಲ ಸಮಸ್ಯೆಗಳು ಇದ್ದದ್ದೇ. ಅವರಿಗೆಲ್ಲವೂ ದಕ್ಕಿದ್ದು ಪಿಂಡಮಾತ್ರದ ಅನ್ನ. ಆದರೆ ಯಾರು ದೇಹದ ಮಿತಿಗಳನ್ನು ದಾಟಿ ಸಾಗಿದರೋ ಅವರು ಶಾಶ್ವತರಾದರು. ಯಾರು ಹೆದರಿ ಕೊರಗಿದರೋ ಅವರು ತಮ್ಮ ಬದುಕನ್ನು ಭಂಡಬಾಳು ಎಂದು ಕರಗಿಸಿಕೊಂಡರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮಾರ್ಚ್ 17, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಮೀನ ಮಾಸದ 03 ನೇ ದಿನ ತಿಥಿ: (ಫಾಲ್ಗುಣ ಶುಕ್ಲ) ಚತುರ್ದಶಿ ಗಂ. 13-30 ನಕ್ಷತ್ರ: ಪೂರ್ವಫಲ್ಗುನಿ ಗಂ. 24-34 ಯೋಗ: ಶೂಲ ಗಂ. 25-07, ಕರಣ: ವಣಿಜ ಗಂ. 13-30.

ರಾಹುಕಾಲ : ಮಧ್ಯಾಹ್ನ 01:30 – 03:00 ಸೂರ್ಯೋದಯ : 06-40

ಸೂರ್ಯಾಸ್ತ : 06-38 ಮುಸ್ಲಿಂ ದಿನಾಂಕ: 13 ಶಬನ್ ದಿನ ವಿಶೇಷ : ಕಾಮದಹನಂ, ಹೋಳಿ

ಅದೃಷ್ಟ ಸಂಖ್ಯೆ: 1, 8

ಮೇಷ: ಗಿಡಮೂಲಿಕೆ ಔಷಧಿ ನೀಡುವವರಿಗೆ ವೈದ್ಯಕೀಯ ಲೋಕದಲ್ಲಿ ಸಾಧಿಸಿದ ಸಂತೋಷ ಸಿಗಲಿದೆ. ಬಟ್ಟೆ ವ್ಯಾಪಾರಿಗಳಿಗೆ ವ್ಯವಹಾರ ಉತ್ತಮವಾಗಿದ್ದು ಮಾರುಕಟ್ಟೆಯಲ್ಲಿ ಹೆಸರು ಪಡೆದುಕೊಳ್ಳುವಂತಾಗಲಿದೆ.

ವೃಷಭ: ಜವಾಬ್ದಾರಿ ಕೆಲಸಗಳು ಒದಗಿ ಬಂದು ಅವುಗಳನ್ನು ಮುಗಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವ್ಯವಹಾರದಲ್ಲಿ ಪ್ರಾಮಾಣಿಕವಾಗಿ ದುಡಿಯುವುದು ಕಷ್ಟ ಎನಿಸಿದರೂ, ಅದನ್ನು ಪಾಲಿಸುವುದರಿಂದ ಮನಃಶಾಂತಿ ಇರಲಿದೆ.

ಮಿಥುನ: ವದಂತಿಗಳಿಗೆ ಕಿವಿಗೊಡದೆ ಕೆಲಸವನ್ನು ಮುಂದುವರೆಸಿಕೊಂಡು ಹೋಗಿ. ಕೆಲಸಗಾರರ ಸಮಸ್ಯೆಗಳಿಗೆ ಸ್ಪಂದಿಸುವುದು ಅನಿವಾರ್ಯವಾಗುವುದು. ಉಪನ್ಯಾಸಕಲೆಯನ್ನು ಹೊಂದಿದವರಿಗೆ ವೇದಿಕೆ ಪ್ರಾಪ್ತಿಯಾಗುವುದು.

ಕರ್ಕಾಟಕ: ಮಹತ್ವಾಕಾಂಕ್ಷೆಯಿಂದ ಗುರಿಯನ್ನು ತಲುಪುವುದು ಕಷ್ಟವೇನಲ್ಲ. ಗಂಭೀರ ಚಿತ್ತ ಹಾಗೂ ದೃಢ ಮನಸ್ಸಿನಿಂದ ಕೈಗೊಂಡ ಕೆಲಸಗಳು ಕಾರ್ಯಗತವಾಗಲಿವೆ. ಎತ್ತರದಲ್ಲಿ ಕೆಲಸ ಮಾಡುವವರು ಹೆಚ್ಚಿನ ಜಾಗ್ರತೆಯಿಂದಿರಿ.

ಸಿಂಹ: ನಿವೇಶನಕೊಳ್ಳಲು ಸೂಕ್ತಸ್ಥಳದ ಹುಡುಕಾಟ. ಮಕ್ಕಳ ವಿದ್ಯಾಭ್ಯಾಸ ಸಮಾಧಾನ ತರಲಿದೆ. ವಿದ್ಯಾರ್ಥಿಗಳು ಅತ್ಯಂತ ಪೈಪೋಟಿ ಎದುರಿಸುವ ದಿನ. ಉದ್ಯೋಗದ ವಿಚಾರದ ಬಗ್ಗೆ ಹೆಚ್ಚಿನ ತರಬೇತಿಯನ್ನು ಪಡೆದುಕೊಳ್ಳಿ.

ಕನ್ಯಾ: ವಾಣಿಜ್ಯ ಇಲಾಖೆಯ ಅಧಿಕಾರಿಗಳಿಗೆ ಇಂದು ಸರ್ಕಾರದಿಂದ ಅನುಕೂಲ. ಸಾಂಸಾರಿಕವಾಗಿ ಪತಿ-ಪತ್ನಿಯ ಅನ್ಯೋನ್ಯತೆಯ ಕನಸು ನನಸಾಗಲಿದೆ. ಪ್ರಮೋಶನ್ ಅವಕಾಶವನ್ನು ಕೈತಪ್ಪದಂತೆ ನೋಡಿಕೊಳ್ಳಿ.

ತುಲಾ: ವೈಯಕ್ತಿಕ ವಿಚಾರವನ್ನು ಆಪ್ತರೊಬ್ಬರ ಬಳಿ ಹೇಳಿಕೊಳ್ಳುವುದರಿಂದ ಮಾನಸಿಕ ದುಃಖ ಕಡಿಮೆಯಾಗಲಿದೆ. ನೆರೆ ಹೊರೆಯವರೊಡನೆ ಉತ್ತಮ ಬಾಂಧವ್ಯ ಹೊಂದುವಿರಿ. ರೇಷ್ಮೆ ವ್ಯಾಪಾರಿಗಳಿಗೆ ಹೆಚ್ಚಿನ ಆದಾಯ.

ವೃಶ್ಚಿಕ: ಶಿಕ್ಷಕವೃಂದಕ್ಕೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ವಾಹನಗಳಿಂದ ಲಾಭ. ನಿಮ್ಮ ಕಾರ್ಯವೈಖರಿಯನ್ನು ನೋಡಿದ ಕೆಲವರು ಮತ್ಸರ ಪಡುವಂತಾಗುತ್ತದೆ. ಭಕ್ತಿಯಿಂದ ಈಶ್ವರನನ್ನು ಆರಾಧಿಸಿ ಶುಭವಾಗುವುದು.

ಧನು: ನಿಮ್ಮ ತಪ್ಪುಗಳನ್ನು ತಿದ್ದಿ ಹೇಳುವಲ್ಲಿ ಹಿರಿಯ ಅಧಿಕಾರಿಗಳು ನಿಮ್ಮ ನೆರವಿಗೆ ನಿಲ್ಲುವರು. ವಾಸಸ್ಥಾನದ ಬದಲಾವಣೆಯನ್ನು ಬಯಸಿದ ನಿಮಗೆ ಇಂದು ಹರ್ಷದ ಸಮಯ. ಸಾಂಸಾರಿಕವಾಗಿ ಸಮ್ಮಿಶ್ರ ಫಲವಿದೆ.

ಮಕರ: ರಾಜಕೀಯ ವಿಷಯಗಳ ಸಮಾಲೋಚನೆಗೆ ಉತ್ತಮ ಸಮಯ. ಹೆಚ್ಚುವರಿ ವರಮಾನದ ಮೂಲವನ್ನು ಹುಡುಕುವ ಪ್ರಯತ್ನ ಮಾಡಿರಿ. ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ. ಪಾನೀಯ ಮಾರಾಟಗಾರರಿಗೆ ಶುಭ ದಿನ.

ಕುಂಭ: ಯಾವ ಒತ್ತಡಗಳಿಗೂ, ಯಾರ ದಬ್ಬಾಳಿಕೆಗೂ ಒಳಗಾಗದೆ ಸ್ವತಂತ್ರವಾಗಿರಲು ಬಯಸುವಿರಿ. ಅನಗತ್ಯ ವಿಷಯಗಳಿಂದ ದೂರವಿರುವುದು ನಿಮ್ಮ ಯೋಜನೆಗಳನ್ನು ಗಂಭೀರವಾಗಿ ಪರಿಗಣಿಸಲು ಅನುಕೂಲವಾಗುವುದು.

ಮೀನ: ಕೆಲವೊಂದು ಅನಿರೀಕ್ಷಿತ ಘಟನೆಗಳಿಂದ ಸುತ್ತಮುತ್ತಲಿನ ವಾತಾವರಣವೂ ಧನಾತ್ಮಕವಾಗಿ ಬದಲಾವಣೆಯಾಗುವುದು. ಸಹೋದ್ಯೋಗಿಗಳೊಡನೆ ಸಹನೆಯಿಂದ ನಡೆದುಕೊಳ್ಳಿ.

ಪದಬಂಧ 4900

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಶಿವನ ಬಳಿಯಿರಿಸಿದ ಮಣ್ಣಿನ ಬಾನಿ (3)
3.ಸಮೀಪದಲ್ಲಿದ್ದು ಸೂಕ್ಷ್ಮವಾಗಿಯೇ ಪರಿಶೀಲಿಸುವವ (4)
5.ವ್ಯಾಕರಣದ ವಿಭಕ್ತಿಗಳಲ್ಲಿ ಮೊದಲನೆಯದು (3)
6.ಬೆನ್ನೆಲುಬಿರುವ ಪ್ರಾಣಿ (3)
8.ಒಳ್ಳೆಯ ಅದೃಷ್ಟವನ್ನು ಹೊಂದಿರುವುದು (3)
10.ಸಂತಸದಿಂದ ಉಕ್ಕಿದ ಕಣ್ಣೀರು (4)
11.ನೆತ್ತರಲ್ಲಿ ಸೇರಿರುವುದು (4)
12.ಹೊಂಗೆಯ ಮರವಿದು (3)
14.ಬನವಾಸಿಯನ್ನಾಳಿದ ರಾಜವಂಶ (3)
16.ಅತ್ಯಾಸಕ್ತಿಯಿಂದ ಕೂಡಿದವನು (3)
18.ವೇದಾದಿಗಳನ್ನು ಅಧ್ಯಯನ ಮಾಡಿದವ (4)
19.ಗ್ರಹ ನಕ್ಷತ್ರಾದಿಗಳಿಗೆ ಸಂಬಂಧಿಸಿದ ಶಾಸ್ತ್ರ (3)

ಮೇಲಿಂದ ಕೆಳಕ್ಕೆ

2.ಈತ ಬ್ರಾಹ್ಮಣ! (2)
3.ಆರಂಭವಾಗಿದೆ ಈ ಉತ್ಸವ! (4)
4.ಸ್ವಲ್ಪ ಕಾಲದಲ್ಲಿಯೇ ನಾಶವಾಗತಕ್ಕದ್ದು (3)
7.ಅಳು ಅಥವಾ ರೋದನ (3)
8.ಅಶ್ರು ಏಕೆ? ಪ್ರಾಚೀನ ವೈದ್ಯ ಇಲ್ಲಿಹನಲ್ಲಾ? (3)
9.ದುಷ್ಟಶಕ್ತಿಗಳ ಹತ್ತಿರವಿರುವ ನಂಜು (3)
10.ದೈವ, ಧರ್ಮಗಳಲ್ಲಿ ನಂಬಿಕೆಯುಳ್ಳವ (3)
13.ಮಾತು ಆಡುತ್ತಿರುವ ಸೋದರತ್ತೆ! (4)
15.ದುಡ್ಡು ಕಾಸು ಏನೇನೂ ಇಲ್ಲದವನು (3)
17.ಸಖ್ಯತೆ ಬೆಳಸಿಕೊಂಡಿರುವವ (2)

1		2	■	3		4		■
■	■	5			■		■	■
■	■	■	■		■	6		7
■	■	■	8		9	■	■	
10				■	11			
	■	■	12	13		■	■	■
14		15	■		■	■	■	■
■	■		■	16		17	■	■
■	18				■	19		

4899ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪೋದ್ಘಾತ 3.ಚತುಷ್ಪಾದಿ
5.ಕಮ್ಮಟ 6.ರಿವಾಜು
8.ಮಂಥನ 9.ಕಡಿಮೆ
10.ಪಲ್ಲವಿ 12.ಅವನಿ
14.ಗರಗಸ 15.ಮತದಾನ

ಮೇಲಿಂದ ಕೆಳಕ್ಕೆ:
1.ಉಸಾಬರಿ 2.ತವಕ
3.ಚರಟ 4.ದಿಗ್ಬಂಧನ
7.ಜುಲುಮೆ 8.ಮಂಟಪ
9.ಕವಾಡಿಗ 11.ವಿಕಸನ
12.ಅರಸ 13.ನಿಯಮ

ಸುಡೊಕು 5286

	2			6	7	4		
3		4					7	2
	7			4	8		6	3
	4			3			8	
8		9		7				
	5		8		4		9	7
2				9		7	3	
		3						
6			4			5		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5285 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

16ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎ. ಕೃಷ್ಣ ರೆಡ್ಡಿ (ಮಡಿವಾಳ)

ನೀವು ನಮ್ಮನ್ನಗಲಿ ಇಂದಿಗೆ 16 ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ. ನಿಮ್ಮ ಮಾರ್ಗದರ್ಶನ ನಮಗೆ ಸದಾ ದಾರಿದೀಪವಾಗಿದೆ.

ಇಂತಿ ದುಃಖತಪ್ತರು ಧರ್ಮಪತ್ನಿ ಮತ್ತು ಮಕ್ಕಳು, ಮೊಮ್ಮಕ್ಕಳು.

ಸವಿನೆನಪು

ಶ್ರೀಮತಿ ಶಾರದ

ನಿಧನ: 17-03-2005

ನೀವು ನಮ್ಮನ್ನಗಲಿ ಇಂದಿಗೆ 17 ವರ್ಷಗಳಾದರೂ, ನಿಮ್ಮ ಸವಿನೆನಪು ನಮ್ಮಲ್ಲಿ ಸದಾ ಹಸಿರು, ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಸದಾ ಸ್ಮರಿಸುವ

ದುಃಖತಪ್ತ: ಮಗ-ಬಿ.ಎಸ್.ಕೃಷ್ಣ ಮತ್ತು ಕುಟುಂಬದವರು ಸಿಬ್ಬಂದಿ ವರ್ಗ, ಬನಶಂಕರಿ ಗ್ಲಾಸ್ ಅಂಡ್ ಪ್ಲೈವುಡ್ಸ್

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಎ.ಪದ್ಮರವರು

ಇವರು ದಿನಾಂಕ 08.03.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಇಂತಿ ದುಃಖತಪ್ತರು

ಕೆ.ಎನ್. ನರಸಿಂಹಯ್ಯ, ಮಾಜಿ ಅಧ್ಯಕ್ಷರು ಕೆ.ಇ.ಬಿ.ಇ.ಯು ಮತ್ತು ಮಾಜಿ ಕೆ.ಇ.ಬಿ. ಸದಸ್ಯರು, ಮತ್ತು ಕುಟುಂಬ ವರ್ಗದವರು.

LOOKING FOR JOB OPPORTUNITY

Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಂಪ್ಲೇಟ್ಸ್ ಅಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಷೇರುಪೇಟೆ ವಹಿವಾಟು	
1040	
ಹಿಂದಿನ ಅಂತ್ಯ	55,776
ಇಂದಿನ ಅಂತ್ಯ	56,816



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	16,663
ಇಂದಿನ ಅಂತ್ಯ	16,975
▲	312
ದಿನದ ಗರಿಷ್ಠ	16,988

ವಿನಿಮಯ ದರ	
$ ಡಾಲರ್	76.28
£ ಪೌಂಡ್	99.61
€ ಯುರೊ	83.79
¥ ಯೆನ್ (100ಕ್ಕೆ)	64

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹393

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1590 (1610)
ಸೋಯಾ (ರಿಫೈನ್ಡ್)	₹1550 (1560)
ಸೂರ್ಯಕಾಂತಿ (ರಿಫೈನ್ಡ್)	1900 (1900)
ಪಾಮೋಲಿನ್	₹1538 (1547)

ಕಚ್ಚಾ ತೈಲ ದರ ಏರಿಕೆ ಪರಿಣಾಮ: ಎಟಿಎಫ್ ಬೆಲೆ ಬುಧವಾರ ಶೇ 18ರಷ್ಟು ಹೆಚ್ಚಳ

ದಾಖಲೆ ಮಟ್ಟಕ್ಕೆ ವಿಮಾನ ಇಂಧನ ದರ

ನವದೆಹಲಿ (ಪಿಟಿಐ): ವಿಮಾನ ಇಂಧನ (ಜೆಟ್ ಇಂಧನ) ದರವನ್ನು ಬುಧವಾರ ಶೇಕಡ 18ರಷ್ಟು ಏರಿಕೆ ಮಾಡಲಾಗಿದೆ. ಸಾರ್ವಕಾಲಿಕ ಗರಿಷ್ಠ ಪ್ರಮಾಣದ ಏರಿಕೆ ಇದಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ದರ ಏರಿಕೆಗೆ ಅನುಗುಣವಾಗಿ ವಿಮಾನ ಇಂಧನ ದರದಲ್ಲಿ ಹೆಚ್ಚಳ ಮಾಡಲಾಗಿದೆ. ಈ ವರ್ಷದಲ್ಲಿ ಸತತ ಆರನೇ ಬಾರಿಗೆ ವಿಮಾನ ಇಂಧನ ದರ ಏರಿಕೆಯಾಗಿದೆ. ಹೀಗಾಗಿ ಇದೇ ಮೊದಲ ಬಾರಿಗೆ ಕಿಲೋ ಲೀಟರ್ ಬೆಲೆಯು ₹ 1 ಲಕ್ಷವನ್ನು ದಾಟಿದೆ. (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್).

ಈ ವರ್ಷದ ಜನವರಿ1ರಿಂದ ಬುಧವಾರದವರೆಗೆ ಒಟ್ಟು ಆರು ಬಾರಿ ಬೆಲೆ ಹೆಚ್ಚಳ ಮಾಡಲಾಗಿದೆ. ಈ ಅವಧಿಯಲ್ಲಿ ಬೆಲೆ ಏರಿಕೆಯು ₹ 36,643.88ರಷ್ಟಾಗಿದೆ. ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ಅಧಿಸೂಚನೆಯ ಪ್ರಕಾರ, ದೆಹಲಿಯಲ್ಲಿ ವಿಮಾನ ಇಂಧನ ದರವು ಪ್ರತಿ ಕಿಲೋ ಲೀಟರಿಗೆ ₹ 17,135.63ರಷ್ಟು (ಶೇ 18.3) ಹೆಚ್ಚಿಸಲಾಗಿದೆ. ಇದರಿಂದ ಪ್ರತಿ ಕಿಲೋ ಲೀಟರ್ ದರವು ₹ 1,10,666.29 ಕ್ಕೆ ಏರಿಕೆ ಆಗಿದೆ.

ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಕಳೆದ ವಾರ ಬ್ಯಾರಲ್‌ಗೆ 140 ಡಾಲರ್‌ಗಳ ಸಮೀಪಕ್ಕೆ ತಲುಪಿತ್ತು. ಆ ಬಳಿಕ ಬ್ಯಾರಲ್‌ಗೆ 100 ಡಾಲರ್‌ಗಳ ಆಸುಪಾಸಿಗೆ ಬಂದಿದೆ. ಪೆಟ್ರೋಲ್, ಡೀಸೆಲ್ ದರದಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಈ ಎರಡು ತೈಲೋತ್ಪನ್ನಗಳ ಬೆಲೆಯು 132 ದಿನಗಳಿಂದಲೂ ಯಥಾಸ್ಥಿತಿಯಲ್ಲಿಯೇ ಇದೆ.

ಮುಖ್ಯಾಂಶಗಳು
- ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ
- ಕಿಲೋ ಲೀಟರಿಗೆ ₹ 1 ಲಕ್ಷ ದಾಟಿದ ದರ

ಬೆಲೆ ಏರಿಕೆ ನಿರೀಕ್ಷೆ: ಇಂಧನ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಐದು ರಾಜ್ಯಗಳ ಚುನಾವಣೆ ಬಳಿಕ ದೇಶದಲ್ಲಿ ಇಂಧನ ದರ ಹೆಚ್ಚಾಗುತ್ತದೆ ಎಂಬ ನಿರೀಕ್ಷೆಯಿಂದಾಗಿ ಮಾರ್ಚ್ ತಿಂಗಳ ಮೊದಲ 15 ದಿನಗಳಲ್ಲಿ ಇಂಧನ ಮಾರಾಟವು ಕೋವಿಡ್ ಪೂರ್ವದ ಮಟ್ಟವನ್ನು ಮೀರಿದೆ.

ಉದ್ಯಮದ ಪ್ರಾಥಮಿಕ ಮಾಹಿತಿಯ ಪ್ರಕಾರ, ಮಾರ್ಚ್ 1ರಿಂದ 15ರವರೆಗಿನ ಅವಧಿಯಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು 12.3 ಲಕ್ಷ ಟನ್ ಪೆಟ್ರೋಲ್ ಮಾರಾಟ ಮಾಡಿವೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಮಾರಾಟವು ಶೇ 18ರಷ್ಟು ಏರಿಕೆ ಆಗಿದೆ. 2019ರ ಮಾರ್ಚ್‌ನ 15 ದಿನಗಳ ಅವಧಿಗಿಂತ ಶೇ 24.4ರಷ್ಟು ಹೆಚ್ಚು ಮಾರಾಟ ಆಗಿದೆ.

ಡೀಸೆಲ್ ಮಾರಾಟವು ಶೇ 23.7ರಷ್ಟು ಹೆಚ್ಚಾಗಿ 35.3 ಲಕ್ಷ ಟನ್‌ಗೆ ತಲುಪಿದೆ. 2019ರ ಮಾರ್ಚ್ 1ರಿಂದ 15ರವರೆಗೆ ಆಗಿದ್ದ ಮಾರಾಟಕ್ಕೆ ಹೋಲಿಸಿದರೆ ಶೇ 17.3ರಷ್ಟು ಹೆಚ್ಚಾಗಿದೆ.

ಮುಂಬೈ ಧಾರಣೆ

ಶೇಂಗಾ 16-3-2022	
ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10550-10600
ದಪ್ಪ ಮಧ್ಯಪ್ರದೇಶ(ಹೊಸ)	10450-10500
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1620)
ಒಂದು ವಾರದ ಡೆಲಿವರಿ	1595 (1615)
ಸೋಯಾ ಕಚ್ಚಾ	1535 (1550)
ಪಾಮ್ ವಾರದ ಡೆಲಿವರಿ	1536 (1545)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,100 (51,200)
ಬೆಳ್ಳಿ ಕೆ.ಜಿ 67,200 (67,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸೆನ್ಸೆಕ್ಸ್ 1,040 ಅಂಶ ಜಿಗಿತ

ಜಾಗತಿಕ ಷೇರುಪೇಟೆಗಳ ವಹಿವಾಟು ಚೇತರಿಕೆ ಪ್ರಭಾವ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಬುಧವಾರದ ವಹಿವಾಟಿನಲ್ಲಿ ಉತ್ತಮ ಚೇತರಿಕೆ ಕಂಡವು. ಕದನ ವಿರಾಮ ಘೋಷಿಸುವ ಸಂಬಂಧ ರಷ್ಯಾ ಮತ್ತು ಉಕ್ರೇನ್ ಮಧ್ಯೆ ನಡೆಯುತ್ತಿರುವ ಮಾತುಕತೆ ಪ್ರಗತಿ ಕಾಣುವ ಭರವಸೆ ವ್ಯಕ್ತವಾಗಿರುವುದು ಜಾಗತಿಕ ಷೇರುಪೇಟೆಗಳಲ್ಲಿ ವಹಿವಾಟು ಚೇತರಿಕೆಗೆ ಕಾರಣವಾಯಿತು. ಹೀಗಾಗಿ ದೇಶಿ ಷೇರುಪೇಟೆಗಳಲ್ಲಿಯೂ ಸಕಾರಾತ್ಮಕ ವಹಿವಾಟು ನಡೆಯಿತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ವೃದ್ಧಿ ಆಗಿರುವುದು ಸಹ ವಹಿವಾಟಿನ ಮೇಲೆ ಪ್ರಭಾವ ಬೀರಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,040 ಅಂಶ ಜಿಗಿತ ಕಂಡು 56,816 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 312 ಅಂಶ ಹೆಚ್ಚಾಗಿ 16,975 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ರಷ್ಯಾ ಜೊತೆ ಸಂಧಾನ ಮಾಡಿಕೊಳ್ಳಲು ಅವಕಾಶಗಳಿವೆ ಎಂದು ಉಕ್ರೇನ್ ಹೇಳಿರುವುದು ಜಾಗತಿಕ ಷೇರುಪೇಟೆಗಳ ಸೂಚ್ಯಂಕ ಏರಿಕೆಗೆ ಕಾರಣವಾಯಿತು. ಅಮೆರಿಕದ ಫೆಡರಲ್ ರಿಸರ್ವ್‌ನ ಹಣಕಾಸು ನೀತಿ ನಿರ್ಧಾರಗಳಿಗೆ ದೇಶಿ ಷೇರುಪೇಟೆಗಳು ಗುರುವಾರ ಪ್ರತಿಕ್ರಿಯೆ ನೀಡಲಿವೆ ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಬುಧವಾರ ₹ 31 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ. ಇದು ಸಹ ಷೇರುಪೇಟೆಗಳಲ್ಲಿ ಸೂಚ್ಯಂಕದ ಓಟಕ್ಕೆ ಬೆಂಬಲ ನೀಡಿದೆ.

ಕಚ್ಚಾ ತೈಲ ದರ ಏರಿಕೆ

ಮುಂಬೈ: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಬುಧವಾರ ಶೇಕಡ 2.94ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 102.85 ಡಾಲರ್‌ಗಳಿಗೆ ತಲುಪಿದೆ. ಬ್ರೆಂಟ್ ಕಚ್ಚಾ ತೈಲದ ದರವು ಮಂಗಳವಾರ 100 ಡಾಲರ್‌ಗಿಂತ ಕಡಿಮೆ ಆಗಿತ್ತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 41 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 76.21ರಂತೆ ವಿನಿಮಯಗೊಂಡಿತು.

ಎಂಜಿನ್ ಹಾನಿ ದುರಸ್ತಿಗೆ 'ಸಿಸಿಪಿ': ಮಾರುತಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ತನ್ನ ವಾಹನ ಮಾರಾಟದ ನಂತರದ ಸೇವೆಯನ್ನು ಇನ್ನಷ್ಟು ಬಲಪಡಿಸಲು 'ಕಸ್ಟಮರ್ ಕನ್ವೀನಿಯನ್ಸ್ ಪ್ಯಾಕೇಜ್' (ಸಿಸಿಪಿ) ಆರಂಭಿಸಿದೆ. ಈ ಪ್ಯಾಕೇಜ್ ಪಡೆಯಲು ಗ್ರಾಹಕರು ಶುಲ್ಕ ಪಾವತಿಸಬೇಕು. ಆಲ್ಟೊ ಮತ್ತು ವ್ಯಾಗನ್ ಆರ್ ವಾಹನ ಆದರೆ ₹ 500 ಪಾವತಿಸಬೇಕಾಗುತ್ತದೆ.

ಕಲಬೆರಕೆ ಇಂಧನದಿಂದಾಗಿ ಕಾರಿನ ಎಂಜಿನ್ ಸೀಜ್ ಆದಲ್ಲಿ ಅಂತಹ ವಾಹನವನ್ನು ಕಂಪನಿಯ ಸರ್ವಿಸ್ ಸ್ಟೇಷನ್‌ಗೆ ತಂದರೆ ಯಾವುದೇ ಪ್ರಶ್ನೆ ಮಾಡದೆ ಅದನ್ನು ಸರಿಪಡಿಸಲಾಗುವುದು ಎಂದು ಕಂಪನಿಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಪಾರ್ಥೊ ಬ್ಯಾನರ್ಜಿ ತಿಳಿಸಿದ್ದಾರೆ.

ಅತಿಯಾದ ಮಳೆಯಿಂದ ರಸ್ತೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುವುದರಿಂದ ವಾಹನಗಳ ಎಂಜಿನ್‌ಗೆ ನೀರು ನುಗ್ಗಿ ಎಂಜಿನ್‌ಗೆ ಸೀಜ್ ಆಗಿದೆ ಎಂದು ಗ್ರಾಹಕರು ಕರೆ ಮಾಡುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ನೆರವಾಲು 'ಸಿಸಿಪಿ' ಆರಂಭಿಸಲಾಗಿದೆ ಎಂದಿದ್ದಾರೆ.

ಹ್ಯಾವೆಲ್ಸ್‌ನಿಂದ ಹೊಸ ಶ್ರೇಣಿಯ ಫ್ಯಾನ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹ್ಯಾವೆಲ್ಸ್ ಇಂಡಿಯಾ ಕಂಪನಿಯು ವಿದ್ಯುತ್ ಉಳಿತಾಯ ಮಾಡಬಲ್ಲ ಹೊಸ ಶ್ರೇಣಿಯ ಇಕೊಆ್ಯಕ್ಟಿವ್ ಫ್ಯಾನ್‌ಗಳನ್ನು ಬಿಡುಗಡೆ ಮಾಡಿದೆ.

ಸೀಲಿಂಗ್, ಪೆಡೆಸ್ಟಲ್, ವಾಲ್ ಮತ್ತು ವೆಂಟಿಲೇಟರ್‌ಗಳಲ್ಲಿ ಅಳವಡಿಸಬಹುದಾದ 19 ಹೊಸ ಮಾದರಿಗಳು ಈ ಶ್ರೇಣಿಯಲ್ಲಿ ಇವೆ. ಇವುಗಳನ್ನು ಬಳಸಿ ಗ್ರಾಹಕರು ವಿದ್ಯುತ್ ಬಿಲ್‌ನಲ್ಲಿ ವಾರ್ಷಿಕ ₹ 1,900ವರೆಗೆ ಉಳಿತಾಯ ಮಾಡಬಹುದು ಎಂದು ಕಂಪನಿಯು ತನ್ನ ಪ್ರಕಟಣೆಯಲ್ಲಿ ಹೇಳಿಕೊಂಡಿದೆ.

'ನಮ್ಮ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗವು ವಿನ್ಯಾಸಗೊಳಿಸಿರುವ ಈ ಫ್ಯಾನ್‌ಗಳು ವಿನ್ಯಾಸ ಮತ್ತು ಉತ್ತಮ ಗುಣಮಟ್ಟಕ್ಕೆ ಕಂಪನಿಯು ಹೊಂದಿರುವ ಬದ್ಧತೆಯ ಸೂಚಕಗಳು. ಫ್ಯಾನ್ ವಿಭಾಗದಲ್ಲಿ ಸದಾ ಹೊಸತನ್ನು ತರುವ ಪ್ರಯತ್ನ ಮಾಡುತ್ತಿದ್ದು ಇದರಿಂದಾಗಿ ಪ್ರೀಮಿಯಂ ಡೆಕೊರೇಟಿವ್ ವಿಭಾಗದಲ್ಲಿ ಕಂಪನಿಯು ಮುಂಚೂಣಿಯಲ್ಲಿದೆ' ಎಂದು ಹ್ಯಾವೆಲ್ಸ್ ಇಂಡಿಯಾ ಲಿಮಿಟೆಡ್‌ನ ಎಲೆಕ್ಟ್ರಿಕಲ್ ಕನ್ಸ್ಯೂಮರ್ ಡ್ಯೂರೆಬಲ್ಸ್‌ನ ಅಧ್ಯಕ್ಷ ರವೀಂದ್ರ ಸಿಂಗ್ ನೇಗಿ ತಿಳಿಸಿದ್ದಾರೆ.

ಐಒಟಿ ಮಾದರಿಯ ಸೀಲಿಂಗ್ ಫ್ಯಾನ್‌ನಲ್ಲಿ ಉದ್ಯಮದಲ್ಲಿಯೇ ಮೊದಲ ಬಾರಿಗೆ 'ಸ್ಮಾರ್ಟ್ ಮೋಡ್' ವೈಶಿಷ್ಟ್ಯ ಬಳಸಲಾಗಿದೆ. ಕೊಠಡಿಯ ಉಷ್ಣತೆ ಮತ್ತು ವಾತಾವರಣಕ್ಕೆ ಅನುಗುಣವಾಗಿ ಫ್ಯಾನ್ ತಾನಾಗಿಯೇ ವೇಗ ಬದಲಿಸಿಕೊಳ್ಳುತ್ತದೆ. ಬಳಕೆದಾರರ ಅನುಕೂಲಕ್ಕಾಗಿ ಉಷ್ಣತೆ ಮತ್ತು ವೇಗದ ವಿವರವನ್ನೂ ನೀಡಲಿದೆ ಎಂದು ಕಂಪನಿ ಹೇಳಿದೆ.

ನೆರೆಯ ದೇಶಗಳಿಂದ 347 ಎಫ್‌ಡಿಐ ಪ್ರಸ್ತಾವ

ನವದೆಹಲಿ (ಪಿಟಿಐ): ಭಾರತದ ಜೊತೆ ಗಡಿ ಹಂಚಿಕೊಂಡಿರುವ ದೇಶಗಳಿಂದ ಒಟ್ಟು 347 ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಪ್ರಸ್ತಾವಗಳು 2020ರ ಏಪ್ರಿಲ್ 18ರ ನಂತರ ಬಂದಿವೆ. ಈ ಎಫ್‌ಡಿಐ ಪ್ರಸ್ತಾವಗಳ ಒಟ್ಟು ಮೊತ್ತವು ₹ 75,951 ಕೋಟಿ. ಬಂದ ಪ್ರಸ್ತಾವಗಳ ಪೈಕಿ ಈವರೆಗೆ ಒಟ್ಟು 66 ಪ್ರಸ್ತಾವಗಳಿಗೆ ಅನುಮೋದನೆ ನೀಡಲಾಗಿದೆ.

ಈ ಮಾಹಿತಿಯನ್ನು ಕೇಂದ್ರ ಸರ್ಕಾರವು ಸಂಸತ್ತಿ ಬುಧವಾರ ನೀಡಿದೆ. ಬಂದ ಪ್ರಸ್ತಾವಗಳ ಪೈಕಿ 193 ಪ್ರಸ್ತಾವಗಳನ್ನು ತಿರಸ್ಕರಿಸಲಾಗಿದೆ ಅಥವಾ ಮುಕ್ತಾಯಗೊಳಿಸಲಾಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಖಾತೆ ರಾಜ್ಯ ಸಚಿವ ಸೋಮಪ್ರಕಾಶ್ ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಭಾರತದ ಕಂಪನಿಗಳನ್ನು, ಭಾರತದ ಜೊತೆ ಗಡಿ ಹಂಚಿಕೊಂಡಿರುವ ದೇಶಗಳ ಕಂಪನಿಗಳು ಅವಕಾಶವಾದಿ ಧೋರಣೆಯಲ್ಲಿ ಸ್ವಾಧೀನ ಮಾಡಿಕೊಳ್ಳುವುದನ್ನು ತಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರವು ಇಂತಹ ದೇಶಗಳಿಂದ ಬರುವ ಹೂಡಿಕೆ ಪ್ರಸ್ತಾವಗಳಿಗೆ ಅನುಮತಿ ಕಡ್ಡಾಯ ಎಂಬ ನಿಯಮ ಜಾರಿಗೊಳಿಸಿದೆ.

ಚೀನಾ, ಬಾಂಗ್ಲಾದೇಶ, ಪಾಕಿಸ್ತಾನ, ಭೂತಾನ, ನೇಪಾಳ, ಮ್ಯಾನ್ಮಾರ್ ಮತ್ತು ಅಫ್ಗಾನಿಸ್ತಾನ ಭಾರತದ ಜೊತೆ ಗಡಿ ಹಂಚಿಕೊಂಡಿವೆ.

ಈ ದೇಶಗಳಿಂದ ಭಾರತದ ಯಾವುದೇ ವಲಯಕ್ಕೆ ಬರುವ ಎಫ್‌ಡಿಐ ಪ್ರಸ್ತಾವಗಳು ಕೇಂದ್ರದ ಅನುಮತಿ ಪಡೆದುಕೊಳ್ಳಬೇಕು. ಸರ್ಕಾರವು ಅನುಮತಿ ನೀಡಿರುವ 66 ಪ್ರಸ್ತಾವಗಳ ಒಟ್ಟು ಮೌಲ್ಯ ₹ 13,624 ಕೋಟಿ.

ಮಳಿಗೆಗಳನ್ನು ರಿಲಯನ್ಸ್‌ನಿಂದ ಹಿಂಪಡೆಯುತ್ತೇವೆ: ಫ್ಯೂಚರ್

ನವದೆಹಲಿ (ರಾಯಿಟರ್ಸ್): ರಿಲಯನ್ಸ್ ಕಂಪನಿಯು ಸ್ವಾಧೀನ ಮಾಡಿಕೊಂಡಿರುವ ತನ್ನ ಮಳಿಗೆಗಳನ್ನು ಮತ್ತೆ ವಶಕ್ಕೆ ತೆಗೆದುಕೊಳ್ಳಲು ಬದ್ಧವಾಗಿರುವುದಾಗಿ ಫ್ಯೂಚರ್ ರಿಟೇಲ್ ಬುಧವಾರ ಹೇಳಿದೆ. ರಿಲಯನ್ಸ್ ಕಂಪನಿಯ ನಡೆಯು ತನಗೆ ಆಶ್ಚರ್ಯ ತರಿಸಿದೆ ಎಂದೂ ಫ್ಯೂಚರ್ ರಿಟೇಲ್ ಹೇಳಿದೆ.

ದೇಶದ ರಿಟೇಲ್ ಮಾರುಕಟ್ಟೆಯಲ್ಲಿ ರಿಲಯನ್ಸ್ ದೊಡ್ಡ ಪಾಲು ಹೊಂದಿದೆ. ರಿಲಯನ್ಸ್ ಕಂಪನಿಯ ಪ್ರತಿನಿಧಿಗಳು ಫೆಬ್ರುವರಿ 25ರಂದು ಫ್ಯೂಚರ್ ಕಂಪನಿಯ ದೊಡ್ಡ ಮಳಿಗೆಗಳಿಗೆ ತೆರಳಿ, ಅವುಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಮುಂದಾಗಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	505
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	24509-29089
ಕೋಕ	14089-25699
ಫ್ಯಾಕ್ಟರಿ	12019-19100
ಹಳೆಚಾಲಿ	41019-46899
ಹೊಸಚಾಲಿ	35609-39099
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	23108-30508
ಕೋಕ	20199-29989
ಹೊಸಚಾಲಿ	34658-41129
ಕೆಂಪುಗೋಟು	26099-30889
ರಾಶಿ	43009-46439
ತಟ್ಟಿಬೆಟ್ಟೆ	30069-38509
ಶಿರಸಿ	
ಬೆಟ್ಟೆ	36519-43899
ಬಿಳಿಗೋಟು	21899-32213
ಚಾಲಿ	3509-39818
ರಾಶಿ	45318-47266
ಶಿವಮೊಗ್ಗ	
ಬೆಟ್ಟೆ	47219-49155
ಬಿಳಿಗೋಟು	15209-34099
ರಾಶಿ	43009-45891
ಸರಕು	53440-75696

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15600	15400	15450	218.80 ಸೆಂಟ್ಸ್
ಎಸಿ	7560	7700	7900	
ಆರ್‌ಪಿ	8400	8250	8525	
ಆರ್‌ಸಿ	4000	3900	3950	2115 ಡಾಲರ್ಸ್

2021ರಲ್ಲಿ ಅದಾನಿ ಸಂಪತ್ತು ₹ 3.73 ಲಕ್ಷ ಕೋಟಿ ಏರಿಕೆ



ಗೌತಮ್ ಅದಾನಿ

ನವದೆಹಲಿ (ಪಿಟಿಐ): ದೇಶದ ಎರಡನೆಯ ಅತ್ಯಂತ ಶ್ರೀಮಂತ ವ್ಯಕ್ತಿ ಗೌತಮ್ ಅದಾನಿ ಅವರು ಹಿಂದಿನ ವರ್ಷದಲ್ಲಿ ತಮ್ಮ ಸಂಪತ್ತು ಮೌಲ್ಯವನ್ನು ₹ 3.73 ಲಕ್ಷ ಕೋಟಿಯಷ್ಟು ಹೆಚ್ಚಿಸಿಕೊಂಡಿದ್ದಾರೆ. ಅದಾನಿ ಅವರ ಒಟ್ಟು ಸಂಪತ್ತಿನ ಮೌಲ್ಯವು ₹ 6.17 ಲಕ್ಷ ಕೋಟಿ.

ಅದಾನಿ ಅವರ ಸಂಪತ್ತಿನಲ್ಲಿ 2021ರಲ್ಲಿ ಆಗಿರುವ ಹೆಚ್ಚಳವು ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಗಳಾದ ಎಲಾನ್ ಮಸ್ಕ್, ಜೆಫ್ ಬೆಜಾಸ್ ಮತ್ತು ಬರ್ನಾರ್ಡ್ ಅರ್ನಾಲ್ಟ್ ಅವರ ಒಟ್ಟು ಸಂಪತ್ತು ಕಳೆದ ವರ್ಷದಲ್ಲಿ ಕಂಡ ಹೆಚ್ಚಳಕ್ಕಿಂತಲೂ ಜಾಸ್ತಿ ಎಂದು ಹುರೂನ್ ಜಾಗತಿಕ ಶ್ರೀಮಂತರ ಪಟ್ಟಿಯು ಹೇಳಿದೆ.

ಈ ಪಟ್ಟಿಯ ಪ್ರಕಾರ, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ದೇಶದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿ ಮುಂದುವರಿದಿದ್ದಾರೆ. ಅವರ ಸಂಪತ್ತು ಮೌಲ್ಯ ಶೇಕಡ 24ರಷ್ಟು ಹೆಚ್ಚಳ ಕಂಡು, ₹ 7.84 ಲಕ್ಷ ಕೋಟಿಗೆ ತಲುಪಿದೆ.

ಕಳೆದ ಹತ್ತು ವರ್ಷಗಳಲ್ಲಿ ಅಂಬಾನಿ ಅವರ ಸಂಪತ್ತು ಮೌಲ್ಯವು ಶೇ 400ರಷ್ಟು, ಅದಾನಿ ಅವರ ಸಂಪತ್ತು ಮೌಲ್ಯವು ಶೇ 1,830ರಷ್ಟು ಹೆಚ್ಚಳವಾಗಿದೆ ಎಂದು ವರದಿ ಹೇಳಿದೆ.

ಎಚ್‌ಸಿಎಲ್ ಕಂಪನಿಯ ಶಿವ ನಾಡಾರ್ (3ನೆಯ ಸ್ಥಾನ), ಸೀರಂ ಇನ್‌ಸ್ಟಿಟ್ಯೂಟ್‌ನ ಸೈರಸ್ ಪೂನಾವಾಲಾ (4ನೆಯ ಸ್ಥಾನ) ಮತ್ತು ಉಕ್ಕು ಉದ್ಯಮಿ ಲಕ್ಷ್ಮೀ ಎನ್. ಮಿತ್ತಲ್ (5ನೆಯ ಸ್ಥಾನ) ಪಟ್ಟಿಯಲ್ಲಿ ಇರುವ ಇತರ ಪ್ರಮುಖರು.

ನವೀಕರಿಸಬಹುದಾದ ಇಂಧನ ಕಂಪನಿ ಅದಾನಿ ಗ್ರೀನ್ ಷೇರುಪೇಟೆಯಲ್ಲಿ ನೋಂದಣಿ ಆದ ನಂತರದಲ್ಲಿ ಗೌತಮ್ ಅದಾನಿ ಅವರ ಸಂಪತ್ತು ಮೌಲ್ಯವು ಸರಿಸುಮಾರು ಐದುಪಟ್ಟು ಹೆಚ್ಚಳವಾಗಿದೆ. ನೈಕಾ ಕಂಪನಿ ಸಂಸ್ಥಾಪಕಿ ಫಲ್ಗುಣಿ ನಾಯರ್ ಅವರು ಶ್ರೀಮಂತರ ಪಟ್ಟಿಯಲ್ಲಿ ಹೊಸದಾಗಿ ಸ್ಥಾನ ಪಡೆದಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ಭಾರತದ ಶತಕೋಟ್ಯಧೀಶರ ಸಂಪತ್ತು ಮೌಲ್ಯದಲ್ಲಿ ಆಗಿರುವ ಹೆಚ್ಚಳವು ಸ್ವಿಟ್ಜರ್ಲೆಂಡ್ ದೇಶದ ಜಿಡಿಪಿಗೆ ಸಮ ಎಂದು ಹುರೂನ್ ಸಂಸ್ಥೆಯ ಮುಖ್ಯ ಸಂಶೋಧಕ ಅನಸ್ ರೆಹಮಾನ್ ಹೇಳಿದ್ದಾರೆ. ವಿಶ್ವದ ಶತಕೋಟ್ಯಧೀಶರ ಪೈಕಿ ಶೇಕಡ 8ರಷ್ಟು ಮಂದಿ ಭಾರತದಲ್ಲಿ ಇದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business to Business

Business

★ಮೇಣದಬತ್ತಿ ತಯಾರಿಸಲು★ ತರಬೇತಿ ನೀಡುತ್ತೇವೆ. ಹಾಗೂ ತಯಾರಿಸಿದ ಮೇಣದಬತ್ತಿ ಕೊಂಡುಕೊಳ್ಳುತ್ತೇವೆ. ತರಬೇತಿ, ಸದಸ್ಯತ್ವಕ್ಕಾಗಿ ಬೆಂಗಳೂರು: 9060476868/ 8792252077, ಶಿವಮೊಗ್ಗ:9008013895

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

✓ ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 18,000-56,000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8197650569, 7204396011

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

Wanted

SRISAI ANGELS Group of educational institutions Sirgapura, Malalur (P), Chikmagaluru -77133 Sai Angels CBSE School Requires -Warden for both Boys and Girls Hostel. Qualification - Degree/ Diplomain any branch. Cook -To Prepare both North and South Indian Dishes. Teachers for the School-English Teacher - M.A/ B.A/ B.Ed. with fluency in English.Biology/ Chemistry- M.Sc./ B.Sc. with B.Ed. (CBZ) Experience inteaching high school students will be preferable. Computeroperator experienced in using illustrator, photoshop, coreldraw. Physical Educator - (P.E.T) - M.P.Ed/ B.P.Ed. Sai Angels PU College, M.Sc. In Botany/ Zoology. Experience in NEET Coaching is a must. Remuneration is not a constraint for deserving candidates. Call or Whatsapp your resume to 9740136375 / 8277468559 karthikmj2007@gmail.com

ಮನೆಕೆಲಸ (11,000-14,000) / ಹೋಂನರ್ಸ್ (15,000 - 18,000) ಹೆಂಗಸರು /ಹುಡುಗಿಯರು ಬೇಕಾಗಿದ್ದಾರೆ (12,000-18,000).ಊಟ-ವಸತಿ ಉಚಿತ. ಉಡುಪಿ: 9845276452

ಭವಿಷ್ಯ

Astrology

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

★ನಂ.1 ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್* ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್‌ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845333808

ಪ್ರವಾಸ

Travel

★ಶ್ರೇಯಸ್ ಟೂರ್ಸ್★ ವಿ.ವಿ ಪುರಂ:12.04.2022 6ದಿನಗಳು ಕಾಶಿ,ಗಯಾ,ಅಯೋಧ್ಯಾ,ಪ್ರಯಾಗ್‌ರಾಜ್,ವಿಂಧ್ಯಾವಾಸಿನಿ, ಸೀತಾಮಡು.,09.04.2022, 19.05.2022 11ದಿನಗಳು ನೈಮಿಷ್ಯಾರಣ್ಯ,ಅಯೋಧ್ಯಾ, ಅಲಹಾಬಾದ್,ಚಿತ್ರಕೂಟ, ವಿಂಧ್ಯಾವಾಸಿನಿ,ಕಾಶಿ,ಗಯಾ, ನಳಂದ,ದೇವಘರ್.,20.04.22 10ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ (ಡಿಯು,ನಿಷ್ಕಳಂಕ,ಸರ್ದಾರ್ ಪ್ರತಿಮೆ).,02.05.2022 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ(ಎಲ್ಲಾ ವಿಮಾನದಲ್ಲಿ).,02.05.2022 12ದಿನಗಳು ಚಂದೀಗಡ್,ಸಿಮ್ಲಾ, ಕುಲುಮನಾಲಿ,5ದೇವಿಯರು, ಡಾಲ್‌ಹೌಸಿ,ವೈಷ್ಣೋದೇವಿ, ಅಮೃತಸರ್,ವಾಘಗಡಿ, ಕುರುಕ್ಷೇತ್ರ.,9743351212/ 8073824856/ 9206979202/ 6366322639

★ಶ್ರೇಯಸ್ ಟೂರ್ಸ್★ ವಿ.ವಿ.ಪುರಂ:08.05.2022 14.05.2022 7/12/15/24ದಿನಗಳು ಈಶಾನ್ಯ ಭಾರತ(ಸೆವೆನ್‌ಸಿಸ್ಟರ್ಸ್) ರಾಜ್ಯಗಳ ಪ್ರವಾಸ ಅಸ್ಸಾಂ, ಅರುಣಾಚಲ,ಮೆಘಾಲಯ, ಮಣಿಪುರ,ತ್ರಿಪುರ,ನಾಗಲ್ಯಾಂಡ್, ಮಿಝೋರಾಂ.8073824856/ 9743351212/ 9206979202/ 6366322639

27.04.2022ರಿಂದ ರೈಲು/ಏಸಿ ಬಸ್ಸಿನಲ್ಲಿ 35/22ದಿನಗಳ 'ಚಾರೋಧಾಮ್'ಸಮೇತ ವೈಷ್ಣೋದೇವಿ, ಕೋಲ್ಕತ್ತಾ, ಪುರಿ,ಅಮೃತಸರ್,ಕಾಶಿ, ಗಯಾ,ಹರಿದ್ವಾರ್. 28.05.2022ರಿಂದ ವಿಮಾನ/ಬಸ್ಸಿನಲ್ಲಿ 13ದಿನಗಳ 'ಚಾರೋಧಾಮ್',ಮಸ್ಸೂರಿ, ಗುಪ್ತಕಾಶಿ,ನವದೆಹಲಿ, ಹರಿದ್ವಾರ್. ಜೂನ್/ಜುಲೈ ತಿಂಗಳಲ್ಲಿ ಅಮರನಾಥ್ ಸಮೇತ,ಕಾಶ್ಮೀರ್,ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ,ಹರಿದ್ವಾರ್ 19ದಿನಗಳು. ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್,#164, ಆರ್.ವಿ.ರಸ್ತೆ (ಮಿನರ್ವ ಬಸ್ ಸ್ಟಾಪ್ ಎದುರು)ಬೆಂಗಳೂರು4. ಫೋನ್:8105657052, 9480182865. 08026565085.

23.03.2022, 19.04.2022, 18.05.2022 ಶ್ರೀಲಂಕಾ 8ದಿನಗಳು. 30.03.2022, 12.04.2022, 15.05.2022 ಕಾಶಿ,ಗಯಾ,ಅಯೋಧ್ಯ 7ದಿನಗಳು. 16.04.2022 ಗುಜರಾತ್ 8ದಿನಗಳು. 12.04.2022, 27.04.2022,04.05.2022 ಶಿಮ್ಲಾ,ಕುಲುಮನಾಲಿ 7ದಿನಗಳು. 22.04.2022,16.05.2022 ರಾಮೇಶ್ವರ, ಚಿದಂಬರಂ, ಮದುರೈ 6ದಿನಗಳು. ಮಲೆನಾಡು ಪ್ರವಾಸ 2/3 ದಿನಗಳು. ಇದಲ್ಲದೆ ಕಸ್ಟಮೈಸ್ ಫ್ಯಾಮಿಲಿ ಪ್ರವಾಸಗಳಿಗಾಗಿ ವಿಚಾರಿಸಿ: ಜೈನ್ ಟ್ರಾವೆಲ್ಸ್ ಬೆಂಗಳೂರು-03. 9448402248, 7022547922

★13.05.2022 12/16★ ದಿನಗಳು ಸಿಮ್ಲಾ, ಕುಲು, ಮನಾಲಿ, ವೈಷ್ಣೋದೇವಿ, ಸಪ್ತ ಶಕ್ತಿಪೀಠಗಳು, ಆರ್. ಗಾಂಧಿ ಟೂರ್ಸ್. (ರಿ) 9945445809/ 9902433500

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 30/04/22 ದೆಹಲಿ, ಹರಿದ್ವಾರ್, ವೈಷ್ಣೋದೇವಿ, ಕುಲು, ಮನಾಲಿ, ಅಮೃತ್ಸರ್. 21/04/22 ನೇಪಾಳ್, ಮುಕ್ತಿನಾತ್, ಕಾಶಿ, ಪಶುಪತಿನಾಥ. 9964527782

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಉಕ್ರೇನ್ ಮೇಲಿನ ದಾಳಿ: ರಷ್ಯಾ ಕೈತಪ್ಪಿದ್ದ ಟೂರ್ನಿ ಆಯೋಜನೆ ಅವಕಾಶ

ಚೆಸ್ ಒಲಿಂಪಿಯಾಡ್; ಭಾರತ ಆತಿಥ್ಯ

ಚೆನ್ನೈ (ಪಿಟಿಐ): ಈ ವರ್ಷಾಂತ್ಯದಲ್ಲಿ ನಡೆಯಲಿರುವ 44ನೇ ಚೆಸ್ ಒಲಿಂಪಿಯಾಡ್‌ಗೆ ಭಾರತದ ಚೆನ್ನೈ ಆತಿಥ್ಯ ವಹಿಸಲಿದೆ.

ರಷ್ಯಾದ ರಾಜಧಾನಿ ಮಾಸ್ಕೋದಲ್ಲಿ ಒಲಿಂಪಿಯಾಡ್ ಈ ಮೊದಲು ನಿಗದಿಯಾಗಿತ್ತು. ಆದರೆ ಉಕ್ರೇನ್ ಮೇಲೆ ರಷ್ಯಾ ದಾಳಿಯ ಹಿನ್ನೆಲೆಯಲ್ಲಿ ಸ್ಥಳಾಂತರ ಮಾಡಲಾಗಿದೆ. 2013ರಲ್ಲಿ ವಿಶ್ವ ಚಾಂಪಿಯನ್‌ಷಿಪ್ ಚೆನ್ನೈನಲ್ಲಿ ನಡೆದಿತ್ತು. ಇದೀಗ ಮತ್ತೊಂದು ಬಾರಿ ಜಾಗತಿಕ ಮಟ್ಟದ ಚೆಸ್ ಟೂರ್ನಿಯನ್ನು ಭಾರತ ಆಯೋಜಿಸಲಿದೆ.

ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಈ ಟ್ವಿಟರ್ ಮೂಲಕ ವಿಷಯ ಖಚಿತಪಡಿಸಿದೆ.

‘ಭಾರತದ ಚೆಸ್ ರಾಜಧಾನಿಯಲ್ಲಿ 44ನೇ ಚೆಸ್ ಒಲಿಂಪಿಯಾಡ್ ನಡೆಯಲಿರುವುದು ಸಂತಸದ ಸಂಗತಿ. ತಮಿಳುನಾಡಿಗೆ ಹೆಮ್ಮೆಯ ವಿಷಯವಾಗಿದ್ದು, ವಿಶ್ವದ ‘ಕಿಂಗ್ಸ್‘ ಮತ್ತು ‘ಕ್ವೀನ್ಸ್‘ಗಳನ್ನು ಚೆನ್ನೈ ಸ್ವಾಗತಿಸಲಿದೆ’ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಟ್ವಿಟರ್ ಮೂಲಕ ಮಂಗಳವಾರ ರಾತ್ರಿ ಈ ವಿಷಯ ಪ್ರಕಟಿಸಿದರು.

‘150ಕ್ಕಿಂತ ಹೆಚ್ಚು ದೇಶಗಳ ಆಟಗಾರರು ಟೂರ್ನಿಯಲ್ಲಿ ಪಾಲ್ಗೊಳ್ಳಲಿದ್ದಾರೆ‘ ಎಂದು ಅವರು ಹೇಳಿದ್ದಾರೆ.

ಒಲಿಂಪಿಯಾಡ್ ಆಯೋಜಿಸಲು ಎಐಸಿಎಫ್, ಅಂತರರಾಷ್ಟ್ರೀಯ ಚೆಸ್ ಆಡಳಿತ ಮಂಡಳಿಗೆ (ಫಿಡೆ) ₹ 70 ಕೋಟಿ ಮೊತ್ತವನ್ನು ನೀಡಿದೆ.



ವಿಶ್ವನಾಥನ್ ಆನಂದ್– ಪಿಟಿಐ ಚಿತ್ರ

ಕೊನೇರು ಹಂಪಿ

ಒಲಿಂಪಿಯಾಡ್ ಎರಡು ವರ್ಷಗಳಿಗೊಮ್ಮೆ ನಡೆಯುವ ತಂಡ ವಿಭಾಗದ ಟೂರ್ನಿಯಾಗಿದೆ. ಎರಡು ವಾರಗಳಿಗಿಂತ ಹೆಚ್ಚು ಅವಧಿಗೆ ಟೂರ್ನಿ ನಡೆಯಲಿದೆ. ಈ ವರ್ಷ ಜುಲೈ 26ರಿಂದ ಆಗಸ್ಟ್ 8ರವರೆಗೆ ಇದು ರಷ್ಯಾದಲ್ಲಿ ನಡೆಯಬೇಕಿತ್ತು.

‘ಚೆನ್ನೈನಲ್ಲಿ ಒಲಿಂಪಿಯಾಡ್ ಆಯೋಜನೆಗೊಳ್ಳುತ್ತಿರುವುದು ಸಂತಸದ ವಿಷಯ. ಈ ನಗರ ಮತ್ತು ಭಾರತ ದೇಶಕ್ಕೆ ಇದು ಹೆಮ್ಮೆಯ ಸಂಗತಿಯಾಗಿದೆ. ಇಲ್ಲಿಯ ಚೆಸ್ ಕ್ರೀಡೆಯ ಬೆಳವಣಿಗೆಗೆ ಇದು ಮತ್ತಷ್ಟು ಇಂಬು ನೀಡಲಿದೆ’ ಎಂದು ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಸ್ವಾಗತಿಸಿದ್ದಾರೆ. ಟೂರ್ನಿಯಲ್ಲಿ ಭಾರತ ತಂಡವನ್ನು ಅವರು ಮುನ್ನಡೆಸುವರು.

ಆನಂದ್ ಅವರೊಂದಿಗೆ ಪಿ. ಹರಿಕೃಷ್ಣ ಮತ್ತು ವಿದಿತ್ ಗುಜರಾತಿ ಆಡುವುದು ಖಚಿತ. ಇನ್ನೆರಡು ಸ್ಥಾನಗಳು ಯಾರಿಗೆ ಎಂದು ಸ್ಪಷ್ಟವಾಗಿಲ್ಲ. ಅರ್ಜುನ್ ಎರಿಗೈಸಿ, ನಿಹಾಲ್ ಸರಿನ್, ಬಿ. ಅಧಿಬನ್, ಶಶಿಕಿರಣ್ ಸ್ಪರ್ಧೆಯಲ್ಲಿದ್ದಾರೆ. ಮೇ 1ರಂದು ತಂಡದ ಆಯ್ಕೆ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.

ಮಹಿಳಾ ತಂಡಕ್ಕೆ ಕೊನೇರು ಹಂಪಿ ಸಾರಥ್ಯ ವಹಿಸಲಿದ್ದು, ದ್ರೋಣವಲ್ಲಿ ಹಾರಿಕಾ ಮತ್ತು ಆರ್. ವೈಶಾಲಿ ಪಾಲ್ಗೊಳ್ಳುವರು. ಇನ್ನೆರಡು ಸ್ಥಾನಗಳಿಗೆ ತಾನಿಯಾ ಸಚ್‌ದೇವ್, ಭಕ್ತಿ ಕುಲಕರ್ಣಿ ಮತ್ತಿತರರ ಮಧ್ಯೆ ಪೈಪೋಟಿ ನಡೆಯಬಹುದು.

ಆತಿಥೇಯ ದೇಶವಾಗಿ ಜೂನಿಯರ್ ಅಥವಾ ‘ಬಿ’ ತಂಡಗಳನ್ನು ಕಣಕ್ಕಿಳಿಸುವ ಹಕ್ಕು ಭಾರತಕ್ಕೆ ಇದೆ.

ಮುಕ್ತ ಮತ್ತು ಮಹಿಳಾ ವಿಭಾಗಗಳಲ್ಲಿ 11 ಸುತ್ತುಗಳಲ್ಲಿ ಒಲಿಂಪಿಯಾಡ್ ನಡೆಯಲಿದೆ. ಎರಡೂ ವಿಭಾಗಗಳಲ್ಲಿ ಪ್ರತಿ ತಂಡಕ್ಕೆ ಐದು ಆಟಗಾರರು ಮತ್ತು ಒಬ್ಬ ತರಬೇತುದಾರ ಇರುತ್ತಾರೆ. 2000ಕ್ಕಿಂತ ಹೆಚ್ಚು ಆಟಗಾರರು ಪಾಲ್ಗೊಳ್ಳುವ ಸಾಧ್ಯತೆಯಿದೆ.

ಕಳೆದ ಬಾರಿ ಆನ್‌ಲೈನ್ ಮೂಲಕ ನಡೆದ ಒಲಿಂಪಿಯಾಡ್‌ನಲ್ಲಿ ಭಾರತ ತಂಡವು ರಷ್ಯಾದೊಡನೆ ಜಂಟಿಯಾಗಿ ಚಿನ್ನದ ಪದಕ ಗೆದ್ದುಕೊಂಡಿತ್ತು.

ರಷ್ಯಾ ಬೆಲಾರೂಸ್ ಅಮಾನತು

ಲಾಸನ್ (ಪಿಟಿಐ): ಅಂತರರಾಷ್ಟ್ರೀಯ ಚೆಸ್ ಆಡಳಿತ ಮಂಡಳಿಯು (ಫಿಡೆ) ತಾನು ಆಯೋಜಿಸುವ ಎಲ್ಲ ಟೂರ್ನಿಗಳಿಂದ ರಷ್ಯಾ ಮತ್ತು ಅದರ ಮಿತ್ರರಾಷ್ಟ್ರ ಬೆಲಾರೂಸ್‌ಅನ್ನು ಮುಂದಿನ ಸೂಚನೆಯವರೆಗೆ ಅಮಾನತು ಮಾಡಿದೆ.

ಇದರಿಂದಾಗಿ ಭಾರತದಲ್ಲಿ ನಿಗದಿಯಾಗಿರುವ ಚೆಸ್ ಒಲಿಂಪಿಯಾಡ್‌ಗೆ ಈ ಎರಡೂ ದೇಶಗಳ ಆಟಗಾರರ ಸ್ಪರ್ಧೆ ಅನುಮಾನವಾಗಿದೆ. ಆದಾಗ್ಯೂ ವಿಶ್ವ ಚಾಂಪಿಯನ್‌ಷಿಪ್‌ನ ಋತುವಿನ ವೈಯಕ್ತಿಕ ಸ್ಪರ್ಧೆಗಳಲ್ಲಿ ಫಿಡೆ ಧ್ವಜದಡಿ ಈ ರಾಷ್ಟ್ರಗಳ ಆಟಗಾರರು ಸ್ಪರ್ಧಿಸಬಹುದಾಗಿದೆ.



ಅನಿರ್ಬನ್ ಲಾಹಿರಿ

₹16.60 ಕೋಟಿ ಗೆದ್ದ ಅನಿರ್ಬನ್

ಪಾಂಟ್ ವೆದ್ರಾ ಬೀಚ್ (ಪಿಟಿಐ): ಭಾರತದ ಗಾಲ್ಫರ್ ಅನಿರ್ಬನ್ ಲಾಹಿರಿ ಇಲ್ಲಿ ನಡೆದ ಪ್ಲೇಯರ್ಸ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್‌ಅಪ್ ಆದರು. ಇದರೊಂದಿಗೆ ಬಹುಮಾನ ಮೊತ್ತವಾಗಿ ₹ 16.60 ಕೋಟಿ ಮೊತ್ತವನ್ನು ಅವರು ಜೇಬಿಗಿಳಿಸಿದರು.ಇದು ಅವರ ವೃತ್ತಿಜೀವನಶ್ರೇಷ್ಠ ಸಾಧನೆಯಾಗಿದೆ.

ಒಟ್ಟು ₹ 152 ಕೋಟಿ ಬಹುಮಾನ ಮೊತ್ತದ ಟೂರ್ನಿಯಲ್ಲಿ ಸೋಮವಾರ ಅನಿರ್ಬನ್ ಕೇವಲ ಒಂದು ‘ಸ್ಟ್ರೋಕ್’ ಅಂತರದಿಂದ ಪ್ರಶಸ್ತಿ ತಪ್ಪಿಸಿಕೊಂಡರು.

ಆಸ್ಟ್ರೇಲಿಯಾದ ಕ್ಯಾಮರಾನ್ ಸ್ಮಿತ್ ಪ್ರಶಸ್ತಿಗೆ ಮುತ್ತಿಕ್ಕಿದರು. ಅವರಿಗೆ ಬಹುಮಾನ ಮೊತ್ತವಾಗಿ ₹ 27 ಕೋಟಿ ಲಭಿಸಿತು.

‘ನಾನು ಟ್ರೋಫಿಯನ್ನು ಗೆಲ್ಲಬಯಸಿದ್ದೆ. ಏಳು ವರ್ಷಗಳಿಂದ ಇಲ್ಲಿಯೇ ನೆಲೆಸಿದ್ದೇನೆ. ಪ್ರಶಸ್ತಿ ಜಯ ಇದುವರೆಗೆ ಸಾಧ್ಯವಾಗಿಲ್ಲ. ಆ ಹಂಬಲ ಯಾವಾಗಲೂ ನನ್ನನ್ನು ಕಾಡುತ್ತದೆ. ಇಲ್ಲಿ ಉತ್ತಮ ಅವಕಾಶವಿತ್ತು’ ಎಂದು ಟೂರ್ನಿಯ ಬಳಿಕ 34 ವರ್ಷದ ಅನಿರ್ಬನ್ ನುಡಿದರು.

2017ರ ಮೆಮೊರಿಯಲ್ ಟೂರ್ನಿಯಲ್ಲಿಯೂ ಅನಿರ್ಬನ್ ಎರಡನೇ ಸ್ಥಾನ ಗಳಿಸಿದ್ದರು.

ಐಪಿಎಲ್ ಅಂಗಳದಲ್ಲಿ ಅಂಕಿ ಅಂಶ ತಜ್ಞ ರೊಬೋಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ವೀಕ್ಷಕ ವಿವರಣೆಕಾರರಿಗೆ ಅಂಕಿ ಸಂಖ್ಯೆ ಪಡೆಯಲು ಹೆಚ್ಚು ಶ್ರಮಪಡುವ ಅಗತ್ಯವಿಲ್ಲ. ಅವರಿಗಾಗಿ ‘ಪುಟಾಣಿ ಯಂತ್ರಮಾನವ’ ಸಿದ್ಧನಾಗಿದ್ದಾನೆ.

ಇದೇ 26ರಿಂದ ಮುಂಬೈ ಮತ್ತು ಪುಣೆಯಲ್ಲಿ ಐಪಿಎಲ್ ಆಯೋಜನೆಗೊಳ್ಳಲಿದೆ. ಹತ್ತು ತಂಡಗಳು ಸ್ಪರ್ಧಿಸಲಿವೆ. ಕೊರೊನಾ ಕಾರಣಕ್ಕಾಗಿ ಕಳೆದೆರಡು ವರ್ಷ ಐಪಿಎಲ್ ಟೂರ್ನಿಯು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆದಿತ್ತು. ಇದೀಗ ಮತ್ತೆ ತವರಿನಂಗಳಕ್ಕೆ ಮರಳುತ್ತಿದೆ. ಜೊತೆಗೆ ಕೆಲವು ವಿಶೇಷಗಳನ್ನೂ ಹೊತ್ತು ತರುತ್ತಿದೆ.

ಪಂದ್ಯಗಳ ವೀಕ್ಷಕ ವಿವರಣೆ ನೀಡುವವರು ಈ ಹಿಂದೆ ಅಂಕಿ ಅಂಶಗಳನ್ನು ಒದಗಿಸಲು ತಂತ್ರಾಂಶ ಮತ್ತು ತಜ್ಞರನ್ನು ಅವಲಂಬಿಸಬೇಕಿತ್ತು. ಈ ಸಲದಿಂದ ನೂತನ ತಂತ್ರಜ್ಞಾನವನ್ನು ಬಳಸುವ ಮೂಲಕ ಈ ಪ್ರಕ್ರಿಯೆಯನ್ನು ಸರಳಗೊಳಿಸಲಾಗಿದೆ. ರೊಬೋಟಿಕ್ಸ್ ಮತ್ತು ಕೃತಕ ಬುದ್ಧಿಮತ್ತೆಯ ಬಳಕೆಯನ್ನು ಮಾಡಿಕೊಳ್ಳಲಾಗುತ್ತಿದೆ. ರೊಬೋ ಸ್ಟ್ಯಾಟೆಸ್ಟಿಯಾ ಎಂಬ ಪುಟ್ಟ ರೋಬೊಟ್ ಸಿದ್ಧವಾಗಿದೆ. ಅಲೆಕ್ಸಾ ತರಹದ ಈ ‘ಯಂತ್ರಮಾನವ’ನ ಮೂಲಕ ಕ್ರಿಕೆಟ್ ಅಂಕಿ ಅಂಶ ಕ್ಷಣಾರ್ಧದಲ್ಲಿ ಪಡೆಯಲು ಸಾಧ್ಯ ವಾಗಲಿದೆ.

‘ಪ್ರತಿಯೊಬ್ಬ ಕಾಮೆಂಟೆಟರ್‌ಗೂ ಈ ಯಂತ್ರಗಳನ್ನು ನೀಡಲಾಗುವುದು. ಅತ್ಯಂತ ಮಹತ್ವದ ಅಂಕಿ ಅಂಶಗಳು ಇದರಲ್ಲಿ ಅಡಕವಾಗಿವೆ. ಉದಾಹರಣೆಗೆ; ಮಹೇಂದ್ರಸಿಂಗ್ ಧೋನಿ ಎಷ್ಟು ಬಾರಿ ಲೆಗ್‌ಸ್ಪಿನ್ನರ್‌ಗಳ ಎಸೆತಗಳಿಗೆ ಔಟಾಗಿದ್ದಾರೆ. ವಿರಾಟ್ ಕೊಹ್ಲಿ ಒಂದೇ ಓವರ್‌ನಲ್ಲಿ ಹೆಚ್ಚು ಸಿಕ್ಸರ್‌ಗಳನ್ನು ಹೊಡೆದಿದ್ದು ಯಾವಾಗ ಎಂಬ ಮಾಹಿತಿಗಳು ಸಿಗಲಿವೆ’ ಎಂದು ಬುಧವಾರ ನಡೆದ ವರ್ಚುವಲ್ ಸಂವಾದದಲ್ಲಿ ಸ್ಟಾರ್ ಸ್ಪೋರ್ಟ್ಸ್, ಡಿಸ್ನಿ ಸ್ಟಾರ್ ಮುಖ್ಯಸ್ಥ ಸಂಜೋಗ್ ಗುಪ್ತಾ ಹೇಳಿದರು. ಈ ಬಾರಿ ಟೂರ್ನಿಯಲ್ಲಿ ಆಗಿರುವ ವಿಶೇಷ ಬದಲಾವಣೆಗಳ ಕುರಿತು ಮಾತನಾಡಿದರು.

ಡಾಲ್ಬಿ ಅಟ್ಮೋಸ್ ಬಳಕೆ: ಐಪಿಎಲ್ ಪಂದ್ಯಗಳನ್ನು ವೀಕ್ಷಿಸಲು ಕ್ರೀಡಾಂಗಣ ಆಸನ ಸಾಮರ್ಥ್ಯದ ಶೇ 25ರಷ್ಟು ಪ್ರೇಕ್ಷಕರಿಗೆ ಅವಕಾಶ ಕೊಡಲು ನಿರ್ಧರಿಸಲಾಗಿದೆ. ಕ್ರೀಡಾಂಗಣದಲ್ಲಿ ಮತ್ತು ಟಿವಿ, ಮೊಬೈಲ್‌ಗಳ ಮೂಲಕ ವೀಕ್ಷಿಸುವ ಅಭಿಮಾನಿಗಳ ಮನರಂಜನೆಗಾಗಿ ಡಾಲ್ಬಿ ಅಟ್ಮೋಸ್ ಧ್ವನಿವರ್ಧಕ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಇದರಿಂದ ಸಂಗೀತ ಮತ್ತು ಶಬ್ದವು ಹೆಚ್ಚು ಸ್ಪಷ್ಟ ಮತ್ತು ಮಧುರವಾಗಿ ಹೊರಹೊಮ್ಮಲಿದೆ.

ಪ್ರೇಕ್ಷಕರನ್ನು ಒಳಗೊಳ್ಳುವಿಕೆಯ ಅಂಗವಾಗಿ ವಿವಿಧೆಡೆ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಅದರಲ್ಲೂ ಪ್ರಮುಖವಾಗಿ ತಮಿಳುನಾಡಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಕರ್ನಾಟಕದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭಿಮಾನಿಗಳ ರಿಯಲ್ ಟೈಮ್ ಎಂಗೇಜ್‌ಮೆಂಟ್‌ಗಾಗಿ ವರ್ಚುವಲ್ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ.

40 ಕೋಟಿ ಜನರಿಂದ ವೀಕ್ಷಣೆ: 15ನೇ ಆವೃತ್ತಿಯ ಟೂರ್ನಿಯನ್ನು 40 ಕೋಟಿಗೂ ಹೆಚ್ಚು ಜನರು ವೀಕ್ಷಿಸುವ ನಿರೀಕ್ಷೆ ಅಧಿಕೃತ ಪ್ರಸಾರಕರಿಗೆ ಇದೆ. ಸುಮಾರು ಎರಡು ತಿಂಗಳು ನಡೆಯಲಿರುವ ಟೂರ್ನಿಯನ್ನು ಟಿವಿ, ಡಿಜಿಟಲ್ ವೇದಿಕೆಗಳ ಮೂಲಕ ದೇಶ, ವಿದೇಶಗಳಲ್ಲಿ ಜನರು ವೀಕ್ಷಿಸಲಿದ್ದಾರೆ.

ತಂಡಗಳು ಪ್ರತಿನಿಧಿಸುವ ರಾಜ್ಯಗಳ ಸ್ಥಳೀಯ ಸಂಸ್ಕೃತಿ ಮತ್ತು ವೈಶಿಷ್ಟ್ಯಗಳ ಕುರಿತು ಕಾರ್ಯಕ್ರಮಗಳನ್ನು ಕೂಡ ರೂಪಿಸಲಾಗುತ್ತಿದೆ.

ರೊಬೋಟ್ ಸ್ಟ್ಯಾಟೆಸ್ಟಿಯಾ

ರೈನಾ, ರವಿ ವೀಕ್ಷಕ ವಿವರಣೆ

ಐಪಿಎಲ್‌ನಲ್ಲಿ ಒಟ್ಟು ಒಂಬತ್ತು ಭಾಷೆಗಳಲ್ಲಿ ವೀಕ್ಷಕ ವಿವರಣೆ ಇರಲಿದೆ. ಅದಕ್ಕಾಗಿ 80 ಪರಿಣತರು ಕಾರ್ಯನಿರ್ವಹಿಸಲಿದ್ದಾರೆ. ಭಾರತ ಕ್ರಿಕೆಟ್ ತಂಡದ ಮಾಜಿ ಮುಖ್ಯ ಕೋಚ್ ರವಿಶಾಸ್ತ್ರಿ ಈ ಐಪಿಎಲ್ ಮೂಲಕ ಮತ್ತೆ ಕಾಮೆಂಟ್ರಿಗೆ ಮರಳುವರು. 2017ರ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಅವರು ವೀಕ್ಷಕ ವಿವರಣೆಕಾರರಾಗಿದ್ದರು. ಅದರ ನಂತರ ಭಾರತ ತಂಡದ ಕೋಚ್ ಆಗಿದ್ದರಿಂದ ಕಾಮೆಂಟ್ರಿಯಲ್ಲಿರಲಿಲ್ಲ.

ಚೆನ್ನೈ ಸೂಪರ್ ಕಿಂಗ್ಸ್ ಮಾಜಿ ಆಟಗಾರ ಸುರೇಶ್ ರೈನಾ ವೀಕ್ಷಕ ವಿವರಣೆಕಾರರಾಗಿ ಪದಾರ್ಪಣೆ ಮಾಡಲಿದ್ದಾರೆ. ಮಾಜಿ ಸ್ಪಿನ್ನರ್ ಹರಭಜನ್ ಸಿಂಗ್ ಕೂಡ ಈ ತಂಡದಲ್ಲಿದ್ದಾರೆ.

ಸುರೇಶ್ ರೈನಾ

ರವಿಶಾಸ್ತ್ರಿ

ವಿಶ್ವಕಪ್: ಡೀನ್ ದಾಳಿಗೆ ಕುಸಿದ ಮಿಥಾಲಿ ಬಳಗ

ಮೌಂಟ್ ಮಾಂಗನೂಯಿ (ಪಿಟಿಐ): ಚಾರ್ಲೆಟ್ ಡೀನ್ ಮತ್ತು ಅನ್ಯಾ ಶ್ರುಬ್‌ಸೋಲ್ ಅವರ ಚುರುಕಿನ ದಾಳಿಯ ನೆರವಿನಿಂದ ಇಂಗ್ಲೆಂಡ್ ತಂಡವು ಇಲ್ಲಿ ನಡೆಯುತ್ತಿರುವ ಮಹಿಳಾ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮೊದಲ ಜಯದ ಸಂಭ್ರಮ ಆಚರಿಸಿತು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು ನಾಲ್ಕು ವಿಕೆಟ್‌ಗಳಿಂದ ಇಂಗ್ಲೆಂಡ್ ಎದುರು ಸೋತಿತು. 31.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 136 ರನ್ ಗಳಿಸಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ತಂಡವು ಭಾರತ ತಂಡವನ್ನು 38.2 ಓವರ್‌ಗಳಲ್ಲಿ 134 ರನ್‌ಗಳಿಗೆ ನಿಯಂತ್ರಿಸುವಲ್ಲಿ ಯಶಸ್ವಿಯಾಯಿತು. ಡೀನ್ (23ಕ್ಕೆ4) ಮತ್ತು ಶ್ರುಬ್‌ಸೋಲ್ (20ಕ್ಕೆ2) ಬೌಲಿಂಗ್ ಎದುರು ಭಾರತ ತಂಡದ ಅಗ್ರ ಬ್ಯಾಟರ್‌ಗಳು ವಿಫಲರಾದರು. ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ, ಹರ್ಮನ್‌ಪ್ರೀತ್ ಕೌರ್ , ರಿಚಾ ಘೋಷ್ ಮತ್ತು ಜೂಲನ್ ಗೋಸ್ವಾಮಿ ಅವರು ಮಾತ್ರ ಎರಡಂಕಿ ಮೊತ್ತ ತಲುಪಿದರು.

ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು ಹೀಥರ್ ನೈಟ್ (ಅಜೇಯ 53) ಅರ್ಧಶತಕದ ಬಲದಿಂದ 31.2 ಓವರ್‌ಗಳಲ್ಲಿ 6 ವಿಕೆಟ್‌ಗಳ ನಷ್ಟಕ್ಕೆ 136 ರನ್ ಗಳಿಸಿ ಗೆದ್ದಿತು.

ಇಂಗ್ಲೆಂಡ್ ಪಾಯಿಂಟ್ ಪಟ್ಟಿಯಲ್ಲಿ 6ನೇ ಸ್ಥಾನ ದಲ್ಲಿದೆ. ಭಾರತ ತಂಡ ಕೂಡ 4 ಪಂದ್ಯಗಳಲ್ಲಿ ಆಡಿದ್ದು, 2ಗೆದ್ದು, ಉಳಿದಿದ್ದರಲ್ಲಿ ಸೋತು 3ನೇ ಸ್ಥಾನದಲ್ಲಿದೆ.

ಚಾರ್ಲೆಟ್ ಡೀನ್

ಭಾರತ ಲೀಗ್ ಹಂತದಲ್ಲಿ ಇನ್ನೂ 3 ಪಂದ್ಯಗಳನ್ನು ಆಡಬೇಕಿದೆ. ಆಸ್ಟ್ರೇಲಿಯಾ, ಬಾಂಗ್ಲಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳನ್ನು ಎದುರಿಸಲಿದೆ.

ಮೇಘನಾಗೆ 3 ವಿಕೆಟ್: ಬ್ಯಾಟಿಂಗ್ ಪಡೆಯು ಗಳಿಸಿದ ಸಣ್ಣ ಮೊತ್ತವನ್ನು ರಕ್ಷಿಸಿಕೊಳ್ಳಲು ಬೌಲರ್‌ಗಳು ಮಾಡಿದ ಪ್ರಯತ್ನ ಸಫಲವಾಗಲಿಲ್ಲ. ಮೇಘನಾ ಸಿಂಗ್ 3 ವಿಕೆಟ್ ಗಳಿಸಿದರು. ಆದರೆ ಹೀಥರ್ ಮತ್ತು ನಥಾಲಿಯಾ ಶಿವರ್ (45; 46ಎ) 3ನೇ ವಿಕೆಟ್ ಜೊತೆ ಯಾಟದಲ್ಲಿ 65 ರನ್ ಸೇರಿಸಿದ್ದರಿಂದ ಇಂಗ್ಲೆಂಡ್ ಗೆಲುವು ಸುಗಮವಾಯಿತು.

ಸಂಕ್ಷಿಪ್ತ ಸ್ಕೋರು: ಭಾರತ: 36.2 ಓವರ್‌ಗಳಲ್ಲಿ 134 (ಸ್ಮೃತಿ ಮಂದಾನ 35, ರಿಚಾ ಘೋಷ್ 33, ಜೂಲನ್ 20; ಅನ್ಯಾ ಶ್ರುಬ್‌ಸೋಲ್ 20ಕ್ಕೆ 2, ಚಾರ್ಲಿ ಡೀನ್ 23ಕ್ಕೆ 4, ಕೇಟ್ ಕ್ರಾಸ್ 23ಕ್ಕೆ 1) ಇಂಗ್ಲೆಂಡ್: 31.2 ಓವರ್‌ಗಳಲ್ಲಿ 6ಕ್ಕೆ 136 (ನಥಾಲಿಯಾ ಶಿವರ್ 45, ಹೀದರ್ ಔಟಾಗದೆ 53; ಜೂಲನ್ ಗೋಸ್ವಾಮಿ 21ಕ್ಕೆ 1, ಮೇಘನಾ ಸಿಂಗ್ 26ಕ್ಕೆ 3, ರಾಜೇಶ್ವರಿ ಗಾಯಕವಾಡ್ 35ಕ್ಕೆ 1, ಪೂಜಾ ವಸ್ತ್ರಕರ್ 22ಕ್ಕೆ 1, ಸ್ನೇಹ್ ರಾಣಾ 19ಕ್ಕೆ 1). ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 4 ವಿಕೆಟ್‌ಗಳ ಜಯ.

ಪಾಕ್ ಸೋಲು ತಪ್ಪಿಸಿದ ರಿಜ್ವಾನ್, ಬಾಬರ್

ಕರಾಚಿ (ಪಿಟಿಐ): ದಿಟ್ಟ ಹೋರಾಟ ಮಾಡಿದ ಬಾಬರ್ ಅಜಂ ಮತ್ತು ಮೊಹಮ್ಮದ್ ರಿಜ್ವಾನ್ ಶತಕಗಳಿಂದಾಗಿ ಆತಿಥೇಯ ಪಾಕಿಸ್ತಾನವು ಆಸ್ಟ್ರೇಲಿಯಾ ಎದುರಿನ ಟೆಸ್ಟ್‌ನಲ್ಲಿ ಸೋಲು ತಪ್ಪಿಸಿಕೊಂಡಿತು. ಪಂದ್ಯ ಡ್ರಾ ಆಯಿತು.

ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಪ್ರವಾಸಿ ಆಸ್ಟ್ರೇಲಿಯಾ ತಂಡವು ಪಾಕ್ ಬಳಗಕ್ಕೆ 506 ರನ್‌ಗಳ ಗೆಲುವಿನ ಗುರಿಯೊಡ್ಡಿತ್ತು. ಅದಕ್ಕುತ್ತರವಾಗಿ ಆತಿಥೇಯ ತಂಡವು 171.4 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 443 ರನ್ ಗಳಿಸಿತು. ಪಂದ್ಯದ ನಾಲ್ಕನೇ ಇನಿಂಗ್ಸ್ ಹೆಚ್ಚು ಸ್ಕೋರ್ ಗಳಿಸಿದ ಪಟ್ಟಿಯಲ್ಲಿ ಆರನೇ ಸ್ಥಾನ ಪಡೆಯಿತು.

ನಾಯಕ ಬಾಬರ್ ಆಜಂ (196; 425ಎ, 4X21, 6X1) ಮತ್ತು ರಿಜ್ವಾನ್ (ಔಟಾಗದೆ 104, 177ಎ, 4X11, 6X1) ತಾಳ್ಮೆಯ ಬ್ಯಾಟಿಂಗ್ ಮಾಡಿ ತಂಡದ ಸೋಲು ತಪ್ಪಿಸಿದರು. ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ (75ಕ್ಕೆ2) ಮತ್ತು ಸ್ಪಿನ್ನರ್ ನೇಥನ್ ಲಯನ್ (112ಕ್ಕೆ4) ಶ್ರಮಕ್ಕೆ ತಕ್ಕ ಪ್ರತಿಫಲ ಲಭಿಸಲಿಲ್ಲ.

ಮಂಗಳವಾರ ದಿನದಾಟದ ಅಂತ್ಯಕ್ಕೆ ಪಾಕ್ ತಂಡವು 82 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 192 ರನ್ ಗಳಿಸಿತ್ತು. ಆರಂಭಿಕ ಬ್ಯಾಟರ್ ಅಬ್ದುಲ್ ಶಫೀಕ್ (71 ರನ್) ಮತ್ತು ಬಾಬರ್ (102) ಕ್ರೀಸ್‌ನಲ್ಲಿ ಉಳಿದಿದ್ದರು.

ಕೊನೆಯ ದಿನದಾಟ ಮುಂದುವರಿಸಿದ ಇಬ್ಬರೂ ಎದುರಾಳಿ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 228 ರನ್‌ಗಳನ್ನು ಸೇರಿಸಿದರು. ಶತಕದ ಸನಿಹವಿದ್ದ ಶಫೀಕ್ ವಿಕೆಟ್ ಗಳಿಸಿದ ಪ್ಯಾಟ್ ಕಮಿನ್ಸ್ ಜೊತೆಯಾಟ ಮುರಿದರು. ಫವಾದ್ ಆಲಂ ವಿಕೆಟ್ ಕೂಡ ಕಮಿನ್ಸ್ ಪಾಲಾಯಿತು. ಈ ಹಂತದಲ್ಲಿ ಬಾಬರ್ ಜೊತೆಗೂಡಿದ ರಿಜ್ವಾನ್ ಇನಿಂಗ್ಸ್‌ಗೆ ಬಲ ತುಂಬಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ 115 ರನ್‌ಗಳನ್ನು ಸೇರಿಸಿದರು. ತಮ್ಮ ದ್ವಿಶತಕಕ್ಕೆ ಇನ್ನೂ ನಾಲ್ಕು ರನ್ ಗಳಿಸಬೇಕಿದ್ದ ಬಾಬರ್ ಅವರು ಎಡವಿದರು. ಲಯನ್ ಬೌಲಿಂಗ್‌ನಲ್ಲಿ ಲಾಬುಷೇನ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. ಈ ಹಂತದಲ್ಲಿ ಪಂದ್ಯದಲ್ಲಿ ಒಂದಿಷ್ಟು ರೋಚಕ ಕ್ಷಣಗಳು ದಾಖಲಾದವು. ಒಂದು ಬದಿ ರಿಜ್ವಾನ್ ಹೋರಾಟ ನಡೆಸಿದರು. ಇನ್ನೊಂದೆಡೆ ಸ್ಪಿನ್ನರ್ ಲಯನ್ ಬೌಲಿಂಗ್‌ನಲ್ಲಿ ಪಾಕ್ ತಂಡದ ಕೆಳಕ್ರಮಾಂಕದ ಬ್ಯಾಟರ್‌ಗಳು ಕುಸಿದರು. ಫಾಹೀಮ್ ಅಶ್ರಫ್, ಸಾಜಿದ್ ಖಾನ್ ವಿಕೆಟ್‌ಗಳು ಲಯನ್ ಪಾಲಾದವು.

ಆದರೂ ಛಲ ಬಿಡದ ರಿಜ್ವಾನ್ ದಿನದಾಟದ ಅಂತ್ಯದವರೆಗೂ ಬ್ಯಾಟಿಂಗ್ ಮಾಡಿದರು. ಇನ್ನೊಂದೆಡೆ ವಿಕೆಟ್‌ಗಳು ಉರುಳದಂತೆಯೂ ನೋಡಿಕೊಂಡರು. ನೌಮನ್ ಅಲಿ 18 ಎಸೆತ ಎದುರಿಸಿದರೂ ಒಂದೂ ರನ್ ಗಳಿಸಿದೇ ರಿಜ್ವಾನ್‌ಗೆ ಉತ್ತಮ ಜೊತೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 189 ಓವರ್‌ಗಳಲ್ಲಿ 9ಕ್ಕೆ556ಡಿಕ್ಲೇರ್ಡ್, ಪಾಕಿಸ್ತಾನ: 53 ಓವರ್‌ಗಳಲ್ಲಿ 148, ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 22.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 97ಡಿಕ್ಲೇರ್ಡ್, ಪಾಕಿಸ್ತಾನ: 171.4 ಓವರ್‌ಗಳಲ್ಲಿ 7ಕ್ಕೆ443 (ಬಾಬರ್ ಆಜಂ 196, ಮೊಹಮ್ಮದ್ ರಿಜ್ವಾನ್ ಔಟಾಗದೆ 104, ಪ್ಯಾಟ್ ಕಮಿನ್ಸ್ 75ಕ್ಕೆ2, ನೇಥನ್ ಲಯನ್ 112ಕ್ಕೆ4) ಫಲಿತಾಂಶ: ಪಂದ್ಯ ಡ್ರಾ. ಪಂದ್ಯಶ್ರೇಷ್ಠ: ಬಾಬರ್ ಅಜಂ.

ಮೊಹಮ್ಮದ್ ರಿಜ್ವಾನ್ ಬ್ಯಾಟಿಂಗ್–ಎಎಫ್‌ಪಿ ಚಿತ್ರ

ಯೋಯೋ ಟೆಸ್ಟ್: ಹಾರ್ದಿಕ್ ಪಾಂಡ್ಯ ಪಾಸ್

ನವದೆಹಲಿ (ಪಿಟಿಐ) : ಆಲ್ ರೌಂಡರ್ ಹಾರ್ದಿಕ್ ಪಾಂಡ್ಯ ಯೋ ಯೋ ಫಿಟ್‌ನೆಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಆದರೆ ಬ್ಯಾಟ್ಸ್‌ಮನ್ ಪೃಥ್ವಿ ಶಾ ವಿಫಲರಾಗಿದ್ದಾರೆ.

ಈ ಬಾರಿಯ ಐಪಿಎಲ್‌ನಲ್ಲಿ ಹಾರ್ದಿಕ್ ಗುಜರಾತ್ ಟೈಟನ್ಸ್ ತಂಡದ ನಾಯಕತ್ವ ವಹಿಸಲಿದ್ದಾರೆ. ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಬುಧವಾರ ನಡೆದ ಫಿಟ್‌ನೆಸ್ ಪರೀಕ್ಷೆಯಲ್ಲಿ ಅವರು ಯಶಸ್ವಿಯಾದರು. ನೆಟ್ಸ್‌ನಲ್ಲಿ ಬೌಲಿಂಗ್ ಕೂಡ ಮಾಡಿದರು.

'ಗಾಯದಿಂದ ಪೂರ್ಣ ಗುಣಮುಖರಾಗಿರುವ ಹಾರ್ದಿಕ್‌ಗೆ ಇದು ಸಾಮಾನ್ಯ ಫಿಟ್‌ನೆಸ್ ಪರೀಕ್ಷೆ ಆಗಿತ್ತು. ಗಂಟೆಗೆ 135 ಕಿ.ಮೀ ವೇಗದ ಎಸೆತಗಳನ್ನು ಅವರು ಹಾಕಿದರು' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಮುಂಬೈ ರಣಜಿ ತಂಡದ ಆಟಗಾರ ಪೃಥ್ವಿ ಶಾ ಫಿಟ್‌ನೆಸ್ ಟೆಸ್ಟ್‌ನಲ್ಲಿ ಪಾಸಾಗಿಲ್ಲವೆಂದು ಮೂಲಗಳು ತಿಳಿಸಿವೆ. ಇದರಿಂದಾಗಿ ಪೃಥ್ವಿ ಶಾ ಐಪಿಎಲ್‌ನಲ್ಲಿ ಆಡುವುದು ಅನುಮಾನವಾಗಿದೆ.

ರಣಜಿ ಟ್ರೋಫಿ ಕ್ರಿಕೆಟ್: 1008 ರನ್‌ಗಳ ಮುನ್ನಡೆ

ಜಾರ್ಖಂಡ್ ಎಂಟರ ಘಟ್ಟಕ್ಕೆ

ಕೋಲ್ಕತ್ತ (ಪಿಟಿಐ): ಜಾರ್ಖಂಡ್ ತಂಡವು ನಾಗಾಲ್ಯಾಂಡ್ ಎದುರಿನ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಒಟ್ಟು 1008 ರನ್‌ಗಳ ಮುನ್ನಡೆಯೊಂದಿಗೆ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟಕ್ಕೆ ಪ್ರವೇಶಿಸಿತು.

ಬುಧವಾರ ಮುಕ್ತಾಯವಾದ ಜಾರ್ಖಂಡ್ ಮತ್ತು ನಾಗಾಲ್ಯಾಂಡ್ ನಡುವಣ ಪ್ರೀಕ್ವಾರ್ಟರ್‌ಫೈನಲ್ ಪಂದ್ಯವು ಡ್ರಾ ಅಯಿತು. ಮೊದಲ ಇನಿಂಗ್ಸ್‌ನಲ್ಲಿ 880 ರನ್‌ಗಳ ಬೃಹತ್ ಮೊತ್ತ ಗಳಿಸಿದ್ದ ಜಾರ್ಖಂಡ್ ತಂಡವು ನಾಗಾಲ್ಯಾಂಡ್ ತಂಡವನ್ನು 289 ರನ್‌ಗಳಿಗೆ ನಿಯಂತ್ರಿಸಿತ್ತು. ಇದರೊಂದಿಗೆ 591 ರನ್‌ಗಳ ಮುನ್ನಡೆ ಗಳಿಸಿತ್ತು. ಫಾಲೋ ಆನ್ ನೀಡುವ ಬದಲು ಎರಡನೇ ಇನಿಂಗ್ಸ್ ಆಡಿದ ಜಾರ್ಖಂಡ್ ಐದನೇ ದಿನದಾಟದ ಕೊನೆಗೆ 90.3 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 417 ರನ್ ಗಳಿಸಿತು. ಇದರೊಂದಿಗೆ ಪಂದ್ಯದಲ್ಲಿ ಒಟ್ಟು 1297 ರನ್ ಗಳಿಸಿತು. ಮೊದಲ ಇನಿಂಗ್ಸ್‌ನಲ್ಲಿ ದ್ವಿಶತಕ ದಾಖಲಿಸಿದ್ದ ಕುಮಾರ ಕುಶಾಗ್ರ ಎರಡನೇ ಇನಿಂಗ್ಸ್‌ನಲ್ಲಿ 89 ರನ ಗಳಿಸಿದರು.

ನಾಗಾಲ್ಯಾಂಡ್ ತಂಡವು ಪ್ಲೇಟ್ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಪ್ರೀಕ್ವಾರ್ಟರ್‌ಫೈನಲ್ ಪ್ರವೇಶಿಸಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್; ಜಾರ್ಖಂಡ್ 880, ನಾಗಾಲ್ಯಾಂಡ್ 289, ಎರಡನೇ ಇನಿಂಗ್ಸ್; ಜಾರ್ಖಂಡ್: 90.3 ಓವರ್‌ಗಳಲ್ಲಿ 6ಕ್ಕೆ417 (ಅನುಕೂಲ್ ರಾಯ್ 153, ಕುಮಾರ ಕುಶಾಗ್ರ 89, ಉತ್ಕರ್ಷ ಸಿಂಗ್ 73, ರಾಂಗ್ಸೆನ್ ಜೊನಾಥನ್ 109ಕ್ಕೆ3). ಫಲಿತಾಂಶ: ಪಂದ್ಯ ಡ್ರಾ. ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿದ ಜಾರ್ಖಂಡ್.

ದಕ್ಷಿಣ ಕೊರಿಯಾ: ಒಂದೇ ದಿನ 4 ಲಕ್ಷ ಪ್ರಕರಣ

ಸೋಲ್, ಬೀಜಿಂಗ್, (ಎಪಿ/ಎಎಫ್‌ಪಿ/ರಾಯಿಟರ್ಸ್): ದಕ್ಷಿಣ ಕೊರಿಯಾದಲ್ಲಿ ಬುಧವಾರ ಹೊಸದಾಗಿ 4 ಲಕ್ಷ ಕೋವಿಡ್ ಪ್ರಕರಣಗಳು ದಾಖಲಾಗಿವೆ.

ಇದು ಕೊರೊನಾ ಆರಂಭವಾದಾಗಿನಿಂದ(2 ವರ್ಷ ಅವಧಿಯಲ್ಲಿ) ದಾಖಲಾದ ಅತಿ ದೊಡ್ಡ ಸಂಖ್ಯೆಯಾಗಿದ್ದು, ಇತ್ತೀಚಿನ ದಿನಗಳಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗುತ್ತಿರುವುದು ದೊಡ್ಡ ಸವಾಲನ್ನು ತಂದೊಡ್ಡಿದೆ. ಓಮೈಕ್ರಾನ್ ಸೋಂಕು ಉತ್ತುಂಗಕ್ಕೆ ಏರುವ ಸಾಧ್ಯತೆ ಇದೆ ಎಂದು ಇಲ್ಲಿನ ಹಿರಿಯ ಆರೋಗ್ಯ ಅಧಿಕಾರಿ ಸೋನ್ ಯಂಗ್ ರೇ ಅವರು ತಿಳಿಸಿದ್ದಾರೆ.

ವಿಶ್ವಸಂಸ್ಥೆಯ ಅಂಕಿ ಅಂಶಗಳ ಪ್ರಕಾರ ಸದ್ಯ ವಿಶ್ವದಲ್ಲಿ ಅತಿ ಹೆಚ್ಚು ಕೊರೊನಾ ಪ್ರಕರಣಗಳು ವರದಿಯಾಗುತ್ತಿರುವ ದೇಶ ದಕ್ಷಿಣ ಕೊರಿಯಾ ಆಗಿದೆ. ಓಮೈಕ್ರಾನ್ ಸೋಂಕು ಹೆಚ್ಚಳದ ನಡುವೆಯೂ ಸರ್ಕಾರ ನಿರ್ಬಂಧಗಳನ್ನು ಸಡಿಲಿಸಗೊಳಿಸುತ್ತಿದೆ.

ಚೀನಾದಲ್ಲಿ ಆರೋಗ್ಯ ಕ್ಷೇತ್ರದ ಮೇಲೆ ಒತ್ತಡ: ಚೀನಾದಲ್ಲಿ ನಿತ್ಯವೂ ಓಮೈಕ್ರಾನ್ ತಳಿಯ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿರುವುದರಿಂದ ಆರೋಗ್ಯ ಕ್ಷೇತ್ರದ ಮೇಲಿನ ಒತ್ತಡ ಹೆಚ್ಚಾಗಿದೆ. ಆಸ್ಪತ್ರೆಯಲ್ಲಿ ಹಾಸಿಗೆ ವ್ಯವಸ್ಥೆ ಸೇರಿದಂತೆ ಮೂಲ ಸೌಕರ್ಯಗಳನ್ನು ಹೆಚ್ಚಿಸಲಾಗುತ್ತಿದೆ.

ದೇಶದಲ್ಲಿ 3,290 ಹೊಸ ಪ್ರಕರಣಗಳು ದಾಖಲಾಗಿವೆ. ಮಂಗಳವಾರ ಐದು ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗಿದ್ದವು. ಹೆಚ್ಚು ಪ್ರಕರಣಗಳು ವರದಿ ಆಗುತ್ತಿರುವ ಜಿಲಿನ್ ಪ್ರಾಂತ್ಯದಲ್ಲಿ ತಾತ್ಕಾಲಿಕ ಆಸ್ಪತ್ರೆಗಳನ್ನು ನಿರ್ಮಿಸಲಾಗುತ್ತಿದೆ. ದೇಶದ 13ಕ್ಕೂ ಹೆಚ್ಚು ನಗರಗಳಲ್ಲಿ ಲಾಕ್‌ಡೌನ್ ಹೇರಲಾಗಿದೆ.

ಹಾಂಗ್‌ಕಾಂಗ್‌ನಲ್ಲಿ 39,272 ಹೊಸ ಪ್ರಕರಣಗಳು ವರದಿಯಾಗಿವೆ. 217 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ.

ಕುಸಿದ ಮರಣ ಪ್ರಮಾಣ

ಜಿನಿವಾ(ಎಪಿ): ಕಳೆದೊಂದು ವಾರದಲ್ಲಿ ಜಗತ್ತಿನಾದ್ಯಂತ ಕೋವಿಡ್ ಮರಣ ಪ್ರಮಾಣ ಶೇ 17ರಷ್ಟು ಕಡಿಮೆಯಾಗಿದ್ದು ಸೋಂಕು ದೃಢ ಪ್ರಮಾಣದಲ್ಲೂ ಇಳಿಕೆಯಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಎಚ್‌ಒ) ಹೇಳಿದೆ.

ಕಳೆದ ವಾರದಲ್ಲಿ ವಿಶ್ವದಾದ್ಯಂತ 1.1 ಕೋಟಿ ಹೊಸ ಪ್ರಕರಣಗಳು ವರದಿಯಾಗಿವೆ. ಸೋಂಕು ಪ್ರಮಾಣ ಶೇಕಡ 8ಕ್ಕೆ ಏರಿಕೆಯಾಗಿದೆ. 43,000 ಮಂದಿ ಮೃತಪಟ್ಟಿದ್ದು, ಕಳೆದ ಮೂರು ವಾರಗಳಿಗೆ ಹೋಲಿಸಿದರೆ ಮರಣ ದರ ಕುಸಿದಿದೆ. ಬ್ರಿಟನ್‌ನಲ್ಲಿ ಓಮೈಕ್ರಾನ್ ಉಪ ರೂಪಾಂತರ ತಳಿಯಿಂದ ಸೋವು–ನೋವು ಹೆಚ್ಚಾಗಿದೆ ಎಂದು ಡಬ್ಲ್ಯುಎಚ್‌ಒ ವರದಿ ಹೇಳಿದೆ.

ಇಸ್ರೇಲ್‌ನಲ್ಲಿ ಹೊಸ ತಳಿ ಪತ್ತೆ

ಜೇರುಸಲೇಂ(ಎಎಫ್‌ಪಿ): ಇಸ್ರೇಲ್‌ನಲ್ಲಿ ಕೋವಿಡ್‌ನ ಎರಡು ಹೊಸ ತಳಿಗಳು ಪತ್ತೆಯಾಗಿವೆ. ಬೆನ್ ಗುರಿಯೊನ್ ವಿಮಾನ ನಿಲ್ದಾಣದಲ್ಲಿ ಪಿಸಿಆರ್ ಪರೀಕ್ಷೆಗೆ ಒಳಗಾದ ಇಬ್ಬರು ಪ್ರಮಾಣಿಕರಲ್ಲಿ ಓಮೈಕ್ರಾನ್ ಉಪ ತಳಿಗಳಾದ ಬಿಎ.1 ಮತ್ತು ಬಿಎ.2 ದೃಢಪಟ್ಟಿದೆ. ಈ ತಳಿಗಳು ಜಗತ್ತಿನ ಬೇರೆ ಕಡೆ ಸದ್ಯಕ್ಕೆ ಪತ್ತೆಯಾಗಿಲ್ಲ ಎಂದು ಇಲ್ಲಿನ ಆರೋಗ್ಯ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಇಸ್ರೇಲ್‌ನಲ್ಲಿ ಇಲ್ಲಿಯವರೆಗೆ 14 ಲಕ್ಷ ಕೋವಿಡ್ ಪ್ರಕರಣಗಳು ವರದಿಯಾಗಿವೆ. 8,244 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ.

156 ದೇಶಗಳ ಪ್ರಜೆಗಳ ‘ಇ-ವೀಸಾ’ ಮರುಸ್ಥಾಪನೆ: ಕೇಂದ್ರ

ನವದೆಹಲಿ (ಪಿಟಿಐ): 156 ದೇಶಗಳ ಪ್ರಜೆಗಳಿಗೆ ನೀಡಲಾಗಿದ್ದ ‘ಪ್ರವಾಸಿ ಇ-ವೀಸಾ’ ಹಾಗೂ ಇತರ ರಾಷ್ಟ್ರಗಳ ಪ್ರಜೆಗಳಿಗೆ ನೀಡಿದ್ದ ‘ಸಾಮಾನ್ಯ(ಕಾಗದ) ವೀಸಾ’ಗಳನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಕೇಂದ್ರ ಸರ್ಕಾರ ಮರುಸ್ಥಾಪಿಸಿದೆ.

ಅಲ್ಲದೇ, ಅಮೆರಿಕ ಹಾಗೂ ಜಪಾನ್ ಪ್ರಜೆಗಳಿಗೆ ನೀಡಲಾಗಿದ್ದ 10 ವರ್ಷಗಳ ಅವಧಿಯ ಸಾಮಾನ್ಯ ಪ್ರವಾಸಿ (ಕಾಗದ) ವೀಸಾಗಳನ್ನು ಸಹ ಮರುಸ್ಥಾಪನೆ ಮಾಡಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಕೋವಿಡ್–19 ಪಿಡುಗಿನ ಹಿನ್ನೆಲೆಯಲ್ಲಿ 2020ರ ಮಾರ್ಚ್‌ನಿಂದ ಅನ್ವಯವಾಗುವಂತೆ ಈ ಎಲ್ಲ ವಿಧದ ವೀಸಾಗಳನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿತ್ತು.

ಕೋವಿಡ್–19 ಸಾಂಕ್ರಾಮಿಕದ ನಿರ್ಬಂಧಗಳಿಗೆ ಅನುಗುಣವಾಗಿ ಅರ್ಹ ರಾಷ್ಟ್ರಗಳ ಪ್ರಜೆಗಳಿಗೆ ಐದು ವರ್ಷಗಳ ಅವಧಿಯ ಸಾಮಾನ್ಯ ಪ್ರವಾಸಿ ವೀಸಾಗಳನ್ನು ಸಹ ನೀಡಲಾಗುತ್ತದೆ ಎಂದು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಜಪಾನ್: 7.3 ತೀವ್ರತೆಯ ಭೂಕಂಪನ

ಟೋಕಿಯೊ(ಎಪಿ): ಜಪಾನ್‌ನ ಉತ್ತರ ಭಾಗದ ಫುಕುಶಿಮಾದ ಕರಾವಳಿಯಲ್ಲಿ ಬುಧವಾರ ಸಂಜೆ 7.3ರಷ್ಟು ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ.

ಫುಕುಶಿಮಾ ಬಳಿ ಸಾಗರದಲ್ಲಿ 60 ಕಿ.ಮೀ ಆಳದಲ್ಲಿ ಕಂಪನ ಕೇಂದ್ರ ದಾಖಲಾಗಿದೆ. ಮಿಯಾಗಿ ಮತ್ತು ಫುಕುಶಿಮಾ ಪ್ರದೇಶಗಳಿಗೆ ಸುನಾಮಿ ಅಪ್ಪಳಿಸುವ ಸಾಧ್ಯತೆ ಇದೆ ಎಂದು ಜಪಾನ್ ಹವಾಮಾನ ಸಂಸ್ಥೆ ಎಚ್ಚರಿಕೆ ನೀಡಿದೆ.

ಈ ಘಟನೆಗಳಲ್ಲಿ ಸಾವು-ನೋವು ಅಥವಾ ಆಸ್ತಿಗೆ ಹಾನಿಯಾದ ವರದಿಗಳು ಲಭ್ಯವಾಗಿಲ್ಲ. ಆದರೆ ರಾಜಧಾನಿ ಟೋಕಿಯೊದ ಏಳು ಲಕ್ಷ ಸೇರಿದಂತೆ ಈ ವ್ಯಾಪ್ತಿಯ 20 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತ್ತು ಎಂದು ಮೂಲಗಳು ಹೇಳಿವೆ.

ಜಪಾನ್‌ನಲ್ಲಿ ಬುಧವಾರ ಸಂಭವಿಸಿದ ಭೂಕಂಪದಿಂದಾಗಿ ಸೆಂಡೈನ ಮಳಿಗೆಯೊಂದರಲ್ಲಿ ವಸ್ತುಗಳು ನೆಲದ ಮೇಲೆ ಬಿದ್ದಿರುವ ದೃಶ್ಯ —ಎಪಿಎಫ್ ಚಿತ್ರ

ಅಪಘಾತಗಳ ನಿಯಂತ್ರಣ: ವಿಶ್ವಬ್ಯಾಂಕ್ ನೆರವಿನ ಯೋಜನೆ

ನವದೆಹಲಿ (ಪಿಟಿಐ): ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತಗಳನ್ನು ತಡೆಯಲು ವಿಶ್ವಬ್ಯಾಂಕ್ ನೆರವಿನ ₹ 7,500 ಕೋಟಿ ವೆಚ್ಚದ ಯೋಜನೆಯನ್ನು ಶೀಘ್ರವೇ ಜಾರಿಗೊಳಿಸಲಾಗುವುದು ಎಂದು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ರಾಜ್ಯಸಭೆಯಲ್ಲಿ ಮಂಗಳವಾರ ಹೇಳಿದರು.

ಪ್ರಶ್ನೋತ್ತರ ವೇಳೆಯಅವರು ಈ ಮಾಹಿತಿ ನೀಡಿದರು.

ರಸ್ತೆ ಅಪಘಾತಗಳನ್ನು ನಿಯಂತ್ರಿಸುವ ವಿಷಯದಲ್ಲಿ ಭಾರತದ ಸಾಧನೆ ಉತ್ತಮವಾಗಿಲ್ಲ. ದೇಶದಲ್ಲಿ ಪ್ರತಿವರ್ಷ ರಸ್ತೆ ಅಪಘಾತಗಳಲ್ಲಿ 1.5 ಲಕ್ಷಕ್ಕೂ ಹೆಚ್ಚು ಜನರು ಸಾವನ್ನಪ್ಪುತ್ತಿದ್ದಾರೆ ಎಂದು ಅವರು ಸದನಕ್ಕೆ ವಿವರಿಸಿದರು.

‘ಪ್ರತಿ ವರ್ಷ ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪುವವರ ಪೈಕಿ ಶೇ 65ರಷ್ಟು ಮಂದಿ 18 ರಿಂದ 45 ವರ್ಷ ವಯೋಮಾನ ಗುಂಪಿಗೆ ಸೇರಿದವರಾಗಿರುತ್ತಾರೆ ಎಂಬುದು ದುರದೃಷ್ಟಕರ. ಹೀಗಾಗಿ ಅಪಘಾತಗಳನ್ನು ತಡೆಯುವ ಹಾಗೂ ಅಮೂಲ್ಯ ಜೀವಗಳನ್ನು ಉಳಿಸುವ ಪ್ರಯತ್ನಕ್ಕೆ ಜನರೂ ಕೈಜೋಡಿಸುವುದು ಅಗತ್ಯ’ ಎಂದು ಅವರು ಹೇಳಿದರು.

9/11 ದಾಳಿಕೋರನಿಗೆ ಗಲ್ಲು ಬದಲು ಜೀವಾವಧಿ?

ನ್ಯೂಯಾರ್ಕ್(ಪಿಟಿಐ): ಅಮೆರಿಕದ 9/11 ದಾಳಿಯ ರೂವಾರಿ ಹಾಗೂ ಪಾಕಿಸ್ತಾನದ ಭಯೋತ್ಪಾದಕ ಖಾಲಿದ್ ಶೇಖ್ ಮೊಹಮ್ಮದ್ ಹಾಗೂ ಇತರ ನಾಲ್ವರಿಗೆ ವಿಧಿಸಿರುವ ಮರಣ ದಂಡನೆಯು ಜೀವಾವಧಿ ಶಿಕ್ಷೆಯಾಗಿ ಮಾರ್ಪಾಡು ಆಗುವ ಸಾಧ್ಯತೆಯಿದೆ. ಸದ್ಯ ಅಮೆರಿಕ ಸೇನಾಪಡೆಯ ಗ್ವಾಂಟನಾಮೊ ಬೇ ಕಾರಾಗೃಹದಲ್ಲಿರುವ ಈ ಐವರ ಜತೆ ಅಮೆರಿಕದ ಪ್ರಾಸಿಕ್ಯೂಟರ್‌ಗಳು ಈ ಕುರಿತು ಮಾತುಕತೆ ನಡೆಸುತ್ತಿದ್ದಾರೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

2001ರ ಸೆಪ್ಟೆಂಬರ್ 11ರಂದು ಅಮೆರಿಕದ ವಿಶ್ವ ವಾಣಿಜ್ಯ ಕೇಂದ್ರದ(ಡಬ್ಲ್ಯುಟಿಸಿ) ಅವಳಿ ಕಟ್ಟಡಗಳಿಗೆ ವಿಮಾನಗಳನ್ನು ನುಗ್ಗಿಸಿ ಎಸಗಿದ ವಿಧ್ವಂಸಕ ಕೃತ್ಯದಲ್ಲಿ ಭಾರತೀಯರು ಸೇರಿದಂತೆ ಸುಮಾರು 3000 ಮಂದಿ ಬಲಿಯಾಗಿದ್ದರು. ಸಾವಿರಾರು ಮಂದಿ ಗಾಯಗೊಂಡಿದ್ದರು.

ಎಸ್‌ಕೆಎಮ್‌ಇ ಐಟಿಎಫ್ ಓಪನ್ ಟೆನಿಸ್ ಟೂರ್ನಿ: ನಿಕಿ ಪೂಣಚ್ಚ ಜಯಭೇರಿ

ಆದಿಲ್‌ಗೆ ಮಣಿದ ಲೂಕಾಸ್

ಪ್ರಜಾವಾಣಿ ವಾರ್ತೆ

ನಿಕಿ ಪೂಣಚ್ಚ ಆಟದ ವೈಖರಿ– ಪ್ರಜಾವಾಣಿ ಚಿತ್ರ /ಕೃಷ್ಣಕುಮಾರ್ ಪಿ.ಎಸ್.

ಬೆಂಗಳೂರು: ಸೆಟ್ ಹಿನ್ನಡೆಯಿಂದ ಪುಟಿದೆದ್ದ ಕರ್ನಾಟಕದ ಆದಿಲ್ ಕಲ್ಯಾಣಪುರ್ ಮೂರನೇ ಶ್ರೇಯಾಂಕದ ಲೂಕಾಸ್ ಕ್ರೇನರ್‌ಗೆ ಆಘಾತ ನೀಡಿದರು. ಇದರೊಂದಿಗೆ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ನಡೆಯುತ್ತಿರುವ ಎಸ್‌ಕೆಎಂಇ ಐಟಿಎಫ್ ಟೆನಿಸ್ ಟೂರ್ನಿಯಲ್ಲಿ ಎರಡನೇ ಸುತ್ತು ತಲುಪಿದರು.

ಅರ್ಹತಾ ಸುತ್ತಿನಲ್ಲಿ ಜಯಿಸಿ ಬಂದಿದ್ದ ಆದಿಲ್ ಬುಧವಾರ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ 4-6, 6-2, 6-3ರಿಂದ ಲೂಕಾಸ್ ವಿರುದ್ಧ ಗೆದ್ದರು. ಆತಿಥೇಯ ರಾಜ್ಯದ ಇನ್ನೋರ್ವ ಆಟಗಾರ ನಿಕಿ ಪೂಣಚ್ಚ ಕೂಡ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಗೆದ್ದು ಎರಡನೇ ಸುತ್ತಿಗೆ ಮುನ್ನಡೆದರು. ಮೊದಲ ಸುತ್ತಿನಲ್ಲಿ ಅವರು 3-6, 6-2, 7-6 (5)ರಿಂದ ಏಷ್ಯನ್ ಗೇಮ್ಸ್ ಪದಕ ವಿಜೇತ, ಭಾರತದ ವಿಷ್ಣುವರ್ಧನ್ ಸವಾಲು ಮೀರಿದರು.

ಅರ್ಹತಾ ಸುತ್ತಿನಿಂದ ಗೆದ್ದುಬಂದ ಒಟ್ಟು ಎಂಟು ಆಟಗಾರರ ಪೈಕಿ ಐದು ಮಂದಿ ಬುಧ ವಾರ ಮೊದಲ ಸುತ್ತಿನ ತಡೆ ದಾಟಿದರು.

ಲೂಕಾಸ್ ಎದುರಿನ ಪಂದ್ಯದ ಮೊದಲ ಸೆಟ್‌ನ ಮೊದಲ ಗೇಮ್‌ನಲ್ಲೇ ಆದಿಲ್ ಸರ್ವ್ ಕಳೆದುಕೊಂಡರು. ಅದೇ ಲಯದೊಂದಿಗೆ ಮುನ್ನುಗ್ಗಿದ ಆಸ್ಟ್ರೇಲಿಯಾ ಆಟಗಾರ ಸೆಟ್ ಗೆದ್ದರು. 2ನೇ ಸೆಟ್‌ನಲ್ಲಿ ಲಯ ಕಂಡುಕೊಂಡರು. ಈ ಸೆಟ್‌ನಲ್ಲಿ ಲೂಕಾಸ್ ಮಾಡಿದ ಲೋಪಗಳೂ ಭಾರತದ ಆಟಗಾರನಿಗೆ ವರವಾದವು. ಮೂರನೇ ಸೆಟ್‌ಅನ್ನು ಸುಲಭವಾಗಿ ಜಯಿಸಿದ ಆದಿಲ್ ಪಂದ್ಯವನ್ನೂ ಗೆದ್ದು ಬೀಗಿದರು.

ಮೊದಲ ಸುತ್ತಿನ ಇನ್ನುಳಿದ ಹಣಾಹಣಿಗಳಲ್ಲಿ ಅರ್ಜುನ್ ಖಾಡೆ 6-4, 6-2ರಿಂದ ರಿಷಿ ರೆಡ್ಡಿ ಎದುರು, ಸಿದ್ಧಾರ್ಥ್ ರಾವತ್ 6-2, 6-0ರಿಂದ ಕಜಕಸ್ತಾನದ ದೊಸ್ತಾನ್ಬೆಕ್ ತಷ್ಬುಲತೊವ್ ವಿರುದ್ಧ, ಪಾರಸ್ ದಹಿಯಾ 6-7 (5), 7-6 (3), 6-4ರಿಂದ ಎಸ್.ಡಿ. ಪ್ರಜ್ವಲ್‌ದೇವ್ ವಿರುದ್ಧ ಗೆದ್ದು ಶುಭಾರಂಭ ಮಾಡಿದರು. ನಿತಿನ್ ಕುಮಾರ್ ಸಿನ್ಹಾ 2-6, 6-4, 6-3ರಿಂದ ಫ್ರಾನ್ಸ್‌ನ ಎಂಜೊ ವಾಲಾರ್ಟ್ ಅವರನ್ನು ಪರಾಭವಗೊಳಿಸಿದರು.

ಬ್ಯಾಡ್ಮಿಂಟನ್: ಸಿಂಧು, ಸೈನಾ ನೆಹ್ವಾಲ್ ಶುಭಾರಂಭ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಸೈನಾ ನೆಹ್ವಾಲ್ ಅವರು ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಜಯದ ಆರಂಭ ಮಾಡಿದ್ದಾರೆ.

ಬುಧವಾರ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಸಿಂಧು 21-18, 21-13ರಿಂದ ಚೀನಾದ ಝಿ ಯಿ ವಾಂಗ್ ಎದುರು, ಸೈನಾ 21-17, 21-19ರಿಂದ ಸ್ಪೇನ್‌ನ ಬೀಟ್‌ರಿಜ್ ಕೊರಾಲೆಸ್ ವಿರುದ್ಧ ಗೆದ್ದರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ 21-17, 21-19ರಿಂದ ಸ್ಕಾಟ್ಲೆಂಡ್‌ನ ಅಲೆಕ್ಸಾಂಡರ್ ಡುನ್ ಮತ್ತು ಆ್ಯಡಂ ಹಾಲ್ ವಿರುದ್ಧ ಜಯಿಸಿದರು.

ಸಿಂಗಲ್ಸ್‌ನಲ್ಲಿ ಸಾಯಿ ಪ್ರಣೀತ್, ಎಚ್.ಎಸ್. ಪ್ರಣಯ್ ಮೊದಲ ಸುತ್ತಿನ ಪಂದ್ಯಗಳಲ್ಲಿ ಸೋಲು ಅನುಭವಿಸಿದರು.

ರ‍್ಯಾಂಕಿಂಗ್: ಅಗ್ರ ಐದರಲ್ಲಿ ಬೂಮ್ರಾ

ಬೂಮ್ರಾ

ದುಬೈ (ಪಿಟಿಐ): ಶ್ರೀಲಂಕಾ ಎದುರಿನ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದ ಭಾರತದ ವೇಗಿ ಜಸ್‌ಪ್ರೀತ್ ಬೂಮ್ರಾ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೇರಿದ್ದಾರೆ.

ಬುಧವಾರ ಪ್ರಕಟವಾದ ಪಟ್ಟಿಯಲ್ಲಿ ಭಾರತದ ವಿರಾಟ್ ಕೊಹ್ಲಿ 9ನೇ ಸ್ಥಾನಕ್ಕೆ ಕುಸಿದಿದ್ದಾರೆ. ಹೋದ ವಾರ ಅವರು ಐದನೇ ಸ್ಥಾನದಲ್ಲಿದ್ದರು. ಲಂಕಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಅವರು ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದರು.

ಬೆಂಗಳೂರು ಟೆಸ್ಟ್‌ನಲ್ಲಿ ಒಟ್ಟು ಎಂಟು ವಿಕೆಟ್ ಗಳಿಸಿದ್ದ ಬೂಮ್ರಾ, ಶಹೀನ್ ಅಫ್ರಿದಿ, ಕೈಲ್ ಜೆಮಿಸನ್, ಟಿಮ್ ಸೌಥಿ, ಜೇಮ್ಸ್ ಆ್ಯಂಡರ್ಸನ್, ನೀಲ್ ವಾಗ್ನರ್ ಮತ್ತು ಜೋಶ್ ಹ್ಯಾಜಲ್‌ವುಡ್ ಅವರನ್ನು ಹಿಂದಿಕ್ಕಿ ಅಗ್ರ ಐದರಲ್ಲಿ ಸ್ಥಾನ ಗಳಿಸಿದ್ದಾರೆ.

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಆರನೇ ಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಬೆಂಗಳೂರು ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಲ್ಲಿಯೂ ಅರ್ಧಶತಕ ಗಳಿಸಿದ್ದ ಶ್ರೇಯಸ್ ಅಯ್ಯರ್ 37ನೇ ಸ್ಥಾನಕ್ಕೇರಿಸಿದ್ದಾರೆ.

ಆದರೆ ಆಲ್‌ರೌಂಡರ್ ವಿಭಾಗದಲ್ಲಿ ರವೀಂದ್ರ ಜಡೇಜ ಅಗ್ರಸ್ಥಾನದಿಂದ ಕೆಳಗಿಳಿಸದ್ದಾರೆ. ವೆಸ್ಟ್ ಇಂಡೀಸ್‌ನ ಜೇಸನ್ ಹೋಲ್ಡರ್ ಮತ್ತೆ ಮೊದಲ ಸ್ಥಾನಕ್ಕೆ ಮರಳಿದ್ದಾರೆ. ಜಡೇಜ ಮೊಹಾಲಿಯಲ್ಲಿ 175 ರನ್ ಗಳಿಸಿ, 9 ವಿಕೆಟ್ ಗಳಿಸಿದ್ದರು. ಆಗ ಅಗ್ರಸ್ಥಾನಕ್ಕೇರಿದ್ದರು.

ಶರಪೋವಾ, ಶೂಮಾಕರ್ ವಂಚನೆ: ಪ್ರಕರಣ ದಾಖಲು

ಮರಿಯಾ ಶರಪೋವಾ

ಮೈಕೆಲ್ ಶೂಮಾಕರ್

ಗುರುಗ್ರಾಮ (ಪಿಟಿಐ): ರಷ್ಯಾದ ಮಾಜಿ ಟೆನಿಸ್ ಆಟಗಾರ್ತಿ ಮರಿಯಾ ಶರಪೋವಾ ಮತ್ತು ಫಾರ್ಮುಲಾ ಒನ್ ರೇಸ್ ತಾರೆ ಮೈಕೆಲ್ ಶೂಮಾಕರ್ ಅವರ ಮೇಲೆ ವಂಚನೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆನ್ನಲಾಗಿದೆ. ಅವರ ಮೇಲೆ ಗುರುಗ್ರಾಮ ಪೊಲೀಸರು ನ್ಯಾಯಾಲಯದ ಆದೇಶದ ಮೇರೆಗೆ ಮೊಕದ್ದಮೆ ದಾಖಲಿಸಿದ್ದಾರೆ.

ಛತ್ತರಪುರದ ನಿವಾಸಿ ಶಫಾಲಿ ಅಗರವಾಲ್ ಅವರು ಶರಪೋವಾ ಮತ್ತು ಶೂಮಾಕರ್ ಅವರ ಮೇಲೆ ವಂಚನೆಯ ಆರೋಪ ಮಾಡಿದ್ದಾರೆ. ಗುರುಗ್ರಾಮದಲ್ಲಿ ನಿರ್ಮಾಣವಾಗಲಿದ್ದ ಅಪಾರ್ಟ್‌ಮೆಂಟ್‌ವೊಂದರಲ್ಲಿ ಶಫಾಲಿ ಅವರ ಪತಿ ನಿವಾಸವೊಂದನ್ನು ಕಾಯ್ದಿರಿಸಿದ್ದರು. ಈ ಅಪಾರ್ಟ್‌ಮೆಂಟ್ ಯೋಜನೆಗೆ ಶರಪೋವಾ ಮತ್ತು ಇಲ್ಲಿರುವ ಒಂದು ಟವರ್‌ಗೆ ಶೂಮಾಕರ್ ಹೆಸರುಗಳನ್ನು ಇಡಲಾಗಿತ್ತು. ಇಬ್ಬರು ತಾರೆಯರ ಹೆಸರಿನಲ್ಲಿ ಈ ಪ್ರಾಜೆಕ್ಟ್‌ಗೆ ಪ್ರಚಾರ ಮಾಡಲಾಗಿತ್ತು. 2016ರಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣ ಪೂರ್ಣಗೊಳ್ಳಬೇಕಿತ್ತು.

ಆದರೆ, ನಿರ್ಮಾಣ ಕಾರ್ಯವೇ ಆರಂಭವಾಗಿಲ್ಲವೆಂದು ಆರೋಪಿಸಿರುವ ಶಫಾಲಿ ನ್ಯಾಯಾಲಯದಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣ ಮಾಡುತ್ತಿರುವ ರಿಯಲ್‌ಟೆಕ್ ಡೆವಲಪ್‌ಮೆಂಟ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಮತ್ತಿತರ ಡೆವಲಪರ್ಸ್ ಮೇಲೆ ಮೊಕದ್ದಮೆ ಹೂಡಿದ್ದಾರೆ. ಅವರೊಂದಿಗೆ ಶರಪೋವಾ ಮತ್ತು ಶೂಮಾಕರ್ ಮೇಲೂ ₹ 80 ಲಕ್ಷ ವಂಚನೆಯ ಆರೋಪ ಹೊರಿಸಿದ್ದಾರೆ.

‘ಈ ಅಪಾರ್ಟ್‌ಮೆಂಟ್ ಯೋಜನೆ ಕುರಿತು ಜಾಹೀರಾತುಗಳ ಮೂಲಕ ನಮಗೆ ತಿಳಿಯಿತು. ಡೆವಲಪರ್ಸ್‌ಗಳು ನೀಡಿದ ಭರವಸೆಗಳೆಲ್ಲ ಹುಸಿಯಾಗಿವೆ. ಅಂತರರಾಷ್ಟ್ರೀಯ ಖ್ಯಾತನಾಮ ಆಟಗಾರರ ಚಿತ್ರಗಳು ಮತ್ತು ಹೆಸರುಗಳ ಮೂಲಕ ಪ್ರಚಾರ ಮಾಡಲಾಗಿದೆ. ಆದರೆ ಈ ನಿರ್ಮಾಣದ ಕಾರ್ಯವೇ ಆರಂಭವಾಗಿಲ್ಲ’ ಎಂದು ಶಫಾಲಿ ತಿಳಿಸಿದ್ದಾರೆ. ಬಾದಶಾಪುರ ಠಾಣೆಯಲ್ಲಿ ಸೆಕ್ಷನ್ 34 (ಉದ್ದೇಶಪೂರ್ವಕ), 120 ಬಿ (ಅಪರಾಧ ಹುನ್ನಾರ), 406 (ನಂಬಿಕೆ ದ್ರೋಹ) ಮತ್ತು 420 (ವಂಚನೆ) ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ .

ಐಎಸ್‌ಎಲ್ ಫುಟ್‌ಬಾಲ್ ಫೈನಲ್‌ಗೆ ಹೈದರಾಬಾದ್ ಎಫ್‌ಸಿ

ಬ್ಯಾಂಬೊಲಿಮ್ (ಪಿಟಿಐ): ಹೈದರಾಬಾದ್ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿ ಯಲ್ಲಿ ಮೊದಲ ಬಾರಿ ಫೈನಲ್ ತಲುಪಿತು.

ಬುಧವಾರ ನಡೆದ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ಎದುರಿನ ಸೆಮಿಫೈನಲ್‌ನ ಎರಡನೇ ಲೆಗ್ ಪಂದ್ಯದಲ್ಲಿ 0–1ರಿಂದ ಸೋತರೂ ಸರಾಸರಿ ಗೋಲುಗಳ ಆಧಾರದಲ್ಲಿ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು. ಮೊದಲ ಲೆಗ್ ಪಂದ್ಯವನ್ನು ಹೈದರಾಬಾದ್ 3–1ರಿಂದ ಗೆದ್ದುಕೊಂಡಿತ್ತು.

ಈ ಪಂದ್ಯದಲ್ಲಿ ರಾಯ್‌ಕೃಷ್ಣ 79ನೇ ನಿಮಿಷದಲ್ಲಿ ಎಟಿಕೆಎಂಬಿ ತಂಡಕ್ಕೆ ಗೋಲು ಗಳಿಸಿಕೊಟ್ಟರು.ಭಾನುವಾರ ಮಡಗಾಂವ್‌ನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ತಂಡಕ್ಕೆ ಹೈದರಾಬಾದ್ ಮುಖಾಮುಖಿಯಾಗಲಿದೆ.